ಬುಧವಾರ, ಜುಲೈ 23, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 203 | ಪುಟ 16

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹರ್ಮನ್ ಶತಕ ಸೊಬಗು

ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಚೆಸ್ಟರ್ ಲಿ ಸ್ಟ್ರೀಟ್‌ನಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಇಂಗ್ಲೆಂಡ್ ಎದುರು ಶತಕ ಗಳಿಸಿದರು

ರನ್	ಎಸೆತ	ಬೌಂಡರಿ
102	84	14

ಸೆನ್ಸೆಕ್ಸ್ 82,186 | ನಿಫ್ಟಿ 25,060 | $/₹ 86.38 | ಚಿನ್ನ (Std. 10g) ₹1.04 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.21 ಲಕ್ಷ (ಬೆಂಗಳೂರು)

ನಭಕ್ಕೆ ಜಿಗಿದ ಲೋಹದ ಹಕ್ಕಿ

ತಾಂತ್ರಿಕ ದೋಷದಿಂದ ತಿಂಗಳ ಹಿಂದೆ ತಿರುವನಂತಪುರ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದ್ದ ಬ್ರಿಟನ್ ವಾಯುಪಡೆಯ ಎಫ್‌–35ಬಿ ಯುದ್ಧ ವಿಮಾನ ಮಂಗಳವಾರ ಆಸ್ಟ್ರೇಲಿಯಾದ ಡಾರ್ವಿನ್‌ಗೆ ನಿರ್ಗಮಿಸಿತು

Lilly
A MEDICINE COMPANY

ಇದು ನಿಮ್ಮ ತಪ್ಪಲ್ಲ.
ನಮಗೆ ಈಗ ಗೊತ್ತಾಗಿದೆ ಸ್ಥೂಲತೆ ಒಂದು ರೋಗ!.[1]
ತೂಕ ಇಳಿಸುವಿಕೆ ಬಗ್ಗೆ ನಿಮ್ಮ ವೈದ್ಯರೊಂದಿಗೆ ಮಾತನಾಡಿ[2,3] | ObesityIsADisease.in

1. This advertisement should not be construed to giving any advice against exercise, diet, nutrition or health related decision or action. | 2. Always consult with a qualified healthcare professional regarding any decisions or questions about your health or before making any decisions. | 3. The contents of this ad are not intended to substitute the medical judgement of your treating physicians. | 4. Eli Lilly and Company will not be held liable for any outcomes due to the inaccurate use of the information provided on this ad. Without limitation, the information provided should not replace medical advice received from a healthcare provider or treating doctor.

References: 1. Obesity and overweight, WHO, 1 March 2024, ESI Obesity Guidelines Indian Journal of Endocrinology and Metabolism ¦ Volume 26 ¦ Issue 4 ¦ July-August 2022. | 2. Hall KD, Kahan S. Maintenance of lost weight and long-term management of obesity. Med Clin North Am. 2018;102(1):183-197 | 3. Melby CL, Paris HL, Foright RM, Peth J. Attenuating the biologic drive for weight regain following weight loss: must what goes down always go back up? Nutrients. 2017;9(5):468

PP-MG-IN-0507

ರಾಜೀನಾಮೆ ಕಾರಣ ನಿಗೂಢ

ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಧನಕರ್ ನಡೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಜಗದೀಪ್ ಧನಕರ್ ಅವರು ಉಪರಾಷ್ಟ್ರಪತಿ ಹುದ್ದೆಯಿಂದ ನಿರ್ಗಮಿಸಿರುವುದರ ಹಿಂದಿನ ಕಾರಣ ನಿಗೂಢವಾಗಿಯೇ ಉಳಿದುಕೊಂಡಿದೆ. ಅವರ ದಿಢೀರ್ ನಿರ್ಧಾರ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆ ಹುಟ್ಟುಹಾಕಿದೆ.

ಆರೋಗ್ಯ ಸಮಸ್ಯೆಯಿಂದ ರಾಜೀನಾಮೆ ನೀಡಿರುವುದಾಗಿ ಧನಕರ್ ಹೇಳಿಕೊಂಡಿದ್ದರೂ ಇದರ ಹಿಂದೆ 'ಬೇರೆಯದೇ ಆದ ಬಲವಾದ' ಕಾರಣ ಇದೆ ಎಂದು ಕಾಂಗ್ರೆಸ್ ಮಂಗಳವಾರ ಪ್ರತಿಪಾದಿಸಿದೆ. 'ಆರೋಗ್ಯದ ಮೇಲಿನ ಕಾಳಜಿ'ಗೆ ಹೊರತಾಗಿರುವ ಕಾರಣಗಳ ಬಗ್ಗೆ ಊಹಾಪೋಹಗಳು ಹರಡಿವೆ.

ಉನ್ನತ ಹುದ್ದೆಯಲ್ಲಿರುವ ಒಬ್ಬ ವ್ಯಕ್ತಿ ರಾಜೀನಾಮೆ ನೀಡಿದಾಗ ಅವರ ಬಗ್ಗೆ ಹೊಗಳಿಕೆಯ ಮಾತುಗಳು ಕೇಳಿಬರುವುದು ಸಹಜ. ಆದರೆ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಪ್ರಮುಖ ನಾಯಕರು ಪ್ರತಿಕ್ರಿಯಿಸುವ ಗೋಜಿಗೆ ಹೋಗಿಲ್ಲ. ಸರ್ಕಾರವು ಅವರ ರಾಜೀನಾಮೆಯನ್ನೇ ಬಯಸುತ್ತಿತ್ತು ಎಂಬುದನ್ನು ಇದು ಸೂಚಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ.

ಸಂಸತ್ ಅಧಿವೇಶನದ ಮೊದಲ ದಿನ ನಡೆದ ಘಟನಾವಳಿಗಳೇ ಉಪರಾಷ್ಟ್ರಪತಿಯವರ ರಾಜೀನಾಮೆಗೆ ಕಾರಣ ಎಂಬ ಸುದ್ದಿಗಳು ರಾಜಕೀಯ ವಲಯದಲ್ಲಿ ಹರಡಿವೆ. 'ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಿಗೊಳಿಸುವ ನೋಟಿಸ್ ಸ್ವೀಕರಿಸುವ ಮುನ್ನ ಧನಕರ್ ಅವರು ಕೇಂದ್ರ ಸರ್ಕಾರದ ಜತೆಗೆ ಸಮಾಲೋಚಿಸಿರಲಿಲ್ಲ. ಇದು ಬಿಜೆಪಿ ನಾಯಕರಿಗೆ ಅಸಮಾಧಾನ ಉಂಟುಮಾಡಿದೆ' ಎಂದು ಮೂಲಗಳು ತಿಳಿಸಿವೆ.

ಸೋಮವಾರ ನಡೆದ ರಾಜ್ಯಸಭೆಯ ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ಸದನದ ನಾಯಕ ಜೆ.ಪಿ. ನಡ್ಡಾ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರ ಅನುಪಸ್ಥಿತಿಯು ಧನಕರ್ ಬಗ್ಗೆ ಸರ್ಕಾರಕ್ಕೆ ಅಸಮಾಧಾನ ಇರುವುದನ್ನು ಸೂಚಿಸುವ ಮತ್ತೊಂದು ಬೆಳವಣಿಗೆ ಆಗಿತ್ತು.

ಇದೇ ಬೆಳವಣಿಗೆಯನ್ನು ಮುಂದಿಟ್ಟುಕೊಂಡು ಕಾಂಗ್ರೆಸ್, 'ಧನಕರ್ ರಾಜೀನಾಮೆ ಹಿಂದೆ ಬೇರೆ ಯಾವುದೋ ಕಾರಣ ಇದೆ' ಎಂದು ಹೇಳಿದೆ. ಸೋಮವಾರ ಮಧ್ಯಾಹ್ನ ನಡೆದ ಬಿಎಸಿ ಮೊದಲ ಸಭೆಗೆ ಧನಕರ್ ಅವರು ನೇತೃತ್ವ ವಹಿಸಿದ್ದರು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಜೆ.ಪಿ. ನಡ್ಡಾ ಮತ್ತು ಕಿರಣ್ ರಿಜಿಜು ಸೇರಿದಂತೆ ಹೆಚ್ಚಿನ ಸದಸ್ಯರು ಸಭೆಯಲ್ಲಿ ಹಾಜರಿದ್ದರು. ಕೆಲಹೊತ್ತು ಚರ್ಚೆ ನಡೆದ ಬಳಿಕ ಸಂಜೆ 4.30ಕ್ಕೆ ಮತ್ತೆ ಸಭೆ ಸೇರಲು ಬಿಎಸಿ ನಿರ್ಧರಿಸಿತು' ಎಂದಿದ್ದಾರೆ.

'ಸಂಜೆ 4.30ಕ್ಕೆ ಧನಕರ್ ಅಧ್ಯಕ್ಷತೆಯಲ್ಲಿ ಬಿಎಸಿ ಮತ್ತೆ ಸಭೆ ಸೇರಿತು. ಸಭೆಯಲ್ಲಿದ್ದವರು ನಡ್ಡಾ ಮತ್ತು ರಿಜಿಜು ಅವರಿಗಾಗಿ ಕಾದರು. ಆದರೆ ಅವರು ಬರಲಿಲ್ಲ. ಇಬ್ಬರು ಹಿರಿಯ ಸಚಿವರು ಸಭೆಗೆ ಬರುತ್ತಿಲ್ಲ ಎಂಬ ಮಾಹಿತಿಯನ್ನು ಧನಕರ್ ಅವರಿಗೆ ನೀಡಿರಲಿಲ್ಲ. ಅಸಮಾಧಾನಗೊಂಡಂತೆ ಕಾಣುತ್ತಿದ್ದ ಧನಕರ್ ಅವರು ಬಿಎಸಿಯನ್ನು ಮಂಗಳವಾರ ಮಧ್ಯಾಹ್ನ 1ಕ್ಕೆ ಮರು ನಿಗದಿಪಡಿಸಿದ್ದರು' ಎಂದು ಹೇಳಿದ್ದಾರೆ.

ಆದ್ದರಿಂದ ಸೋಮವಾರ ಮಧ್ಯಾಹ್ನ 1ರಿಂದ ಸಂಜೆ 4.30ರ ನಡುವೆ 'ತುಂಬಾ ಗಂಭೀರವಾದ ಏನೋ' ನಡೆದಿದೆ ಎಂದು ಅವರು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಸಭೆಗೆ ಗೈರಾಗಿದ್ದರ ಬಗ್ಗೆ ಮಂಗಳವಾರ ಸ್ಪಷ್ಟನೆ ನೀಡಿರುವ ನಡ್ಡಾ, 'ಇಬ್ಬರಿಗೂ ತುರ್ತು ಕೆಲಸ ಇದ್ದ ಕಾರಣ ಬಿಎಸಿ ಸಭೆಗೆ ಹಾಜರಾಗಿಲ್ಲ. ಉಪರಾಷ್ಟ್ರಪತಿಯವರ ಕಚೇರಿಗೆ ಈ ಬಗ್ಗೆ ಮುಂಚಿತವಾಗಿ ತಿಳಿಸಲಾಗಿತ್ತು' ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು 'ಎಕ್ಸ್'ನಲ್ಲಿ ಸಂಕ್ಷಿಪ್ತ ಪೋಸ್ಟ್ ಹಾಕಿದ್ದನ್ನು ಬಿಟ್ಟರೆ, ಆಡಳಿತಾರೂಢ ಮೈತ್ರಿಕೂಟದ ಯಾವುದೇ ನಾಯಕರು ಧನಕರ್ ರಾಜೀನಾಮೆ ಬಗ್ಗೆ ಪ್ರತಿಕ್ರಿಯೆ ನೀಡಲಿಲ್ಲ.



ಜಗದೀಪ್ ಧನಕರ್

> **ತೀವ್ರ ಒತ್ತಡದಲ್ಲಿ ಕೆಲಸ ಮಾಡುವವರು ಮಾತ್ರ ದಿಢೀರ್ ರಾಜೀನಾಮೆ ನೀಡಲು ಸಾಧ್ಯ. ಧನಕರ್ ರಾಜೀನಾಮೆ ಇಡೀ ದೇಶಕ್ಕೆ ಆಘಾತ ಉಂಟುಮಾಡಿದೆ**
> **ಅಶೋಕ್ ಗೆಹಲೋತ್,** ಕಾಂಗ್ರೆಸ್ ನಾಯಕ

> **ಧನಕರ್ ಯಾವುದೇ ರೀತಿಯ ಒತ್ತಡಕ್ಕೆ ಒಳಗಾದವರಲ್ಲ. ಕಾಲೇಜು ದಿನಗಳಿಂದಲೂ ನನಗೆ ಅವರು ಗೊತ್ತು. ಅವರನ್ನು ಎಂದಿಗೂ ಒತ್ತಡದಲ್ಲಿ ನೋಡಿಲ್ಲ**
> **ಪ್ರವೀಣ್ ಬಲ್ವದಾ,** ಧನಕರ್ ಭಾವ

> **ಧನಕರ್ ಏಕೆ ರಾಜೀನಾಮೆ ನೀಡಿದ್ದಾರೆ ಎಂಬುದನ್ನು ನಿರ್ಧರಿಸಲು ರಾಜಕೀಯ ಪಕ್ಷಗಳಿಗೆ ಸಾಧ್ಯವಿಲ್ಲ. ಅವರು ಆರೋಗ್ಯವಾಗಿಯೇ ಇದ್ದಾರೆ**
> **ಮಮತಾ ಬ್ಯಾನರ್ಜಿ,** ಪಶ್ಚಿಮ ಬಂಗಾಳ ಮುಖ್ಯಮಂತ್ರಿ

> **ಅನಾರೋಗ್ಯದ ಕಾರಣದಿಂದ ಧನಕರ್ ರಾಜೀನಾಮೆ ನೀಡಿಲ್ಲ ಎಂಬುದು ಖಚಿತ. ನೈಜ ಕಾರಣವನ್ನು ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಮಾತ್ರ ವಿವರಿಸಬಲ್ಲರು**
> **ಪಿ.ಸಂತೋಷ್ ಕುಮಾರ್,** ಸಿಪಿಐ ಸಂಸದ

> **ಉಪರಾಷ್ಟ್ರಪತಿಯವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಬಿಎಸಿ ಸಭೆಯಲ್ಲಿ ಹಿರಿಯ ಸಚಿವರ ಅನುಪಸ್ಥಿತಿಯು ಈಗ ಇನ್ನಷ್ಟು ಮಹತ್ವ ಪಡೆದುಕೊಂಡಿದೆ**
> **ಗೌರವ್ ಗೊಗೊಯ್,** ಕಾಂಗ್ರೆಸ್ ಮುಖಂಡ

ನೋಟಿಸ್ ಸಲ್ಲಿಸಿದ್ದ ವಿಪಕ್ಷಗಳು

ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸುವ ನೋಟಿಸ್ ಅನ್ನು ಸೋಮವಾರ ಧನಕರ್ ಅವರಿಗೆ ಪ್ರತಿಪಕ್ಷಗಳು ಸಲ್ಲಿಸಿದ್ದವು. ಈ ಬೆಳವಣಿಗೆ ಸರ್ಕಾರವನ್ನು ಅಚ್ಚರಿಯಲ್ಲಿ ಕೆಡವಿತು ಹಾಗೂ ಅನಂತರದ ಬೆಳವಣಿಗೆಗಳು ಉಪ ರಾಷ್ಟ್ರಪತಿಯವರ ರಾಜೀನಾಮೆಗೆ ಕಾರಣವಾಯಿತು ಎಂಬ ವದಂತಿ ಹಬ್ಬಿದೆ.

ಖರ್ಗೆಗೆ ಅವಕಾಶ: ಟೀಕೆ

ಸಂಸತ್ತಿನ ಮುಂಗಾರು ಅಧಿವೇಶನದ ಮೊದಲ ದಿನ ರಾಜ್ಯಸಭೆ ಕಲಾಪದ ಶೂನ್ಯ ವೇಳೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾತನಾಡಲು ಧನಕರ್ ಅವಕಾಶ ಕೊಟ್ಟಿದ್ದರು. ಖರ್ಗೆ ಅವರು 'ಆಪರೇಷನ್ ಸಿಂಧೂರ' ವಿಚಾರದಲ್ಲಿ ಸರ್ಕಾರದ ಮೇಲೆ ತೀಕ್ಷ್ಣವಾಗ್ದಾಳಿ ನಡೆಸಿದ್ದರು. ಸಿಂಧೂರ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ನೀಡುವುದಾಗಿ ಸರ್ಕಾರ ಈಗಾಗಲೇ ಹೇಳಿತ್ತು. ಅದರ ನಡುವೆಯೂ ಖರ್ಗೆಗೆ ಅವಕಾಶ ನೀಡಿದ್ದಕ್ಕೆ ಬಿಜೆಪಿಯ ಕೆಲವು ಸದಸ್ಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು.

ಬಿಜೆಪಿ ಪಿತೂರಿ: ಆರ್‌ಜೆಡಿ

ಪಟ್ನಾ: ಜಗದೀಪ್ ಧನಕರ್ ಅವರ ರಾಜೀನಾಮೆಯು ಬಿಹಾರ ವಿಧಾನಸಭೆ ಚುನಾವಣೆಗೆ ಮುನ್ನ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು 'ಪಕ್ಕಕ್ಕೆ ಸರಿಸುವ' ಗುರಿಯೊಂದಿಗೆ ಬಿಜೆಪಿ ಮಾಡಿರುವ ಪಿತೂರಿಯಾಗಿದೆ ಎಂದು ಆರ್‌ಜೆಡಿ ಆರೋಪಿಸಿದೆ.

'ನಿತೀಶ್ ಕುಮಾರ್ ಅವರನ್ನು ಬದಲಿಸಿ ತನಗೆ ಬೇಕಾದ ವ್ಯಕ್ತಿಯನ್ನು ಮುಖ್ಯಮಂತ್ರಿಯಾಗಿ ಮಾಡಲು ಬಿಜೆಪಿ ಬಹಳ ದಿನಗಳಿಂದ ಬಯಸುತ್ತಿದೆ' ಎಂದು ಬಿಹಾರ ವಿಧಾನಸಭೆಯಲ್ಲಿ ಆರ್‌ಜೆಡಿ ಮುಖ್ಯ ಸಚೇತಕ ಅಖ್ತರುಲ್ ಇಸ್ಲಾಂ ಶಹೀನ್ ಹೇಳಿದ್ದಾರೆ.

'ಬಿಜೆಪಿಯ ಪ್ರಮುಖ ನಾಯಕರು, ನಿತೀಶ್ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಸಬಾರದು ಎಂಬ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ನಿತೀಶ್ ಅವರನ್ನು ಉಪ ಪ್ರಧಾನಿಯಾಗಿ ಮಾಡಬೇಕು ಎಂದು ಕೇಂದ್ರದ ಮಾಜಿ ಸಚಿವ ಅಶ್ವಿನಿ ಕುಮಾರ್ ಚೌಬೆ ಒಮ್ಮೆ ಹೇಳಿದ್ದರು. ಆದ್ದರಿಂದ, ಧನಕರ್ ಅವರ ರಾಜೀನಾಮೆಯು ಬಿಜೆಪಿಯ ಪಿತೂರಿ ಎಂದು ತೀರ್ಮಾನಿಸಿದರೆ ತಪ್ಪಾಗದು. ರಾಜಕೀಯವಾಗಿ ಅಷ್ಟೊಂದು ಮಹತ್ವ ಇಲ್ಲದ ಉಪ ರಾಷ್ಟ್ರಪತಿ ಹುದ್ದೆಯನ್ನು ನೀಡಿ ನಿತೀಶ್ ಅವರನ್ನು ಬಿಹಾರದ ರಾಜಕೀಯದಿಂದ ದೂರ ಇಡುವ ಗುರಿಯನ್ನು ಬಿಜೆಪಿ ಹೊಂದಿದೆ' ಎಂದಿದ್ದಾರೆ.

ಗುಮ್ಮಲು ಸಜ್ಜು...

ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಮಂಗಾಯಿ ಜಾತ್ರೆ ಪ್ರಯುಕ್ತ ಬೆಳಗಾವಿ ವಡಗಾವಿಯ ಸಂಭಾಜಿನಗರದಲ್ಲಿ ಮಂಗಳವಾರ ಟಗರುಗಳ ಕಾಳಗ ನಡೆಯಿತು

'ಅಂಗವಿಕಲ' ಪ್ರಾಧ್ಯಾಪಕರು

ನಕಲಿ ಪ್ರಮಾಣಪತ್ರ • ಬೋಧಕರ ಪಟ್ಟಿ ಸಲ್ಲಿಸಲು ಸೂಚನೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕೆಲವು ಪ್ರಾಧ್ಯಾಪಕರು ವರ್ಗಾವಣೆಗಾಗಿ 'ಅಂಗವಿಕಲ'ರಾಗುತ್ತಿರುವುದು, ಇನ್ನು ಕೆಲವರು ವರ್ಗಾವಣೆಯಿಂದ ತಪ್ಪಿಸಿಕೊಳ್ಳಲು ತಮ್ಮ ಅವಲಂಬಿತರನ್ನು 'ಅಂಗವಿಕಲ'ರನ್ನಾಗಿ ಮಾಡಿರುವುದು ಬಹಿರಂಗವಾಗಿದೆ.

ಜುಲೈ 2ರಂದು ನಡೆದ ಆನ್‌ಲೈನ್ ಕೌನ್ಸೆಲಿಂಗ್ ವರ್ಗಾವಣೆಯಲ್ಲಿ 'ಸ್ವಯಂ ಅಂಗವಿಕಲರು' ಎಂದು ಘೋಷಿಸಿಕೊಂಡು ಅಂಗವಿಕಲರ ಹಕ್ಕುಗಳನ್ನು ಉಲ್ಲಂಘಿಸಲು ಯತ್ನಿಸಲಾಗಿದೆ. ವರ್ಗಾವಣೆಯಲ್ಲಿ ಅಂಗವಿಕಲ ನೌಕರರಿಗೆ ಪ್ರಾಶಸ್ತ್ಯ ನೀಡಬೇಕು. ನಂತರ ಅವಲಂಬಿತರು ಅಂಗವಿಕಲರೆಂದು ಹೇಳಿಕೊಂಡಿರುವ ಬೋಧಕರನ್ನು ಪರಿಗಣಿಸಬೇಕು ಎಂಬ ನಿಯಮವನ್ನು ಉಲ್ಲಂಘಿಸಲಾಗಿದೆ ಎಂದು ದಾಖಲೆಗಳ ಸಹಿತ ಕೆಲವು ಪ್ರಾಧ್ಯಾಪಕರು, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ರಾಜ್ಯ ಆಯುಕ್ತರಿಗೆ ದೂರು ನೀಡಿದ್ದಾರೆ.

ಈ ದೂರುಗಳನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ, 'ವರ್ಗಾವಣೆಗಾಗಿ ಅಂಗವಿಕಲರೆಂದು ಸ್ವಯಂ ಘೋಷಿಸಿಕೊಂಡಿರುವ, ಅವಲಂಬಿತರು ಅಂಗವಿಕಲರೆಂದು ಹೇಳಿಕೊಂಡಿರುವ ಮತ್ತು ವಿನಾಯಿತಿ ಕೋರಿರುವ ಪ್ರಾಧ್ಯಾಪಕರ ವೈದ್ಯಕೀಯ ಪ್ರಮಾಣಪತ್ರ, ಯುಡಿಐಡಿ ಕಾರ್ಡ್ (ಅಂಗವಿಕಲರ ವಿಶಿಷ್ಟ ಗುರುತಿನ ಚೀಟಿ) ಸಹಿತ ಪಟ್ಟಿಯನ್ನು ಸಲ್ಲಿಸಬೇಕು' ಎಂದು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಾದ ಎನ್. ಮಂಜುಶ್ರೀ ಅವರಿಗೆ ಜುಲೈ 18ರಂದು ಸೂಚಿಸಿದ್ದಾರೆ.

▶6

ನಕಲಿ ಪ್ರಮಾಣಪತ್ರ: ತಪಾಸಣೆಗೆ ತಂಡ

ಬೆಂಗಳೂರು: ಅಂಗವಿಕಲತೆಯ ನಕಲಿ ಪ್ರಮಾಣಪತ್ರ ಪಡೆದು 2024-25ನೇ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆದಿದ್ದ ಮೂವರು ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸಲು ವೈದ್ಯಕೀಯ ಶಿಕ್ಷಣ ಇಲಾಖೆ ತಜ್ಞ ವೈದ್ಯರನ್ನು ಒಳಗೊಂಡ ತಂಡ ರಚಿಸಿದೆ.

ಅಂಗವಿಕಲರ ಪ್ರಮಾಣಪತ್ರ ಸಲ್ಲಿಸಿ, ಅವರಿಗೆ ಮೀಸಲಾದ ಕೋಟಾದ ಅಡಿ ಮೂವರು ವಿದ್ಯಾರ್ಥಿಗಳು ವೈದ್ಯಕೀಯ ಸೀಟು ಪಡೆದಿದ್ದಾರೆ. ವಾಸ್ತವದಲ್ಲಿ ಅವರಿಗೆ ಯಾವುದೇ ಅಂಗವೈಕಲ್ಯ ಇಲ್ಲ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ವಿದ್ಯಾರ್ಥಿಗಳು ಮತ್ತು ಪೋಷಕರ ಸಂಘಟನೆಯೊಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ದೂರು ನೀಡಿತ್ತು.

▶6

ನಕಲಿ ಪ್ರಕರಣ *

143 2014–15ರಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಪತ್ತೆ

73 2017ರಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಪತ್ತೆ

* ಅಂಗವಿಕಲರ ಆಯುಕ್ತಾಲಯ ಪತ್ತೆ ಹಚ್ಚಿ ಅಸಿಂಧುಗೊಳಿಸಿದ ಪ್ರಕರಣಗಳು

ವಿಷಪೂರಿತ ಪಲ್ಯ ಸೇವನೆ: ತಂದೆ, ಇಬ್ಬರು ಮಕ್ಕಳ ಸಾವು

ಪ್ರಜಾವಾಣಿ ವಾರ್ತೆ

ಕವಿತಾಳ (ರಾಯಚೂರು ಜಿಲ್ಲೆ): ಸಿರವಾರ ತಾಲ್ಲೂಕಿನ ಕಡ್ಡೋಣಿ ತಿಮ್ಮಾಪುರ ಗ್ರಾಮದಲ್ಲಿ, ವಿಷಪೂರಿತ ಚವಳೆಕಾಯಿಯ ಪಲ್ಯ ಸೇವಿಸಿ ಅಸ್ವಸ್ಥರಾಗಿದ್ದ ತಂದೆ ಹಾಗೂ ಇಬ್ಬರು ಪುತ್ರಿಯರು ಮಂಗಳವಾರ ಮೃತಪಟ್ಟಿದ್ದಾರೆ. ಕುಟುಂಬದ ಮೂವರು ಅಸ್ವಸ್ಥಗೊಂಡಿದ್ದಾರೆ.

ರಮೇಶ ನಾಯಕ (38), ಪುತ್ರಿಯರಾದ ನಾಗಮ್ಮ (8), ದೀಪಾ (6) ಮೃತರು. ಅವರ ಪತ್ನಿ ಪದ್ಮಾ (35) ಸ್ಥಿತಿ ಗಂಭೀರವಾಗಿದ್ದು, ಪುತ್ರ ಕೃಷ್ಣ (12), ಪುತ್ರಿ ಚೈತ್ರಾ ಆರೋಗ್ಯ ಸ್ಥಿತಿ ಸ್ಥಿರವಾಗಿದೆ.

▶8

ರಮೇಶ

ನಾಗಮ್ಮ

ದೀಪಾ

ಕಾಡಿಗೆ ಜಾನುವಾರು ಬಿಡುವಂತಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಎಲ್ಲಾ ಅರಣ್ಯ ಪ್ರದೇಶದೊಳಗೆ ಹಸು-ಕರು, ಮೇಕೆ, ಕುರಿ ಮತ್ತಿತರ ಜಾನುವಾರುಗಳನ್ನು ಮೇಯಿಸುವುದಕ್ಕೆ ನಿಷೇಧ ಹೇರಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ದೊಡ್ಡ ಸಂಖ್ಯೆಯಲ್ಲಿ ಜಾನುವಾರುಗಳನ್ನು ಅರಣ್ಯ ಪ್ರದೇಶದೊಳಗೆ ಮೇಯಲು ಬಿಡುವುದರಿಂದ ಕಾಡಿನಲ್ಲಿ ಆಗಷ್ಟೇ ಮೊಳಕೆ ಒಡೆದ ಚಿಕ್ಕಪುಟ್ಟ ಸಸಿಗಳು ಅವುಗಳಿಗೆ ಆಹಾರವಾಗಿ, ಅರಣ್ಯದಲ್ಲಿ ಹೊಸ ಗಿಡಗಳು ಬೆಳೆಯದೇ, ಅರಣ್ಯ ಸಂವರ್ಧನೆಗೆ ಅಡ್ಡಿಯಾಗುತ್ತಿದೆ ಎಂದು ಪರಿಸರ ಪ್ರೇಮಿಗಳು ಅಭಿಪ್ರಾಯ ಪಟ್ಟಿದ್ದಾರೆ ಎಂದು ಖಂಡ್ರೆ ಹೇಳಿದ್ದಾರೆ.

ಕಾಡಿನಲ್ಲಿರುವ ವನ್ಯಜೀವಿಗಳು ಮೇಯಲು ಹೋದ ದನಕರುಗಳನ್ನು ಕೊಂದಾಗ, ಆಕ್ರೋಶಗೊಂಡು ಕೆಲವರು ಮೃತ ಜಾನುವಾರುಗಳಿಗೆ ವಿಷ ಹಾಕುವ ಕಾರಣ ವನ್ಯಜೀವಿಗಳು ಸಾವಿಗೀಡಾಗುತ್ತವೆ.

ಇದಕ್ಕೆ ಇತ್ತೀಚೆಗೆ ಹೂಗ್ಯಂ ವಲಯದಲ್ಲಿ ಒಂದು ತಾಯಿ ಹುಲಿ ಮತ್ತು ನಾಲ್ಕು ಮರಿ ಹುಲಿಗಳು ಸಾವಿಗೀಡಾಗಿರುವುದೇ ಸಾಕ್ಷಿಯಾಗಿದೆ ಎಂದು ಪರಿಸರ ಪ್ರೇಮಿಗಳು ಅಭಿಪ್ರಾಯಪಟ್ಟಿದ್ದಾರೆ ಎಂದು ಅವರು ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ.

ದೊಡ್ಡ ಸಂಖ್ಯೆಯ ಸಾಕು ಪ್ರಾಣಿಗಳು ಕಾಡಿನಲ್ಲಿ ಮೇಯುವುದರಿಂದ ಕಾಡಿನಲ್ಲಿರುವ ಸಸ್ಯಾಹಾರಿ ಪ್ರಾಣಿಗಳಿಗೂ ಮೇವಿನ ಕೊರತೆ ಉಂಟಾಗುತ್ತದೆ. ಮಿಗಿಲಾಗಿ ಊರಿನಿಂದ ಕಾಡಿಗೆ ಮೇಯಲು ಹೋಗುವ ಪ್ರಾಣಿಗಳಿಂದ ವನ್ಯಜೀವಿಗಳು ಸಾಂಕ್ರಾಮಿಕ ರೋಗಗಳಿಗೆ ಒಳಗಾಗುವ ಸಾಧ್ಯತೆಯೂ ಇರುತ್ತದೆ ಎಂಬ ಅಂಶವನ್ನೂ ಅವರು ಉಲ್ಲೇಖಿಸಿದ್ದಾರೆ.

▶8

'ತಮಿಳುನಾಡಿನಲ್ಲಿ ನಿಷೇಧ ಇದೆ'

ತಮಿಳುನಾಡಿನ ಅರಣ್ಯದೊಳಗೆ ಸಾಕು ಪ್ರಾಣಿಗಳನ್ನು ಮೇಯಿಸುವುದರ ವಿರುದ್ಧ ಮದ್ರಾಸ್ ಹೈಕೋರ್ಟ್ ನೀಡಿದ ತೀರ್ಪಿನ ಬಳಿಕ, ನೆರೆಯ ರಾಜ್ಯದಿಂದ ನಮ್ಮ ರಾಜ್ಯಕ್ಕೆ ದನಕರುಗಳನ್ನು ತಂದು ಕಾಡಿನಲ್ಲಿ ಮೇಯಿಸಲಾಗುತ್ತಿದೆ. ಹೀಗಾಗಿ ಕರ್ನಾಟಕ ರಾಜ್ಯದ ಅರಣ್ಯ ಸಂರಕ್ಷಣೆ ಮತ್ತು ಸಂವರ್ಧನೆಯ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಅರಣ್ಯ ಪ್ರದೇಶದೊಳಗೆ ಜಾನುವಾರುಗಳನ್ನು ಮೇಯಲು ಬಿಡುವುದನ್ನು ನಿರ್ಬಂಧಿಸಲು ಮತ್ತು ನಿಷೇಧಿಸಲು ನಿಯಮಾನುಸಾರ ಕ್ರಮ ತೆಗೆದುಕೊಳ್ಳಬೇಕು ಎಂದು ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಕನ್ನಡ ಗಣಕ ಪರಿಷತ್ ಹೊಸ ಯೋಜನೆ • 'ಎಂಎಸ್ ಆಫೀಸ್'ಗೆ ಪರ್ಯಾಯ ಸಾಧ್ಯತೆ

ಕನ್ನಡದಲ್ಲಿ 'ನುಡಿ ಬರವಣಿಗೆ' ತಂತ್ರಾಂಶ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಮೈಕ್ರೊಸಾಫ್ಟ್ ಕಂಪನಿಯ 'ಎಂಎಸ್ ಆಫೀಸ್' ಮಾದರಿಯಲ್ಲೇ ಕನ್ನಡದಲ್ಲೂ 'ನುಡಿ ಬರವಣಿಗೆ ೧.೦' ಎಂಬ ಹೊಸ ತಂತ್ರಾಂಶವನ್ನು ಕನ್ನಡ ಗಣಕ ಪ್ರತಿಷ್ಠಾನ ಅಭಿವೃದ್ಧಿಪಡಿಸಿದೆ.

ಎಂಎಸ್ ಆಫೀಸ್ ತಂತ್ರಾಂಶದಲ್ಲಿ ವರ್ಡ್, ಎಕ್ಸೆಲ್, ಪವರ್ ಪಾಯಿಂಟ್, ಡೇಟಾಬೇಸ್‌ನಂತಹ ತಂತ್ರಾಂಶಗಳಿರುವಂತೆ, 'ನುಡಿ ಬರವಣಿಗೆ ೧.೦' ತಂತ್ರಾಂಶದಲ್ಲೂ 'ನುಡಿ ಬರವಣಿಗೆ (ವರ್ಡ್), ನುಡಿ ಲೆಕ್ಕ (ಎಕ್ಸೆಲ್), ನುಡಿ ಪ್ರಸ್ತುತಿ (ಪವರ್‌ಪಾಯಿಂಟ್), ನುಡಿ ದತ್ತ (ಡೇಟಾಬೇಸ್)' ಎಂಬ ತಂತ್ರಾಂಶಗಳಿರುತ್ತವೆ.

'ವರ್ಡ್'ನಂತೆ ಕೆಲಸ ಮಾಡಬಲ್ಲ 'ನುಡಿ ಬರವಣಿಗೆ'ಯನ್ನು ಅಭಿವೃದ್ಧಿಪಡಿಸಲಾಗಿದೆ. ಇದನ್ನು ಆಗಸ್ಟ್ ತಿಂಗಳಲ್ಲಿ ಜನಾರ್ಪಣೆಗೊಳಿಸಲು ಸಿದ್ಧತೆ ನಡೆದಿದೆ' ಎಂದು ಕನ್ನಡ ಗಣಕ ಪ್ರತಿಷ್ಠಾನದ ಟ್ರಸ್ಟಿ ಹಾಗೂ ಕಾರ್ಯದರ್ಶಿ ಜಿ.ಎನ್. ನರಸಿಂಹಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕನ್ನಡ ಗಣಕ ಪರಿಷತ್ತು ಈಗ ಕನ್ನಡ ಗಣಕ ಪ್ರತಿಷ್ಠಾನ ಎಂಬ ಟ್ರಸ್ಟ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಇದರ ಮೂಲಕ ಈ ತಂತ್ರಾಂಶವನ್ನು ಅಭಿವೃದ್ಧಿಪಡಿಸುತ್ತಿದೆ' ಎಂದು ಅವರು ಮಾಹಿತಿ ನೀಡಿದರು.

ಬಳಕೆದಾರ ಸ್ನೇಹಿಯಾಗಲಿರುವ 'ನುಡಿ ಬರವಣಿಗೆ ೧.೦' ತಂತ್ರಾಂಶವು, ಪ್ರಸ್ತುತ ಪರವಾನಗಿಯೊಂದಿಗೆ ಬಳಸುತ್ತಿರುವ ಎಂಎಸ್ ಆಫೀಸ್‌ನಂತಹ ತಂತ್ರಾಂಶಗಳಿಗೆ ಪರ್ಯಾಯವಾಗುವ ಸಾಧ್ಯತೆ ಇದೆ.

'ನುಡಿ ಬರವಣಿಗೆ' ಹೀಗಿದೆ: 'ನುಡಿ ಬರವಣಿಗೆ'ಯ ಐಕಾನ್ ಮೇಲೆ ಕ್ಲಿಕ್ ಮಾಡುತ್ತಿದ್ದಂತೆಯೇ ಫೈಲ್ ತೆರೆದುಕೊಳ್ಳುತ್ತದೆ. ಮೇಲ್ಭಾಗದ ಪಟ್ಟಿಯಲ್ಲಿ 'ಫೈಲ್, ಸೇರಿಸು, ನೋಟ, ಪುಟವಿನ್ಯಾಸ, ನುಡಿ ವ್ಯವಸ್ಥಾಪಕ, ವಾಗಕ್ಷರ, ಸಹಾಯ, ಪರಿಶೀಲಿಸು'– ಎಂಬ ಸೌಲಭ್ಯಗಳಿವೆ.

ತೆರೆದ ಫೈಲ್‌ನಲ್ಲಿ ಯೂನಿಕೋಡ್ ಕನ್ನಡದಲ್ಲಿ ಟೈಪ್ ಮಾಡಬಹುದು. 'ನುಡಿ' ತಂತ್ರಾಂಶಗಳ ಬಳಕೆಗೆ ಇರುವಂತೆ (ಸ್ಕ್ರಾಲ್‌ಲಾಕ್, ಎಫ್‌12 ಕೀ ತರಹ) ಕೀ ಲಾಕ್‌ಗಳಿಲ್ಲದೇ ನೇರವಾಗಿ ಕನ್ನಡ ಟೈಪ್ ಮಾಡಬಹುದು, ಕನ್ನಡ ಟೈಪ್ ಮಾಡುವಾಗ, ಇಂಗ್ಲಿಷ್ ಪದಗಳ ಬಳಕೆ ಮಾಡಬೇಕೆಂದರೆ, ವಿಂಡೊ ಗುಂಡಿಯ ಜೊತೆಗೆ ಸ್ಪೇಸ್ ಬಾರ್ ಒತ್ತಿದರೆ ಸಾಕು. ವಾಪಸ್ ಕನ್ನಡಕ್ಕೆ ಬರಲು ಇದೇ ವಿಧಾನ.

▶12

> **ಆರು ತಿಂಗಳಲ್ಲಿ ಈ ತಂತ್ರಾಂಶ ಅಭಿವೃದ್ಧಿಪಡಿಸಿದ್ದೇವೆ. ನವೆಂಬರ್ ಹೊತ್ತಿಗೆ ಇನ್ನಷ್ಟು ಅಭಿವೃದ್ಧಿಯೊಂದಿಗೆ 'ನುಡಿ ಬರವಣಿಗೆ ೧.೦' ಪೂರ್ಣ ಪ್ರಮಾಣದಲ್ಲಿ ಬಳಕೆಗೆ ಲಭ್ಯವಾಗಲಿದೆ**
> **ಜಿ.ಎನ್. ನರಸಿಂಹಮೂರ್ತಿ,** ಕಾರ್ಯದರ್ಶಿ, ಕನ್ನಡ ಗಣಕ ಪ್ರತಿಷ್ಠಾನ

ಲಾಂಛನ

ಹಲವು ಸೌಲಭ್ಯಗಳು

ಪಠ್ಯ ಟೈಪ್ ಮಾಡುವ ಜೊತೆಗೆ, 'ಕಾಗುಣಿತ ಪರಿಶೀಲಿಸು' (ಸ್ಪೆಲ್ ಚೆಕ್), 'ಪದ ಹುಡುಕು ಮತ್ತು ಬದಲಿಸು', ಧ್ವನಿಯನ್ನು ಪಠ್ಯವಾಗಿಸುವ 'ವಾಗಕ್ಷರ' ಎಂಬ ಸೌಲಭ್ಯಗಳಿವೆ. ಪಠ್ಯದಲ್ಲಿ ಪ್ರತಿಕ್ರಿಯೆಗಳನ್ನು ದಾಖಲಿಸುವ ಅವಕಾಶವೂ ಇದೆ. ತಂತ್ರಾಂಶದಲ್ಲಿ ವಿವಿಧ ಯೂನಿಕೋಡ್ ಫಾಂಟ್‌ಗಳ ಜೊತೆಗೆ, ಕನ್ನಡದ ನಿಘಂಟು ಇದೆ. ಬಳಕೆದಾರರು ಹೆಚ್ಚು ಪದರಾಶಿಯನ್ನು ಸೇರಿಸಲು ಅವಕಾಶ ಕಲ್ಪಿಸಲಾಗಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ, ಅಲ್ಲಲ್ಲಿ ಮಳೆ ಸಾಧ್ಯತೆ

ಸಂಶೋಧನಾ ಚಟುವಟಿಕೆಗಳು ಸ್ಥಗಿತ

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರ ಕೊರತೆ

• ಎ.ಎಂ.ಸುರೇಶ

ಬೆಂಗಳೂರು: ಅಧ್ಯಾಪಕರ ಹುದ್ದೆಗಳು ಅಧಿಕ ಸಂಖ್ಯೆಯಲ್ಲಿ ಖಾಲಿ ಇರುವುದರಿಂದ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆ ಇದ್ದು, ಸಂಶೋಧನಾ ಚಟುವಟಿಕೆಗಳು, ವಿಸ್ತರಣಾ ಕಾರ್ಯಗಳು ಬಹುತೇಕ ಸ್ಥಗಿತಗೊಂಡಿವೆ.

2017ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವನ್ನು ವಿಭಜಿಸಿ, ಬೆಂಗಳೂರು ನಗರ ಮತ್ತು ಉತ್ತರ ವಿಶ್ವವಿದ್ಯಾಲಯ ಸ್ಥಾಪಿಸಲಾಯಿತು. ಇದಾಗಿ ಎಂಟು ವರ್ಷವಾದರೂ ಖಾಲಿ ಇರುವ ಬೋಧಕ, ಬೋಧಕೇತರ ಹುದ್ದೆಗಳನ್ನು ತುಂಬಿಲ್ಲ. ಇದರಿಂದಾಗಿ ಬೋಧನಾ ಚಟುವಟಿಕೆಗಳು, ಸಂಶೋಧನೆಗೆ ತೊಂದರೆಯಾಗಿದೆ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಅಳಲು ತೋಡಿಕೊಂಡರು.

ವಿಶ್ವವಿದ್ಯಾಲಯಕ್ಕೆ ಒಟ್ಟು 161 ಬೋಧಕ ಹಾಗೂ 123 ಬೋಧಕೇತರ ಹುದ್ದೆಗಳು ಮಂಜೂರಾಗಿವೆ. ಆದರೆ, ಸದ್ಯ 11 ಮಂದಿ ಬೋಧಕ ಮತ್ತು ಆರು ಮಂದಿ ಬೋಧಕೇತರ ಸಿಬ್ಬಂದಿ ಇದ್ದಾರೆ. ಭೌತವಿಜ್ಞಾನ, ಗಣಕ ವಿಜ್ಞಾನ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ, ಕನ್ನಡ, ಸಮಾಜ ಕಾರ್ಯ ವಿಭಾಗದಲ್ಲಿ ಒಬ್ಬರೂ ಕಾಯಂ ಅಧ್ಯಾಪಕರಿಲ್ಲ, ಇಂಗ್ಲಿಷ್ ವಿಭಾಗದಲ್ಲಿ ಒಬ್ಬರೇ ಕಾಯಂ ಅಧ್ಯಾಪಕರಿದ್ದಾರೆ.

ಬೆಂಗಳೂರು ನಗರ ವಿಶ್ವವಿದ್ಯಾಲಯ

ವೇತನಕ್ಕಾಗಿ ಸರ್ಕಾರ ನೀಡಿರುವ ಅನುದಾನ



* ಪಿಂಚಣಿಗಾಗಿ 2013–24ರಲ್ಲಿ ಪ್ರತ್ಯೇಕವಾಗಿ ನೀಡಿದ್ದ ಅನುದಾನ ₹55 ಲಕ್ಷ

ಬೋಧಕರ ವಿಭಾಗದಲ್ಲಿ 217 ಅತಿಥಿ ಉಪನ್ಯಾಸಕರು ಮತ್ತು ಬೋಧಕೇತರ ವಿಭಾಗದಲ್ಲಿ 74 ಮಂದಿ ಗುತ್ತಿಗೆ ನೌಕರರು ಇದ್ದಾರೆ. ವಿಶ್ವ ವಿದ್ಯಾಲಯದ ಬಹುತೇಕ ಚಟುವಟಿಕೆಗಳು ಇವರ ಮೇಲೆ ಅವಲಂಬನೆ ಆಗಿವೆ. ಆದರೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗ ದರ್ಶಕರಾಗಿ ಕೆಲಸ ಮಾಡಲು ಅತಿಥಿ ಉಪನ್ಯಾಸಕರಿಗೆ ಅವಕಾಶವಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆ ಇದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧ್ಯಾಪಕರೊಬ್ಬರು ತಿಳಿಸಿದರು.

ಕಳೆದ ವರ್ಷ ವಾಣಿಜ್ಯ ವಿಭಾಗದಲ್ಲಿ ಪಿಎಚ್‌.ಡಿಗಾಗಿ 150 ಅರ್ಜಿಗಳು ಬಂದಿದ್ದವು. ಆದರೆ, 23 ವಿದ್ಯಾರ್ಥಿ-ಗಳಿಗೆ ಅಷ್ಟೇ ಅವಕಾಶ ಇತ್ತು. ಉಳಿದ ವಿಭಾಗಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಸರ್ಕಾರಿ ಕಲಾ ಕಾಲೇಜು, ಮೌಂಟ್ ಕಾರ್ಮೆಲ್ ಕಾಲೇಜು ಸೇರಿದಂತೆ 25 ಸಂಶೋಧನಾ ಕೇಂದ್ರ ಗಳನ್ನು ಗುರುತಿಸಲಾಗಿದೆ. ಅಲ್ಲೂ ಬೋಧಕರ ಕೊರತೆ ಇದೆ. ಅಲ್ಲದೆ ಆ ಕೇಂದ್ರಗಳಿಗೆ ಹೋಗಲು ಕೆಲವರಿಗೆ ಇಷ್ಟವಿಲ್ಲ. ಕ್ಯಾಂಪಸ್‌ನಲ್ಲೇ ಸೀಟು ಬೇಕು ಎನ್ನುತ್ತಾರೆ. ಆದರೆ, ಇಲ್ಲಿ ಬೋಧಕರೇ ಇಲ್ಲದಿರುವುದರಿಂದ ಮಾರ್ಗದರ್ಶ-ಕರನ್ನು ಎಲ್ಲಿಂದ ತರುವುದು ಎಂದು ಪ್ರಶ್ನಿಸಿದರು.

ನ್ಯಾಕ್ ಮಾನ್ಯತೆ ಇಲ್ಲ: ‘ಉಪನ್ಯಾಸಕರ ಹುದ್ದೆಗಳು ಖಾಲಿ ಇರುವ ಕಾರಣ ನ್ಯಾಕ್‌ನ ಮಾನ್ಯತೆಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಿಲ್ಲ. ನ್ಯಾಕ್‌ನ ಮಾನ್ಯತೆ ಇಲ್ಲದ ಕಾರಣ ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ (ಯುಜಿಸಿ) ಯಾವುದೇ ಅನುದಾನ, ಪ್ರಾಜೆಕ್ಟ್‌ಗಳು ವಿಶ್ವವಿದ್ಯಾಲಯಕ್ಕೆ ಬರುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಅತಿಥಿ ಉಪನ್ಯಾಸಕರನ್ನು ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಸೇವೆಯಿಂದ ಬಿಡುಗಡೆ ಮಾಡಿ, ಮುಂದಿನ ವರ್ಷ ಹೊಸದಾಗಿ ನೇಮಕ ಮಾಡಿಕೊಳ್ಳ ಲಾಗುತ್ತದೆ. ಹೀಗಾಗಿ ಯುಜಿಸಿಯಿಂದ ಮಂಜೂರಾಗುವ ಯಾವುದೇ ಪ್ರಾಜೆಕ್ಟ್ ಗಳ ಪ್ರಮುಖ ಜವಾಬ್ದಾರಿ ಅವರಿಗೆ ವಹಿಸುವಂತಿಲ್ಲ. ಯುಜಿಸಿ ಮಾರ್ಗಸೂಚಿ ಪ್ರಕಾರ ಅವರು ಮಾರ್ಗದರ್ಶಕರಾಗಲು ಅವಕಾಶವಿಲ್ಲ ಎಂದು ವಿವರಿಸಿದರು.

ಒಳ ಮೀಸಲಾತಿ ತೊಡಕು

ಖಾಲಿ ಇರುವ ಹುದ್ದೆಗಳ ಪೈಕಿ 59 ಬೋಧಕ ಮತ್ತು 47 ಬೋಧಕೇತರ ಹುದ್ದೆಗಳನ್ನು ತುಂಬಿಕೊಳ್ಳಲು 2019ರಲ್ಲಿ ಸರ್ಕಾರ ಅನುಮತಿ ನೀಡಿದೆ. ರೋಸ್ಟರ್ ನಿಗದಿ, ನಿಯಮಗಳನ್ನು ರೂಪಿಸಲು ಸಮಯ ತೆಗೆದುಕೊಂಡಿತು. ಈ ಪ್ರಕ್ರಿಯೆಗಳು ಮುಗಿಯುವ ವೇಳೆಗೆ ಒಳ ಮೀಸಲಾತಿ ವಿಷಯ ಚರ್ಚೆಗೆ ಬಂತು. ಇದು ಇತ್ಯರ್ಥವಾಗುವವರೆಗೂ ಹೊಸ ನೇಮಕಾತಿಗಳ ಮೇಲೆ ಸರ್ಕಾರ ನಿರ್ಬಂಧ ವಿಧಿಸಿದೆ. ಇದರಿಂದಾಗಿ ಸದ್ಯಕ್ಕೆ ನೇಮಕಾತಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸರ್ಕಾರ ಈಗ ಕಾಯಂ ಅಧ್ಯಾಪಕರಿಗೆ ಅಷ್ಟೇ ವೇತನ ಅನುದಾನ ನೀಡುತ್ತಿದೆ. ಅತಿಥಿ ಉಪನ್ಯಾಸಕರ ವೇತನವನ್ನು ವಿಶ್ವವಿದ್ಯಾಲಯವೇ ಭರಿಸುತ್ತಿದೆ. ಕಾಯಂ ನೇಮಕಾತಿ ಆದರೆ, ವಿಶ್ವವಿದ್ಯಾಲಯಕ್ಕೆ ಆ ಹಣ ಉಳಿಯಲಿದ್ದು ಅದನ್ನು ಬೇರೆ ಕಾರ್ಯಗಳಿಗೆ ಬಳಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ನಗರ ವಿಶ್ವವಿದ್ಯಾಲಯದ ವ್ಯಾಪ್ತಿ ಹಿರಿದು

220	ಕಾಲೇಜುಗಳು
8	ಸ್ವಾಯತ್ತ ಕಾಲೇಜುಗಳು
20	ಕ್ಯಾಂಪಸ್‌ನಲ್ಲಿನ ಸ್ನಾತಕೋತ್ತರ ವಿಭಾಗಗಳು

ವಸತಿನಿಲಯದ ಸೌಲಭ್ಯವಿಲ್ಲ

ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಹೆಚ್ಚಾಗಿ ಕ್ಯಾಂಪಸ್‌ಗೆ ಬರುತ್ತಾರೆ. ಅವರಿಗೆ ಇಲ್ಲಿ ಉಳಿದುಕೊಳ್ಳಲು ವಸತಿನಿಲಯ ಸೌಲಭ್ಯವಿಲ್ಲ. ಇದರಿಂದಾಗಿ ಬಹಳಷ್ಟು ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿದೆ. ಜ್ಞಾನಭಾರತಿಯಲ್ಲಿ ಇರುವ ಹಾಗೆ, ಇಲ್ಲಿಯೂ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ವಸತಿ ನಿಲಯ ನಿರ್ಮಿಸುವ ಅಗತ್ಯವಿದೆ. ಸರ್ಕಾರ ಇತ್ತ ಗಮನ-ಹರಿಸಬೇಕು ಎಂದು ಅಧ್ಯಾಪಕ-ರೊಬ್ಬರು ಮನವಿ ಮಾಡಿದರು.

ಸುಮಾರು ಮೂರು ಸಾವಿರ ವಿದ್ಯಾರ್ಥಿಗಳು ಇದ್ದಾರೆ. ಕೆಲವರು ಸದ್ಯಕ್ಕೆ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಪ್ರವೇಶ ಪಡೆದಿದ್ದಾರೆ. ಎಲ್ಲರಿಗೂ ಅಲ್ಲಿ ಪ್ರವೇಶ ಸಿಗುವುದಿಲ್ಲ. ವಿಶ್ವವಿದ್ಯಾಲಯದಲ್ಲೇ ವಸತಿ ನಿಲಯ ಆರಂಭಿಸಬೇಕು ಎಂಬುದು ಅವರ ಬೇಡಿಕೆ.

ಖಾಲಿ ಇರುವ ಹುದ್ದೆಗಳನ್ನು ಸರ್ಕಾರ ಆದ್ಯತೆ ಮೇಲೆ ಭರ್ತಿ ಮಾಡಬೇಕು, ₹40 ಕೋಟಿ ಅನುದಾನ ಮಂಜೂರು ಮಾಡಬೇಕು. ಇದರಿಂದ ಸಂಶೋಧನಾ ಚಟುವಟಿಕೆಗಳಲ್ಲಿತೊಡಗಲು, ಸೌಲಭ್ಯ ಕಲ್ಪಿಸಲು ಅನುಕೂಲವಾಗಲಿದೆ

ಕೆ.ಆರ್.ಜಲಜಾ, ಹಂಗಾಮಿ ಕುಲಪತಿ

ಚಿಟಿಕೆ ಸುದ್ದಿ

ಗ್ರಂಥ ಬಹುಮಾನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಗ್ರಂಥ ಬಹುಮಾನಕ್ಕೆ ಅರ್ಜಿ ಆಹ್ವಾನಿಸಿದೆ.

ಕೇಂದ್ರವು ಕನಕ ಸಾಹಿತ್ಯ, ದಾಸ ಸಾಹಿತ್ಯ, ತತ್ವಪದ ಸಾಹಿತ್ಯ ಕುರಿತ ಸಂಶೋಧನೆ ಅಥವಾ ವಿಮರ್ಶಾ ಗ್ರಂಥವೊಂದಕ್ಕೆ ಬಹುಮಾನ ನೀಡುವ ಯೋಜನೆ ರೂಪಿಸಿದೆ. 2024ರಲ್ಲಿ ಪ್ರಥಮ ಮುದ್ರಣದಲ್ಲಿ ಪ್ರಕಟವಾದ ಗ್ರಂಥವನ್ನು ಬಹುಮಾನಕ್ಕೆ ಪರಿಗಣಿಸ-ಲಾಗುತ್ತದೆ. ಈ ಬಹುಮಾನವು ₹ 25 ಸಾವಿರ ನಗದು ಒಳಗೊಂಡಿದೆ.

ಗ್ರಂಥ ಲೇಖಕರು ಅಥವಾ ಪ್ರಕಾಶಕರು ಸೆಪ್ಟೆಂಬರ್ 10ರೊಳಗೆ ಅರ್ಜಿಯನ್ನು ಸಂತಕವಿ ಕನಕದಾಸ ಮತ್ತು ತತ್ವಪದ-ಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು–560056 ಈ ವಿಳಾಸಕ್ಕೆ ಕಳುಹಿಸಬೇಕು. ಅರ್ಜಿ ಪ್ರತಿಗಳು https://kanakadasaresearchcenter.karnataka.gov.in/ ನಲ್ಲಿ ಲಭ್ಯ ಎಂದು ಕೇಂದ್ರದ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ವಿವರಕ್ಕೆ: 6364529319

ಇಂದು, ನಾಳೆ ಹಾಲು ಮಾರಾಟ ಇಲ್ಲ

ಬೆಂಗಳೂರು: ಸಣ್ಣ ವ್ಯಾಪಾರಿಗಳಿಗೆ ತೆರಿಗೆ ಪಾವತಿ ಸಂಬಂಧ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೀಡಿರುವ ನೋಟಿಸ್ ವಿರೋಧಿಸಿ ಜುಲೈ 23 ಮತ್ತು 24 ರಂದು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವುದಿಲ್ಲ ಎಂದು ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್‌ನ ಶೈಲೇಶ್ ಪೂಜಾರಿ ತಿಳಿಸಿದ್ದಾರೆ.

ನೋಟಿಸ್ ಹಿಂಪಡೆಯಬೇಕು ಎಂದು ಆಗ್ರಹಿಸಿ ಜುಲೈ 25ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಬೇಕರಿ, ಕಾಂಡಿಮೆಂಟ್ಸ್ ಹಾಗೂ ಇತರೆ ವ್ಯಾಪಾರಿಗಳು ತೋಳಿಗೆ ಕಪ್ಪು ಪಟ್ಟಿ ಧರಿಸಿ ವ್ಯಾಪಾರ ಮಾಡುತ್ತಾರೆ. ಆದರೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವುದಿಲ್ಲ ಮತ್ತು ಖರೀದಿಸುವುದೂ ಇಲ್ಲ ಎಂದು ಹೇಳಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುವ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಕೆ.ಆರ್.ಮಾರುಕಟ್ಟೆ ವ್ಯಾಪಾರಿಗಳಿಗೆ ಕರಪತ್ರಗಳನ್ನು ನೀಡಿ, ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಶ್ರೀನಾಥ್ ಜೋಷಿ ಮೊಬೈಲ್ ಎಫ್‌ಎಸ್‌ಎಲ್‌ಗೆ ರವಾನೆ

ಬೆಂಗಳೂರು: ಲೋಕಾಯುಕ್ತ ಪೊಲೀಸರ ಹೆಸರಿನಲ್ಲಿ ವಿವಿಧ ಇಲಾಖೆಯ ಸರ್ಕಾರಿ ಅಧಿಕಾರಿಗಳಿಗೆ ಬೆದರಿಸಿ ಹಣ ವಸೂಲಿ ಮಾಡಿದ್ದ ಆರೋಪಿ ನಿಂಗಪ್ಪನ ಬಂಧನ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು, ಐಪಿಎಸ್ ಅಧಿಕಾರಿ ಶ್ರೀನಾಥ್ ಜೋಷಿಗೆ ಸೇರಿದ್ದ ಮೊಬೈಲ್ ಅನ್ನು ಗುಜರಾತ್ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನಿಸಿದ್ದಾರೆ.

ಆರೋಪಿ ನಿಂಗಪ್ಪ ಜತೆ ಸಂಪರ್ಕ ಹೊಂದಿರುವ ಆರೋಪ ಎದುರಿಸುತ್ತಿರುವ ಲೋಕಾಯುಕ್ತ ಎಸ್‌.ಪಿ ಯಾಗಿದ್ದ ಶ್ರೀನಾಥ್ ಜೋಷಿ ಅವರಿಗೆ ನೋಟಿಸ್ ನೀಡಿದ್ದ ಲೋಕಾಯುಕ್ತ ಪೊಲೀಸರು, ಜುಲೈ 15ರಂದು ವಿಚಾರಣೆ ನಡೆಸಿದ್ದರು. ಆಗ ಜೋಷಿ ಅವರ ಎರಡು ಮೊಬೈಲ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು.

ಆ ಎರಡು ಮೊಬೈಲ್‌ಗಳ ಪೈಕಿ ಒಂದು ಮೊಬೈಲ್‌ಗೆ ಹಾನಿಯಾಗಿದ್ದು, ಅದರಲ್ಲಿರುವ ದತ್ತಾಂಶ ಮರುಸಂಗ್ರಹ ಮಾಡುವುದು ಸವಾಲಿನ ಕೆಲಸವಾಗಿದ್ದು, ಹೀಗಾಗಿ ಗುಜರಾತ್‌ನಲ್ಲಿರುವ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ಅದರಲ್ಲಿರುವ ದತ್ತಾಂಶ ಮರುಸಂಗ್ರಹ ಆದ ನಂತರ, ಅದರಲ್ಲಿರುವ ದತ್ತಾಂಶದ ಆಧಾರದ ಮೇಲೆ ಜೋಷಿ ಅವರಿಗೆ ಮತ್ತೊಂದು ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ಮತ್ತೊಂದೆಡೆ ಆರೋಪಿ ನಿಂಗಪ್ಪ ವಿಚಾರಣೆ ನಡೆಸಲು ಕಾನೂನಿನ ತೊಡಕು ಇದ್ದು, ಇದನ್ನು ಬಗೆಹರಿಸಲು ಲೋಕಾಯುಕ್ತ ಪೊಲೀಸರು ಹೈಕೋರ್ಟ್ ಮೊರೆ ಹೋಗಿದ್ದಾರೆ. ಒಂದು ವೇಳೆ ನಿಂಗಪ್ಪ ವಿಚಾರಣೆಗೆ ನ್ಯಾಯಾಲಯ ಹಸಿರು ನಿಶಾನೆ ತೋರಿದರೆ ಕೂಡಲೇ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಹೆಚ್ಚಿನ ತನಿಖೆ ಕೈಗೊಳ್ಳಲಾಗುವುದು ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

‘ಕೆಂಪೇಗೌಡ ಪ್ರಶಸ್ತಿ’ ಪ್ರದಾನ

ಪೀಣ್ಯ ದಾಸರಹಳ್ಳಿ: '500 ವರ್ಷಗಳ ಹಿಂದೆಯೇ ನಾಡಪ್ರಭು ಕೆಂಪೇಗೌಡರು ಸ್ಮಾರ್ಟ್ ಸಿಟಿಯ ಪರಿಕಲ್ಪನೆಯಲ್ಲಿ ನಗರಗಳನ್ನು ನಿರ್ಮಿಸಿದ್ದರು' ಎಂದು ಮಾಜಿ ಸಂಸದ ಡಿ.ವಿ. ಸದಾನಂದ ಗೌಡ ತಿಳಿಸಿದರು. ಬಾಗಲಗುಂಟೆಯಲ್ಲಿ ನಡೆದ ಕೆಂಪೇಗೌಡ ಜಯಂತ್ಯುತ್ಸವ ಮತ್ತು 'ನಾಡಪ್ರಭು ಕೆಂಪೇಗೌಡ' ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

'ನಗರದಲ್ಲಿ ಕಸುಬು ಆಧಾರಿತ ಸಮುದಾಯಗಳಿಗೆ ಕೆಲಸ ಕೊಟ್ಟು ಉತ್ತಮ ಆಡಳಿತವನ್ನು ನೀಡಿದವರು ಕೆಂಪೇಗೌಡರು' ಎಂದರು.

ಆದಿಚುಂಚನಗಿರಿ ಮಹಾಸಂಸ್ಥಾನ ವಿಜಯನಗರ ಶಾಖ ಮಠದ ಪೀಠಾಧ್ಯಕ್ಷ ಸೌಮ್ಯನಾಥ ಸ್ವಾಮೀಜಿ, ಇತಿಹಾಸಕಾರ ತಲಕಾಡು ಚಿಕ್ಕರಂಗೇಗೌಡ ಮಾತನಾಡಿದರು. ಶಾಸಕ ಎಸ್. ಮುನಿರಾಜು ಅವರಿಗೆ 'ಶಾಸಕ ಸರ್ವೋತ್ತಮ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಾಹಿತಿ ವೈ.ಬಿ.ಎಚ್. ಜಯದೇವ್ ರಚಿಸಿರುವ 'ನಾಡಪ್ರಭು ಕೆಂಪೇಗೌಡ' ಕಾದಂಬರಿ ಬಿಡುಗಡೆ ಮಾಡಲಾಯಿತು. 200 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಹತ್ತು ಸಾಧಕರಿಗೆ ಕೆಂಪೇಗೌಡ ಪ್ರಶಸ್ತಿ ನೀಡಲಾಯಿತು.

ತೆರಿಗೆ ಪಾವತಿ: ಸ್ವಾತಂತ್ರ್ಯ ಉದ್ಯಾನದಲ್ಲಿ ನಾಳೆ ಪ್ರತಿಭಟನೆ

ನೋಟಿಸ್ ಹಿಂಪಡೆಯಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಕರಿ, ಕಾಂಡಿಮೆಂಟ್ಸ್ ಸೇರಿದಂತೆ ಸಣ್ಣ ವ್ಯಾಪಾರಿಗಳಿಗೆ ತೆರಿಗೆ ಪಾವತಿ ಸಂಬಂಧ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೀಡಿರುವ ನೋಟಿಸ್‌ಗಳನ್ನು ಕೂಡಲೇ ಹಿಂಪಡೆಯುವಂತೆ ಆಗ್ರಹಿಸಿ ಜುಲೈ 24ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಬೇಕರಿ, ಕಾಂಡಿಮೆಂಟ್ಸ್ ಮತ್ತು ಸಣ್ಣ ಉದ್ದಿಮೆದಾರರ ಒಕ್ಕೂಟ ತಿಳಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಕರುಣಾಕರ ಶೆಟ್ಟಿ ಹಟ್ಟಿಯಂಗಡಿ, ‘ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಕಾಂಡಿಮೆಂಟ್ಸ್, ಬೇಕರಿ, ಹಾಲು, ತರಕಾರಿ ಅಂಗಡಿ ಸೇರಿದಂತೆ ಸಣ್ಣ ಉದ್ದಿಮೆದಾರರಿಗೆ ಜಿಎಸ್‌ಟಿ ನೋಟಿಸ್ ನೀಡಿ, ಒಂದು ವಾರದಲ್ಲಿ ಉತ್ತರಿಸುವಂತೆ ತಿಳಿಸಿದೆ. ಇದರಿಂದ ನಮ್ಮಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿದೆ. ನಾಲ್ಕು ವರ್ಷದ ಬ್ಯಾಂಕ್ ವಹಿವಾಟು, ಖರೀದಿ ರಸೀದಿ, ವ್ಯಾಪಾರ–ವಹಿವಾಟಿನ ಮಾಹಿತಿ ನೀಡುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ. ಆದರೆ ನಮ್ಮ ಬಳಿ ಯಾವುದೇ ರೀತಿಯ ದಾಖಲೆಗಳಿಲ್ಲ’ ಎಂದು ಮಾಹಿತಿ ನೀಡಿದರು.

‘ಒಂದು ವಾರದಲ್ಲಿ ಮಾಹಿತಿ ಸಲ್ಲಿಸಿ ಎಂದರೆ ಹೇಗೆ? ನಮ್ಮವರು ವ್ಯಾಪಾರದ ಪುಸ್ತಕ ನಿರ್ವಹಣೆ ಮಾಡಿಲ್ಲ. ಇಲ್ಲಿ ಮಾಲೀಕರೇ ಕೆಲಸಗಾರರು. ನಾಳಿನ ವ್ಯಾಪಾರಕ್ಕೆ ಯಾವ ವಸ್ತುಗಳನ್ನು ತರಬೇಕು ಎಂಬುದನ್ನು ಯೋಚಿಸುತ್ತಾರೆಯೇ ಹೊರತು, ಲೆಕ್ಕ ಬರೆಯಲು ಯಾರಿಗೂ ಸಮಯವಿಲ್ಲ’ ಎಂದರು.

‘ನಮ್ಮ ಅಂಗಡಿಗಳಿಗೆ ಬರುವ ಶೇಕಡ 95ರಷ್ಟು ಜನ ಡಿಜಿಟಲ್ ಪಾವತಿ ಮಾಡುತ್ತಾರೆ. ವಾರ್ಷಿಕ 40 ಲಕ್ಷ ವಹಿವಾಟು ದಾಟಿರುವ ವ್ಯಾಪಾರಿಗಳಿಂದ ಲಭ್ಯವಿರುವ ದಾಖಲೆಗಳನ್ನು ಪಡೆದುಕೊಂಡು ಶೇ 1ರಷ್ಟು ರಾಜೀ ತೆರಿಗೆ ಪರಿಹಾರ ಯೋಜನೆಯಡಿ ತೆರಿಗೆ ಪಾವತಿಸಲು ಅವಕಾಶ ನೀಡಬೇಕು’ ಎಂದು ಮನವಿ ಮಾಡಿದರು.

ಬೇಕರಿಗೆ ನುಗ್ಗಿದ ಲಾರಿ ಮೂವರು ಸಾವು

ಪ್ರಜಾವಾಣಿ ವಾರ್ತೆ

ಕೊರಟಗೆರೆ: ತಾಲ್ಲೂಕಿನ ಕೋಳಾಲ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ ರಸಗೊಬ್ಬರ ತುಂಬಿದ್ದ ಲಾರಿ ಬೇಕರಿಗೆ ನುಗ್ಗಿದ್ದರಿಂದ ಮೂವರು ಮೃತಪಟ್ಟಿದ್ದು, ಮೂರು ಜನರು ತೀವ್ರ ಗಾಯಗೊಂಡಿದ್ದಾರೆ.

ಕಾಟೇನಹಳ್ಳಿ ನಿವಾಸಿ ರಂಗಶಾಮಯ್ಯ (65), ಪುರದಳ್ಳಿಯ ಬೈಲಪ್ಪ (65) ಕೋಳಾಲದ ಜಯಣ್ಣ (50)ಮೃತರು. ಕಾಂತರಾಜು, ಸಿದ್ಧಗಂಗಮ್ಮ, ಮೋಹನ್‌ಕುಮಾರ್ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಆರೂ ಜನ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದರು.



ಭೂ ಫಲವತ್ತತೆ ಸಮೀಕ್ಷೆಗೆ ರೈತರ ಪಟ್ಟು

ಸರ್ಜಾಪುರ: ಭೂಸ್ವಾಧೀನ ವಿರೋಧಿಸಿ ಮುಂದುವರಿದ ಧರಣಿ

ಪ್ರಜಾವಾಣಿ ವಾರ್ತೆ

ಆನೇಕಲ್: ಸರ್ಜಾಪುರ ಹೋಬಳಿ ಭೂಸ್ವಾಧೀನ ವಿರೋಧಿ ಹೋರಾಟ ಮತ್ತು ಅಹೋರಾತ್ರಿ ಧರಣಿ ಮುಂದುವರಿದಿದ್ದು, ಸರ್ಜಾಪುರ ಹೋಬಳಿ ಜಮೀನುಗಳು ಬಂಜರು ಭೂಮಿಯೋ ಅಥವಾ ಫಲವತ್ತಾದ ಭೂಮಿಯೋ ಎಂಬ ಬಗ್ಗೆ ಸರ್ವೆ ಮಾಡಿ ವರದಿ ನೀಡುವಂತೆ ರೈತರು ಮಂಗಳವಾರ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಆನೇಕಲ್ ತಾಲ್ಲೂಕು ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಸದಸ್ಯರು 14 ದಿನಗಳಿಂದ ಅಹೋರಾತ್ರಿ ಧರಣಿಮುತ್ತಾನಲ್ಲೂರಿಗೆ ಬಂದ ಕಂದಾಯ ಇಲಾಖೆಯ ಉಪ ತಹಶೀಲ್ದಾರ್ ಮಂಜುನಾಥರೆಡ್ಡಿ ಮತ್ತು ರಾಜಸ್ವ ನಿರೀಕ್ಷಕ ಪ್ರಶಾಂತ್ ಅವರಿಗೆ ರೈತರು ಮನವಿ ಸಲ್ಲಿಸಿ ಈ ಬೇಡಿಕೆ ಮುಂದಿಟ್ಟರು.

ಸರ್ಜಾಪುರ ಹೋಬಳಿಯ ಸೊಳ್ಳೆಪುರ, ಹಂದೇನಹಳ್ಳಿ, ಮುತ್ತಾನಲ್ಲೂರು, ಅಮಾನಿಕೆರೆ, ಬಿ.ಹೊಸಹಳ್ಳಿ, ಎಸ್‌.ಮೇಡಹಳ್ಳಿ, ಬಿಕ್ಕನಹಳ್ಳಿ, ಮುತ್ತಾನಲ್ಲೂರು, ಚಿಕ್ಕತಿ-ಮ್ಮಸಂದ್ರ, ಕೊಮ್ಮಸಂದ್ರ, ಸಮನಹಳ್ಳಿ, ಅಡಿಗಾರಕಲ್ಲಹಳ್ಳಿ ಗ್ರಾಮಗಳ ಭೂಮಿಯನ್ನು ಕಂದಾಯ ಇಲಾಖೆ ಸರ್ವೆ ಮಾಡಿ ಭೂಮಿಯ ಫಲವತ್ತತೆಯ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಬೇಕು ಎಂದರು.

ಕೈಗಾರಿಕೆಗಳಿಗೆ ಕೃಷಿ ಭೂಮಿ ನೀಡದಿರುವ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ. ಯಾವುದೇ ಕಾರಣಕ್ಕೂ ಕೆಐಎಡಿಬಿಗೆ ಜಮೀನು ನೀಡುವುದಿಲ್ಲ ಎಂದು ರೈತರು ಸ್ಪಷ್ಟವಾಗಿ ತಿಳಿಸಿದರು.

ಭೂಮಿಯ ಫಲವತ್ತತೆ ಸ್ಥಿತಿ ಮತ್ತು ಬೆಳೆ ದಾಖಲೆಗೆ ಕಂದಾಯ ಇಲಾಖೆ ಮತ್ತು ಭೂದಾಖಲೆ ಇಲಾಖೆ ಜಂಟಿ ಸರ್ವೆ ನಡೆಸಬೇಕು. ಇದರಿಂದ ಫಲವತ್ತಾದ ಭೂಮಿ ಬಗ್ಗೆ ಮಾಹಿತಿ ದೊರೆಯುತ್ತದೆ. ಪರಿಸರ ಪ್ರಭಾವ ಮತ್ತು ಸಾಮಾಜಿಕ ಪ್ರಭಾವ ಅರಿಯದೇ ಸರ್ಕಾರ ಏಕಾಏಕಿ ಕೆಐಎಡಿಬಿಗೆ ಕೃಷಿ ಜಮೀನು ನೀಡಲು ಮುಂದಾಗಿರುವುದು ಖಂಡನೀಯ ಎಂದು ರೈತ ಮುಖಂಡ ವಿಶ್ವನಾಥ ರೆಡ್ಡಿ ಹೇಳಿದರು.

ಸರ್ಜಾಪುರ ಹೋಬಳಿಯ ಭೂಮಿಯು ರೈತರ ಹಕ್ಕು ಮತ್ತು ಅಸ್ಮಿತೆಯಾಗಿದೆ. ಯಾವುದೇ ಕಾರಣಕ್ಕೂ ಒಂದಿಂಚೂ ಭೂಮಿಯನ್ನು ಸಹ ನೀಡುವುದಿಲ್ಲ ಎಂಬ ತೀರ್ಮಾನವನ್ನು ರೈತರು ತೆಗೆದುಕೊಂಡಿದ್ದಾರೆ. ಕಂದಾಯ ಇಲಾಖೆ ಮೂಲಕ ಮುಖ್ಯಮಂತ್ರಿ ಮತ್ತು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಬೇಡಿಕೆ ಈಡೇರುವವರೆಗೂ ಹೋರಾಟ ಮತ್ತು ಅಹೋರಾತ್ರಿ ಧರಣಿ ಮುಂದುವರೆಯಲಿದೆ ಎಂದರು.

ಸುಧಾಕರ್, ನಂಜುಂಡರೆಡ್ಡಿ, ಜಿ.ಗೋಪಾಲ್, ಚಿನ್ನಪ್ಪ ವೈ.ಚಿಕ್ಕಹಾಗಡೆ, ಸೋಮಶೇಖರ್, ಚಂದ್ರಶೇಖರ್, ಕಲಾವತಿ, ಸುನಂದಮ್ಮ, ಗೌರಮ್ಮ, ಮಂಜುನಾಥ್, ಕೇಶವ, ಕೃಷ್ಣಾರೆಡ್ಡಿ, ಜನಾರ್ಧನ್, ಮಂಜುಳ ಉಪಸ್ಥಿತರಿದ್ದರು.

ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯಲ್ಲಿ ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆ ವಿರೋಧಿಸಿ ಮುತ್ತಾನಲ್ಲೂರು ಗ್ರಾಮದಲ್ಲಿ ರೈತರು ಅಹೋರಾತ್ರಿ ಧರಣಿ ನಡೆಸಿ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು

ನಗರದಲ್ಲಿ ಇಂದು

2025–26ನೇ ಸಾಲಿನ ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆಯ ಉದ್ಘಾಟನೆ: ಶೇಖ್ ಲತೀಫ್, ಅಧ್ಯಕ್ಷತೆ: ಎಂ.ಸಿ. ನರೇಂದ್ರ, ಆಶಯ ನುಡಿ: ಎಚ್‌.ಬಿ. ದಿನೇಶ್, ಅತಿಥಿಗಳು: ಗಿರೀಶ್ ಕುಲಕರ್ಣಿ, ರಮೇಶ್ ಎಚ್. ಕಿತ್ತೂರು, ವಿಶೇಷ ಉಪನ್ಯಾಸ: ಬಿ.ಆರ್. ಮಮತಾ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗಾಂಧಿ ಸಂಶೋಧನಾ ಫೌಂಡೇಷನ್, ಸ್ಥಳ: ಗಾಂಧಿ ಭವನ, ಬೆಳಿಗ್ಗೆ 11ರಿಂದ

‘ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ಬಾಪು ರಾಮಣ್ಣ ದತ್ತಿ ‘ಶ್ರೀರಾಮಯಣ ದರ್ಶನಂ–ಅಯ್ದ ಭಾಗ’ ವಾಚನ, ವ್ಯಾಖ್ಯಾನ: ಶ್ಯಾಮಲಾ ಪ್ರಕಾಶ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಸಂಜೆ 5

‘ಸರಸಭಾರತೀ ವಿಲಾಸ’ ಧಾರ್ಮಿಕ ಪ್ರವಚನ: ರಘೋತ್ತಮಾಚಾರ್ಯ, ಆಯೋಜನೆ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7ರಿಂದ

ಸಮಾಜದ ಆದರ್ಶಪ್ರಾಯ ಸಾಧಕ ಮಹನೀಯರ ಅಭಿನಂದನಾ ಸಮಾರಂಭ: ಅಧ್ಯಕ್ಷತೆ: ಎಸ್‌.ಜಿ. ಸಿದ್ದರಾಮಯ್ಯ, ಉದ್ಘಾಟನೆ: ಎಂ.ಆರ್. ಮಂಜುನಾಥ್, ಆಯೋಜನೆ: ಕನಕ ಸಮಾನ ಮನಸ್ಕರ ವೇದಿಕೆ. ಸ್ಥಳ: ಕನಕ ಭವನ, ಚಂದ್ರಾಲೇಔಟ್, ಸಂಜೆ 4.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ..
nagaradalli_indu@prajavani.co.in

ರಾಜ್ಯ ಸರ್ಕಾರದ ನಗದುರಹಿತ ಚಿಕಿತ್ಸಾ ಯೋಜನೆ 2–3 ತಿಂಗಳಲ್ಲೇ ಜಾರಿ

‘ನಿವೃತ್ತ ನೌಕರರಿಗೆ ಶೀಘ್ರವೇ ಸಂಧ್ಯಾ ಸುರಕ್ಷಾ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರದ ನಿವೃತ್ತ ನೌಕರರಿಗೆ ನಗದುರಹಿತ ಚಿಕಿತ್ಸಾ ಯೋಜನೆಯಾದ 'ಸಂಧ್ಯಾ ಸುರಕ್ಷಾ' ಎರಡು–ಮೂರು ತಿಂಗಳಲ್ಲಿ ಜಾರಿಯಾಗಲಿದೆ’ ಎಂದು ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಲ್. ಬೈರಪ್ಪ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಹಾಗೂ ವೈಯಾ ವಿಕಾಸ್ ಸಂಸ್ಥೆ ಸಹಯೋಗದೊಂದಿಗೆ ಸೋಮವಾರ ನಡೆದ ಉಚಿತ ಆರೋಗ್ಯ ಹಾಗೂ ನೇತ್ರ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

60 ವರ್ಷ ಮೇಲ್ಪಟ್ಟ ನಿವೃತ್ತ ನೌಕರರಿಗಾಗಿ ರಾಜ್ಯ ಸರ್ಕಾರ ‘ಸಂಧ್ಯಾ ಸುರಕ್ಷಾ’ ಯೋಜನೆ ಜಾರಿಗೆ ತಂದಿದೆ. ಸದ್ಯ ಆರ್ಥಿಕ ಇಲಾಖೆ ಬಳಿ ಕಡತ ಇದೆ. ಯೋಜನೆ ಜಾರಿಗಾಗಿ ಸಂಘವೂ ಪ್ರಯತ್ನಿಸುತ್ತಿದೆ’ ಎಂದು ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಮಾತನಾಡಿ, ‘ಸರ್ಕಾರಿ ನೌಕರರು, ನಿವೃತ್ತ ನೌಕರರ ಯೋಜನೆಗಳ ಜಾರಿ ಯಾವಾಗಲೂ ವಿಳಂಬವಾಗುತ್ತದೆ. ಇದರ ನಡುವೆಯೂ ಆರೋಗ್ಯ ಯೋಜನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ, ಸರ್ಕಾರದ ಮುಖ್ಯಕಾರ್ಯದರ್ಶಿ ಮತ್ತು ಹಣಕಾಸು ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ಶೀಘ್ರವೇ ನಗದು ರಹಿತ ಆರೋಗ್ಯ ಸೌಲಭ್ಯಗಳು ಜಾರಿಯಾಗುವ ವಿಶ್ವಾಸವಿದೆ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಶಿವಯೋಗಿ ಸಿ. ಕಳಸದ ಕಾರ್ಯಕ್ರಮ ಉದ್ಘಾಟಿಸಿದರು. ವೈಯಾ ವಿಕಾಸ್ ಸಂಸ್ಥೆಯ ಸಿಇಓ ಪವಿತ್ರಾ ರೆಡ್ಡಿ, ಸಂಚಾಲಕ ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ರಂಗೇಗೌಡ, ಖಜಾಂಚಿ ಎಸ್.ಎಂ.ಆನಂದಪ್ಪ ಇದ್ದರು.

ಸ್ಪರ್ಶ ಆಸ್ಪತ್ರೆ ಮತ್ತು ವಾಸನ್ ಐ ಕೇರ್ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದ ನಿವೃತ್ತ ನೌಕರರಿಗೆ ಮಧುಮೇಹ, ಹೃದಯ, ಕಣ್ಣಿನ ತಪಾಸಣೆ ಮಾಡಿದರು.

ರಾಜ್ಯ ಸರ್ಕಾರದ ನಿವೃತ್ತ ನೌಕರರು ಆರೋಗ್ಯ ತಪಾಸಣಾ ಶಿಬಿರದಲ್ಲಿ ಕಣ್ಣಿನ ಪರೀಕ್ಷೆ ಮಾಡಿಸಿಕೊಂಡರು

The Carens Clavis EV
It's an E.We

The Carens Clavis EV isn't just electric. It's your E.We with space for seven, sculpted to stand out. Inside, meticulous details blend technology with calm comfort. i-Pedal Regen that charges as you move and V2L that powers life beyond the road, it brings more to every drive. It's the new way to move. Together.

Built Smart Styled for the family

V2L – Vehicle to Load (External & Internal)

Paddle Shifters for i-Pedal & Regenerative Braking

51.4 kWh & 42 kWh Battery Pack Options

Dual Pane Panoramic Sunroof

ADAS Level 2^ with 20 Autonomous Features

7-seater Cabin Space

Robust 18 Hi – Safety Package (Standard across all variants)
Front Dual Airbags, Front Seat Side Airbags, Side Curtain Airbags, ABS (Anti-lock Brake System), BAS (Brake Assist System), ESC (Electronic Stability Control), VSM (Vehicle Stability Management), HAC (Hill-start Assist Control), ESS (Emergency Stop Signal), DBC (Downhill Brake Control), Highline Tyre Pressure Monitor, Rear Parking Sensors, Speed Sensing Auto Door Locks & Impact Sensing Auto Door Unlock, All Seats 3-Point Seat Belts with Reminder, ISOFIX, Rear Occupant Alert, All Wheel Disc Brakes, Rollover Sensor

K-Charge##
- **11 000+** charging points nationwide
- **18 leading CPOs** Charge Point Operators (CPOs) integrated
- **Fast EV Charging** network spanning across India

Kia Service
Connected · Adaptive · Responsive · Engage
- **250 EV Ready** Kia Workshops within your reach
- **Warranty^^** 8 years/ 1 60 000 km on high voltage battery 3 years/ unlimited km
- **My Convenience˅ e-Plus Program** for Extended Warranty, RSA° & scheduled maintenance

*Ex-showroom price all India.˅Terms & Conditions Apply. **The individual driving style and other factors, such as speed, outside temperature, topography, and the use of electricity-consuming devices/units, have an influence on the real-life range regeneration level, and can possibly reduce it. Range as per ARAI MIDC-Full. #i-Pedal Regen technology is not a complete replacement for the brake pedal, and drivers should always be prepared to use the brake pedal for emergencies or when more forceful braking is needed. ^Advanced Driver Assistance System (ADAS) is not a substitute for human eye and driver vigilance. It is an assistance feature that enhances driving experience and safety. Effectiveness of ADAS may vary based on actual situation and all objects around vehicle may not be detected. The driver shall remain responsible for safe, vigilant, and attentive driving. ##K-Charge is a platform of Kia India Pvt. Ltd. ("Kia") which assists/ facilitates users to locate, access, and pay for EV charging services ("Services") offered by third-party Charging Point Operators (CPOs). Users hereby agree and acknowledge that all charging services are delivered by third-party CPOs. Kia only facilitates the above Services and shall not be liable for service interruptions, equipment failures or inaccuracies in availability/ status provided by the CPOs or for any other service provided by CPO's relating to the EV Charging including but not limited to any permanent or temporary functioning/ damage to the Vehicle. Kia disclaims any liability for physical damage, safety incidents or performance issues at third-party charging stations. Users are responsible for ensuring proper connection and safe charging practices as per guidelines provided by CPO's. ^^Vehicle warranty and High Voltage warranty are independent. °RSA coverage across India except Andaman & Nicobar Islands and Lakshadweep. The product & feature images shown here are for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown. The specifications and features may vary depending on models/ variants. We do not endorse vandalism or illegal activities related to road safety. Safety is a top priority, and we urge responsible behavior regarding traffic regulations and road safety. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications and other details of any model or to discontinue any model without prior notice. For more details visit your local Kia dealership. Kia India Pvt. Ltd. urges you to follow traffic rules, these are meant to keep you safe on roads.

FOR INFORMATION CONTACT: BENGALURU: PPS KIA, MYSORE ROAD, PH: 6309990010, **TAAPASI KIA,** KALYAN NAGAR, PH: 8095537777, KORAMANGALA, PH: 8095537777, **VST KIA,** PALACE ROAD, PH: 9606988123, YESHWANTHPUR, PH: 9606988124, **ADVAITH KIA**, LALBAGH ROAD, PH: 6364871021, BANASHANKARI BRANCH, PH: 6364871022, MAGADI BRANCH, PH: 6364871023, BASAVESHWARA NAGAR, PH: 6364871024, **EPITOME KIA,** AVALAHALLI, PH: 7022317666, WHITEFIELD, PH: 9606970216, YELAHANKA, PH: 7406343339, VARTHUR: PH: 9844240044, **JSP KIA,** HOSUR ROAD, PH: 9606011244, BELLANDUR, PH: 9071077717, SARJAPUR, PH: 8095553636, **NAARA KIA,** J.P NAGAR, PH: 7406528200, KANAKAPURA ROAD, PH: 9071010099, **BELGAUM: MIRACULUM KIA,** PH: 08312439111, **BELLARY: ATHENA KIA,** PH: 6364922832, **BIJAPUR: KUMAR KIA.** PH: 7022253887, **DAVANGERE: JANSI KIA,** PH: 9538018155, **GULBARGA: KUMAR KIA,** PH: 7022253884, **HASSAN: AADARSH KIA,** PH: 9606034050, **HOSPET: BHADRA KIA,** PH: 7760888885, **HUBLI: NAGSHANTI KIA,** AMARGOL, PH: 9148432469, AIRPORT ROAD, PH: 8088752342 **KOLAR: EPITOME KIA,** PH: 8951903224, **RAICHUR: KUMAR KIA,** PH: 8123854311, **MANGALORE: ADVAITH KIA,** PH: 6364871025, **ARM KIA**, PH: 9606013152, **MANDYA: AADARSH KIA,** PH: 9606034070, **MYSORE: ARM KIA,** KUSHALNAGAR, PH: 9606055314, **AADARSH KIA**, HUNSUR ROAD, PH: 9606034060, JLB ROAD, PH: 9606996680, **SHIMOGA: JANSI KIA,** PH: 9538416666, **TUMKUR: PPS KIA,** PH: 6303622210, **UDUPI: ARM KIA,** PH: 9606055296, **CHIKAMANGALUR: JANSI KIA,** PH: 9538416666

INNOCEAN-040/25

ಬಳಕೆದಾರರ ಆಯ್ಕೆಗೆ ಅನುಸಾರ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಸಮರ್ಪಕವಾಗಿ ಅನುವಾದಿಸಬಲ್ಲ ಹೆಡ್‌ಫೋನ್‌ಗಳ ಸಂಶೋಧನೆ ನಡೆದಿದೆಯಂತೆ

‘ಇ-ರೋಡ್’ನಲ್ಲಿ ಮುಂದಕ್ಕೆ ಹೋಗಬಹುದೆ?

ಇ.ವಿ. ವಾಹನಗಳಲ್ಲಿ ಪ್ರಯಾಣಿಸುತ್ತಿರುವಾಗಲೇ ಚಾರ್ಜಿಂಗ್ ಮುಗಿದು ಹೋಗುವ ಭಯ; ಹತ್ತಿರದಲ್ಲಿ ಎಲ್ಲಾದರೂ ಚಾರ್ಜಿಂಗ್ ಸ್ಟೇಷನ್ ಇರಬಹುದೇ ಎನ್ನುವ ಆತಂಕ ಸವಾರರದ್ದು. ಚಾರ್ಜಿಂಗ್ ಸ್ಟೇಷನ್ ಒಂದೇ ಇದಕ್ಕೆ ಪರಿಹಾರವೇ?

• ವಿಕ್ರಮ ಜೋಶಿ

ಈಗ ರಸ್ತೆಯ ಮೇಲೆ ದಿನದಿಂದ ದಿನಕ್ಕೆ ವಿದ್ಯುತ್ ಚಾಲಿತ ವಾಹನಗಳು ಕಾಣುವುದು ಹೆಚ್ಚುತ್ತಿದೆ. ಭಾರತದಲ್ಲಿ ಎಲೆಕ್ಟ್ರಿಕ್ ವೆಹಿಕಲ್(ಇವಿ)ಗಳ ಸಂಖ್ಯೆ ಕಳೆದ ಐದು ವರ್ಷಗಳಲ್ಲಿ ಹತ್ತು ಪಟ್ಟು ಹೆಚ್ಚಿದೆ. ಇಂಧನವನ್ನು ಉರಿಸಿ ಚಲಿಸುವ ವಾಹನಗಳಿಗಿಂತ ಇವಿಗಳು ತುಸು ದುಬಾರಿ. ಆದರೆ ಒಮ್ಮೆ ಖರೀದಿಸಿದ ಮೇಲೆ ಬಳಕೆಯಲ್ಲಿ ಸೋವಿ. ಆರಂಭಿಕ ದುಬಾರಿ ಬೆಲೆಯನ್ನು ಕಡಿಮೆ ಮಾಡಲು ಚೀನಾ ಸರ್ಕಾರ ಅಲ್ಲಿ ರಿಯಾಯಿತಿ ಪದ್ಧತಿಯನ್ನು ಜಾರಿ ಮಾಡಿದೆ. ಹೀಗಾಗಿ ಇವಿಗಳನ್ನು ತಯಾರಿಸುವ ಕಂಪನಿಗಳಿಗೆ ಚೀನಾದಲ್ಲಿ ತುಂಬಾ ಅನುಕೂಲಕರ ಪರಿಸರವಿದೆ. ಅದರ ಪರಿಣಾಮವೇ ಈ ವರ್ಷ ಚೀನಾದಲ್ಲಿ ಮಾರಾಟವಾದ ಒಟ್ಟೂ ಪ್ರಯಾಣಿಕ ಕಾರುಗಳಲ್ಲಿ ಅರ್ಧದಷ್ಟು ಇವಿಗಳು!

ಜಗತ್ತಿನಲ್ಲಿ ಇಂದು ಪರ್ಯಾಯ ಶಕ್ತಿಯ ಮೇಲೆ ಚಲಾಯಿಸಬಲ್ಲ ವಾಹನದ ತಯಾರಿಕೆಗೆ ಹಾಗೂ ಬೆಳವಣಿಗೆಗೆ ತುಂಬಾ ಪ್ರೋತ್ಸಾಹ ಸಿಗುತ್ತಿದೆ. ಆದರೆ ಅಭಿವೃದ್ಧಿಯ ಗತಿ ಮಾತ್ರ ಆಮೆಯ ವೇಗ. ಇದಕ್ಕೆ ಒಂದಲ್ಲ, ಹಲವಾರು ಕಾರಣಗಳಿವೆ. ಅವುಗಳಲ್ಲೊಂದು ಮುಖ್ಯ ಕಾರಣವೆಂದರೆ ‘ರೇಂಜ್ ಆ್ಯಂಕ್ಸೈಟಿ’. ಇದೊಂದು ಹೊಸ ಪದ. ಪಾರಂಪರಿಕ ಎಂಜಿನ್‌ಗಳನ್ನು ಅಳವಡಿಸಿದ ವಾಹನಗಳಲ್ಲಿ (ವಿಶೇಷವಾಗಿ ಕಾರುಗಳಲ್ಲಿ) ಒಮ್ಮೆ ಇಂಧನವನ್ನು ತುಂಬಿಸಿದರೆ 400-500 ಕಿಮೀ ದೂರವನ್ನು ಆರಾಮದಲ್ಲಿ ಕ್ರಮಿಸಬಹುದು. ಆದರೆ ಇವಿಗಳು ಒಂದೇ ಚಾರ್ಜಿಂಗ್‌ನಲ್ಲಿ 300 ಕಿಮೀಗಳನ್ನು ದಾಟಿದರೂ ಹೆಚ್ಚು! ಇದರಿಂದಾಗಿ ಜನರಿಗೆ ತಾವು ಪ್ರಯಾಣ ಮಾಡುತ್ತಿರುವಾಗಲೇ ಚಾರ್ಜಿಂಗ್ ಮುಗಿದು ಹೋಗುವ ಭಯ; ಹತ್ತಿರದಲ್ಲಿ ಎಲ್ಲಾದರೂ ಚಾರ್ಜಿಂಗ್ ಸ್ಟೇಷನ್ ಇರಬಹುದೇ ಎನ್ನುವ ಆತಂಕ. ಇದನ್ನೇ ‘ರೇಂಜ್ ಆ್ಯಂಕ್ಸೈಟಿ’ ಎನ್ನುತ್ತಾರೆ. ಭಾರತದಲ್ಲಿ 150 ಎಲೆಕ್ಟ್ರಿಕ್ ವಾಹನಗಳಿಗೆ ಒಂದು ಚಾರ್ಜಿಂಗ್ ಸ್ಟೇಷನ್ ಇದ್ದರೆ, ಅದೇ ಚೀನಾದಲ್ಲಿ ಏಳು ಎಲೆಕ್ಟ್ರಿಕ್ ವಾಹನಗಳಿಗೆ ಒಂದು! ಹಾಗಿದ್ದರೆ ಚಾರ್ಜಿಂಗ್ ಸ್ಟೇಷನ್ ಒಂದೇ ಇದಕ್ಕೆ ಪರಿಹಾರವೇ? ಜಗತ್ತು ಈ ರೇಂಜ್ ಆ್ಯಂಕ್ಸೈಟಿಯನ್ನು ಕಡಿಮೆ ಮಾಡುವುದಕ್ಕೆ ಹಲವಾರು ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ. ಅವುಗಳಲ್ಲೊಂದು ‘ಇ-ರೋಡ್’!

ಇ-ರೋಡ್ ಏನಿದು?

‘ಇ-ರೋಡ್’ ಎನ್ನುವುದಕ್ಕೆ ಹಲವಾರು ಅರ್ಥಗಳಿವೆ. ಉದಾಹರಣೆಗೆ. ಯುರೋಪಿನ ಅಂತರರಾಷ್ಟ್ರೀಯ ರಸ್ತೆಗಳ ಹೆಸರನ್ನು ‘ಇಂಟರ್‌ನ್ಯಾಷನಲ್ ಇ-ರೋಡ್ ಸಿಸ್ಟಮ್ಸ್’ ಎಂದು ಕರೆಯುತ್ತಾರೆ. ನಾವು ಇಲ್ಲಿ ಚರ್ಚೆ ಮಾಡುತ್ತಿರುವುದು ಎಲೆಕ್ಟ್ರಿಕ್ ರಸ್ತೆಗಳ ಕುರಿತು. ಚಲಿಸುತ್ತಿರುವ ವಾಹನಗಳನ್ನು ಚಾರ್ಜ್ ಮಾಡಬಲ್ಲ ವಿನ್ಯಾಸದ ರಸ್ತೆಗಳಿಗೆ ಇ-ರೋಡ್ ಎನ್ನುತ್ತಾರೆ. ಎಲೆಕ್ಟ್ರಿಕ್ ರೈಲನ್ನು ನಾವು ನೋಡಿರುತ್ತೇವೆ; ವಿದ್ಯುತ್ ತಂತಿಯ ಮೂಲಕ ಅಲ್ಲಿಯ ಮೋಟರಿಗೆ ಶಕ್ತಿಯು ಸರಬರಾಜು ಆಗಿ ರೈಲು ಓಡುವುದು ಅಲ್ಲಿಯ ತಂತ್ರಜ್ಞಾನ. ಇದೇ ಮಾದರಿಯಲ್ಲಿ ಇ-ರೋಡ್ ಕೂಡ ವಾಹನದಲ್ಲಿರುವ ಬ್ಯಾಟರಿಯನ್ನು ಚಾರ್ಜ್ ಮಾಡಿ, ಅದರಲ್ಲಿಯ ಮೋಟರುಗಳಿಗೆ ಶಕ್ತಿಯ ಸರಬರಾಜು ಮಾಡುವ ಮೂಲಕ ನಿರಂತರವಾಗಿ, ಸರಾಗವಾಗಿ ವಾಹನವು ತನ್ನ ದೂರವನ್ನು ಕ್ರಮಿಸಲು ಈ ತಂತ್ರಜ್ಞಾನವು ಸಹಾಯ ಮಾಡುತ್ತದೆ.

ಬಗೆಗಳು

ಮೊದಲ ಇ-ರೋಡ್ ಜಗತ್ತಿಗೆ ಪರಿಚಯವಾಗಿದ್ದು 2016ರಲ್ಲಿ. ಸಿಮನ್ಸ್ ಎನ್ನುವ ಜರ್ಮನಿಯ ಕಂಪನಿಯು 2009-2014ರ ತನಕ ಈ ತಂತ್ರಜ್ಞಾನವನ್ನು ಅಧ್ಯಯನ ಮಾಡಿ, 2016ರಲ್ಲಿ ಕಾರ್ಯರೂಪಕ್ಕೆ ತಂದಿತ್ತು. ಅದರ ನಂತರ ಬೇರೆ ಬೇರೆ ವಿಧದ ಇ-ರೋಡ್ ಮಾದರಿಗಳ ಪರಿಶೀಲನೆ ನಡೆಯಿತು. ಇವತ್ತು ನಾವು ನಾಲ್ಕು ಮುಖ್ಯ ವಿಧದ ಇ-ರೋಡ್‌ಗಳನ್ನು ನೋಡಬಹುದು.

1. ಓವರ್ ಹೆಡ್ ಪವರ್ ಲೈನ್ಸ್

ಇದು ಎಲೆಕ್ಟ್ರಿಕ್ ರೈಲ್ವೆಯ ಪದ್ಧತಿಯ ಹಾಗೆಯೇ ಕೆಲಸ ಮಾಡುತ್ತದೆ; ಅದರದ್ದೇ ಪಕ್ಕಾ ಅಚ್ಚು. ರಸ್ತೆಯುದ್ದಕ್ಕೂ ವಿದ್ಯುತ್ ಕಂಬಗಳನ್ನು ನಿರ್ಮಿಸಿ, ಅಲ್ಲಿಯ ತಂತಿಗಳ ಮೂಲಕ ವಿದ್ಯುತ್ ಹರಿದು, ಆ ಶಕ್ತಿಯ ವರ್ಗಾವಣೆಯ ಮೂಲಕ ವಾಹನಗಳು ಚಲಿಸುತ್ತವೆ. ಇದು ದೊಡ್ಡ ಗಾತ್ರದ ಟ್ರಕ್ ಹಾಗೂ ಬಸ್ಸುಗಳಿಗೆ ಮಾತ್ರ ಸೂಕ್ತ. ರಸ್ತೆಯ ಒಂದು ಬದಿಯಲ್ಲಿ ಯಾರಿಗೂ ತಲೆಬಿಸಿ ಮಾಡಿಕೊಳ್ಳದೆ ಗುಂಪುಗುಂಪಾಗಿ ಹೋಗುವ ಕೋಣಗಳ ದಂಡಿನ ಹಾಗೆ ಇವುಗಳೂ ಸಾಗುವಂತೆ ಮಾಡಬಹುದು. ಸಿಮನ್ಸ್ ಕಂಪನಿಯು ಜರ್ಮನಿಯಲ್ಲಿ ಇ-ಹೈವೆಯನ್ನು ನಿರ್ಮಿಸಿ ಈ ಪ್ರಯೋಗವನ್ನು ನಡೆಸುತ್ತಿದೆ.

2. ಕಂಡಕ್ಟಿವ್ ಲೈನ್ಸ್

ಈ ಮಾದರಿಯಲ್ಲಿ ರಸ್ತೆಯೊಳಗೆ ವಿದ್ಯುತ್ತನ್ನು ಸರಬರಾಜು ಮಾಡಬಲ್ಲ ಕಂಡಕ್ಟಿವ್ ರೇಲ್ಸ್ ಅಳವಡಿಸಲಾಗಿರುತ್ತದೆ. ವಾಹನದಲ್ಲಿರುವ ಒಂದು ಸಾಧನವನ್ನು ಈ ರಸ್ತೆಗೆ ಸಿಕ್ಕಿಸಿದಾಗ ವಿದ್ಯುತ್ ವಾಹನದೊಳಗೆ ಹರಿದು ಅದರಲ್ಲಿಯ ಬ್ಯಾಟರಿ ಚಾರ್ಜ್ ಆಗುತ್ತದೆ ಅಥವಾ ಮೋಟರ್ ಚಲಿಸುತ್ತದೆ. ಇದರಲ್ಲಿ ರಸ್ತೆ ಹಾಗೂ ವಾಹನದ ನಡುವೆ ಅಚ್ಚುಕಟ್ಟಾದ ಹೊಂದಾಣಿಕೆಯು ಮುಖ್ಯ. ಸ್ವೀಡನ್‌ನ ಇ-ರೋಡ್ ಅಲ್ರಾಂಡಾ ಯೋಜನೆಯನ್ನು ಇದೇ ಮಾದರಿಯಲ್ಲಿ ರೂಪಿಸಲಾಗಿದೆ. ಓವರ್‌ಹೆಡ್ ಹಾಗೂ ಕಂಡಕ್ಟಿವ್ ಸಿಸ್ಟಮ್ ಮೂಲಭೂತವಾಗಿ ಒಂದೇ ರೀತಿಯಲ್ಲಿ ಕೆಲಸ ಮಾಡುವುದಾದರೂ ಹೊರಗಿನಿಂದ ನೋಡಲು ಮಾತ್ರ ಬೇರೆ ಬೇರೆ. ಇದರಲ್ಲಿ ವಾಹಕ ಸಾಧನವು ವಾಹನದ ಅಡಿಯಲ್ಲಿ ಇರುತ್ತದೆ; ಯಾರ ಕಣ್ಣಿಗೂ ಕಾಣುವುದಿಲ್ಲ!

3. ಇಂಡಕ್ಟಿವ್ ಲೈನ್ಸ್

ವಯರ್‌ಲೆಸ್ ಚಾರ್ಜಿಂಗ್ ಬಳಕೆ ಮಾಡಿದವರಿಗೆ ಈ ತಂತ್ರಜ್ಞಾನ ಬಹುಬೇಗ ಅರ್ಥವಾಗುತ್ತದೆ. ಇಂಡಕ್ಟಿವ್ ತಂತ್ರಜ್ಞಾನದ ಇ-ರೋಡ್‌ಗಳು ಇದೇ ಮಾದರಿಯಲ್ಲಿ ನಿರ್ಮಾಣಗೊಂಡಿರುವಂತಹದ್ದು! ಅದೇ, ಇಂಡಕ್ಷನ್ ಚಾರ್ಜಿಂಗ್ ತಂತ್ರಜ್ಞಾನ. ಇಲ್ಲಿ ರಸ್ತೆಯೊಳಗೆ ವಾಹಕ ತಂತಿಗಳ ಸುರುಳಿಯನ್ನು (ಇಂಡಕ್ಷನ್ ಕಾಯ್ಲ್) ಅಳವಡಿಸಲಾಗಿರುತ್ತದೆ, ಅದು ರಸ್ತೆಯ ಮೇಲೆ ಹೋಗುವ ಎಲೆಕ್ಟ್ರಿಕ್ ವಾಹನಗಳನ್ನು ಚಾರ್ಜ್ ಮಾಡುತ್ತದೆ. ಇದರಲ್ಲಿ ಅಲೈನ್‌ಮೆಂಟ್, ವಿದ್ಯುತ್ ತಂತಿಗಳ ಬಳಕೆ ಯಾವುದೂ ಬೇಡ. ಆದರೆ ಇದರ ನಿರ್ಮಾಣದ ವೆಚ್ಚ ತುಂಬಾ ಹೆಚ್ಚು, ದುಬಾರಿ. ಆದರೂ ಈ ಅತ್ಯಾಧುನಿಕ ತಂತ್ರಜ್ಞಾನವನ್ನು ಇಸ್ರೇಲ್ ಹಾಗೂ ಸ್ವೀಡನ್‌ನಲ್ಲಿ ಪ್ರಾಯೋಗಿಕವಾಗಿ ಬಳಸಲಾಗುತ್ತಿದೆ.

4. ರಸ್ತೆಬದಿಯ ಕಂಡಕ್ಟಿವ್ ಲೈನ್ಸ್

ರಸ್ತೆ ಬದಿಯ ಕಂಡಕ್ಟಿವ್ ಲೈನ್ಸ್ ಎನ್ನುವ ವಿಚಾರ ಇವತ್ತಿಗೆ ಕೇವಲ ಪ್ರಯೋಗಾಲಯಕ್ಕೆ ಮಾತ್ರವೇ ಸೀಮಿತವಾಗಿದೆ. ರಸ್ತೆಯ ಅಂಚಿನಲ್ಲಿ ನಿರ್ಮಿಸಲ್ಪಟ್ಟ ವಿದ್ಯುತ್ ಸಲಕರಣೆಗಳ ಮೂಲಕ ವಾಹನವನ್ನು ಓಡಿಸಬಲ್ಲ ತಂತ್ರಜ್ಞಾನವಿದು.

ಮೇಲಿನ ನಾಲ್ಕು ಬಗೆಯ ತಂತ್ರಜ್ಞಾನಗಳನ್ನು ಬೇರೆಯಾಗಿ ಅಥವಾ ಜೊತೆ ಜೊತೆಗೂ ಬಳಸಿದ ಉದಾಹರಣೆಗಳಿವೆ. ಇವತ್ತು ಇ-ರೋಡ್ ತಂತ್ರಜ್ಞಾನವನ್ನು ಸ್ವೀಡನ್, ಜರ್ಮನಿ, ಫ್ರಾನ್ಸ್, ಇಟಲಿ, ಇಸ್ರೇಲ್, ಚೀನಾ, ಹಾಗೂ ಅಮೆರಿಕದಂಥ ದೇಶಗಳಲ್ಲಿ ಅತ್ಯಂತ ಸಣ್ಣ ಪ್ರಮಾಣದಲ್ಲಿ ಕಾಣಬಹುದು. ಭಾರತದಲ್ಲಿ ಇನ್ನೂ ಅದು ಪ್ರಯೋಗ ಶಾಲೆಯ ಆವರಣವನ್ನು ಮೀರಿಲ್ಲ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್. ಇಷ್ಟೊಂದು ಹಣವನ್ನು ತೆತ್ತು ಯಾರು ಹೊಸ ಮಾದರಿಯ ರಸ್ತೆಯನ್ನು ತಯಾರಿಸುವರು?



ಇದು ಬುದ್ಧಿವಂತ ಪ್ರಯೋಗಾಲಯ

• ನೇಸರ ಕಾಡನಕುಪ್ಪೆ

ಮಾನವಹಸ್ತಕ್ಷೇಪವೇ ಇಲ್ಲದಂತೆ ಹಾಗೂ ಅತ್ಯಂತ ಕಡಿಮೆ ಅಪಾಯ ಸಾಧ್ಯತೆಗಳುಳ್ಳ ಅತ್ಯಾಧುನಿಕ ಕೃತಕ ಬುದ್ಧಿಮತ್ತೆಯ ಸ್ವಯಂಚಾಲಿತ ಪ್ರಯೋಗಾಲಯವೊಂದು ಸಿದ್ಧವಾಗಿದೆ. ಈ ಪ್ರಯೋಗಾಲಯದಲ್ಲಿ ಅಪಾಯಕಾರಿ ರಾಸಾಯನಿಕಗಳ ಭಯ ಇರುವುದಿಲ್ಲ, ಪ್ರಾಣಿಗಳ ಮೇಲೆ ಪ್ರಯೋಗ ಮಾಡಬೇಕಿಲ್ಲ. ಮಾತ್ರವಲ್ಲ, ಯುದ್ಧೋಪಕರಣಗಳ ಪ್ರಯೋಗವನ್ನೂ ಪರಿಸರ ಮಾಲಿನ್ಯ ಆಗದಂತೆ ನಡೆಸಬಲ್ಲ ಜಾಣತನವೂ ಈ ಪ್ರಯೋಗಾಲಯಕ್ಕಿದೆ.

ನಾರ್ತ್ ಕ್ಯಾರೊಲಿನಾ ಸ್ಟೇಟ್ ವಿಶ್ವವಿದ್ಯಾಲಯದ ರಾಸಾಯನಿಕ ಎಂಜಿನಿಯರ್‌ಗಳು ಈ ಸಂಶೋಧನೆ ನಡೆಸಿದ್ದಾರೆ. ಪ್ರಸಿದ್ಧ ನೇಚರ್ ಕೆಮಿಕಲ್ ಎಂಜಿನಿಯರಿಂಗ್ ವೈಜ್ಞಾನಿಕ ನಿಯತಕಾಲಿಕೆಯಲ್ಲಿ ಇವರ ಸಂಶೋಧನೆ ಪ್ರಕಟವಾಗಿದ್ದು, ಜಾಗತಿಕವಾಗಿ ಮೆಚ್ಚುಗೆ ವ್ಯಕ್ತವಾಗಿದೆ. ಮಿಲಾದ್ ಅಬೋಲ್‌ಹಾಸನಿ ಅವರ ತಂಡ ಈ ಪ್ರಯೋಗವನ್ನು ಮಾಡಿದ್ದು, ಸಾವು, ನೋವು, ಅಡ್ಡಪರಿಣಾಮಗಳಿಲ್ಲದೇ ವೈಜ್ಞಾನಿಕ ಪ್ರಯೋಗ ಮಾಡಬಲ್ಲ ಸಾಧ್ಯತೆಗಳು ಈ ಸಂಶೋಧನೆಯಿಂದ ತೆರೆದುಕೊಳ್ಳುವ ನಿರೀಕ್ಷೆಗಳಿವೆ.

ಸಾಮಾನ್ಯವಾಗಿ ಪ್ರಯೋಗಾಲಯಗಳೆಂದರೆ ಅಪಾಯದ ಕೂಪ ಎಂದೇ ಪರಿಗಣಿಸಲಾಗುತ್ತದೆ. ಸಾಮಾನ್ಯವಾಗಿ ರಾಸಾಯನಿಕ ಪ್ರಯೋಗಗಳು, ವೈದ್ಯಕೀಯ ಪ್ರಯೋಗಗಳು ನಡೆಯುತ್ತವೆ. ರಾಸಾಯನಿಕ ಪ್ರಯೋಗಗಳ ಅಡಿಯಲ್ಲಿ ಔಷಧ ತಯಾರಿಯ ಸಂಶೋಧನೆ ಜೊತೆಗೆ ಬಾಂಬ್ ಇತ್ಯಾದಿ ಸಂಶೋಧನೆಗಳೂ ನಡೆಯುತ್ತವೆ. ಇನ್ನು ವೈದ್ಯಕೀಯವಾಗಿ ಕಾಯಿಲೆಗಳ ಅಧ್ಯಯನ ನಡೆಯುತ್ತದೆ. ಇವೆಲ್ಲವೂ ವಿಜ್ಞಾನಿಗಳಿಗೆ, ಪ್ರಯೋಗ ಬಲಿಪಶುಗಳಿಗೆ ಹಾಗೂ ಪರಿಸರಕ್ಕೆ ಅಪಾಯ ತಂದೊಡ್ಡಬಲ್ಲ ಸಾಧ್ಯತೆ ಇರುತ್ತದೆ. ಸಾಧ್ಯವಾದಷ್ಟೂ ಕಡಿಮೆ ಪ್ರಮಾಣದಲ್ಲಿ ಮಾನವ ಸಂಪನ್ಮೂಲವನ್ನು ಬಳಸಿಕೊಂಡು, ಸುರಕ್ಷಿತವಾಗಿ ಕಾರ್ಯನಿರ್ವಹಿಸಬಲ್ಲ ಪ್ರಯೋಗಾಲಯದ ಅವಶ್ಯಕತೆ ಇತ್ತು. ಅದಕ್ಕೆ ಇದೀಗ ಪರಿಹಾರ ಸಿಕ್ಕಂತಿದೆ.

ಏನಿದು ಪ್ರಯೋಗಾಲಯ?: ಮೇಲೆ ಉದಾಹರಿಸಿದ ವಿಷಯಗಳಿಗೆ ನಡೆಯುವ ಪ್ರಯೋಗಗಳಲ್ಲಿ ಅಪಾಯ ಹೆಚ್ಚಿರುವ ಕಾರಣ, ಸ್ವಯಂಚಾಲಿತವಾಗಿ ಯಂತ್ರಗಳ ಸಹಾಯದಿಂದ ಇಲ್ಲಿ ಪ್ರಯೋಗ ನಡೆಯಲಿದೆ. ರೋಬೊಗಳು ಅಪಾಯಕಾರಿ ರಾಸಾಯನಿಕಗಳು ಅಥವಾ ಜೈವಿಕ ವಸ್ತುಗಳನ್ನು ಸಂಪರ್ಕಿಸಿ ಕೆಲಸ ಮಾಡುತ್ತವೆ; ಮಾನವನ ಅಗತ್ಯವೇ ಇರುವುದಿಲ್ಲ. ಅತ್ಯಾಧುನಿಕ ರಿಮೋಟ್ ನಿಯಂತ್ರಣ ವ್ಯವಸ್ಥೆಯ ಸಹಾಯದಿಂದ ದೂರದಿಂದಲೇ ಈ ರೋಬೊಗಳನ್ನು ನಿಯಂತ್ರಿಸಬಹುದು. ‘ನಮ್ಮ ವಿಜ್ಞಾನಿಗಳಿಗೆ ತಾವು ದೂರದಿಂದ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಯದಷ್ಟು ಈ ಪ್ರಯೋಗಾಲಯ ಸುಧಾರಿಸಿರುತ್ತದೆ. ಅಂದರೆ, ಆಗ್ಮೆಂಟೆಡ್ ರಿಯಾಲಿಟಿ ಹಾಗೂ ವರ್ಚುಯಲ್ ರಿಯಾಲಿಟಿ ಸಹಾಯದಿಂದ ವಿಜ್ಞಾನಿಗಳು ತಾವೇ ಖುದ್ದು ಕೆಲಸ ಮಾಡುತ್ತಿರುವಂತೆ ಭಾಸವಾಗುತ್ತಿರುತ್ತದೆ. ಆದರೆ, ವಾಸ್ತವದಲ್ಲಿ ಅತಿ ದೂರದಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ. ರೋಬೊಗಳು ಅಪಾಯಕ್ಕೆ ತೆರೆದುಕೊಂಡಿರುತ್ತವೆ’ ಎಂದು ಮಿಲಾದ್ ವಿವರಿಸಿದ್ದಾರೆ.

ಸದ್ಯದ ಪ್ರಯೋಗಾಲಯಗಳಲ್ಲಿ ಈ ಎಲ್ಲ ಬಗೆಯ ಪ್ರಯೋಗಗಳನ್ನು ಖುದ್ದು ಮಾನವರೇ ಮಾಡುತ್ತಿದ್ದಾರೆ. ಸಾಕಷ್ಟು ಸುರಕ್ಷಾ ವಿಧಾನಗಳು ಇವೆಯಾದರೂ ಅಪಾಯದ ಸಾಧ್ಯತೆಗಳನ್ನು ತಳ್ಳಿಹಾಕುವಂತೆ ಇಲ್ಲ. ಆದರೆ ಈ ಹೊಸ ಪ್ರಯೋಗಾಲಯದಲ್ಲಿ ಅಪಾಯ ಸಾಧ್ಯತೆಗಳೇ ಇರುವುದಿಲ್ಲ. ಅಪಾಯ ಉಂಟಾದಲ್ಲಿ ಅದು ಕೇವಲ ರೋಬೊಗಳಿಗೆ ಆಗಬೇಕಷ್ಟೇ!

ಹತ್ತು ಪಟ್ಟು ವೇಗ: ಜತೆಗೆ, ಸುಮಾರು 10 ಪಟ್ಟು ವೇಗದಲ್ಲಿ ಈ ಪ್ರಯೋಗಾಲಯ ಕಾರ್ಯನಿರ್ವಹಿಸುತ್ತದೆ. ಸಾಮಾನ್ಯವಾಗಿ ರೋಬೊಗಳು ಅತಿ ವೇಗದಲ್ಲಿ ಕಾರ್ಯನಿರ್ವಹಿಸುವುದು ಸಾಮಾನ್ಯದ ವಿಷಯ. ಇದು ಇಲ್ಲೂ ಅನ್ವಯವಾಗಿದೆ. ರೋಬೊಗಳು ನಿಖರವಾಗಿ ಕಾರ್ಯನಿರ್ವಹಿಸುವ ಕಾರಣ ಸಮಯ ವ್ಯರ್ಥವಾಗುವುದಿಲ್ಲ. ಜೊತೆಗೆ, ಈ ರೋಬೊಗಳು ಹಿಂದಿನಂತೆ ಹೆಚ್ಚು ವಿದ್ಯುತ್ ಬಳಸುವುದೂ ಇಲ್ಲ. ಆದ್ದರಿಂದ ಇವು ಮಿತವ್ಯಯಿಗಳೂ ಆಗಿರುವುದು ವಿಶೇಷವಾಗಿದೆ.

ಇದಲ್ಲದೇ ಪರಿಸರಕ್ಕೆ ಹಾನಿಯಾಗುವ ಅಥವಾ ಮಾಲಿನ್ಯವನ್ನು ಉಂಟುಮಾಡುವ ಸಾಧ್ಯತೆಗಳೂ ಅತಿ ಕಡಿಮೆ. ರಾಸಾಯನಿಕ ಪರೀಕ್ಷೆಗಳನ್ನು ಅತ್ಯಂತ ನಿಯಂತ್ರಿತ ಪರಿಸರದಲ್ಲಿ ನಡೆಸಲಾಗುತ್ತದೆ. ಮುಂಚೆ ಬಾಂಬ್‌ಗಳ ಪ್ರಯೋಗವನ್ನು ನೈಜವಾಗಿಯೇ ನಡೆಸಲಾಗುತ್ತಿತ್ತು. ಇಲ್ಲಿ ಆ ಸಮಸ್ಯೆ ಇಲ್ಲ. ಬದಲಿಗೆ ಸಾಮರ್ಥ್ಯ ಪರೀಕ್ಷೆಗಳು ಗಣಿತೀಯವಾಗಿ, ಅನುಪಾತಗಳ ಆಧಾರದ ಮೇಲೆ ನಡೆಯುತ್ತದೆ. ಹಾಗಾಗಿ, ಅತಿ ನಗಣ್ಯ ಪ್ರಮಾಣದಲ್ಲಿ ಪರಿಸರ ಮಾಲಿನ್ಯ ಆಗುವ ಸಾಧ್ಯತೆಗಳಿವೆ.

ಇವೆಲ್ಲದರ ಜೊತೆಗೆ, ಈ ಪ್ರಯೋಗಾಲಯಕ್ಕೆ ಕೃತಕ ಬುದ್ಧಿಮತ್ತೆಯ ಸಹಾಯವೂ ಇರುವುದರಿಂದ ಪ್ರಯೋಗಗಳ ಲೆಕ್ಕಾಚಾರ ಹಾಗೂ ದತ್ತಾಂಶಗಳನ್ನು ಅತಿ ಸಮರ್ಥವಾಗಿ, ವೇಗವಾಗಿ ನಡೆಸುವ ಸಾಮರ್ಥ್ಯವೂ ಇದೆ. ಹಾಗಾಗಿ, ಈ ಇದನ್ನು ‘ಬುದ್ಧಿವಂತ ಪ್ರಯೋಗಾಲಯ’ ಎಂದು ಕರೆಯಲಾಗಿದೆ ಎಂದು ವಿಜ್ಞಾನಿಗಳು ವ್ಯಾಖ್ಯಾನಿಸಿದ್ದಾರೆ.



ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಜೀವ ಕ್ರಿಯೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಪರಪೋಷಕ ಜೀವಿಗಳು ಯಾವುವು?

ಉತ್ತರ:– ಪ್ರಾಣಿಗಳು ಮತ್ತು ಶಿಲೀಂಧ್ರಗಳು ಪರಪೋಷಕ ಜೀವಿಗಳಾಗಿವೆ.

2) ಸ್ವಪೋಷಕ ಜೀವಿಗಳು ಯಾವುವು?

ಉತ್ತರ:– ಹಸಿರು ಸಸ್ಯಗಳು ಹಾಗೂ ಕೆಲವು ಬ್ಯಾಕ್ಟೀರಿಯಾಗಳು

3) ಜೀವಿಗಳು ಹೇಗೆ ತಮ್ಮ ಆಹಾರವನ್ನು ಪಡೆಯುತ್ತವೆ?

ಉತ್ತರ:– ಕೆಲವು ಜೀವಿಗಳು ನಿರವಯವ ಮೂಲಗಳಿಂದ ಸರಳವಾದ ಆಹಾರ ವಸ್ತುಗಳನ್ನು ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರಿನ ರೂಪದಲ್ಲಿ ಬಳಸಿಕೊಳ್ಳುತ್ತವೆ, ಇತರ ಜೀವಿಗಳು ಸಂಕೀರ್ಣ ವಸ್ತುಗಳನ್ನು ಬಳಸಿಕೊಳ್ಳುತ್ತವೆ.

ಸಾಮಾನ್ಯವಾಗಿ ಸಂಕೀರ್ಣ ವಸ್ತುಗಳನ್ನು ದೇಹದ ಬೆಳವಣಿಗೆ ಮತ್ತು ದುರಸ್ಥಿಗಾಗಿ ಬಳಸಿಕೊಳ್ಳುವ ಮುನ್ನ ಸರಳ ವಸ್ತುಗಳಾಗಿ ವಿಭಜಿಸಬೇಕಾಗುತ್ತದೆ, ಇದನ್ನು ಸಾಧಿಸಲು ಜೀವಿಗಳು ಕಿಣ್ವಗಳೆಂಬ ವೇಗವರ್ಧಕಗಳನ್ನು ಬಳಸಿಕೊಳ್ಳುತ್ತವೆ.

4) ದ್ಯುತಿಸಂಶ್ಲೇಷಣೆ ಪ್ರಕ್ರಿಯೆ ನಡೆದಾಗ ಯಾವೆಲ್ಲಾ ಘಟನೆಗಳು ಜರುಗುತ್ತವೆ?

ಉತ್ತರ:– ದ್ಯುತಿಸಂಶ್ಲೇಷಣೆ ಪ್ರಕ್ರಿಯೆ ನಡೆದಾಗ ಈ ಕೆಳಗಿನ ಘಟನೆಗಳು ಜರುಗುತ್ತವೆ:–

1) ಕ್ಲೋರೋಫಿಲ್‌ನಿಂದ ಶಕ್ತಿ ಹೀರುತ್ತದೆ

2) ಬೆಳಕಿನ ಶಕ್ತಿಯು ರಾಸಾಯನಿಕ ಶಕ್ತಿಯಾಗಿ ಪರಿವರ್ತನೆಯಾಗುವುದು ಮತ್ತು ನೀರಿನ ಅಣುಗಳು ಹೈಡ್ರೋಜನ್ ಮತ್ತು ಆಕ್ಸಿನ್ ಆಗಿ ವಿಭಜಿಸಲ್ಪಡುವುದು.

3) ಕಾರ್ಬನ್ ಡೈ ಆಕ್ಸೈಡ್ ಕಾರ್ಬೋಹೈಡ್ರೇಟ್ ಆಗಿ ಪರಿವರ್ತಿಸಲ್ಪಡುವುದು

ಈ ಹಂತಗಳು ಒಂದಾದ ನಂತರ ಒಂದರಂತೆ ತಕ್ಷಣವೇ ಜರುಗುವುದಿಲ್ಲ. ಉದಾಹರಣೆಗೆ ಮರಭೂಮಿಯ ಸಸ್ಯಗಳು ರಾತ್ರಿ ವೇಳೆಯಲ್ಲಿ ಕಾರ್ಬನ್ ಡೈ ಆಕ್ಸೈಡ್ ಅನ್ನು ತೆಗೆದುಕೊಂಡು ಮಧ್ಯಂತರ ವಸ್ತುವೊಂದನ್ನು ತಯಾರಿಸುತ್ತದೆ, ನಂತರ ಹಗಲಿನ ವೇಳೆಯಲ್ಲಿ ಕ್ಲೋರೋಫಿಲ್ ಹೀರಿಕೊಂಡ ಶಕ್ತಿಯು ಈ ವಸ್ತುವಿನ ಮೇಲೆ ವರ್ತಿಸುತ್ತದೆ.

3) ತೆರೆದ ಪತ್ರರಂಧ್ರವನ್ನು ತೋರಿಸುವ ಚಿತ್ರವನ್ನು ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ (ಜೂನ್ 2019)

1) ಕಾವಲು ಕೋಶ 2) ಪತ್ರರಂಧ್ರ 3) ಕ್ಲೋರೋ ಪ್ಲಾಸ್ಟ್

ಉತ್ತರ:–



ಬಹು ಆಯ್ಕೆ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಸಣ್ಣ ಕರಳಿನಲ್ಲಿರುವ ಕಂಡುಬರುವ ಕೊಬ್ಬುಗಳು ದೊಡ್ಡದೊಡ್ಡ ದುಂಡುಕಣಗಳ ರೂಪದಲ್ಲಿದ್ದು ಕಿಣ್ವಗಳಿಗೆ ಅದರ ಮೇಲೆ ವರ್ತಿಸುವುದು ಕಷ್ಟವಾಗುತ್ತದೆ. ....ದ ಲವಣಗಳು ಅವುಗಳನ್ನು ಚಿಕ್ಕಚಿಕ್ಕ ದುಂಡುಕಣಗಳಾಗಿ ವಿಭಜಿಸಿ ಕಿಣ್ವಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ

ಎ) ಪಿತ್ತರಸ ಬಿ) ರಕ್ತ

ಸಿ) ಮೂತ್ರ ಡಿ) ಹೃದಯ

ಉತ್ತರ:– (ಎ) ಪಿತ್ತರಸ

2) ಕರಳಿನ ರಸದಲ್ಲಿರುವ ಕಿಣ್ವಗಳು ಪ್ರೋಟೀನ್ ಅನ್ನು ಏನನ್ನಾಗಿ ಪರಿವರ್ತಿಸುತ್ತವೆ?

ಎ) ಅಮಿನೋ ಆಮ್ಲ ಬಿ) ಗ್ಲಿಸರಾಲ್

ಸಿ) ಗ್ಲುಕೋಸ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ಅಮಿನೋ ಆಮ್ಲ

3) ರಕ್ತವು ಆಹಾರವನ್ನು ಹೀರಿಕೊಳ್ಳಲು ಸಹಾಯ ಮಾಡುವ ವಿಲ್ಲೈಗಳು ಎಲ್ಲಿವೆ?

ಎ) ಜಠರ ಬಿ) ವಪೆ

ಸಿ) ಗುದದ್ವಾರ ಡಿ) ಸಣ್ಣ ಕರಳು

ಉತ್ತರ:– (ಡಿ) ಸಣ್ಣ ಕರಳು

4) ಆಕ್ಸಿಜನ್ ಬಳಕೆಯಿಂದ ನಡೆಯುವ ಪೈರುವೇಟ್ ವಿಭಜನೆಯು ಎಲ್ಲಿ ನಡೆಯುತ್ತದೆ?

ಎ) ಗುದನಾಳ ಬಿ) ಅಮಿಬಾ

ಸಿ) ಮೈಟೋಕಾಂಡ್ರಿಯಾ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಸಿ) ಮೈಟೋಕಾಂಡ್ರಿಯಾ

5) ಮಾನವನ ಹೃದಯದಲ್ಲಿ ಎಲ್ಲಿ ಅನಿಲಗಳ ವಿನಿಮಯ ನಡೆಯುತ್ತದೆ?

ಎ) ಶ್ವಾಸ ನಾಳ ಬಿ) ಮೃದ್ವಸ್ಥಿಯ ಉಂಗುರ

ಸಿ) ಮೂಗಿನ ದ್ವಾರ ಡಿ) ಗಾಳಿ ಗೂಡು

ಉತ್ತರ:– (ಡಿ) ಗಾಳಿಗೂಡು

6) ಶ್ವಾಸನಾಳದ ಮೇಲ್ಭಾಗವು.......................ಎಂಬ ಸಣ್ಣ ಕೂದಲಿನಂತಹ ರಚನೆಗಳನ್ನು ಹೊಂದಿದೆ, ಇವು ಉಚ್ಛ್ವಾಸದ ಗಾಳಿಯಲ್ಲಿರಬಹುದಾದ ಸೂಕ್ಷ್ಮ ಜೀವಿಗಳು, ಧೂಳು, ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಧೂಮ್ರಪಾನವು ಈ ಕೂದಲನ್ನು ನಾಶ ಮಾಡುತ್ತದೆ

ಎ) ಸಿಲಿಯಾ(Cilia) ಬಿ) ನ್ಯೂಕ್ಲಿಯಸ್

ಸಿ) ಜಾಕ್‌ರಿ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ಸಿಲಿಯಾ (Cilia)

7) ಮಾನವನ ಜಠರವು ....ಉತ್ಪಾದಿಸುತ್ತದೆ. ಹಾಗೂ ಅದು ಜೀರ್ಣ ಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

ಎ) ಆಮ್ಲಜನಕ ಬಿ) ಸಾರಜನಕ

ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಪೊಟಾಷಿಯಂ ಸಲ್ಫೇಟ್

ಉತ್ತರ:– (ಸಿ) ಹೈಡ್ರೋಕ್ಲೋರಿಕ್ ಆಮ್ಲ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

CHEMICAL KINETICS

12. What is termolecular reaction?

Ans:- A reaction is said to be termolecular if three molecules take part in the reaction. *Eg:-* Oxidation of stannous chloride by ferric chloride

$$2FeCl_3 + SnCl_2 \rightarrow 2FeCl_2 + SnCl_4$$

13. What is homogeneous reaction?

Ans:- The homogeneous reaction is the reaction in which all the reactants and products are in the same physical state. *Eg:-* Formation of nitric oxide from nitrogen & oxygen in the gaseous phase.

$$N_2(g) + O_2(g) \rightarrow 2NO(g)$$

14. What is heterogeneous reaction?

Ans:- The heterogeneous reaction is the reaction in which the reactants and products constitute more than one phase.

Eg:- Dissociation of calcium carbonate

$$CaCO_3(s) + CaO(s) \rightarrow CO_2(g)$$

15. Give the relation between the half life period and the zero order reaction.

Ans:- The relation between the half life period and the zero order reaction is given by -

$$t_{1/2} = \frac{a}{2k} \text{ (or) } t_{1/2} \propto a$$

Hence, the half life of the zero order reaction is directly proportional to the initial concentration.

16. Give the relation between the half life period and the first order reaction.

Ans:- The relation between the half life period and the first order reaction is given by -

$$t_{1/2} = \frac{0.693}{k}$$

Hence, the half life of the first order reaction is independent of the initial concentration.

17. Give the relation between the half life period and the second order reaction.

Ans:- The relation between the half life period and the second order reaction is given by -

$$t_{1/2} = \frac{1}{ak} \text{ (or) } t_{1/2} \propto \frac{1}{a}$$

Hence, the half life of the second order reaction is inversely proportional to the initial concentration.

18. Give the relation between the half life period and the nth order reaction.

Ans:- The relation between the half life period and the nth order reaction is given by -

$$t_{1/2} \propto \frac{1}{a^{n-1}}$$

19. Mention the methods of determining the order of the reaction.

Ans:- The methods of determining the order of the reaction are – Graphical method and Ostwald's isolation method.

20. What is meant by temperature coefficient of the reaction?

Ans:- The ratio of the rate constant of a reaction at a given temperature to its rate constant at a ten degree lower temperature is called the temperature coefficient of the reaction.

$$\frac{k_{t+10}}{k_t} = 2 \text{ to } 3 = \text{temperature coefficient}$$

21. What is threshold energy?

Ans:- Threshold energy of a reaction is the minimum energy that the reacting molecules should possess in order to form products upon collision.

22. The inorganic reactions are generally faster than the organic reactions, why?

Soln:- Generally, the inorganic reactions are ionic reactions while the organic reactions are molecular reactions. Hence, they are faster than the organic reactions.

23. Temperature coefficient of a reaction is 2. How many times does the rate increase when the temperature is increased from 30^0 - 90^0C?

Soln:- The rise in temperature = 90 – 30 = 60^0C

For every 10^0 rise in temperature, the rate increases two times.

∴ The increase in the rate would be 2^6 times or 64 times.

24. Mention the factors that influence the rate of a reaction.

Ans:- The factors that influence the rate of a reaction are - (i) Nature of the reactants

(ii) Concentration of the reactants

(iii) Temperature of the reaction

(iv) Presence of the catalyst

(v) Intensity of light in the case of photosensitive reactions

(vi) Surface area

25. What is Pseudo first order reaction?

Ans:- A chemical reaction of higher order can be converted into first order by taking the other reactants except one in a large excess. Such a reaction is called Pseudo first order reaction.

Eg:- Hydrolysis of sucrose or the inversion of cane sugar.

$$\underset{\text{(Sucrose)}}{C_{12}H_{22}O_{11}} + H_2O \xrightarrow{H^+} \underset{\text{(Glucose)}}{C_6H_{12}O_6} + \underset{\text{(Fructose)}}{C_6H_{12}O_6}$$

26. The first order reaction is 87.5% complete in 120 min. Calculate its half life?

Soln:- For a first order reaction,

$$k = \frac{2.303}{t} \log \frac{a}{a-x}$$

Substituting for a = 100, t = $t_{87.5\%}$ = 120 min and a – x = 12.5% in the above equation we get,

$$k = \frac{2.303}{120} \log \frac{100}{100-87.5} = \frac{2.303}{120} \log \frac{100}{12.5}$$

$$= \frac{2.303}{120}(\log 100 - \log 12.5)$$

$$= \frac{2.303}{120}(2.0000 - 1.0969)$$

$$= \frac{2.303}{120} \times 0.9031 = 0.01733 \text{ min}^{-1}$$

$$\text{Half life, } t_{\frac{1}{2}} = \frac{0.693}{k} = \frac{0.693}{0.01733}$$

$$= 39.98 \text{ minutes}$$

27. How does the concentration of the reactants influence the rate of a reaction? *(Contd)*

ಚಿಟಿಕೆ ಸುದ್ದಿ

ಅಂಗಾಂಗ ದಾನ ಜಾಗೃತಿ ಅಭಿಯಾನ ಆ. 13ರಿಂದ

ಬೆಂಗಳೂರು: ಕಾವೇರಿ ಆಸ್ಪತ್ರೆಯಿಂದ 760ಕ್ಕೂ ಹೆಚ್ಚು ಅಂಗಾಂಗ ಕಸಿ ಯಶಸ್ವಿ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಈಗ ಹೃದಯ ಕಸಿಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಅಗಸ್ಟ್ 13ರಂದು ಅಂಗಾಂಗ ದಾನದ ಕುರಿತು ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಲಾಗುವುದು ಎಂದು ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಸ್. ವಿಜಯಭಾಸ್ಕರನ್ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹ್ಯಾಂಡ್ ಓವರ್ ಹೋಪ್, ಗಿವ್ ವಿಥ್ ಗ್ರೇಸ್, ಲೈವ್ ಥ್ರೊ ಅದರ್ಸ್ ಎಂಬ ಪರಿಕಲ್ಪನೆ ಅಡಿಯಲ್ಲಿ ಸಾರ್ವಜನಿಕ ಅಂಗಾಂಗ ದಾನ ಜಾಗೃತಿ ಅಭಿಯಾನ ನಡೆಯಲಿದೆ. ನಮ್ಮ ಆಸ್ಪತ್ರೆಯು ದಾನಿಗಳ ನೋಂದಣಿ ಶಿಬಿರಗಳನ್ನೂ ಆಯೋಜಿಸಲಿದೆ' ಎಂದು ಮಾಹಿತಿ ನೀಡಿದರು.

ಆಸ್ಟ್ರೋನೊಮಿ ಎಕ್ಸ್‌ಪೊ ನಾಳೆ

ಬೆಂಗಳೂರು: ಇನ್ನೊನೆಕ್ಸ್ಟ್ ಮೈಂಡ್ಸ್ ಪ್ರೈವೇಟ್ ಲಿಮಿಟೆಡ್ ಸಹಯೋಗದಲ್ಲಿ ಇದೇ 24ರಂದು ಮಲ್ಲೇಶ್ವರದ ಮಂತ್ರಿಸ್ಕ್ವೇರ್ ಮಾಲ್‌ನ ಐನಾಕ್ಸ್‌ನಲ್ಲಿ ಆಯೋಜಿಸಿರುವ ಆಸ್ಟ್ರೋನೊಮಿ ಎಕ್ಸ್‌ಪೊ–1.0ಗೆ ಚಾಲನೆ ನೀಡಲಾಗುತ್ತದೆ.

ಈ ಎಕ್ಸ್‌ಪೊದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಕಲಿಕೆ, ನಾವೀನ್ಯತೆ, ಸಂವಾದಗಳ ಮೂಲಕ ಬಾಹ್ಯಾಕಾಶ ಶಿಕ್ಷಣವನ್ನು ಹೊಸ ಮಟ್ಟಕ್ಕೆ ತೆಗೆದುಕೊಂಡು ಹೋಗಲಿದೆ. ಇಲ್ಲಿ ಭಾರತದ ಮೊದಲ ಶೈಕ್ಷಣಿಕ ರಾಕೆಟ್ ಲ್ಯಾಬ್‌ನ ಉದ್ಘಾಟನೆ, ಬಾಹ್ಯಾಕಾಶ ಕಲಿಕಾ ಅಪ್ಲಿಕೇಶನ್ ಬಿಡುಗಡೆ, ಸಂವೇದಿ ಹಾಗೂ ಅನುಭವ ಆಧಾರಿತ ಶಿಕ್ಷಣಕ್ಕೆ ಸಹಾಯಕವಾಗಲಿದೆ. ಡಾಲ್ಬಿ ಅಟ್ಮೋಸ್ ತಂತ್ರಜ್ಞಾನದಲ್ಲಿ ಬಾಹ್ಯಾಕಾಶ ಚಟುವಟಿಕೆಗಳ 3ಡಿ ಚಿತ್ರ ಪ್ರದರ್ಶನ ನಡೆಯಲಿದೆ. ಇಸ್ರೊ ಮತ್ತು ನಾಸಾ ವಿಜ್ಞಾನಿಗಳೊಂದಿಗೆ ನೇರ ಸಂವಾದ ನಡೆಸಲು ಅವಕಾಶವಿದೆ. ಈ ಎಕ್ಸ್‌ಪೊದಲ್ಲಿ 150ಕ್ಕೂ ಹೆಚ್ಚು ಶಾಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ದರೋಡೆ: ದೂರುದಾರನೇ ಸೂತ್ರಧಾರ

ವಿದ್ಯಾರಣ್ಯಪುರ ಠಾಣೆ ಪೊಲೀಸರ ಕಾರ್ಯಾಚರಣೆ: 15 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಪ್ಪು ಹಣವನ್ನು ಡಾಲರ್‌ಗೆ ಪರಿವರ್ತಿಸಿಕೊಡುವುದಾಗಿ ನಂಬಿಸಿ ಉದ್ಯಮಿಯನ್ನು ಕರೆಸಿಕೊಂಡು ₹2 ಕೋಟಿ ಸುಲಿಗೆ ಮಾಡಿ, ದರೋಡೆಯ ನಾಟಕವಾಡಿದ್ದ ದೂರುದಾರ ಸೇರಿ 15 ಮಂದಿಯನ್ನು ವಿದ್ಯಾರಣ್ಯಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದೂರುದಾರ, ಕೆಂಗೇರಿ ಉಪನಗರದ ನಿವಾಸಿ ವಿ.ಹರ್ಷ(33), ಯಲಹಂಕದ ಚೊಕ್ಕನಹಳ್ಳಿಯ ನಿವಾಸಿ ಬೆಂಜಮಿನ್ ಹರ್ಷ (45), ತುಮಕೂರು ಜಿಲ್ಲೆಯ ನಜರಾಬಾದ್‌ನ ಎಂ.ರಕ್ಷಿತ್ (29), ಬೆಂಗಳೂರು ಬಾಗಲಗುಂಟೆಯ ಅಂದಾನಪ್ಪ ಲೇಔಟ್‌ನ ಎಚ್.ಎಸ್.ಚಂದ್ರಶೇಖರ್ (58), ವಿದ್ಯಾರಣ್ಯಪುರ ಎಂ.ಎಸ್. ಪಾಳ್ಯದ ನಿವಾಸಿ ಸೈಯದ್ ಅಕೀಬ್(30) ಹಾಗೂ ಮೊಹಮದ್ ಸುಹೇಲ್ (28), ಸಲ್ಮಾನ್ ಖಾನ್ (32), ಎಸ್. ಮುಹೀಬ್ (30), ಚಾಮರಾಜಪೇಟೆಯ ಮೋಸಿನ್ ಖಾನ್(32), ಬನಶಂಕರಿಯ ಸಲ್ಮಾನ್ ಖಾನ್ (35), ಎಂ.ಎಸ್. ಪಾಳ್ಯದ ಸೈಯದ್ ಅಮ್ಜದ್ (31), ಸೈಯದ್ ಅಫ್ರಿದಿ (27), ಕೆ.ಆರ್.ಪುರ ದೇವಸಂದ್ರದ ಸೈಯದ್ ವಸೀಂ(23), ವಿನಾಯಕನಗರದ ಶೇಖ್ ವಸೀಂ, ಇಲಿಯಾಸ್ ನಗರದ ಮೊಹಮ್ಮದ್ ಅತೀಕ್(38) ಬಂಧಿತರು.

ತಲೆಮರೆಸಿಕೊಂಡಿರುವ ಸಂದೀಪ್, ಶೇಖ್ ಸಾದು, ರಾಕೇಶ್ ಹಾಗೂ ಮೊಹಮ್ಮದ್ ಸಾಬೀರ್ ಅವರಿಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ತನಿಖೆಯ ವೇಳೆ ದೂರುದಾರ ವಿ.ಹರ್ಷನೇ ಪ್ರಕರಣದ ಸೂತ್ರಧಾರ ಎಂಬುದು ಗೊತ್ತಾಗಿ ರಾಜ್ಯದ ವಿವಿಧೆಡೆ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಬಂಧಿಸಲಾಯಿತು

ಸೀಮಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಅಪರಾಧ ಸುದ್ದಿ

ಬಂಧಿತರಿಂದ ₹1.11 ಕೋಟಿ ನಗದು, ಕೃತ್ಯಕ್ಕೆ ಬಳಸಿದ ನಾಲ್ಕು ಕಾರು, ನಾಲ್ಕು ದ್ವಿಚಕ್ರ ವಾಹನ, ಎರಡು ಆಟೊ, ಎರಡು ಚಾಕು, ಒಂದು ಲಾಂಗ್, ಎಂಟು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಚಿಕ್ಕಪೇಟೆಯ ಎಲೆಕ್ಟ್ರಿಕ್ ಉದ್ಯಮಿಯೊಬ್ಬರಿಂದ ಆರೋಪಿ ವಿ. ಹರ್ಷ ಹಣ ಪಡೆದುಕೊಂಡು ಬಂದಿದ್ದ. ಕಪ್ಪು ಹಣವನ್ನು ಡಾಲರ್‌ಗೆ ಪರಿವರ್ತಿಸಿ ಕೊಡುವುದಾಗಿ ನಂಬಿಸಿದ್ದ. ಅಲ್ಲದೇ ಹಣವನ್ನು ದ್ವಿಗುಣಗೊಳಿಸಿ ಕೊಡುವುದಾಗಿಯೂ ಹೇಳಿದ್ದ. ಆರೋಪಿಯ ಮಾತು ನಂಬಿದ್ದ ಉದ್ಯಮಿ ₹2 ಕೋಟಿ ಹಣ ನೀಡಿದ್ದರು. ಆ ಹಣವನ್ನು ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಎಂ.ಎಸ್.ಪಾಳ್ಯದ ಮಳಿಗೆಗೆ ತಂದು ಎಣಿಸಲಾಗುತ್ತಿತ್ತು.

ಬೆಂಜಮಿನ್ ಹರ್ಷ | ಎಂ.ರಕ್ಷಿತ್ | ಮೋಸಿನ್ ಖಾನ್ | ಚಂದ್ರಶೇಖರ್ | ಸಲ್ಮಾನ್ ಖಾನ್ | ವಸೀಂ

ಪಾಷಾ | ಹರ್ಷ | ಆತೀಕ್ | ಮುಹೀಬ್ | ಅಫ್ರಿದ್ | ಅಮ್ಜದ್

ಸುಹೇಲ್ | ಸಲ್ಮಾನ್ ಖಾನ್

ನಾಟಕವಾಡಿದ್ದ ಹರ್ಷ

'ಕೆಂಗೇರಿ ಉಪ ನಗರದಲ್ಲಿ ಕಂಪನಿ ನಡೆಸುತ್ತಿದ್ದೇನೆ. ಆಯಿಲ್ ಉದ್ಯಮ ಘಟಕ ಸ್ಥಾಪಿಸುವ ನಿಟ್ಟಿನಲ್ಲಿ ಹಣ ಇಟ್ಟುಕೊಂಡಿದ್ದೆ. ಸ್ನೇಹಿತರ ಬಳಿಯೂ ಸಾಲ ಪಡೆದುಕೊಂಡಿದ್ದೆ. ಘಟಕ ನಿರ್ಮಾಣಕ್ಕೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಜರ್ಮನಿಯಿಂದ ಖರೀದಿಸಬೇಕಿತ್ತು. ₹2 ಕೋಟಿ ನಗದನ್ನು ಡಾಲರ್‌ಗೆ ಪರಿವರ್ತಿಸಿ ಕೊಡುವಂತೆ ಪ್ರಕಾಶ್ ಅಗರ್‌ವಾಲ್ ಹಾಗೂ ನನ್ನ ಸ್ನೇಹಿತ ರಕ್ಷಿತ್‌ಗೆ ತಿಳಿಸಿದ್ದೆ. ಅವರಿಬ್ಬರು ನಾರಾಯಣ ಭರತ್ ಅವರನ್ನು ಪರಿಚಯಿಸಿದ್ದರು. ನಾರಾಯಣ್ ಭರತ್ ಅವರು ಬೆಂಜಮಿನ್ ಹರ್ಷ ಎಂಬುವರನ್ನು ಪರಿಚಯಿಸಿದ್ದರು. ಇವರ ಕಡೆಯಿಂದ ನಿನ್ನ ಕೆಲಸ ಆಗಲಿದೆ ಎಂಬುದಾಗಿಯೂ ತಿಳಿಸಿದ್ದರು. ಬೆಂಜಮಿನ್ ಹರ್ಷಗೆ ಕರೆ ಮಾಡಿ, ನನ್ನ ಬಳಿಯಿರುವ ಹಣವನ್ನು ಡಾಲರ್‌ಗೆ ಪರಿವರ್ತಿಸಿ ಕೊಡುವಂತೆ ಕೇಳಿಕೊಂಡಿದ್ದೆ. ಹಣವನ್ನು ಎಂ.ಎಸ್.ಪಾಳ್ಯಕ್ಕೆ ತರುವಂತೆ ತಿಳಿಸಿದ್ದರು. ಜೂನ್ 25ರಂದು ಮಧ್ಯಾಹ್ನ ಎರಡು ಗಂಟೆಗೆ ಸ್ನೇಹಿತರಾದ ನಾಗೇಂದ್ರ ಹಾಗೂ ಶಾಂತಕುಮಾರ್ ಜತೆಗೆ ಕಾರಿನಲ್ಲಿ ಹಣ ತೆಗೆದುಕೊಂಡು ಹೋಗಿದ್ದೆ. ಹಣ ಎಣಿಕೆ ಮಾಡುತ್ತಿದ್ದ ವೇಳೆ ಅಪರಿಚಿತರು ಎ.ಕೆ. ಎಂಟರ್ ಪ್ರೈಸಸ್ ಮಳಿಗೆಗೆ ನುಗ್ಗಿ ದರೋಡೆ ಮಾಡಿಕೊಂಡು ಹೋಗಿದ್ದರು ಎಂಬುದಾಗಿ ವಿ.ಹರ್ಷ ದೂರು ನೀಡಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಣ ಎಣಿಸುತ್ತಿರುವಾಗ ಕಾರು, ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು, ಏಕಾಏಕಿ ಮಳಿಗೆಯ ಒಳಗೆ ನುಗ್ಗಿದ್ದರು. ಮಾರಕಾಸ್ತ್ರ ತೋರಿಸಿ ₹2 ಕೋಟಿ ನಗದನ್ನು ಚೀಲಕ್ಕೆ ತುಂಬಿಕೊಂಡು ಮಳಿಗೆಯ ರೋಲಿಂಗ್ ಶೆಟರ್ ಹಾಕಿ ಪರಾರಿ ಆಗಿದ್ದರು. ಹಣ ಎಣಿಸುವಾಗ ದರೋಡೆ ಆಯಿತೆಂದು ನಾಟಕವಾಡಿ ವಿ.ಹರ್ಷ ದೂರು ನೀಡಿದ್ದ ಎಂದು ಪೊಲೀಸರು ಹೇಳಿದರು.

'ವಿ.ಹರ್ಷ ನೀಡಿದ ದೂರು ಆಧರಿಸಿ ತನಿಖೆ ನಡೆಸಿದಾಗ, ದೂರುದಾರನೇ ಸಂಚು ರೂಪಿಸಿದ್ದು ಕಂಡುಬಂತು. ತನ್ನ ಸಹಚರರನ್ನು ಕರೆಸಿಕೊಂಡು ದರೋಡೆಯ ನಾಟಕವಾಡಿದ್ದು ಗೊತ್ತಾಯಿತು' ಎಂದು ಪೊಲೀಸರು ಹೇಳಿದರು.

ಹೆಗಡೆ ನಗರದ ಜಾಮೀಯಾ ಮಸೀದಿಯ ಬಳಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಅವರು ನೀಡಿದ ಸುಳಿವು ಆಧರಿಸಿ ಬೆಂಗಳೂರಿನ ಬಾಗಲಗುಂಟೆ, ಚಿಕ್ಕಮಗಳೂರು, ಹಾಲೇನಹಳ್ಳಿ, ಮಂಗಳೂರು, ಅಜ್ಮೇರ್ ಹಾಗೂ ಬೀದರ್‌ನ ಹಳೆಯ ನಗರದಲ್ಲಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಎಂಜಿನಿಯರಿಂಗ್ ವಿದ್ಯಾರ್ಥಿಗಳ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಯ ಬಾಗಲೂರಿನಲ್ಲಿನ ಎಂಜಿನಿಯರಿಂಗ್ ಕಾಲೇಜೊಂದರ ವಿದ್ಯಾರ್ಥಿ ಸಿ. ಅರುಣ್ ಆತ್ಮಹತ್ಯೆ ಪ್ರಕರಣದ ಸಂಬಂಧ ಎಂಜಿನಿಯರಿಂಗ್ ವಿಭಾಗದ ಮೂವರು ವಿದ್ಯಾರ್ಥಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಚಿರಂತ್, ವಿಕಾಸ್‌ಗೌಡ ಹಾಗೂ ಅಮೀನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಅರುಣ್ ತಂದೆ ಚನ್ನಕೇಶ ಅವರು ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಪುತ್ರ ಓದುತ್ತಿದ್ದ ಕಾಲೇಜಿನಲ್ಲಿ ವಾಟ್ಸ್‌ಆ್ಯಪ್ ಗ್ರೂಪ್ ರಚನೆ ಮಾಡಿಕೊಳ್ಳಲಾಗಿತ್ತು. ಆ ಗ್ರೂಪ್‌ನಲ್ಲಿ ಚಿರಂತ್, ವಿಕಾಸ್‌ಗೌಡ ಹಾಗೂ ಅಮೀನ್ ಅವರು ನನ್ನ ಮಗನ ಬಗ್ಗೆ ಕೆಟ್ಟದಾಗಿ ಮೆಸೇಜ್ ಮಾಡಿ ಅವಮಾನ ಮಾಡಿದ್ದರು. ಈ ವಿಚಾರವನ್ನು ನನ್ನ ಮಗನ ಇಬ್ಬರು ಸ್ನೇಹಿತರು ನನಗೆ ತಿಳಿಸಿದ್ದಾರೆ. ಮಾನಸಿಕ ಹಿಂಸೆ ನೀಡಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾರೆ. ಒಂದು ವರ್ಷದಿಂದ ವಾಟ್ಸ್‌ಆ್ಯಪ್‌ನಲ್ಲಿ ಪೀಡಿಸಿದ್ದರು. ಅವಮಾನ ತಾಳದೇ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಉತ್ತರ ತಾಲ್ಲೂಕು ನಂದರಾಮಯ್ಯನಪಾಳ್ಯದ ನಿವಾಸಿಗಳಾದ ಚನ್ನಕೇಶವ–ತುಳಸಿ ದಂಪತಿ ಪುತ್ರ ಸಿ.ಅರುಣ್. ಅರುಣ್ ಅವರು ವಾಸ್ತುಶಿಲ್ಪ ವಿಭಾಗದಲ್ಲಿ ಓದುತ್ತಿದ್ದರು. ಹಾಸನದ ಚನ್ನಕೇಶವ ಹಾಗೂ ತುಳಸಿ ದಂಪತಿ, ಮಗನ ವಿದ್ಯಾಭ್ಯಾಸ ಹಾಗೂ ಉದ್ಯೋಗಕ್ಕೋಸ್ಕರ ನಂದರಾಮಯ್ಯನಪಾಳ್ಯಕ್ಕೆ ಬಂದು ನೆಲಸಿದ್ದರು. ದಂಪತಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಶಾಲಾ–ಕಾಲೇಜಿನಲ್ಲೂ ಉತ್ತಮ ಅಂಕ ಗಳಿಸಿ ಪ್ರತಿಭಾನ್ವಿತರಾಗಿದ್ದ ಅರುಣ್ ಅವರಿಗೆ ಬಾಗಲೂರಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಚಿತ ಪ್ರವೇಶ ದೊರಕಿತ್ತು. ಜುಲೈ 11ರಂದು ಮಧ್ಯಾಹ್ನ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

ಶಾಲೆಗೆ ಬಾಂಬ್ ಬೆದರಿಕೆ: ತಪಾಸಣೆ

ಬೆಂಗಳೂರು: ನಗರದ ಶಿಕ್ಷಣ ಸಂಸ್ಥೆಗಳಿಗೆ ಬಾಂಬ್ ಬೆದರಿಕೆಯ ಇ–ಮೇಲ್ ಬರುವುದು ಮುಂದುವರಿದಿದ್ದು, ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಕ್ರಿಸಲಿಸ್ ಹೈ ಶಾಲೆಗೆ ಮಂಗಳವಾರ ಬೆಳಿಗ್ಗೆ ಬಾಂಬ್ ಬೆದರಿಕೆ ಇ–ಮೇಲ್ ಬಂದಿತ್ತು. ಇದರಿಂದ ಶಾಲಾ ಆವರಣದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಮಂಗಳವಾರ ಬೆಳಿಗ್ಗೆಯೂ ಎಂದಿನಂತೆಯೇ ಶಾಲಾ ಆಡಳಿತ ಮಂಡಳಿಯವರು, ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಶಾಲೆಗೆ ಬಂದಿದ್ದರು. ಸಿಬ್ಬಂದಿ ಇ–ಮೇಲ್ ಪರಿಶೀಲನೆ ನಡೆಸಿದಾಗ ಬಾಂಬ್ ಬೆದರಿಕೆ ಇ–ಮೇಲ್ ಬಂದಿದ್ದು ಗೊತ್ತಾಗಿತ್ತು. ವರ್ತೂರು ಠಾಣೆಯ ಪೊಲೀಸರು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿದ್ಯಾರ್ಥಿಗಳಿಗೆ ರಜೆ ನೀಡಲಾಗಿತ್ತು.

'ಯಾವುದೇ ಸ್ಫೋಟಕ ವಸ್ತುಗಳಾಗಲಿ, ರಾಸಾಯನಿಕ ಪದಾರ್ಥ ಗಳಾಗಲಿ ಪತ್ತೆ ಆಗಿಲ್ಲ' ಎಂದು ಪೊಲೀಸರು ಹೇಳಿದರು.

ಬಿಎಂಟಿಸಿ ಬಸ್ ಡಿಕ್ಕಿ: ವೃದ್ಧೆ ಸಾವು

ಬೆಂಗಳೂರು: ರೇಷ್ಮೆ ಸಂಸ್ಥೆಯ ಮೆಟ್ರೊ ನಿಲ್ದಾಣದ ಬಳಿ ಬಿಎಂಟಿಸಿ ಬಸ್ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಮಂಗಳವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಹಿಂಬದಿಯ ಸವಾರರೊಬ್ಬರು ಮೃತಪಟ್ಟಿದ್ದಾರೆ.

ಕನಕಪುರ ತಾಲ್ಲೂಕಿನ ತಾತಗುಣಿಯ ವಳಿಯಮ್ಮ(60) ಮೃತಪಟ್ಟವರು. ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದ ರಾಜ (36) ಅವರು ಗಾಯಗೊಂಡಿದ್ದಾರೆ.

ಕೆ.ಆರ್. ಮಾರುಕಟ್ಟೆಯಿಂದ ಹಂಚಿಪುರ ಕಾಲೊನಿಗೆ ರಾಜ ಹಾಗೂ ವಳಿಯಮ್ಮ ಅವರು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಆಗ ವೇಗವಾಗಿ ಬಂದ ಬಿಎಂಟಿಸಿ ಬಸ್, ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಇಬ್ಬರೂ ಕೆಳಕ್ಕೆ ಬಿದ್ದಿದ್ದರು. ವಳಿಯಮ್ಮ ಅವರ ಮೇಲೆಯೇ ಬಸ್‌ನ ಚಕ್ರಗಳು ಹರಿದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟರು ಎಂದು ಪೊಲೀಸರು ಹೇಳಿದರು.

ರಾಜ ಅವರು ನೀಡಿದ ದೂರು ಆಧರಿಸಿ ತಲಘಟ್ಟಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತ ನಡೆದ ಬಳಿಕ ಬಸ್ ಅನ್ನು ಸ್ಥಳದಲ್ಲೇ ನಿಲುಗಡೆ ಮಾಡಿ ಚಾಲಕ ಹಾಗೂ ನಿರ್ವಾಹಕ ಪರಾರಿ ಆಗಿದ್ದರು.

ಚಾಲಕನನ್ನು ಪತ್ತೆ ಮಾಡಿ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

9 ವಿದೇಶಿಯರ ಬಂಧನ

ಬೆಂಗಳೂರು: ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ, ನಗರದಲ್ಲಿ ಅಕ್ರಮವಾಗಿ ನೆಲಸಿದ್ದ 9 ವಿದೇಶಿಯರನ್ನು ಬಂಧಿಸಿದ್ದಾರೆ.

ನೈಜೀರಿಯಾದ ನಾಲ್ವರು ಪ್ರಜೆಗಳು, ಘಾನಾದ ಇಬ್ಬರು, ಸುಡಾನ್ ದೇಶದ ಒಬ್ಬ ಪ್ರಜೆ ಸೇರಿ ಒಟ್ಟು ಒಂಬತ್ತು ವಿದೇಶಿಯರನ್ನು ಬಂಧಿಸಲಾಗಿದೆ. ವೀಸಾ ಅವಧಿ ಮುಗಿದಿದ್ದರೂ ನಗರದಲ್ಲಿ ವಾಸವಾಗಿದ್ದರು. ಬಂಧಿತರನ್ನು ವಲಸಿಗರ ಕೇಂದ್ರದಲ್ಲಿ ಇರಿಸಲಾಗಿದ್ದು, ಈ ಪೈಕಿ ನೈಜೀರಿಯಾ ಪ್ರಜೆಯನ್ನು ಅವರ ದೇಶಕ್ಕೆ ಕಳುಹಿಸಲಾಗಿದೆ. ಉಳಿದವರನ್ನು ಅವರ ದೇಶಕ್ಕೆ ವಾಪಸ್ ಕಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪಾಸ್‌ಪೋರ್ಟ್ ಮತ್ತು ವೀಸಾ ಇಲ್ಲದೇ ವಾಸವಾಗಿದ್ದುಕೊಂಡು, ಡ್ರಗ್ಸ್ ಪೆಡ್ಲಿಂಗ್ ಹಾಗೂ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ವಿದೇಶಿ ಪ್ರಜೆಗಳ ಚಟುವಟಿಕೆ ನಿಯಂತ್ರಿಸುವ ನಿಟ್ಟಿನಲ್ಲಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಕಾರ್ಯಾಚರಣೆ ಮುಂದುವರಿಸಿದ್ದಾರೆ.

ಡ್ರಗ್ಸ್ ಪತ್ತೆ: ವಿದೇಶಗಳಿಂದ ಅಂಚೆ ಮೂಲಕ ಆಮದು ಮಾಡಿಕೊಂಡಿದ್ದ ₹6 ಲಕ್ಷ ಮೌಲ್ಯದ ಮಾದಕ ವಸ್ತುವನ್ನು ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. 10 ಗ್ರಾಂ ಕೊಕೇನ್, 10 ಎಂಡಿಎಂಎ ಕ್ರಿಸ್ಟೆಲ್, 30 ಗ್ರಾಂ ಎಕ್ಸ್‌ಟಸಿ ಪಿಲ್ಸ್, 70 ಗ್ರಾಂ ಹೈಡ್ರೋ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ.

ಕುಂಬಳಗೋಡಿನ ಮಳಿಗೆಯೊಂದರಲ್ಲಿ ಕಲಾವಿದೆ ಭಾಗ್ಯ ಶಿವಕುಮಾರ್ ಅವರು ಮಣ್ಣಿನಲ್ಲಿ ಪಂಚಮುಖಿ ಗಣೇಶ ಮೂರ್ತಿ ತಯಾರಿಸಿ ಅಂತಿಮ ಸ್ಪರ್ಶ ನೀಡುತ್ತಿದ್ದ ದೃಶ್ಯ ಮಂಗಳವಾರ ಕಂಡುಬಂತು ಚಿತ್ರ:ರಂಜು ಪಿ.

ಜುಲೈ 25ರಂದು ದೆಹಲಿ ಚಲೋ ಅಭಿಯಾನ

ಬೆಂಗಳೂರು: ಅಸಾಂವಿಧಾನಿಕವಾಗಿರುವ ಬುದ್ಧಗಯಾ ಟ್ರಸ್ಟ್ (ಬಿ.ಟಿ) ಕಾಯ್ದೆ–1949 ರದ್ದುಗೊಳಿಸಬೇಕು. ಬಿಹಾರದ ಬುದ್ಧಗಯಾ ಮಹಾಬೋಧಿ ಮಹಾವಿಹಾರದ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ಬೌದ್ಧರಿಗೆ ನೀಡುವಂತೆ ಆಗ್ರಹಿಸಿ ಜುಲೈ 25ರಂದು ದೆಹಲಿ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ಬೌದ್ಧರ ವೇದಿಕೆ ತಿಳಿಸಿದೆ.

ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ ಮಾತನಾಡಿ, 'ಬೌದ್ಧ ಬಿಕ್ಕುಗಳ ಸಂಘವು 160 ದಿನಗಳಿಂದ ಬುದ್ಧಗಯಾದಲ್ಲಿ ಧರಣಿ ನಡೆಸುತ್ತಿದೆ. ಸ್ವಾತಂತ್ರ್ಯ ನಂತರ ಬಿ.ಟಿ–1949 ಕಾಯ್ದೆ ರಚಿಸಲಾಗಿತ್ತು. ಈ ಕಾಯ್ದೆಯಡಿ ಬಿಹಾರದ ಗಯಾ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಾಲ್ವರು ಬೌದ್ಧರು, ನಾಲ್ವರು ಹಿಂದೂಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಬುದ್ಧಗಯಾದ ಮಹಾಬೋಧಿ ಮಹಾವಿಹಾರದ ಆಡಳಿತವನ್ನು ನೋಡಿಕೊಳ್ಳುತ್ತಿದೆ. ಇದರಿಂದ ಬೌದ್ಧರಿಗೆ ಅನ್ಯಾಯವಾಗಿದೆ' ಎಂದು ದೂರಿದರು.

'ಆಲ್ ಇಂಡಿಯಾ ಬುದ್ಧಿಸ್ಟ್ ಫೋರಂ ಪ್ರಧಾನ ಕಾರ್ಯದರ್ಶಿ ಆಕಾಶ್ ಲಾಮ್ ಅವರ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದೆ. ಇದೇ 25ರಂದು ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಯುವ ರಾಷ್ಟ್ರ ಮಟ್ಟದ ಧರಣಿ ಸತ್ಯಾಗ್ರಹದಲ್ಲಿ ರಾಜ್ಯದಿಂದ ನೂರಾರು ಜನ ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ಹತ್ಯೆಗೆ ಸುಪಾರಿ ಪಡೆದವರ ಬಂಧನ

ಬಿಕ್ಲು ಶಿವನ ಕೊಲೆ: ಬಂಧಿತರ ಸಂಖ್ಯೆ 11ಕ್ಕೆ ಏರಿಕೆ, ಕಾಲೇಜು ವಿದ್ಯಾರ್ಥಿ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವ ಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಅವರ ಕೊಲೆಗೆ ಸುಪಾರಿ ಪಡೆದಿದ್ದ ಕಾಲೇಜು ವಿದ್ಯಾರ್ಥಿಯೂ ಸೇರಿದಂತೆ ನಾಲ್ವರನ್ನು ಭಾರತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ.

ಕೋಲಾರ ಜಿಲ್ಲೆ ಮಾಲೂರಿನ ಅವಿನಾಶ್ ದೀನಹಳ್ಳಿ, ಸುದರ್ಶನ್, ಮುರುಗೇಶ್ ಹಾಗೂ ನರಸಿಂಹ ಬಂಧಿತರು.

ಎಸಿಪಿ ರಂಗಪ್ಪ ಅವರ ನೇತೃತ್ವದ ತಂಡವು ಮಾಲೂರು ತಾಲ್ಲೂಕಿನ ದೀನಹಳ್ಳಿಯಲ್ಲಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ ಎಂದು ಪೊಲೀಸರು ಹೇಳಿದರು.

'ಬಿಕ್ಲು ಶಿವ ಕೊಲೆಗೆ ಆರೋಪಿಗಳು ₹1.50 ಲಕ್ಷಕ್ಕೆ ಸುಪಾರಿ ಪಡೆದುಕೊಂಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ. ನರಸಿಂಹ ತಂಡದ ನೇತೃತ್ವ ವಹಿಸಿದ್ದರು. ಬಂಧಿತ ಆರೋಪಿಗಳ ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಅವಿನಾಶ್ | ನರಸಿಂಹ | ಸುದರ್ಶನ್ | ಮುರುಗೇಶ್

ಇಂದು ಮತ್ತೆ ವಿಚಾರಣೆ?

ಬೈರತಿ ಬಸವರಾಜ್

ಈ ಪ್ರಕರಣದಲ್ಲಿ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರು ಐದನೇ ಆರೋಪಿ ಆಗಿದ್ದಾರೆ. ಹೈಕೋರ್ಟ್ ಸೂಚನೆಯಂತೆ ಭೈರತಿ ಬಸವರಾಜ್ ಅವರು ಶನಿವಾರ ಪೊಲೀಸರ ವಿಚಾರಣೆಗೆ ಹಾಜರಾಗಿದ್ದರು. ಮತ್ತೆ ವಿಚಾರಣೆಗೆ ಬರುವಂತೆ ಪೊಲೀಸರು ಸೂಚನೆ ನೀಡಿದ್ದು, ಬುಧವಾರ ಭಾರತಿನಗರ ಠಾಣೆಗೆ ವಿಚಾರಣೆಗೆ ಬರುವ ಸಾಧ್ಯತೆಯಿದೆ ಎಂದು ಪೊಲೀಸರು ಹೇಳಿದರು.

'ವಿಮಲ್ ಮೂಲಕ ಆರೋಪಿಗಳು ಸುಪಾರಿ ಪಡೆದುಕೊಂಡಿದ್ದರು. ನರಸಿಂಹ ತನ್ನ ಪರಿಚಯಸ್ಥರನ್ನೂ ಕೃತ್ಯಕ್ಕೆ ಬಳಸಿಕೊಂಡಿದ್ದರು. ಹೆಲ್ಮೆಟ್ ಧರಿಸಿಕೊಂಡು ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು ಕೃತ್ಯ ಎಸಗಿ ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

'ಮಾಲೂರು ಕಾಲೇಜೊಂದರ ವಿದ್ಯಾರ್ಥಿ ನರಸಿಂಹ. ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ವೇಳೆ ಆರೋಪಿಗಳ ಮುಖಚಹರೆ ಪತ್ತೆಯಾಗಿತ್ತು. ಆ ದೃಶ್ಯಾವಳಿ ಆಧರಿಸಿ ಸುಪಾರಿ ಪಡೆದವರನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ನರಸಿಂಹನಿಗೆ ರೌಡಿಗಳ ನಂಟು: 'ಕಾಲೇಜು ವಿದ್ಯಾರ್ಥಿ ನರಸಿಂಹ ಅವರಿಗೆ ರೌಡಿಗಳ ಸಂಪರ್ಕ ಇರುವುದು ಕಂಡುಬಂದಿದೆ. ರೌಡಿಗಳ ಜನ್ಮದಿನಾಚರಣೆಗೆ ನರಸಿಂಹ ಬಂದು ಶುಭಾಶಯ ಕೋರಿ ಹೋಗುತ್ತಿದ್ದರು. ಹೀಗಾಗಿ ರೌಡಿಗಳ ಸಂಪರ್ಕ ಇರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಬಿಕ್ಲು ಶಿವ ಅವರ ಕೊಲೆಗೂ ಮುಂಚೆ ಆರೋಪಿಗಳು ಪುಲಿಕೇಶಿ ನಗರದ ಬಾರ್‌ವೊಂದರಲ್ಲಿ ಪಾರ್ಟಿ ನಡೆಸಿದ್ದರು. ಸ್ಯಾಮ್ಯುವೆಲ್ ನೀಡಿದ್ದ ಮಾಹಿತಿ ಆಧರಿಸಿ, ಬಿಕ್ಲು ಶಿವ ಅವರು ನಿಂತಿದ್ದ ಸ್ಥಳಕ್ಕೆ ಆರೋಪಿಗಳು ಕಾರು ಹಾಗೂ ಬೈಕ್‌ನಲ್ಲಿ ಬಂದಿದ್ದರು. ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

ಪ್ರಕರಣದ ಮೊದಲನೇ ಆರೋಪಿಗಾಗಿ ಹುಡುಕಾಟ ನಡೆದಿದೆ. ಆತನನ್ನು ಪೊಲೀಸರು ಪತ್ತೆ ಮಾಡಿ ಬಂಧಿಸಲಿದ್ದಾರೆ. ಕಾರ್ಯಾಚರಣೆ ಹಾಗೂ ತನಿಖಾ ಹಂತವನ್ನು ಬಹಿರಂಗ ಪಡಿಸಲು ಆಗುವುದಿಲ್ಲ

ಜಿ.ಪರಮೇಶ್ವರ, ಗೃಹ ಸಚಿವ

ನಗರದ ವಿವಿಧೆಡೆ ಕಳ್ಳತನ • ಇಬ್ಬರು ಆರೋಪಿಗಳ ಬಂಧನ

4 ಮೊಬೈಲ್, 11 ದ್ವಿಚಕ್ರ ವಾಹನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ದ್ವಿಚಕ್ರ ವಾಹನ ಹಾಗೂ ಮೊಬೈಲ್ ದೋಚಿದ್ದ ಇಬ್ಬರು ದರೋಡೆಕೋರರನ್ನು ಬಂಧಿಸಿ, 11 ದ್ವಿಚಕ್ರ ವಾಹನ, ನಾಲ್ಕು ಮೊಬೈಲ್‌ಗಳನ್ನು ಕಲಾಸಿಪಾಳ್ಯ ಪೊಲೀಸರು ವಶಪಡಿಸಿಕೊಂಡಿದ್ದಾರೆ .

ಸುರೇಶ್ ಮತ್ತು ಶಶಿಕುಮಾರ್ ಬಂಧಿತರು. ಮೇ 23ರಂದು ಮುಂಜಾನೆ 4 ಗಂಟೆ ಸುಮಾರಿನಲ್ಲಿ ಅರುಣ್ ಕುಮಾರ್ ಅವರು ಕೋಲಾರಕ್ಕೆ ಹೋಗಲು ಕಲಾಸಿಪಾಳ್ಯದ ಬಸ್ ನಿಲ್ದಾಣಕ್ಕೆ ಬಂದು ವಿಚಾರಿಸುತ್ತಿದ್ದರು. ಇದನ್ನು ಗಮನಿಸಿದ ಆರೋಪಿಗಳು ಹಿಂಬಾಲಿಸಿಕೊಂಡು ಹೋಗಿ, ಅವರನ್ನು ಬೆದರಿಸಿ ₹20 ಸಾವಿರ ನಗದು ಹಾಗೂ ಮೊಬೈಲ್ ದೋಚಿ ಪರಾರಿಯಾಗಿದ್ದರು.

ಈ ಬಗ್ಗೆ ಪ್ರಕರಣ ದಾಖಿಸಿಕೊಂಡು, ತನಿಖೆ ಕೈಗೊಂಡ ಪೊಲೀಸರು, ಮಾಹಿತಿಗಳನ್ನು ಕಲೆ ಹಾಕಿ ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದರು. ಕಳವು ಮಾಡಿರುವುದನ್ನು ಒಪ್ಪಿಕೊಂಡರು ಎಂದು ಪೊಲೀಸರು ತಿಳಿಸಿದರು.

ಆರೋಪಿಗಳ ಬಂಧನದಿಂದ ಮಾಗಡಿ ರಸ್ತೆ, ತಾವರೆಕೆರೆ, ಬ್ಯಾಟರಾಯನಪುರ ಹಾಗೂ ಇತರೆ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಳ್ಳತನವಾಗಿದ್ದ 11 ದ್ವಿಚಕ್ರ ವಾಹನ ಕಳವು ಪ್ರಕರಣಗಳು ಬೆಳಕಿಗೆ ಬಂದಿವೆ.

ಮರದ ಕೆಳಗೆ ಬಚ್ಚಿಟ್ಟಿದ್ದ ಬೆಳ್ಳಿ ಜಪ್ತಿ

ಬೆಂಗಳೂರು: ಬೀಗ ಹಾಕಿರುವ ಮನೆಗಳನ್ನೇ ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡು ಮೂಲದ ಧನ್ ಪಾಲ್ (48) ಬಂಧಿತ ಆರೋಪಿ. ಈತನಿಂದ ₹15.70 ಲಕ್ಷ ಮೌಲ್ಯದ 136 ಗ್ರಾಂ ಚಿನ್ನದ ಗಟ್ಟಿ ಮತ್ತು 1.653 ಕೆ.ಜಿ. ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿರುವ ಮತ್ತೊಬ್ಬ ಆರೋಪಿ ಮನು ಎಂಬಾತನ ಪತ್ತೆಗೆ ಶೋಧ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಮಿಳುನಾಡಿನಿಂದ ನಗರಕ್ಕೆ ಬಂದು ಲಾಡ್ಜ್‌ಗಳಲ್ಲಿ ತಂಗುತ್ತಿದ್ದ ಆರೋಪಿ, ಮನು ಜೊತೆಗೂಡಿ ಬೀಗ ಹಾಕಿರುವ ಮನೆಗಳನ್ನು ಗುರಿಯಾಗಿಸಿ ಕಳ್ಳತನ ಮಾಡುತ್ತಿದ್ದ. ಕೃತ್ಯದ ಬಳಿಕ ತಮಿಳುನಾಡಿಗೆ ಪರಾರಿಯಾಗುತ್ತಿದ್ದ. ಕಳೆದ ತಿಂಗಳು ಹುಳಿಮಾವಿನ ಅಕ್ಷಯ್ ನಗರದ ಮನೆಯೊಂದರಲ್ಲಿ ಯಾರೂ ಇಲ್ಲದಿದ್ದ ವೇಳೆ, ಬೀಗ ಒಡೆದು 33 ಗ್ರಾಂ ಚಿನ್ನ ಹಾಗೂ 40 ಗ್ರಾಂ ಬೆಳ್ಳಿ ವಸ್ತುಗಳನ್ನು ಕಳ್ಳತನ ಮಾಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿರುವುದಾಗಿ ಪೊಲೀಸರು ಹೇಳಿದ್ದಾರೆ.

ಕದ್ದ ಚಿನ್ನಾಭರಣವನ್ನು ಸ್ನೇಹಿತರಿಗೆ ಹಾಗೂ ಗಿರವಿ ಅಂಗಡಿಯಲ್ಲಿ ಮಾರಾಟ ಮಾಡಿ ಅಕ್ರಮ ಹಣ ಸಂಪಾದನೆ ಮಾಡುತ್ತಿದ್ದ. ಅನುಮಾನ ಬಾರದೆಂಬ ಕಾರಣಕ್ಕೆ ಬನ್ನೇರುಘಟ್ಟ ಮುಖ್ಯರಸ್ತೆಯ ನೈಸ್ ರಸ್ತೆಯ ಪಕ್ಕದ ಖಾಲಿ ಜಾಗದ ಮರದ ಕೆಳಗೆ ಸುಮಾರು ಒಂದು ಕೆ.ಜಿ.ಗಿಂತ ಹೆಚ್ಚು ಬೆಳ್ಳಿ ವಸ್ತುಗಳನ್ನು ಬಚ್ಚಿಟ್ಟಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ, ಹುಳಿಮಾವು ಹಾಗೂ ಮೈಸೂರಿನ ವಿಜಯನಗರದಲ್ಲಿ ಮನೆಗಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಗೊತ್ತಾಗಿದೆ. ಪ್ರಕರಣವೊಂದರಲ್ಲಿ ಜೈಲು ಸೇರಿದ್ದ ಧನ್ ಪಾಲ್‌ಗೆ ಮತ್ತೊಬ್ಬ ಆರೋಪಿ ಮನು ಎಂಬಾತನ ಪರಿಚಯವಾಗಿತ್ತು. ಜೈಲಿನಿಂದ ಬಿಡುಗಡೆಯಾದ ಬಳಿಕ ಇಬ್ಬರೂ ಸೇರಿಕೊಂಡು ಕಳ್ಳತನ ಕೃತ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಎಂದು ಮಾಹಿತಿ ನೀಡಿದ್ದಾರೆ.

ಸರ ಕಳ್ಳತನ: ನಾಲ್ವರ ಬಂಧನ

ಬೆಂಗಳೂರು: ರಥೋತ್ಸವ ಹಾಗೂ ದೇವಸ್ಥಾನದಲ್ಲಿ ನಡೆಯುವ ಪೂಜೆಗಳಿಗೆ ಭಕ್ತರ ಸೋಗಿನಲ್ಲಿ ಬಂದು ಮಹಿಳೆಯರ ಸರ ಕಳವು ಮಾಡುತ್ತಿದ್ದ ತಮಿಳುನಾಡು ಮೂಲದ ನಾಲ್ವರು ಮಹಿಳೆಯರನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಶಾ(30), ಯಶೋದಾ(55), ಗಾಯತ್ರಿ(34) ಮತ್ತು ಪ್ರಿಯಾ(33) ಬಂಧಿತರು. ಆರೋಪಿಗಳಿಂದ ₹ 14 ಲಕ್ಷ ಮೌಲ್ಯದ 140 ಗ್ರಾಂ ಚಿನ್ನದ ಮೂರು ಸರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಬಾಣಸವಾಡಿಯಲ್ಲಿ ಜೂನ್ 30ರಂದು ಶ್ರೀಜಗನ್ನಾಥಸ್ವಾಮಿ ರಥೋತ್ಸವದ ವೇಳೆ ಆರೋಪಿಗಳು ಭಕ್ತರ ಸೋಗಿನಲ್ಲಿ ಭಾಗಿಯಾಗಿದ್ದರು. ಮಹಿಳೆಯೊಬ್ಬರ ಗಮನ ಬೇರೆಡೆ ಸೆಳೆದು 48 ಗ್ರಾಂ ತೂಕದ ಮಾಂಗಲ್ಯ ಸರ ಕಳವು ಮಾಡಿ ಪರಾರಿಯಾಗಿದ್ದರು. ಮಹಿಳೆ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಎಲೆಕ್ಟ್ರಾನಿಕ್ ಸಿಟಿಯ ಹುಸ್ಕೂರು ಗೇಟ್ ಬಳಿ ಬಂಧಿಸಲಾಗಿದೆ ಮನೆಯಲ್ಲಿ ಇಟ್ಟಿದ್ದ 140 ಗ್ರಾಂ ತೂಕದ ಮೂರು ಚಿನ್ನದ ಸರಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ವಿ.ಟಿ ಶೀಲಾ

(ಶ್ರೀ ಬಿ.ಎ ಜಯದೇವೇಗೌಡರ ಪತ್ನಿ, ಆರ್ ಆರ್ ನಗರ, ಬೆಂಗಳೂರು)

ಜನನ : 20–05–1962 ನಿಧನ : 23–07–2024

ಅಮ್ಮನಿಲ್ಲದ ಮನೆ ದೇವರಿಲ್ಲದ ಗುಡಿಯಂತೆ. ಪ್ರೀತಿಯ ಮಡದಿ, ಮಮತೆಯ ತಾಯಿ, ಸರಳತೆಯ ಸ್ವರೂಪ, ಮನೆಯ ಮಹಾಲಕ್ಷ್ಮಿಯಾಗಿದ್ದೀರಿ. ತನಗಾಗಿ ಏನನ್ನು ಬಯಸದೆ ಮಕ್ಕಳ ಸಂತೋಷದಲ್ಲೇ ಸುಖವನ್ನು ಕಂಡು ತನ್ನವರಿಗಾಗಿ ಜೀವ ಸವೆಸಿದ್ದೀರಿ. ನಿಮ್ಮನ್ನು ತಾಯಿಯಾಗಿ ಪಡೆದ ನಾವೇ ಭಾಗ್ಯವಂತರು.

ಸದಾ ನಿಮ್ಮ ನೆನಪಿನಲ್ಲಿ.

ಪತಿ, ಮಕ್ಕಳು ಹಾಗೂ ಮೊಮ್ಮಗ.

ಹಳದಿ ಮಾರ್ಗ: ಸುರಕ್ಷತಾ ಪರಿಶೀಲನೆಗೆ ಚಾಲನೆ

19.15 ಕಿ.ಮೀ ಉದ್ದದ ಮಾರ್ಗ • ಅಂತಿಮ ವರದಿ ಸಲ್ಲಿಕೆ ನಂತರ ವಾರದಲ್ಲಿ ಸಂಚಾರಕ್ಕೆ 'ಅನುಮತಿ' ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಹಳದಿ ಮಾರ್ಗದ ಮೊದಲ ಹಂತದ ಸುರಕ್ಷತಾ ಪರಿಶೀಲನೆ ಕಾರ್ಯ ಮಂಗಳವಾರ ಆರಂಭವಾಗಿದ್ದು, ಜುಲೈ 25ರವರೆಗೆ ಮುಂದುವರಿಯಲಿದೆ.

ಮೆಟ್ರೊ ರೈಲ್ವೆ ಸುರಕ್ಷತಾ ಆಯುಕ್ತರ(ಸಿಎಂಆರ್‌ಎಸ್) ಅಧಿಕಾರಿಗಳ ತಂಡ, ಮೊದಲ ದಿನ ಆರ್.ವಿ.ರಸ್ತೆ–ಬೊಮ್ಮಸಂದ್ರದ ಮಾರ್ಗದಲ್ಲಿ ಸುರಕ್ಷತಾ ಪರೀಕ್ಷೆ ಕೈಗೊಂಡಿತು. 19.15 ಕಿ.ಮೀ ಉದ್ದದ ಈ ಮಾರ್ಗದಲ್ಲಿ ಮೂರರಿಂದ ನಾಲ್ಕು ನಿಲ್ದಾಣಗಳು ಹಾಗೂ ಮಾರ್ಗದಲ್ಲಿ ಅಳವಡಿಸಿರುವ ಹಳಿ, ಅದಕ್ಕೆ ಹೊಂದಿಕೊಂಡಿರುವ ವಿದ್ಯುತ್ ಸಂಪರ್ಕ, ಸಿಗ್ನಲಿಂಗ್ ವ್ಯವಸ್ಥೆ, ನಿಲ್ದಾಣಗಳಲ್ಲಿರುವ ಸೌಲಭ್ಯ, ತುರ್ತು ನಿರ್ಗಮನ ಸೇರಿದಂತೆ ಸಿವಿಲ್ ಕಾಮಗಾರಿಯಿಂದ ಹಿಡಿದು ಎಲ್ಲ ರೀತಿಯ ವ್ಯವಸ್ಥೆಗಳನ್ನು ಪರಿಶೀಲನೆ ನಡೆಸಿತು.

ಮುಖ್ಯಾಂಶಗಳು

- ಸಿಎಂಆರ್‌ಎಸ್ ಆಯುಕ್ತರ ಪರಿಶೀಲನೆ
- ಪರಿಶೀಲನಾ ವರದಿ ನಂತರ ಉದ್ಘಾಟನೆಗೆ ದಿನ ನಿಗದಿ
- ಕೇಂದ್ರ–ರಾಜ್ಯ ಸರ್ಕಾರಕ್ಕೆ ಕಾರ್ಯಕ್ರಮದ ವರದಿ ಸಲ್ಲಿಕೆ

ಪರಿಶೀಲನಾ ಕಾರ್ಯ ಪೂರ್ಣಗೊಂಡ ನಂತರ ವಾಣಿಜ್ಯ ಸೇವೆಗೆ ಅನುಮತಿ ನೀಡಲಾಗುತ್ತದೆ. ಪರಿಶೀಲನೆ ನಂತರ ಅಗತ್ಯವಿದ್ದರೆ ಸಣ್ಣಪುಟ್ಟ ಮಾರ್ಪಾಡು ಅಥವಾ ಸೂಚನೆಗಳೊಂದಿಗೆ ಸಿಎಂಆರ್‌ಎಸ್ ಅನುಮತಿ ನೀಡಬಹುದು. 'ಪರಿಶೀಲನೆ ನಂತರ ಗರಿಷ್ಠ ಒಂದು ವಾರದಲ್ಲಿ ಸಿಎಂಆರ್‌ಎಸ್‌ನಿಂದ ಹಸಿರು ನಿಶಾನೆ ಸಿಗುವ ಸಾಧ್ಯತೆಗಳಿವೆ' ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಮೂಲಗಳು ತಿಳಿಸಿವೆ.

'ಪರಿಶೀಲನಾ ವರದಿ ಬಂದ ನಂತರವೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚನೆ ನಡೆಸಿ, ಉದ್ಘಾಟನೆಗೆ ದಿನಾಂಕ ನಿಗದಿಪಡಿಸಲಾಗುತ್ತದೆ' ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

ಆಗಸ್ಟ್ ಮೊದಲ ಅಥವಾ ಎರಡನೇ ವಾರದಲ್ಲಿ ಹಳದಿ ಮಾರ್ಗದ ಉದ್ಘಾಟನೆ ನಡೆಯುವ ಸಾಧ್ಯತೆಯಿದೆ. ಈ ಮಾರ್ಗದ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸುವ ಆಲೋಚನೆ ಇದೆ. 'ಆದರೆ ಕಾರ್ಯಕ್ರಮದ ಬಗ್ಗೆ ಯಾವುದೇ ತೀರ್ಮಾನವಾಗಿಲ್ಲ' ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

ಆರ್.ವಿ. ರಸ್ತೆ ನಿಲ್ದಾಣದಿಂದ– ಬೊಮ್ಮಸಂದ್ರದವರೆಗಿನ ಮಾರ್ಗದ ಸುರಕ್ಷತೆ ಪರಿಶೀಲನೆ ನಡೆಸಿದ ಸಿಎಂಆರ್‌ಎಸ್ ಅಧಿಕಾರಿಗಳು

ಆದರೆ, ಈ ಮಾರ್ಗದ ಮೆಟ್ರೊ ಸಂಚಾರಕ್ಕೆ ಅದ್ಧೂರಿ ಚಾಲನೆ ನೀಡಲು ಬಿಎಂಆರ್‌ಸಿಎಲ್ ಸಿದ್ಧತೆ ನಡೆಸಿದ್ದು, ಈಗಾಗಲೇ ಈ ಮಾರ್ಗದಲ್ಲಿನ ಪ್ರಯಾಣ, ನಿಲ್ದಾಣಗಳ ದೃಶ್ಯಗಳ ವಿಡಿಯೊ ಮತ್ತು ಡ್ರೋನ್ ದೃಶ್ಯಗಳೊಂದಿಗೆ ಸಾಕ್ಷ್ಯಚಿತ್ರ ನಿರ್ಮಿಸಲು ಖಾಸಗಿ ಸಂಸ್ಥೆ ಜತೆ ಒಪ್ಪಂದ ಮಾಡಿಕೊಂಡಿದೆ. ಈ ವಿಡಿಯೊವನ್ನು ಉದ್ಘಾಟನಾ ಸಮಾರಂಭದಲ್ಲಿ ಪ್ರದರ್ಶಿಸುವ ನಿರೀಕ್ಷೆಯಿದೆ.

16 ನಿಲ್ದಾಣಗಳನ್ನೊಳಗೊಂಡ, ಸಂಪೂರ್ಣ ಎತ್ತರಿಸಿದ ಮಾರ್ಗವಾಗಿರುವ ಈ ಹಳದಿ ಮಾರ್ಗದಲ್ಲಿ ಹಲವು ಬಡಾವಣೆಗಳ ಜೊತೆಗೆ, ಐ.ಟಿ.ಕಾರಿಡಾರ್‌ಗೂ ವಿಸ್ತರಿಸುತ್ತದೆ. ನಗರದ ಕೇಂದ್ರ ಭಾಗಕ್ಕೆ ಸಂಪರ್ಕ ಕಲ್ಪಿಸಲು ಇದು ಸಹಕಾರಿಯಾಗಲಿದೆ. ಪ್ರಸ್ತುತ ಈ ಮಾರ್ಗದಲ್ಲಿ ಕಾರ್ಯಾಚರಣೆಗಾಗಿ ಮೂರು ರೈಲುಗಳು ಬಂದಿಳಿದಿವೆ.

ಹಳದಿ ಮಾರ್ಗದ ನಿಲ್ದಾಣಗಳು

ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೋಸಿಸ್ ಫೌಂಡೇಷನ್ (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸ ರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್.ವಿ. ರಸ್ತೆ ನಿಲ್ದಾಣಗಳನ್ನು ಹೊಂದಿದೆ. ದಕ್ಷಿಣ ಬೆಂಗಳೂರನ್ನು (ಎಲೆಕ್ಟ್ರಾನಿಕ್ ಸಿಟಿ) ನಗರದ ಕೇಂದ್ರಕ್ಕೆ ಸಂಪರ್ಕಿಸುತ್ತದೆ.

ಸುದ್ದಿ 2 ನಿಮಿಷ

ಮುಖ್ಯ ಎಂಜಿನಿಯರ್‌ಗಳ ವರ್ಗ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯದಲ್ಲಿ ಹಲವು ವರ್ಷಗಳಿಂದ ಮುಖ್ಯ ಎಂಜಿನಿಯರ್ ಆಗಿದ್ದ ಎಸ್.ವಿ. ರಾಜೇಶ್ ಸೇರಿದಂತೆ ಐವರು ಮುಖ್ಯ ಎಂಜಿನಿಯರ್‌ಗಳನ್ನು ವರ್ಗಾಯಿಸಲಾಗಿದೆ.

ಬೃಹತ್ ನೀರುಗಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಹೆಚ್ಚುವರಿಯಾಗಿ ಹೊಂದಿದ್ದ ರಾಜೇಶ್ ಅವರನ್ನು ದಕ್ಷಿಣ ವಲಯದ ಮುಖ್ಯ ಎಂಜಿನಿಯರ್ ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ.

ದಾಸರಹಳ್ಳಿ ವಲಯದಲ್ಲಿ ಮುಖ್ಯ ಎಂಜಿನಿಯರ್ ಆಗಿದ್ದ ಬಸವರಾಜ ಆರ್. ಕಬಾಡೆ ಅವರನ್ನು ದಕ್ಷಿಣ ವಲಯದ ಮುಖ್ಯ ಎಂಜಿನಿಯರ್ ಹುದ್ದೆಗೆ ವರ್ಗಾಯಿಸಲಾಗಿದ್ದು, ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿ ಹೆಚ್ಚುವರಿಯಾಗಿ ಮುಂದುವರಿಸಲಾಗಿದೆ.

ಕೆ.ವಿ. ರವಿ ಅವರನ್ನು ಗುಣ ಭರವಸೆ ಮತ್ತು ಗುಣ ನಿಯಂತ್ರಣ ವಿಭಾಗದ ಮುಖ್ಯ ಎಂಜಿನಿಯರ್, ಯಮುನಾ ಅವರನ್ನು ದಾಸರಹಳ್ಳಿ ವಲಯ ಮುಖ್ಯ ಎಂಜಿನಿಯರ್, ಬಿ.ಜಿ. ರಾಘವೇಂದ್ರ ಪ್ರಸಾದ್ ಅವರನ್ನು ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಹುದ್ದೆಗೆ ವರ್ಗಾಯಿಸಲಾಗಿದೆ.

ಯಲಹಂಕ ವಲಯದ ಅಧೀಕ್ಷಕ ಎಂಜಿನಿಯರ್ ಎಂ. ಕೃಷ್ಣಮೂರ್ತಿ ಅವರಿಗೆ ವಲಯದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಿ ಬಿಬಿಎಂಪಿ ಆಡಳಿತ ವಿಭಾಗದ ಉಪ ಆಯುಕ್ತರು ಆದೇಶಿಸಿದ್ದಾರೆ.

ಬೈರೇಗೌಡನಹಳ್ಳಿ ಬಳಿ ಶಾದಿ ಮಹಲ್ ನಿರ್ಮಾಣ

ನೆಲಮಂಗಲ: ಸೊಂಡೆಕೊಪ್ಪ ರಸ್ತೆಯ ಬೈರೇಗೌಡನಹಳ್ಳಿ ಬಳಿ ಎರಡು ಎಕರೆ ಪ್ರದೇಶದಲ್ಲಿ ಶಾದಿ ಮಹಲ್ ನಿರ್ಮಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಆರಂಭದಲ್ಲಿ ₹1ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ತಾಲ್ಲೂಕಿನ ಇಸ್ಲಾಂಪುರ ಹಾಗೂ ಬಿಲಾಲ್ ನಗರದಲ್ಲಿ ₹5 ಕೋಟಿ ವೆಚ್ಚದಲ್ಲಿ ರಸ್ತೆ ಚರಂಡಿ ನಿರ್ಮಾಣ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ರಾಜೀವ್ ಗಾಂಧಿ ವಸತಿ ಯೋಜನೆ ಅಡಿ ಸುಸಜ್ಜಿತ 3 ಅಂತಸ್ತಿನ 200 ಮನೆಗಳನ್ನು ನಿರ್ಮಾಣ ಮಾಡಲಾಗುವುದು' ಎಂದರು.

ಶಾಸಕ ಎನ್.ಶ್ರೀನಿವಾಸ್ ಮಾತನಾಡಿ, ಜಮೀರ್ ಅವರು ಎಲ್ಲ ವರ್ಗದ ನಾಯಕರಾಗಿದ್ದು, ತಾಲ್ಲೂಕಿಗೆ ಆರಂಭಿಕವಾಗಿ ₹5 ಕೋಟಿ ಬಿಡುಗಡೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ₹25 ಕೋಟಿ ಬಿಡುಗಡೆ ಮಾಡುವ ಭರವಸೆ ನೀಡಿದ್ದಾರೆ' ಎಂದು ತಿಳಿಸಿದರು.

ಹೊಸ ಸಸಿ: ನಾಗರಿಕರ ಪ್ರಶ್ನೆಗೆ ಮಾಹಿತಿ ನೀಡದ ಬಿಎಂಆರ್‌ಸಿಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಆರ್‌ಸಿಎಲ್‌ನ ಫೇಸ್ 3ರ ನಮ್ಮ ಮೆಟ್ರೊ ಯೋಜನೆಗೆ ಕಡಿಯಲಾಗುವ 6,800 ಮರಗಳಿಗೆ ಪರ್ಯಾಯವಾಗಿ ಎಲ್ಲಿ ಸಸಿಗಳನ್ನು ನೆಡುತ್ತೀರಿ ಎಂಬ ನಾಗರಿಕರ ಪ್ರಶ್ನೆಗೆ 'ನಮ್ಮ ಮೆಟ್ರೊ' ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಲಿಲ್ಲ.

ನಮ್ಮ ಮೆಟ್ರೊದ ಫೇಸ್ 3ರಲ್ಲಿ ಜೆ.ಪಿ. ನಗರದಿಂದ ಕೆಂಪಾಪುರ ಕ್ರಾಸ್‌ವರೆಗಿನ ಡಬಲ್ ಡೆಕರ್ ಕಾರಿಡಾರ್–1 ಮತ್ತು ಹೊಸಹಳ್ಳಿಯಿಂದ ಕಡಬಗೆರೆವರೆಗಿನ ಕಾರಿಡಾರ್–2 ಯೋಜನೆಗೆ 11 ಸಾವಿರ ಮರಗಳನ್ನು ಕಡಿಯಲಾಗುತ್ತದೆ. ಇದಕ್ಕಾಗಿ ಸಾರ್ವಜನಿಕರ ಆಕ್ಷೇಪಣೆ ಆಲಿಸಲು ಸೋಮವಾರ ಬಿಎಂಆರ್‌ಸಿಎಲ್ ಸಭೆ ಕರೆದಿತ್ತು.

'11 ಸಾವಿರದಷ್ಟು ಮರ ಕಡಿಯುವ ಯೋಜನೆ ಬಗ್ಗೆ ಮಾಹಿತಿ ನೀಡಿಲ್ಲ. ಅಲ್ಲದೆ, ಆಕ್ಷೇಪಣೆಗೆ 30 ದಿನ ಅವಕಾಶ ನೀಡಬೇಕು. ನೀವು ಎರಡು ದಿನ ಮಾತ್ರ ಅವಕಾಶ ನೀಡಿ ಸಭೆ ಮಾಡುತ್ತಿರುವುದು ಸರಿಯಲ್ಲ' ಎಂದು ಪರಿಸರಕ್ಕಾಗಿ ನಾವು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪಾರ್ವತಿ ಶ್ರೀರಾಮ ದೂರಿದರು.

'ಹೈಕೋರ್ಟ್ ಸೂಚನೆಯಂತೆ 10 ದಿನ ಮೊದಲೇ ನೋಟಿಸ್ ನೀಡಬೇಕು. ಅದನ್ನೂ ಪಾಲಿಸಿಲ್ಲ. ಯೋಜನೆ ಬಗ್ಗೆ ಕೇಳಬೇಡಿ ಎಂದು ಹೇಳುವುದು ಸರಿಯಲ್ಲ. ಯೋಜನೆ ಎಲ್ಲಿ? ಹೇಗೆ ಬರುತ್ತದೆ ಎಂಬುದನ್ನು ಸಾರ್ವಜನಿಕವಾಗಿ ತಿಳಿಸದಿದ್ದರೆ ಪರಿಸರದ ಮೇಲಾಗುವ ದುಷ್ಪರಿಣಾಮವನ್ನು ಅಂದಾಜಿಸುವುದು ಹೇಗೆ' ಎಂದು ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ಪ್ರಶ್ನಿಸಿದರು.

'ಫೇಸ್–3ಗೆ 11 ಸಾವಿರ ಮರಗಳನ್ನು ಕಡಿಯುತ್ತಿಲ್ಲ. 6800 ಮರಗಳನ್ನು ಮಾತ್ರ ಕಡಿಯಲಾಗುತ್ತಿದೆ. ಉಳಿದ 4,200 ಮರಗಳಲ್ಲಿ ಆದಷ್ಟು ಉಳಿಸುವ ಪ್ರಯತ್ನ ಮಾಡುತ್ತೇವೆ. ಕೆಲವು ಕೊಂಬೆಗಳನ್ನು ಕತ್ತರಿಸುತ್ತೇವೆ, ಕೆಲವನ್ನು ಸ್ಥಳಾಂತರಿಸುತ್ತೇವೆ. ಒಂದು ಮರ ಕಡಿದರೆ 10 ಸಸಿಗಳನ್ನು ನೆಟ್ಟು ಬೆಳೆಸುತ್ತೇವೆ' ಎಂದು ಬಿಎಂಆರ್‌ಸಿಎಲ್ ಪರಿಸರ ಎಂಜಿನಿಯರ್ ಕನಕರಾಜ್ ಹೇಳಿದರು

'ಕಡಿದ ಮರಗಳ ಸುತ್ತಮುತ್ತಲಿನ ಪ್ರದೇಶಗಳಲ್ಲೇ ಒಂದಕ್ಕೆ ಹತ್ತು ಸಸಿಗಳನ್ನು ನೆಡುತ್ತೀರೋ ಅಥವಾ ಚಿಕ್ಕಬಳ್ಳಾಪುರ, ದೇವನಹಳ್ಳಿಯಂತಹ ದೂರದ ಪ್ರದೇಶಗಳಲ್ಲಿ ಸಸಿ ನೆಡುತ್ತೀರೋ' ಎಂದು ಸಭೆಯಲ್ಲಿದ್ದ ಪರಿಸರ ಕಾರ್ಯಕರ್ತರಾದ ವೇಣುಗೋಪಾಲ್, ಪಲ್ಲವಿ ಪ್ರಶ್ನಿಸಿದರು.

ಇದಕ್ಕೆ ಉತ್ತರ ನೀಡದೆ ಬಿಎಂಆರ್‌ಸಿಎಲ್ ಅಧಿಕಾರಿಗಳು ತಬ್ಬಿಬ್ಬಾದರು. 'ಯಾವ ಯೋಜನೆಗಾಗಿ ಎಷ್ಟು ಮರಗಳನ್ನು ಕಡಿಯುತ್ತೀರಿ, ಇದಕ್ಕೆ ಪರ್ಯಾಯವಾಗಿ ಎಲ್ಲಿ ನೆಡಲಾಗುತ್ತದೆ ಎಂಬುದು ಪಾರದರ್ಶಕವಾಗಿರಬೇಕು. ಯೋಜನೆಯ ವಿವರಗಳನ್ನು ನೀಡಬೇಕು' ಎಂದು ಪರಿಸರ ಕಾರ್ಯಕರ್ತರು ಆಗ್ರಹಿಸಿದರು.

'30 ದಿನಗಳ ನಂತರ ಸಭೆ ನಡೆಸಿ ಮಾಹಿತಿ ನೀಡುತ್ತೇವೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು

ಮೇಳಕ್ಕೆ ಚಾಲನೆ ನೀಡಿದ ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್

'50 ಸಾವಿರ ಇ– ಖಾತಾ ವಿತರಣೆ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ವಿಧಾನಸಭೆ ಕ್ಷೇತ್ರದಲ್ಲಿ 50 ಸಾವಿರ ಇ-ಖಾತಾ ವಿತರಿಸುವ ಗುರಿ ಹೊಂದಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್ ಹೇಳಿದರು.

ಹೆಬ್ಬಾಳದ ಎಚ್‌ಎಂಟಿ ಮೈದಾನದಲ್ಲಿ ಆಯೋಜಿಸಿರುವ ಎರಡು ದಿನಗಳ ಇ-ಖಾತಾ ಮೇಳಕ್ಕೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಪ್ರತಿಯೊಬ್ಬ ಆಸ್ತಿ ಮಾಲೀಕರಿಗೆ ನಿವೇಶನಗಳ ಮಾಲೀಕತ್ವಕ್ಕೆ ಅಧಿಕೃತ ದಾಖಲೆಯಾಗಿ ಇ-ಖಾತಾ ನೀಡಲಾಗುತ್ತಿದೆ. ಇದು ಸರ್ಕಾರದ ಪ್ರಮುಖ ಮತ್ತು ಕನಸಿನ ಯೋಜನೆಯಾಗಿದ್ದು, ಆಸ್ತಿ ಮಾಲೀಕರು ಈ ದಾಖಲೆಯನ್ನು ಪಡೆದುಕೊಳ್ಳಬೇಕು' ಎಂದರು.

ಹೆಬ್ಬಾಳದಲ್ಲಿ ಆಯೋಜಿಸಿರುವ ಇ–ಖಾತಾ ಮೇಳದಲ್ಲಿ ಬಿ.ಎಸ್. ಸುರೇಶ್ ಅವರು ಆಸ್ತಿ ಮಾಲೀಕರಿಗೆ ಸಾಂಕೇತಿಕವಾಗಿ ಇ–ಖಾತಾ ವಿತರಿಸಿದರು

'ನಾಗರಿಕರ ಮನೆ ಬಾಗಿಲಿಗೆ ಇ-ಖಾತಾ ನೀಡಬೇಕೆಂಬ ಉದ್ದೇಶದಿಂದ ಇ-ಖಾತಾ ಮೇಳಗಳನ್ನು ಆಯೋಜಿಸಲಾಗುತ್ತಿದೆ. ರಾಜ್ಯದಾದ್ಯಂತ 55 ಲಕ್ಷಕ್ಕೂ ಅಧಿಕ ಆಸ್ತಿಗಳಿಗೆ ಇ-ಖಾತೆಗಳನ್ನು ವಿತರಿಸುವ ಗುರಿಯನ್ನು ಹೊಂದಲಾಗಿದೆ. ಹೆಬ್ಬಾಳ ಕ್ಷೇತ್ರದಲ್ಲಿರುವ 50 ಸಾವಿರಕ್ಕೂ ಹೆಚ್ಚು ಸ್ವತ್ತುಗಳಲ್ಲಿ 13 ಸಾವಿರ ಆಸ್ತಿಗಳಿಗೆ ಇ-ಖಾತಾ ವಿತರಿಸಲಾಗಿದೆ. ಈ ಮೇಳದಲ್ಲಿ ನಾಲ್ಕು ಸಾವಿರ ಇ-ಖಾತಾ ವಿತರಿಸುವ ನಿರೀಕ್ಷೆ ಇದೆ' ಎಂದರು.

ಹೆಬ್ಬಾಳ ಕ್ಷೇತ್ರದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ₹200 ಕೋಟಿ ಅನುದಾನಕ್ಕೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದ್ದು, ಕೃಷಿ ವಿಶ್ವವಿದ್ಯಾಲಯದ ಬಳಿ ಆಸ್ಪತ್ರೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದರು.

ಇ–ಖಾತಾ ಮೇಳದಲ್ಲಿ ಮಂಗಳವಾರ 485 ಮಂದಿಗೆ ಟೋಕನ್‌ಗಳನ್ನು ನೀಡಲಾಗಿದ್ದು, 300 ಅರ್ಜಿಗಳನ್ನು ಅನುಮೋದಿಸಿ ಸ್ಥಳದಲ್ಲಿಯೇ ಅಂತಿಮ ಇ–ಖಾತಾ ನೀಡಲಾಯಿತು. ಉಳಿದವರ ದಾಖಲೆ ಪರಿಶೀಲನೆ, ಅನುಮೋದನೆ ಪ್ರಕ್ರಿಯೆ ಮುಂದುವರಿದಿದೆ ಎಂದು ಬಿಬಿಎಂಪಿ ಪಶ್ಚಿಮ ವಲಯ ಆಯುಕ್ತೆ ಆರ್.ಸ್ನೇಹಲ್ ತಿಳಿಸಿದರು.

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಆ.1ಕ್ಕೆ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ತ್ವರಿತಗತಿಯಲ್ಲಿ ಜಾರಿ ಮಾಡುವಂತೆ ಸರ್ಕಾರದ ಗಮನ ಸೆಳೆಯಲು ಆಗಸ್ಟ್ 1ರಂದು ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಬೃಹತ್ ಪ್ರತಿಭಟನೆ ನಡೆಸಲು ಮಾದಿಗರ ಸಂಘಟನೆಗಳು ತೀರ್ಮಾನ ಮಾಡಿವೆ ಎಂದು ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಳಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ತೀರ್ಪು ಕೊಟ್ಟು ಆ.1ಕ್ಕೆ ಒಂದು ವರ್ಷ ತುಂಬಲಿದೆ. ಅದರ ನೆನಪಲ್ಲಿ ಈ ಹೋರಾಟ ಹಮ್ಮಿಕೊಳ್ಳಲಾಗಿದೆ' ಎಂದರು.

'ಈ ವಿಚಾರವನ್ನು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿ ಒಳಮೀಸಲಾತಿ ಜಾರಿ ಮಾಡಬೇಕು. ಇಲ್ಲದಿದ್ದಲ್ಲಿ ಮಾದಿಗ ಸಮುದಾಯ ದವರು ಕರ್ನಾಟಕ ಬಂದ್ ನಡೆಸುವ ತೀರ್ಮಾನ ಮಾಡಲಿದ್ದಾರೆ. ಇದಕ್ಕಾಗಿ 5 ಸಾವಿರ ಜನರ ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಿದ್ದೇವೆ. ಅದಕ್ಕೂ ಸರ್ಕಾರ ಮಣಿಯದಿದ್ದರೆ ಅಸಹಕಾರ ಚಳವಳಿ ಸಂಘಟಿಸುತ್ತೇವೆ' ಎಂದರು.

ಸಂಸದ ಗೋವಿಂದ ಕಾರಜೋಳ ಮಾತನಾಡಿ, 'ಆ.16ರಿಂದಲೇ ಒಳಮೀಸಲಾತಿ ಜಾರಿ ಮಾಡಲು ಸರ್ಕಾರ ಪ್ರಯತ್ನಿಸಬೇಕು. ಜಾರಿ ಮಾಡದೇ ಇದ್ದರೆ ಮಾಡು– ಇಲ್ಲವೇ ಮಡಿ ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಮಾದಿಗರ ಸಂಘಟನೆಗಳ ಒಕ್ಕೂಟದ ವಕ್ತಾರ ಎಚ್. ವೆಂಕಟೇಶ್ ದೊಡ್ಡೇರಿ, ಬಿಜೆಪಿ ಎಸ್‌ಸಿ ಮೋರ್ಚಾದ ರಾಜ್ಯ ಉಪಾಧ್ಯಕ್ಷ ಹೂಡಿ ಮಂಜುನಾಥ್ ಇದ್ದರು.

ಜಲ ಮಂಡಳಿ: ನೀರಿನ ಅದಾಲತ್ ನಾಳೆ

ಬೆಂಗಳೂರು: ಬೆಂಗಳೂರು ಜಲ ಮಂಡಳಿಯ ವಿವಿಧ ಉಪ ವಿಭಾಗಗಳಲ್ಲಿ ಜುಲೈ 24 ರಂದು ಬೆಳಿಗ್ಗೆ 9.30 ಗಂಟೆಯಿಂದ 11 ಗಂಟೆಯವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ವಿವಿಧ ಉಪವಿಭಾಗಗಳಾದ ಆಗ್ನೇಯ -3, ಆಗ್ನೇಯ 6, ಪಶ್ಚಿಮ 1-3, ವಾಯವ್ಯ -5, ಉತ್ತರ 2-3, ದಕ್ಷಿಣ 1-3, ನೈರುತ್ಯ – 3, ನೈರುತ್ಯ -6, ಮತ್ತು ಪೂರ್ವ 2-4ಕ್ಕೆ ಸಂಬಂಧಿಸಿದಂತೆ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲಾಗುವುದು.

ಅದಾಲತ್ ಸೇವಾ ಠಾಣೆಗಳಲ್ಲಿ ನೀರಿನ ಅದಾಲತ್ ನಡೆಯಲಿದೆ. ಮಂಡಳಿ ಸಹಾಯವಾಣಿ 1916ಕ್ಕೆ ಕರೆ ಮಾಡಿ ದೂರುಗಳನ್ನು ದಾಖಲಿಸಬಹುದು. ವಾಟ್ಸ್‌ಆ್ಯಪ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

SIDDAGANGA SREE SHIVAKUMARA SWAMIJI VIDYA PEETHA TRUST #1, 1st Stage, 2nd Phase, Chandra Layout, Bengaluru-72 Ph: 080-23397600 invites application For 1. Siddaganga Public School,Chandra Layout (1).Office Assistant- Any degree with computer knowledge (2).Counsellor M.Sc. in Clinical Psychology (3).School Van Driver Heavy Motor Vehicle License, PSV bus`& driving experience in`school`bus (4).Maintenance Asst. Diploma in Automobile or Mechanical Engineering preferred. ITI can also apply. II.SSK Degree College: Lecturer in Computer Science-MCA Interview date will be intimated. Interested candidates may send their resume, service`& salary certificates`& Testimonials to the Mail: sskvptrust.2001 @gmail.com or personally submit the above details to Trust office on or before 30/07/25 between 9am`to`4pm.

BANGALORE INSTITUTE OF TECHNOLOGY
An Autonomous Institution under VTU, Belagavi
Recognized by AICTE, New Delhi
K.R. Road, V.V. Pura, Bengaluru-560004. Ph: 080-26613237, 26645865
E-mail : principalbit4@gmail.com | principal@bit-bangalore.edu.in

RVS/ADMN/732/2025-2026 Date:22.07.2025

As per RVS Executive Committee meeting Decision Dated: 05-02-2025, 18-06-2025 & 23-06-2025
Applications are invited from qualified candidates as per AICTE/VTU with passion for Teaching, Research & Consultancy activities for the Position of Assistant-Professors in the departments mentioned below:

Sl. No	Department	Qualification
1.	Computer Science & Engineering	B.E & M.Tech/M.E (CSE/ISE)*
2.	Artificial Intelligence & Machine Learning	B.E & M.Tech /M.E (CSE/ ISE/AIML)*
3.	Computer Science & Engineering (Data Science)	B.E & M.Tech /M.E (CSE/ ISE/AIML)*
4.	Computer Science & Engineering (ICB)	B.E & M.Tech /M.E (CSE/ ISE/CNE/ Cyber security)*
5.	Information Science & Engineering	B.E & M.Tech /M.E (CSE/ISE)*
6.	Electronics & Communication Engineering	B.E (ECE) & M.Tech (Communication Engg)
7.	Electronics Engineering (VLSI Design & Technology)	B.E (ECE) & M.Tech (Communication / VLSI Design)
8.	Robotics & Artificial Intelligence	B.E & M.Tech (Robotics & AI) / Mechatronics B.E & M.Tech (CSE/ISE)*
9.	M.B.A	B Com/ BBM (Finance) with MBA- Finance (Business Analysis) Additionally candidates with K-SET/ NET/Ph.D/CA/ICWA will be given preference . Minimum 2 years of teaching experience is desirable
10.	Chemistry	M.Sc in Chemistry With qualified KSET/NET/PhD
11.	Civil	B.E & M.Tech / M.E (Environmental Engg)

Candidates possessing requisite qualification may submit their application to Principal , Bangalore Institute of Technology, K.R Road, Bangalore -04.
Note: 1)*CSE and allied branches.2)Right to reject any applications without assigning any reason is reserved with the RV Sangha/BIT authority.
Last date to receive applications with relevant documents at BIT is 06.08.2025 along with a DD for Rs.1180/- in the name of Principal, BIT
Sd/- President, RVS | Sd/- Vice Presidents, RVS | Sd/- General Secretary, RVS
Sd/- Joint Secretory, RVS | Sd/- Treasurer, RVS | Sd/- Chairman, BIT | Sd/- Principal, BIT

THIRUMALA VIDYA NIKETHAN SCHOOL
#29, G.D Park Extn, Vyalikaval, Bangalore-560003
Ph: 080 - 23447560 / 23447570
Email :- tvns1984@gmail.com
WALK - IN INTERVIEW on 28-7-2025
For the Post of Social Science & P.E.Teachers for High School on 28/07/2025.
Essential Qualifications :- Graduate/ Post Graduate With B.Ed, B.PEd. Interested and eligible candidates may attend the walk - In interview between 1:00pm to 3:30pm on 28/07/2025 in the School premises with filled in application form, attested copies of testimonials & Bio-Data.
Principal
Thiurumala Vidya Nikethan School

GOLDEN VALLEY EDUCATIONAL TRUST
Dr. T. THIMMAIAH INSTITUTE OF TECHNOLOGY
(Affiliated to Visvesvaraya Technological University)
Oorgaum, KGF - 563 120 | www.drttit.edu.in
Accredited by NAAC with "A" Grade and NBA (CSE,MIN,ECE,MECH & EEE)
CAREER OPPORTUNITIES
Applications are invited from qualified and experienced candidates for Professors, Associate Professors and Asst. Professors in
- Computer Science & Engineering
- CSE-Artificial Intelligence and Machine Learning
- Electrical and Electronics
- Electronics and Communication
- Instructors for CSE and AIML
- Yoga and Music Teachers

Salary and Qualifications as per AICTE norms.
Interested candidates may send their applications along with detailed CV to the Principal at the above address or mail to careers@drttit.edu.in within 8 days from the date of advertisement.
Ph : 9448574037 PRESIDENT, GVET

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75.
English Medium School to be affiliated to CBSE invites application for the following post:
SPECIAL EDUCATOR
Part time or hourly basis. Diploma in special education by rehabilitation council of India/ B Ed in Special Education (RCI number is must)
ASST. EXECUTIVE (Admin & Accounts)
B.Com with Tally ERP 9+ 1 yr experience
Apply immediately to Hon. Secretary.
Email: contact.indiranagar@ppec.edu.in

LAWRENCE HIGH-SCHOOL ICSE HSR,Require well-trained and Experienced Lady middle`school English`Teacher Kindergarten ASSISTANT TEACHER. Call:`080-40903777, 8971485310/ 9080479986. lawrence.school.icse@gmail.com

Advertising Agency

MUMBAI BASED company wants sales representative / client servicing executive aged 25/30 for Bangalore. WhatsApp resume on 9769670322

Cook

WANTED COOKS, KITCHEN ASSISTANTS & HELPERS for CAFE MYTHRI at Bommasandra Industrial Area, Bangalore- 560099. Boarding & Lodging Provided. Contact: 080-26601239/ 97418-62781 Email: cafemythri@gmail.com

Engg/ Production Technical

FOR ELECTRONICS Inductive Components Mfr. in Peenya. PRODUCTION MANAGER, PRODUCTION EXECUTIVE, QC EXECUTIVE with Similar Experience. Apply to purchase@vetrilindia.in Mob: 9535477360 Ph: 080-28360561

Wanted

WANTED OFFICE ASSISTANT for a Service Oriented Organization. Contact 080- 22250423 between 11 a.m. to 4 p.m.

Accounts & Finance

REQUIRED OFFICE Assistant having computer knowledge Tally, Office Correspondence, Accounting knowledge. Walk-in Interview between 3pm and 4.30pm on 26.07.2025. Bharatiya Samskriti Vidyapith, 76, 1st Main Road, Chamarajpet, Bengaluru-560018 Phone -7899900241.

Architects

ARCHITECTS: MACCO Group require ARCHITECTS, INTERIOR DESIGNERS and CAD people for the Bangalore office at Banashankari (Metro). Mail your details to solidusco001@gmail.com. Ph: 8884777063.

Multiple Vacancy

REQUIRED
Applications are invited from Veerashaiva / Lingayat Graduates, with management experience for the post of
EXECUTIVE OFFICER
HOSTEL WARDEN
ACCOUNTANT
CLERK
for Rao Bahadur Dharmapravartha Gubbi Thotadappa Charities. Persons retired from Govt./Private services/ Ex-servicemen and Police Department can also apply. Salary will be commensurate with qualification & experience. Eligible Candidates may apply with full details on or before 04.08.2025 to
The Secretary, R B D Gubbi Thotadappa Charitable Institution
No.88, G.T. Road, Near City Railway Station, Bengaluru - 560 023.
Phone: 080-2287 9665
Mobile: 98440 45744
Sd/-, Hon. Secretary.

Placement Bureaus/Consultants

WANTED ACCOUNTANT/ Marketing HVAC/ CCTV Technicians/ CSR AUTOCAD, Contact ANZ Consultants 08023443555, 8183046799 Email: anzconsultants@yahoo.co.in

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PUBLIC NOTICE

ಸಾರ್ವಜನಿಕ ಪ್ರಕಟಣೆ
ಶ್ರೀ. ಗೋಪಿನಾಥ್ ಬೆಳಗಂಟಿ ಮೆ॥ ಬೆಲ್ಲೋನ ಹಾಸ್ಪಿಟಾಲಿಟಿ ಸರ್ವೀಸಸ್ ಲಿಮಿಟೆಡ್ ಸರ್ವೆ ನಂ. 40 & 41, ಯೂನಿಟ್ ನಂ. 20, 21, 22, 23 & 24, 2ನೇ ಫ್ಲೋರ್ ಫೀನಿಕ್ಸ್ ಮಾರ್ಕೆಟ್ ಸಿಟಿ, ವೈಟ್‌ಫೀಲ್ಡ್ ಮುಖ್ಯ ರಸ್ತೆ, ದೇವಸಂದ್ರ ವಿಲೇಜ್, ಕೆ. ಆರ್ ಪುರಂ ಹೋಬಳಿ, ಮಹದೇವಪುರ, ಬೆಂಗಳೂರು–560048 ಇಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ಈ ಬಗ್ಗೆ ಸಾರ್ವಜನಿಕರ ಆಕ್ಷೇಪಣೆ/ ಸಲಹೆಗಳು ಏನಾದರೂ ಇದ್ದಲ್ಲಿ, ಅವುಗಳನ್ನು ಲಿಖಿತ ಮೂಲಕ ಸಹಿಯೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ 15 ದಿನಗಳೊಳಗಾಗಿ ಉಪ ಪೊಲೀಸ್ ಆಯುಕ್ತರು (ಆಡಳಿತ), ಪೊಲೀಸ್ ಆಯುಕ್ತರವರ ಕಛೇರಿ. ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001 ರವರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ ಸಲಹೆಗಳು ಬಾರದಿದ್ದಲ್ಲಿ ಅರ್ಜಿದಾರರು ಸದರಿ ಸ್ಥಳದಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
ಉದ್ದೇಶಿತ ಕೇಂದ್ರದ ಚಕ್ಕುಬಂದಿ:
1. ಪೂರ್ವಕ್ಕೆ : ದೇವಸಂದ್ರ ಇಂಡಸ್ಟ್ರಿಯಲ್ ಎಸ್ಟೇಟ್ (ಕೆ. ಎಸ್. ಎಸ್. ಐ. ಡಿ. ಸಿ)
2. ಪಶ್ಚಿಮಕ್ಕೆ:– 40 ಫೀಟ್ ರೋಡ್
3. ಉತ್ತರಕ್ಕೆ:– ರೋಡ್
4. ದಕ್ಷಿಣಕ್ಕೆ:– ಬೆಂಗಳೂರು– ವೈಟ್‌ಫೀಲ್ಡ್ ಮುಖ್ಯ ರಸ್ತೆ
ಸಹಿ/–
ಪೊಲೀಸ್ ಆಯುಕ್ತರು, ಬೆಂಗಳೂರು ನಗರ

PERSONAL

Change of Name

CHANGE OF NAME
I, Udith Rajasekar, S/o P. Rajasekar, residing at 1st Main, 4th Cross, Jayarama Reddy Layout, Ramamurthy Nagar, Bengaluru-560 016. have changed my name to R UDITH vide affidavit dated 22.07.2025 before notary A. Gerard, Bengaluru. Henceforth I shall be called R UDITH only.

I, SWARNALATHA, W/o.Ramesh Hebbar, Residing at Flat No.A-501, Mantri Tranquil Apartment, Gubbalala, Bangalore-560061, have changed my name to SWARNALATHA HEBBAR vide affidavit dated: 21.07.2025 Sworn before notary L.Puttaraju, Bengaluru.

ADMISSION CORNER

RV Institute of Management® — Go, change the world®
Approved by AICTE, New Delhi | Accredited by NAAC with 'A+' grade | Autonomous Institution Affiliated to Bengaluru City University
in collaboration with Boston IT Solutions India Pvt. Ltd is offering an Industry-Curated One Year POST GRADUATE DIPLOMA IN BUSINESS ANALYTICS (PGDBA)
Approved by Bengaluru City University from July / August 2025
COURSE DETAILS
- Venue: Centre for Business Analytics, RV Institute of Management, Jayanagar, Bengaluru
- Eligibility: Graduates from any discipline
- Mode: Hybrid (Blend of Online & Offline)
- Duration: ONE year - 2 semesters of 5 months each & Two months Real World Capstone Project
- Tuition fees: Rs 1,60,000/-
- Timings: Mon to Fri: 6.30pm to 9.00pm Sat: 2.30pm to 9.00pm

Scan QR code for Course details, to register & pay the fee
Contact Person : Prof. Mithun D J
Mob: 9844284240 Ph: 08042540300
Website : www.rvim.edu.in

BUSINESS

Business to Business

Engineering Products

SALE-INDUSTRIAL 5000SFT PEB Shed, 125KVA Genset, 5TPD Tube Ice Plant. Bangalore-9483215391

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

REAL ESTATE SELLING

Flat

J P Nagar

FLATS FOR Sale @ Govt Guidance Value Around JP Nagar. Sarakki Homes, 9663676464

DH Classifieds ಪ್ರಜಾವಾಣಿ — More value, more impact
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
*Conditions apply
For more details contact:
9845114560
9886213331

ನಾಗಸಂದ್ರ ಟೋಲ್: ಕೇಂದ್ರಕ್ಕೆ ನೋಟಿಸ್

ಹಿರಿಯ ವಕೀಲ ಎ.ವಿ.ಅಮರನಾಥನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಒಳಪಡುವ ನಾಗಸಂದ್ರ ಟೋಲ್ ಕೇಂದ್ರದಲ್ಲಿ ಅಕ್ರಮವಾಗಿ ಸಂಗ್ರಹಿಸುತ್ತಿರುವ ಟೋಲ್ (ಸುಂಕ) ವಸೂಲಿಯನ್ನು ನಿರ್ದೇಶಿಸಬೇಕು' ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್‌ನ ಹಿರಿಯ ವಕೀಲ ಎ.ವಿ.ಅಮರನಾಥನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಾದ ಮಂಡಿಸಿದ ಅಮರನಾಥನ್, 'ನಾಗಸಂದ್ರದ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ರಾಜ್ಯದ ಸುಮಾರು 20 ಜಿಲ್ಲೆಗಳನ್ನು ಸಂಪರ್ಕಿಸುತ್ತದೆ. ಇಲ್ಲಿಂದ ಹಾದು ಹೋಗುವ ಪ್ರತಿಯೊಂದು ವಾಹನಕ್ಕೂ ಫಾಸ್ಟ್ ಟ್ಯಾಗ್‌ಗಳ ಮೂಲಕ ಪ್ರತಿದಿನ ಲಕ್ಷಾಂತರ ರೂಪಾಯಿಗಳನ್ನು ಸುಂಕದ ರೂಪದಲ್ಲಿ ಅಕ್ರಮವಾಗಿ ಸಂಗ್ರಹಿಸಲಾಗುತ್ತಿದೆ. ಆದರೆ, ವಾಸ್ತವದಲ್ಲಿ ಒಪ್ಪಂದದ ಅವಧಿ 2021ರಲ್ಲಿಯೇ ಮುಗಿದಿದೆ' ಎಂದರು.

'ಯಶವಂತಪುರದಿಂದ ನಾಗಸಂದ್ರ ಕಡೆಗೆ ಹೋಗುವ ಫ್ಲೈಓವರ್ ಕೇವಲ 5 ಕಿಲೋ ಮೀಟರ್ ದೂರದಲ್ಲಿದೆ ಮತ್ತು ಬೃಹತ್ ಬೆಂಗಳೂರು ಮಹಾನಗರದ ವ್ಯಾಪ್ತಿಯೊಳಗೇ ಇದೆ. ನಗರದೊಳಗೆ ಟೋಲ್ ಸಂಗ್ರಹ ಕಾನೂನುಬಾಹಿರ, ಅನಿಯಂತ್ರಿತ ಮತ್ತು ಅನಧಿಕೃತ' ಎಂದು ಪ್ರತಿಪಾದಿಸಿದರು.

ವಾದ ಆಲಿಸಿದ ನ್ಯಾಯಪೀಠ, ಕೇಂದ್ರ ಹೆದ್ದಾರಿ ಸಾರಿಗೆ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಮತ್ತು ಎನ್‌ಎಚ್‌ಎಐ ಅಧ್ಯಕ್ಷರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 17ಕ್ಕೆ ಮುಂದೂಡಿತು.

ಕೋರಿಕೆ ಏನು?: 'ಟೋಲ್ ಸಂಗ್ರಹಕ್ಕೆ ನಿರ್ಬಂಧ ವಿಧಿಸುವಂತೆ ಕೇಂದ್ರ ಸರ್ಕಾರ ಮತ್ತು ಎನ್‌ಎಚ್‌ಎಐಗೆ ನಿರ್ದೇಶಿಸಬೇಕು ಮತ್ತು 2021ರಿಂದ ಈವರೆಗೆ ನಾಗಸಂದ್ರ ಟೋಲ್ ಪ್ಲಾಜಾದಲ್ಲಿ ಸಂಗ್ರಹ ಮಾಡಿರುವ ಟೋಲ್ ಶುಲ್ಕದ ವಿವರಗಳನ್ನು ಒದಗಿಸುವಂತೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಆರ್‌ಟಿಐ ವ್ಯಾಪ್ತಿಗೆ ಸೆಂಚುರಿ ಕ್ಲಬ್: ಹೈಕೋರ್ಟ್

'ನಗರದ ಪ್ರತಿಷ್ಠಿತ ಸೆಂಚುರಿ ಕ್ಲಬ್ ಸಾರ್ವಜನಿಕ ಪ್ರಾಧಿಕಾರ. ಇದು ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಒಳಪಡಲಿದೆ' ಎಂಬ ಮಾಹಿತಿ ಆಯೋಗದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

'ಸೆಂಚುರಿ ಕ್ಲಬ್ ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಒಳಪಡಲಿದೆ ಎಂಬ ಮಾಹಿತಿ ಆಯೋಗದ ಆದೇಶ ಪ್ರಶ್ನಿಸಿ ಸೆಂಚುರಿ ಕ್ಲಬ್ ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಕೀಲರು, 'ಕ್ಲಬ್‌ಗೆ ಮೈಸೂರು ಮಹಾರಾಜರು 7.5 ಎಕರೆ ಜಮೀನನ್ನು ಮಂಜೂರು ಮಾಡಿದ್ದಾರೆ ಎಂಬ ಕಾರಣಕ್ಕೆ ಗಣನೀಯ ಹಣಕಾಸು ದೊರೆತಿದೆ ಎಂದು ಹೇಳಲಾಗುವುದಿಲ್ಲ. ಗಣನೀಯ ಅನುದಾನ ಪಡೆಯದ ಹೊರತು ಅದನ್ನು ಸಾರ್ವಜನಿಕ ಪ್ರಾಧಿಕಾರ ಎಂದು ಹೇಳಲಾಗದು. ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಮಹಾರಾಜರು ಕ್ಲಬ್‌ನ ಪೋಷಕ ಮುಖ್ಯಸ್ಥರಾಗಿದ್ದರು. ಈ ಪೋಷಕ ಮುಖ್ಯಸ್ಥ ನೀಡಿರುವ ದಾನವನ್ನು ಸರ್ಕಾರದ ಅನುದಾನ ಎನ್ನಲಾಗುವುದಿಲ್ಲ. ಆದ್ದರಿಂದ, ಮಾಹಿತಿ ಆಯೋಗದ ಆದೇಶ ರದ್ದು ಮಾಡಬೇಕು' ಎಂದು ಕೋರಿದ್ದರು.

ಇದನ್ನು ತಳ್ಳಿ ಹಾಕಿರುವ ನ್ಯಾಯಪೀಠ, 'ಮಹಾರಾಜರು ಮಂಜೂರು ಮಾಡಿದ ಜಾಗದಲ್ಲೇ ಕ್ಲಬ್ ನಡೆಯುತ್ತಿದೆ. ಈ ಜಮೀನು ಇಲ್ಲವಾದಲ್ಲಿ ಕ್ಲಬ್ ಅಸ್ತಿತ್ವವೇ ಇರುವುದಿಲ್ಲ. ಹೀಗಾಗಿ, ಇದು ಮಾಹಿತಿ ಹಕ್ಕು ಕಾಯ್ದೆಯ ವ್ಯಾಪ್ತಿಗೆ ಒಳಪಡಲಿದೆ. ಮಾಹಿತಿ ಆಯೋಗದ ಆದೇಶದಲ್ಲಿ ಯಾವುದೇ ದೋಷಗಳು ಕಂಡು ಬಂದಿಲ್ಲ' ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಜಾಗೊಳಿಸಿದೆ.

ಕಸಾಪ: ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ 2023-24ನೇ ಸಾಲಿನ ವಾರ್ಷಿಕ ಅನುದಾನ, ಖರೀದಿ ಮತ್ತು ಮಾರಾಟ ಸೇರಿದಂತೆ ಆರ್ಥಿಕ ವಹಿವಾಟುಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸುವುದಕ್ಕಾಗಿ, ಸಹಕಾರ ಸಂಘಗಳ ಉಪ ನಿಬಂಧಕರು ಹೊರಡಿಸಿರುವ ಆದೇಶದ ಬಳಿಕ ಕೈಗೊಂಡ ಅನುಕ್ರಮಿತ ಪ್ರಕ್ರಿಯೆ ಹಾಗೂ ಅದರ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಬೆಂಗಳೂರು ನಗರ ಜಿಲ್ಲೆಯ 2ನೇ ವೃತ್ತದ ಸಹಕಾರ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ್ ಆದೇಶಗಳನ್ನು ರದ್ದುಪಡಿಸುವಂತೆ ಕೋರಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಹಾಗೂ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ವಾದ ಮಂಡಿಸಿದರು.

ಪ್ರಕರಣವೇನು?

ಬಳ್ಳಾರಿ ಜಿಲ್ಲೆ ಸಂಡೂರಿನಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದ 2023-24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ಲೆಕ್ಕಪತ್ರದ ಬಗ್ಗೆ ವೆಂಕಟರಾಮಯ್ಯ ಹಾಗೂ ಲೋಹಿತ್ ಡಾ.ವಮಂದ್ರದಾ ಭೂಜಿತ್ ಸಲ್ಲಿಸಿದ್ದ ದೂರಿನ ಹಿನ್ನೆಲೆಯಲ್ಲಿ ರದ್ದುಪಡಿಸಿ ಸಹಕಾರ ಸಂಘಗಳ ಉಪನಿಬಂಧಕರು 2025ರ ಜೂನ್ 27ರಂದು ಆದೇಶ ಹೊರಡಿಸಿದ್ದರು.

'ಕನ್ನಡ ಸಾಹಿತ್ಯ ಪರಿಷತ್ತಿನ 2023-24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆ ರದ್ದುಪಡಿಸಿ ಹಾಗೂ ಪರಿಷತ್ತಿನ ಕಾರ್ಯವ್ಯಾಪ್ತಿ, ಅನುದಾನದ ಖರ್ಚು-ವೆಚ್ಚಗಳ ಕುರಿತು ವಿಚಾರಣೆ ನಡೆಸಲು ತನಿಖಾಧಿಕಾರಿ ನೇಮಕ ಮಾಡಿ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ನೋಂದಣಾಧಿಕಾರಿ 2ನೇ ವಲಯ ಬೆಂಗಳೂರು ನಗರ ಜಿಲ್ಲಾ ಇವರು 2025ರ ಜೂನ್ 26 ಹಾಗೂ 30ರಂದು ಹೊರಡಿಸಿರುವ ಆದೇಶಗಳನ್ನು ರದ್ದುಪಡಿಸಬೇಕು' ಎಂದು ಕೋರಿದ್ದಾರೆ.

ಬಿಸಿಐ ಪ್ರತಿಕ್ರಿಯೆ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನ (ಕೆಎಸ್‌ಬಿಸಿ) ಆಡಳಿತ ಮಂಡಳಿಯ ನಿಗದಿತ ಐದು ವರ್ಷಗಳ ಅವಧಿ 2023ರ ಜೂನ್‌ನಲ್ಲೇ ಪೂರ್ಣಗೊಂಡಿದ್ದು, ಹಾಲಿ ಆಡಳಿತ ಮಂಡಳಿಯನ್ನು ಪದಚ್ಯುತಗೊಳಿಸಿ ಹೊಸದಾಗಿ ಚುನಾವಣೆ ನಡೆಸುವ ಬಗ್ಗೆ ಪ್ರತಿಕ್ರಿಯೆ ನೀಡಿ' ಎಂದು ಭಾರತೀಯ ವಕೀಲರ ಪರಿಷತ್‌ಗೆ (ಬಿಸಿಐ) ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ರಹಮತ್ ಉಲ್ಲಾ ಕೊತ್ವಾಲ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ವಕೀಲರ ಕಾಯ್ದೆ-1961ರ ಕಲಂ 8ರ ಅನ್ವಯ ಪರಿಷತ್‌ನ ಅವಧಿ ಮುಗಿಯುವ ಮುನ್ನವೇ ರಾಜ್ಯ ವಕೀಲರ ಪರಿಷತ್‌ಗೆ ಚುನಾವಣೆ ನಡೆಸದೇ ಹೋದರೆ, ಬಿಸಿಐ ವಿಶೇಷ ಸಮಿತಿ ರಚಿಸಿ ಅದಕ್ಕೆ ಅಧಿಕಾರ ನೀಡಬೇಕು ಮತ್ತು ಆದಷ್ಟು ಶೀಘ್ರ ಪರಿಷತ್‌ಗೆ ಚುನಾವಣೆ ನಡೆಸಬೇಕಾಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

'ಕಲಂ 8ರ ಅನ್ವಯ ಕೆಎಸ್‌ಬಿಸಿಗೆ ಹೊಸದಾಗಿ ಚುನಾವಣೆ ನಡೆಸುವ ಸಂಬಂಧ ಬಿಸಿಐ ತನ್ನ ನಿಲುವು ತಿಳಿಸಬೇಕು' ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿದೆ. ಕೆಎಸ್‌ಬಿಸಿ ಪರ ಹೈಕೋರ್ಟ್ ವಕೀಲ ಟಿ.ಪಿ. ವಿವೇಕಾನಂದ ವಾದ ಮಂಡಿಸಿದರು.

ಚಿಟಿಕೆ ಸುದ್ದಿ

ಕಸಾಪ: 54 ದತ್ತಿ ಪ್ರಶಸ್ತಿಗಳಿಗೆ ಪುಸ್ತಕ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 54 ವಿವಿಧ ದತ್ತಿ ಪ್ರಶಸ್ತಿಗಳಿಗೆ ಪುಸ್ತಕಗಳನ್ನು ಆಹ್ವಾನಿಸಿದೆ.

2024ರ ಜ.1ರಿಂದ ಡಿ.31ರೊಳಗೆ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು ಅಥವಾ ಪ್ರಕಾಶಕರು ಕಳುಹಿಸಬಹುದು. ಕಾದಂಬರಿ, ಕಥಾ ಸಂಕಲನ, ಅನುವಾದ, ಸಂಶೋಧನೆ, ಮಕ್ಕಳ ಸಾಹಿತ್ಯ, ವೈಚಾರಿಕ ಬರಹಗಳು, ವೈದ್ಯಕೀಯ ಸಾಹಿತ್ಯ, ಇತಿಹಾಸ, ಜಾನಪದ, ಮನೋವಿಜ್ಞಾನ, ಸಿನಿಮಾ ಸಾಹಿತ್ಯ ಸೇರಿ ವಿವಿಧ ಪ್ರಕಾರಗಳ ಸಾಹಿತ್ಯ ಕೃತಿಗಳನ್ನು ದತ್ತಿ ಪ್ರಶಸ್ತಿಗಳಿಗೆ ಪರಿಗಣಿಸಲಾಗುತ್ತದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಪ್ರಶಸ್ತಿಗೆ ಪುಸ್ತಕ ಸಲ್ಲಿಸುವವರು ಪರಿಷತ್ತಿನ ಆಜೀವ ಸದಸ್ಯತ್ವ ಹೊಂದಿರಬೇಕು. ಇಲ್ಲವಾದಲ್ಲಿ ಸದಸ್ಯತ್ವ ಪಡೆದು, ಪುಸ್ತಕ ಕಳುಹಿಸಬಹುದು. ಪರಿಷತ್ತಿನ ಯಾವುದೇ ಪುಸ್ತಕ ಪ್ರಶಸ್ತಿ ಪುರಸ್ಕೃತರು ತಾವು ಪ್ರಶಸ್ತಿ ಪಡೆದ ವಿಭಾಗಕ್ಕೆ ಮೂರು ವರ್ಷ ಅರ್ಜಿ ಸಲ್ಲಿಸುವಂತಿಲ್ಲ. ಪ್ರತಿ ವಿಭಾಗಕ್ಕೂ ಪ್ರತ್ಯೇಕ ಮೂರು ಪುಸ್ತಕಗಳನ್ನು ಸಲ್ಲಿಸಬೇಕು. ಆ.20ರೊಳಗೆ ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ವಿಳಾಸಕ್ಕೆ ಕಳುಹಿಸಬೇಕು. ವಿವರಕ್ಕೆ: www.kasapa.in

'ನನಗೆ ಯಾವನ್ರೀ ಧಮ್ಕಿ ಹಾಕೋನು?'

ಬೆಂಗಳೂರು: 'ನನಗೆ ಯಾವನ್ರೀ ಧಮ್ಕಿ ಹಾಕೋನು? ನನ್ನ ಹಿಂದೆ ಇಡೀ ದಲಿತ ಸಮುದಾಯ ಇದೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅಬ್ಬರದ ದನಿಯಲ್ಲಿ ಹೇಳಿದರು.

ಮಾಜಿ ಸಂಸದ ಡಿ.ಕೆ. ಸುರೇಶ್ ಅವರು ಮಹದೇವಪ್ಪ ಅವರಿಗೆ ಫೋನ್ ಕರೆ ಮಾಡಿ ಬೆದರಿಕೆ ಹಾಕಿದ್ದಾರೆ ಎಂಬ ವದಂತಿಗಳ ಬಗ್ಗೆ ಸುದ್ದಿ ಮಾಧ್ಯಮವೊಂದಕ್ಕೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಅಂಥದ್ದೇನೂ ಇಲ್ವಲ್ಲರೀ. ಅಷ್ಟಕ್ಕೂ ಡಿ.ಕೆ. ಸುರೇಶ್ ಎಂದೂ ನನಗೆ ಫೋನ್ ಮಾಡಿಲ್ಲ' ಎಂದರು.

'ಇಂತಹ ಯಾವುದೇ ಪ್ರಸಂಗ ನಡೆದೇ ಇಲ್ಲ' ಎಂದು ಸ್ಪಷ್ಟಪಡಿಸಿದ ಅವರು, 'ವಿಥ್ ಔಟ್ ಎನಿಥಿಂಗ್ ಇದೆಲ್ಲ ಆಗಬಾರದು. ಸಾಮಾಜಿಕ ಜಾಲತಾಣಗಳಲ್ಲಿ ಏನು ನಡೆಯುತ್ತಿದೆಯೊ ಅದರ ಬಗ್ಗೆ ಗೊತ್ತಿಲ್ಲ' ಎಂದರು.

ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ ಸಲಹೆ

ಬೆಳೆಗಳ ಮೌಲ್ಯವರ್ಧನೆಗೆ ಆದ್ಯತೆ ನೀಡಿ

ಪ್ರಜಾವಾಣಿ ವಾರ್ತೆ

ರೈತ ಹುತಾತ್ಮ ದಿನಾಚರಣೆಯಲ್ಲಿ ಅಶೋಕ ದಳವಾಯಿ ಮಾತನಾಡಿದರು

ಬೆಂಗಳೂರು: 'ಕೃಷಿ, ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಜೊತೆಗೆ, ಅವುಗಳನ್ನು ಮೌಲ್ಯವರ್ಧಿಸಿ ಉತ್ಪನ್ನಗಳಾಗಿಸಿ ಮಾರಾಟ ಮಾಡುವುದರಿಂದ ಕೃಷಿಯನ್ನು ಲಾಭದಾಯಕವಾಗಿಸಬಹುದು' ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ ಅಭಿಪ್ರಾಯಪಟ್ಟರು.

ಅಖಂಡ ಕರ್ನಾಟಕ ರೈತ ಸಂಘ ಗಾಂಧಿ ಭವನದಲ್ಲಿ ಸೋಮವಾರ ಆಯೋಜಿಸಿದ್ದ '45ನೇ ರೈತ ಹುತಾತ್ಮ ದಿನಾಚರಣೆ'ಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೃಷಿ, ತೋಟಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಉಪ ಉತ್ಪನ್ನಗಳ ತಯಾರಿಕೆಯೇ ದ್ವಿತೀಯ ಕೃಷಿ (ಸೆಕೆಂಡರಿ ಅಗ್ರಿಕಲ್ಚರ್). ಈ ಸೆಕೆಂಡರಿ ಕೃಷಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚು ಉತ್ತೇಜನ ನೀಡುತ್ತಿದ್ದು, ರೈತರು ಇದರ ಸದುಪಯೋಗ ಮಾಡಿಕೊಂಡರೆ ಕೃಷಿಯಲ್ಲಿ ಲಾಭ ಪಡೆಯಬಹುದು' ಎಂದು ಸಲಹೆ ನೀಡಿದರು.

'ಉಪ ಉತ್ಪನ್ನಗಳ ತಯಾರಿಕೆ ಜೊತೆಗೆ ಮಾರುಕಟ್ಟೆಯನ್ನೂ ಅನ್ವೇಷಿಸಿ ಸ್ಪರ್ಧಾತ್ಮಕ ದರದಲ್ಲಿ ಉತ್ಪನ್ನಗಳ ಮಾರಾಟ ಮಾಡಲು ಸಿದ್ಧರಾಗಬೇಕು' ಎಂದು ಸಲಹೆ ನೀಡಿದರು.

ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಮಾತನಾಡಿ, 'ದೇಶದಲ್ಲಿ ವಸ್ತುಗಳ ಗರಿಷ್ಠ ಚಿಲ್ಲರೆ ದರ (ಎಂಆರ್‌ಪಿ) ತೆಗೆದು ಹಾಕಬೇಕು. ಎಂಆರ್‌ಪಿ ನಿಯಂತ್ರಣ ವ್ಯವಸ್ಥೆ ಕುಸಿತದಿಂದ ಏಕರೂಪ ಗರಿಷ್ಠ ಚಿಲ್ಲರೆ ದರ ನಿಗದಿ ಸಾಧ್ಯವಾಗಿಲ್ಲ. ನಿಯಂತ್ರಣ ವ್ಯವಸ್ಥೆ ಸರಿದಾರಿಗೆ ತರಲು ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗ(ಸಿಸಿಎಪಿ)ದಂತೆ, ಕಾರ್ಖಾನೆ ಉತ್ಪನ್ನಗಳ ವೆಚ್ಚ ಮತ್ತು ಬೆಲೆ ಆಯೋಗ ರಚಿಸುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ನಿವೃತ್ತ ಐಎಎಸ್ ಅಧಿಕಾರಿ ಶಿವಯೋಗಿ ಕಳಸದ ಮಾತನಾಡಿದರು. ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ವಾಲಿ ಇದ್ದರು.

7.4 ಕೆ.ಜಿ.ತೂಕದ ಫೈಬ್ರಾಯ್ಡ್: ಯಶಸ್ವಿ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ವಾಣಿವಿಲಾಸ ಆಸ್ಪತ್ರೆಯ ವೈದ್ಯರು ಗರ್ಭಾಶಯದಲ್ಲಿನ ನಾರುಗಡ್ಡೆಯನ್ನು ಹೊರತೆಗೆದರು

ಬೆಂಗಳೂರು: ಹೊಟ್ಟೆನೋವು ಮತ್ತು ಹೊಟ್ಟೆ ಉಬ್ಬರದ ಸಮಸ್ಯೆಯಿಂದ ಬಳಲುತ್ತಿದ್ದ 50 ವರ್ಷದ ಮಹಿಳೆಗೆ ಇಲ್ಲಿನ ವಾಣಿವಿಲಾಸ ಆಸ್ಪತ್ರೆ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿ, ಗರ್ಭಕೋಶದಲ್ಲಿ ಬೆಳೆದಿದ್ದ 7.4 ಕೆ.ಜಿ. ತೂಕದ ಗರ್ಭಾಶಯ ನಾರುಗಡ್ಡೆಯನ್ನು (ಫೈಬ್ರಾಯ್ಡ್) ಹೊರತೆಗೆದಿದ್ದಾರೆ.

ಮಹಿಳೆ ಇಬ್ಬರು ಮಕ್ಕಳ ತಾಯಿಯಾಗಿದ್ದು, ಆರು ತಿಂಗಳಿನಿಂದ ಈ ಸಮಸ್ಯೆ ಎದುರಿಸುತ್ತಿದ್ದರು. ಅಸ್ವಸ್ಥತೆ ದಿನೇ ದಿನೇ ಹೆಚ್ಚಾದ ಕಾರಣ ಚಿಕಿತ್ಸೆಗಾಗಿ ವಾಣಿವಿಲಾಸ ಆಸ್ಪತ್ರೆಗೆ ಭೇಟಿ ನೀಡಿದ್ದರು. ಸ್ಕ್ಯಾನಿಂಗ್ ಹಾಗೂ ಪ್ರಯೋಗಾಲಯ ಪರೀಕ್ಷೆಯಿಂದ ಗರ್ಭಾಶಯದಲ್ಲಿ ಫೈಬ್ರಾಯ್ಡ್ ಇರುವುದು ದೃಢಪಟ್ಟಿತು. ಬಳಿಕ ವೈದ್ಯರು ಶಸ್ತ್ರಚಿಕಿತ್ಸೆಗೆ ಶಿಫಾರಸು ಮಾಡಿದ್ದರು.

ಕಳೆದ ವಾರ ಆಸ್ಪತ್ರೆಗೆ ದಾಖಲಾಗಿದ್ದ ಮಹಿಳೆಗೆ ವೈದ್ಯಕೀಯ ಅಧೀಕ್ಷಕಿ ಡಾ.ಸಿ. ಸವಿತಾ ಮತ್ತು ಸ್ತ್ರೀರೋಗ ತಜ್ಞೆ ಡಾ. ತೇಜಸ್ವಿನಿ ಕೆ.ಕೆ. ನೇತೃತ್ವದ ವೈದ್ಯಕೀಯ ತಜ್ಞರ ತಂಡವು ಶಸ್ತ್ರಚಿಕಿತ್ಸೆಯನ್ನು ನಡೆಸಿ, 7.4 ಕೆ.ಜಿ. ತೂಕದ ಗಡ್ಡೆಯನ್ನು ಯಶಸ್ವಿಯಾಗಿ ಹೊರತೆಗೆದಿದೆ. ಚಿಕಿತ್ಸೆ ನಂತರ ಮಹಿಳೆಯು ಚೇತರಿಸಿಕೊಂಡಿದ್ದು, ನೋವು ಮುಕ್ತರಾಗಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

'ಗರ್ಭಾಶಯವು 36 ವಾರಗಳ ಗರ್ಭಧಾರಣೆಯಷ್ಟು ದೊಡ್ಡದಾಗಿತ್ತು. ಆದ್ದರಿಂದ ಈ ಪ್ರಕರಣದಲ್ಲಿ ಶಸ್ತ್ರಚಿಕಿತ್ಸೆ ಸವಾಲಾಗಿತ್ತು. ಮಹಿಳೆಯರಲ್ಲಿ ನಿಯಮಿತ ಆರೋಗ್ಯ ತಪಾಸಣೆಯ ಪ್ರಾಮುಖ್ಯತೆಯನ್ನು ಈ ಪ್ರಕರಣ ತಿಳಿಸುತ್ತದೆ. ಯಾವುದೇ ರೋಗ ಲಕ್ಷಣವನ್ನು ನಿರ್ಲಕ್ಷಿಸದೆ, ತಪಾಸಣೆ ಮಾಡಿಸಿಕೊಳ್ಳುವುದು ಸೂಕ್ತ. ಸಮಸ್ಯೆಯನ್ನು ಆರಂಭದಲ್ಲೆ ಪತ್ತೆ ಹಚ್ಚಿದರೆ ಚಿಕಿತ್ಸೆ ಸುಲಭ ಸಾಧ್ಯ' ಎಂದು ಡಾ.ಸಿ. ಸವಿತಾ ಹೇಳಿದ್ದಾರೆ.

ಹೆದ್ದಾರಿ ಜಲಾವೃತ

ಹಾರೋಹಳ್ಳಿ: ಸೋಮನಹಳ್ಳಿ ಬಳಿ ನೆಟ್ಟಿಗೆರೆ ಗೇಟ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಳೆ ನೀರು ನಿಂತಿತ್ತು. ಹೆದ್ದಾರಿಯನ್ನು ನಿರ್ವಹಣೆ ಮಾಡದಿದ್ದರೂ ಟೋಲ್ ಸುಲಿಗೆ ಮಾಡುತ್ತಿದ್ದಾರೆ ಎಂದು ವಾಹನ ಸವಾರರು ಆರೋಪಿಸಿದ್ದಾರೆ.

ವಿದ್ಯಾರ್ಥಿಗೆ ಥಳಿತ ಪ್ರಭಾರ ವಾರ್ಡನ್ ಅಮಾನತು

ಮುಳಬಾಗಿಲು: ತಾಲ್ಲೂಕಿನ ಬಾಳಸಂದ್ರ ಎಂ.ಕೊತ್ತೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಯನ್ನು ಥಳಿಸಿದ ಪ್ರಕರಣದಲ್ಲಿ ಪ್ರಭಾರ ವಾರ್ಡನ್ ಮಹೇಶ್ ಗಿರಡ್ಡಿ ಎಂಬುವರನ್ನು ಅಮಾನತುಗೊಳಿಸಲಾಗಿದೆ. ವಸತಿ ಶಾಲೆಯ ಪ್ರಭಾರ ಪ್ರಾಂಶುಪಾಲ ಕುಮಾರ್ ರಾಜ್ ಅವರಿಗೆ ನೋಟಿಸ್ ನೀಡಲಾಗಿದೆ.

'ಪ್ರಜಾವಾಣಿ'ಯಲ್ಲಿ ಮಂಗಳವಾರ ಪ್ರಕಟವಾಗಿದ್ದ 'ಬಾಸುಂಡೆ ಬರುವಂತೆ ವಿದ್ಯಾರ್ಥಿಗೆ ಥಳಿತ' ವರದಿ ಆಧರಿಸಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಕಾರ್ಯನಿರ್ವಾಹಕ ನಿರ್ದೇಶಕ ಪಿ.ಎಸ್.ಕಾಂತರಾಜು ಈ ಆದೇಶ ಹೊರಡಿಸಿದ್ದಾರೆ.

ಅಮಾನತು ಆದೇಶದಲ್ಲಿ 'ಪ್ರಜಾವಾಣಿ' ವರದಿ ಉಲ್ಲೇಖಿಸಲಾಗಿದೆ. ವಿದ್ಯಾರ್ಥಿ ಮೇಲೆ ದೈಹಿಕ ಹಲ್ಲೆ ನಡೆಸಿರುವುದು ಕಂಡು ಬಂದಿರುವುದರಿಂದ ಈ ಕ್ರಮ ವಹಿಸಲಾಗಿದೆ ಎಂದು ಹೇಳಿದ್ದಾರೆ.

ಮೈಸೂರು ರೇಸ್

ಉಚ್ಚಾಯ್‌ಶ್ರವಾಸ್ ಗೆಲ್ಲುವ ನಿರೀಕ್ಷೆ

ಮೈಸೂರು ಸಮ್ಮರ್ ಮಿಲಿಯನ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಉಚ್ಚಾಯ್‌ಶ್ರವಾಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಸೆರಾಯ್ 5, ಬಯೊಮೆಟ್ರಿಕ್ 2, ಟವರ್ ಕ್ವೆಸ್ಟ್ 1
2ನೇ ರೇಸ್: ಅನುಶ್ಟುಭ 4, ಮಿರಾಕಲ್ ಹನಿ 8, ಐ ದಿ ಮೈಂಡ್ 6
3ನೇ ರೇಸ್: ಫೆಲಿಸಿಟ 5, ಒನ್ ಡೈಮಂಡ್ 1, ರೆಡ್ ಹಿಲ್ಸ್ 3
4ನೇ ರೇಸ್: ಡಿವೈನ್ ಆರ್ಟ್ 2, ಸೀ ದಿ ಸನ್ 1, ಸ್ಕ್ವೇರ್ ಕಟ್ 9
5ನೇ ರೇಸ್: ಸ್ಯಾಂಡಲ್ ಕಿಂಗ್ 2, ಸೇಫಿಯೆಂಟ್ 1, ಸರ್ವೋತ್ತಮ್ 5
6ನೇ ರೇಸ್: ಉಚ್ಚಾಯ್‌ಶ್ರವಾಸ್ 4, ರೈಸ್ ಎ ಬಕ್ 3, ಕ್ಯಾಸ್ಟಿಲ್ 1
7ನೇ ರೇಸ್: ರೈಝ್ ಎಗ್ನೈನ್ 1, ಕನ್ಯಾರಾಶಿ 8, ಡೆಕಕಾರ್ನ್ 9
8ನೇ ರೇಸ್: ಸರ್ ಕ್ಯಾಲ್‌ಕ್ಯುಲಸ್ 6, ದಿ ಗೋಲ್ಡನ್ ಸನ್‌ರೈಝ್ 12, ಚಾಯ್ಸ್ 8

ಉತ್ತಮ ಬೆಟ್: ಡಿವೈನ್ ಆರ್ಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್
(ಹಿಂದೆ ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್)
538, 539, 542 & 543, ಪೀಣ್ಯ 4ನೇ ಹಂತದ ಕೈಗಾರಿಕಾ ಪ್ರದೇಶದ 7ನೇ ಮುಖ್ಯ ರಸ್ತೆ,
ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ಉತ್ತರ ತಾಲ್ಲೂಕು, ಕರ್ನಾಟಕ, ಭಾರತ, 560058
ISO 9001-2015 & AS 9100 Rev D ಪ್ರಮಾಣೀಕರಿಸಲಾಗಿದೆ
GSTIN: 29AABCU9719Q1ZC CIN: L30305KA2016PLC095712
companysecretary@unimechaerospace.com ದೂರವಾಣಿ: 080-42046782, www.unimechaerospace.com

9ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ, ದೂರಸ್ಥ ಇ-ಮತದಾನ ಮಾಹಿತಿ

ಈ ಮೂಲಕ ಸೂಚನೆ ನೀಡಲಾಗಿದೆ,

1. ಕಂಪನಿಯ ಸದಸ್ಯರ 9ನೇ ವಾರ್ಷಿಕ ಸಾಮಾನ್ಯ ಸಭೆ (ಎಜಿಎಂ) ಬುಧವಾರ, ಆಗಸ್ಟ್ 13, 2025 ರಂದು ಬೆಳಿಗ್ಗೆ 11.00ಕ್ಕೆ, ಎಜಿಎಂನ ಸೂಚನೆಯಲ್ಲಿ ತಿಳಿಸಿರುವಂತೆ ವ್ಯವಹಾರವನ್ನು ವಹಿವಾಟು ಮಾಡಲು ವೀಡಿಯೊ ಕಾನ್ಫರೆನ್ಸಿಂಗ್ (ವಿಸಿ)/ಇತರ ಆಡಿಯೋ ವಿಷುಯಲ್ ಮೀನ್ಸ್ ಮೂಲಕ ನಡೆಯಲಿದೆ.
2. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ಏಪ್ರಿಲ್ 8, 2020, 17/2020, ದಿನಾಂಕ ಏಪ್ರಿಲ್ 13, 2020, ಮತ್ತು ಸೆಪ್ಟೆಂಬರ್ 19, 2024ರ 09/2024 ಮತ್ತು ಕಂಪನಿಗಳ ಕಾಯ್ದೆ, 2013ರ ("ಕಾಯ್ದೆ") ಅನ್ವಯವಾಗುವ ನಿಬಂಧನೆಗಳು ಮತ್ತು ಸುತ್ತೋಲೆ ಸಂಖ್ಯೆಯ ಅನುಸಾರವಾಗಿ. ಮೇ 12, 2020ರ SEBI/HO/CFD/CMD1/CIR/P/2020/79 ಮತ್ತು ಅಕ್ಟೋಬರ್ 3, 2024ರ SEBI/HO/CFD/CFD-PoD-2/P/CIR/2024/133ರ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("SEBI") ಮತ್ತು SEBI (ಲಿಸ್ಟಿಂಗ್ ಆಬ್ಲಿಗೇಷನ್ಸ್ ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ("ಲಿಸ್ಟಿಂಗ್ ರೆಗ್ಯುಲೇಷನ್ಸ್") ಹೊರಡಿಸಿದ 9ನೇ ವಾರ್ಷಿಕ ಮಹಾಸಭೆಯನ್ನು ಆಗಸ್ಟ್ 13, 2025 ರಂದು ಬೆಳಿಗ್ಗೆ 11:00 ISTಕ್ಕೆ ವೀಡಿಯೊ ಕಾನ್ಫರೆನ್ಸಿಂಗ್ ("VC")/ಇತರ ಆಡಿಯೋ ವಿಷುಯಲ್ ಮೀನ್ಸ್ ಮೂಲಕ ನಡೆಸಲಾಗುತ್ತಿದೆ, ಇದಕ್ಕೆ ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯ ಅಗತ್ಯವಿಲ್ಲ.
3. ಕಂಪನಿ/ಠೇವಣಿ ಭಾಗವಹಿಸುವವರೊಂದಿಗೆ ನೋಂದಾಯಿಸಲಾದ ಇಮೇಲ್ ಐಡಿಗಳನ್ನು ಹೊಂದಿರುವ ಸದಸ್ಯರಿಗೆ ಜುಲೈ 22, 202 ರಂದು ವಾರ್ಷಿಕ ಮಹಾಸಭೆಯ ಸೂಚನೆ ಮತ್ತು 2025ರ ಹಣಕಾಸು ವರ್ಷದ ವಾರ್ಷಿಕ ವರದಿಯನ್ನು ಇಮೇಲ್ ಮಾಡಲಾಗಿದೆ. ಕಂಪನಿಯ ವೆಬ್‌ಸೈಟ್ www.unimechaerospace.com ನಲ್ಲಿ ಲಭ್ಯವಿದೆ.
4. ಕಂಪನಿ/ಆರ್‌ಟಿಎ/ಠೇವಣಿಗಳಲ್ಲಿ ತಮ್ಮ ಇ-ಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರಿಗೆ 2024-25ರ ವಾರ್ಷಿಕ ವರದಿಯನ್ನು ಪ್ರವೇಶಿಸಲು ನಿಖರವಾದ ಮಾರ್ಗವನ್ನು ಒಳಗೊಂಡಂತೆ ವೆಬ್-ಲಿಂಕ್ ಅನ್ನು ಒದಗಿಸುವ ಪತ್ರವನ್ನು ಜುಲೈ 22, 2025 ರಂದು ಕಳುಹಿಸಲಾಗಿದೆ.
5. ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 108 ಮತ್ತು ಕಂಪನಿಗಳ ನಿಯಮ 20ರ ಪ್ರಕಾರ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014, ಕಂಪನಿಗಳು (ನಿರ್ವಹಣೆ ಮತ್ತು ಆಡಳಿತ) ತಿದ್ದುಪಡಿ ನಿಯಮಗಳು, 2015 ಮತ್ತು ನಿಯಮ 44ರ ಮೂಲಕ ತಿದ್ದುಪಡಿ ಮಾಡಲಾಗಿದೆ ಸೆಬಿ (ಪಟ್ಟಿ ಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015, ಕಟ್-ಆಫ್ ದಿನಾಂಕವಾದ ಆಗಸ್ಟ್ 6, 2025 ಕಂಪನಿಯು ತನ್ನ ಸದಸ್ಯರಿಗೆ ಭೌತಿಕ ರೂಪದಲ್ಲಿ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸೌಲಭ್ಯವನ್ನು ಒದಗಿಸುತ್ತಿದೆ, ವಿದ್ಯುನ್ಮಾನವಾಗಿ ಮತ ಚಲಾಯಿಸಲು Kfin ಟೆಕ್ನಾಲಜೀಸ್ ಲಿಮಿಟೆಡ್ ವೋಟಿಂಗ್ ಸಿಸ್ಟಮ್ ಮೂಲಕ ಎಜಿಎಂನ ಸೂಚನೆಯಲ್ಲಿ ವಿವರಿಸಿದಂತೆ ವ್ಯವಹಾರದ ಎಲ್ಲ ಸದಸ್ಯರಿಗೆ ತಿಳಿಸಲಾಗಿದೆ:
   i. 9ನೇ ಎಜಿಎಂ ನ ಸೂಚನೆಯಲ್ಲಿ ತಿಳಿಸಿರುವಂತೆ ವ್ಯವಹಾರವನ್ನು ಎಲೆಕ್ಟ್ರಾನಿಕ್ ಮೂಲಕ ಮತದಾನದ ವಹಿವಾಟು ನಡೆಸಬಹುದು;
   ii. ದೂರಸ್ಥ ಇ-ಮತದಾನವು ಶುಕ್ರವಾರ ಆಗಸ್ಟ್ 08, 2025 ರಂದು ಬೆಳಿಗ್ಗೆ 9.00 a.m. IST ಆರಂಭವಾಗುತ್ತದೆ;
   iii. ದೂರಸ್ಥ ಇ-ಮತದಾನವು ಮಂಗಳವಾರ ಆಗಸ್ಟ್ 12, 2025 ರಂದು ಸಂಜೆ 5.00 p.m. IST ಕೊನೆಗೊಳ್ಳುತ್ತದೆ;
   iv. ಎಲೆಕ್ಟ್ರಾನಿಕ್ ವಿಧಾನದಿಂದ ಅಥವಾ ಎಜಿಎಂನಲ್ಲಿ ಮತ ಚಲಾಯಿಸುವ ಅರ್ಹತೆಯನ್ನು ನಿರ್ಧರಿಸಲು ಕಟ್-ಆಫ್ ದಿನಾಂಕ ಆಗಸ್ಟ್ 06, 2025;
   v. ಯಾವುದೇ ವ್ಯಕ್ತಿ, ಕಂಪನಿಯ ಷೇರುಗಳನ್ನು ಪಡೆದುಕೊಂಡರೆ ಮತ್ತು ಎಜಿಎಂನ ಸೂಚನೆ ರವಾನೆಯಾದ ನಂತರ ಕಂಪನಿಯ ಸದಸ್ಯರಾಗುತ್ತಾರೆ ಮತ್ತು ಕಟ್-ಆಫ್ ದಿನಾಂಕದಂದು ಷೇರುಗಳನ್ನು ಹೊಂದಿರುವವರು ಅಚಿದರೆ ಆಗಸ್ಟ್ 06, 2025 ರಲ್ಲಿ evoting@kfintech.com ವಿನಂತಿಯನ್ನು ಕಳುಹಿಸುವ ಮೂಲಕ ಲಾಗಿನ್ ಐಡಿ ಮತ್ತು ಪಾಸ್ವರ್ಡ್ ಪಡೆಯಬಹುದು ಹಾಗೆಯೇ ನೀವು ಈಗಾಗಲೇ Kfinನಲ್ಲಿ ಇ-ಮತದಾನಕ್ಕೆ ನೋಂದಾಯಿಸಿ ಕೊಂಡಿದ್ದರೆ, ಈಗಿರುವ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್/ಪಿನ್ ಅನ್ನು ಮತ ಚಲಾಯಿಸಲು ಬಳಸಬಹುದು;
ಜ್ಞಾನಭಾರತಿ ಆವರಣದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ವಿಭಾಗ / ಸ್ನಾತಕೋತ್ತರ ಕೇಂದ್ರ, ರಾಮನಗರ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ, **ಸ್ನಾತಕೋತ್ತರ (ಎಂ.ಎ/ಎಂ.ಎಸ್.ಡಬ್ಲ್ಯೂ/ಎಂ.ಎಸ್ಸಿ/ಎಂ.ಕಾಂ/ಎಂ.ಟಿ.ಟಿ.ಎಂ) ಕೋರ್ಸುಗಳ ಮತ್ತು ಬಿ.ಪಿ.ಎಡ್ ಕೋರ್ಸುಗಳ 2025-26ನೇ** ಶೈಕ್ಷಣಿಕ ಸಾಲಿನ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ವಿವರಗಳು ಈ ಕೆಳಕಂಡಂತಿರುತ್ತದೆ:

- ಬಿ.ಪಿ.ಎಡ್ ಮತ್ತು ಸ್ನಾತಕೋತ್ತರ ಕೋರ್ಸುಗಳ (ಎಂ.ಎಡ್ & ಎಂ.ಪಿ.ಎಡ್ ಹೊರತುಪಡಿಸಿ) ಅರ್ಜಿಗಳನ್ನು ಸಲ್ಲಿಸಬಯಸುವ ಅಭ್ಯರ್ಥಿಗಳು UUCMS ಆನ್‌ಲೈನ್ ಪೋರ್ಟಲ್ **https://uucms.karnataka.gov.in/Login/Index** ಮೂಲಕವೇ ಅರ್ಜಿಗಳನ್ನು ಸಲ್ಲಿಸುವುದು. (ಪಿ.ಜಿ ಪ್ರವೇಶಾತಿ ಅಭ್ಯರ್ಥಿಗಳ – user manual 2022 ನೋಡುವುದು).
- ಅರ್ಜಿ **ಶುಲ್ಕ ರೂ.300/- (ಕರ್ನಾಟಕ ನಿವಾಸಿಯಾದ ಪ.ಜಾತಿ/ಪ. ಪಂಗಡ/ ಪ್ರವರ್ಗ-1 ಮತ್ತು ತೃತೀಯ ಲಿಂಗಿಗಳಿಗೆ ರೂ.150/-ಮಾತ್ರ)** ಗಳನ್ನು **online** ನಲ್ಲಿ ತಿಳಿಸಿರುವ ಲಿಂಕ್‌ನ್ನು ಬಳಸಿ ಪಾವತಿಸುವುದು.
- 2025-26ನೇ ಸಾಲಿಗೆ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸಲು **13.08.2025** ಕೊನೆಯ ದಿನಾಂಕವಾಗಿರುತ್ತದೆ ಹಾಗೂ **ರೂ.200/-** ಗಳು ದಂಡ ಶುಲ್ಕದೊಂದಿಗೆ **ದಿನಾಂಕ 15.08.2025** ರವರೆಗೂ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
- ಆನ್‌ಲೈನ್ ಮುಖಾಂತರ ಕೋರ್ಸಿಗೆ ಸಲ್ಲಿಸಿದ ಅರ್ಜಿಗಳ ಹಾರ್ಡ್‌ಕಾಪಿಯ ಜೊತೆ ಸ್ವಯಂ ಧೃಢೀಕರಿಸಿದ ದಾಖಲೆಗಳನ್ನು ಸಂಬಂಧ ಪಟ್ಟ ವಿಭಾಗಗಳಿಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ **ದಿನಾಂಕ: 18.08.2025 ರೊಳಗಾಗಿ** ಸಲ್ಲಿಸುವುದು (ವಿಭಾಗಗಳ ವಿವರ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ನೋಡುವುದು).
- ಹೆಚ್ಚಿನ ವಿವರಗಳಿಗೆ ಬೆಂಗಳೂರು ವಿಶ್ವವಿದ್ಯಾಲಯದ ಅಂತರಜಾಲ **https://bangaloreuniversity.karnataka.gov.in** ನಲ್ಲಿ ನೋಡಬಹುದು.

ಸಹಿ/-,
ಕುಲಸಚಿವರು
DIPR/CP/RO1975/AAPL/2025-26

प्रवर्तन निदेशालय
भारत सरकार
DIRECTORATE OF ENFORCEMENT
Government of India
3rd Floor, B Block, BMTC, Shanthinagar - TTMC,
K.H. Road, Shantinagar, Bengaluru - 560 027.

KABC01-018898-2021 Next Date: 28-07-2025

PROCLAMATION REQUIRING THE APPEARANCE OF A PERSON ACCUSED (See Section 82)
Form No. 4
IN THE COURT OF CCH48 XLVII ADDL. CITY CIVIL AND SESSIONS JUDGE- SPL.C/1345/2021
DIRECTORATE OF ENFORCEMENT VS A3-ASHOK KUMAR //0

WHEREAS complaint has been made before me that **A4- RADHA @ RADHA AGARWAL @ANJANA, Age-31 years, R/o. C/O ASHOK KUMAR NO 27, 1ST MAIN ROAD, COCONUT GARDEN, NAGARABHAVI, BENGALURU** has committed (or is suspected to have committed) the offence of punishable under section 3,4 of the Prevention of Money Laundering Act, and it has been returned to a warrant of arrest thereupon issued that the said **A4- RADHA @ RADHA AGARWAL @ ANJANA cannot be found, and whereas It has been shown to my satisfaction that the said A4- RADHA @ RADHA AGARWAL @ ANJANA** has absconded (or is concealing himself to avoid the service of the said warrant);
Proclamation is hereby made that the said A4- RADHA @ RADHA AGARWAL @ ANJANA, Age - 31 R/o. - C/O ASHOK KUMAR NO 27, 1ST MAIN ROAD, COCONUT GARDEN, NAGARABHAVI, BENGALURU is required to appear at before to answer answer the said complaint on the day of **28.07.2025.**
Dated, this day of **10.06.2025**

CCH48 XLVII ADDL. CITY CIVIL AND SESSIONS JUDGE BENGALURU

60 ವರ್ಷದ ಸರ್ಕಾರಿ ಶಾಲೆಗೆ ಹೈಟೆಕ್ ಸ್ಪರ್ಶ

ಅಮೆರಿಕದಲ್ಲಿ ನೆಲಸಿರುವ ಠಕ್ಕರ್ ಕುಟುಂಬದಿಂದ ₹8 ಕೋಟಿ ನೆರವು • ಒಸಾಟ್ ಸಂಸ್ಥೆ ನೇತೃತ್ವ

• ಕೆ.ಓಂಕಾರ ಮೂರ್ತಿ

ಮುಖ್ಯಾಂಶಗಳು

- ದಾನಿ ಜನಾರ್ದನ್ ಠಕ್ಕರ್ ದಂಪತಿ ಕೊಡುಗೆ
- ಗಡಿಭಾಗದ ಸರ್ಕಾರಿ ಶಾಲೆಗೆ ಹೈಟೆಕ್ ಸ್ಪರ್ಶ
- ಎಲ್‌ಕೆಜಿಯಿಂದ 8ನೇ ತರಗತಿವರೆಗೆ 800 ಮಕ್ಕಳು

ಜನಾರ್ದನ್ ಹಾಗೂ ಲಿಂಡಾ ಠಕ್ಕರ್ ದಂಪತಿ

ಪ್ರಜಾವಾಣಿ ವಿಶೇಷ

ಕೋಲಾರ: ಜಿಲ್ಲೆಯ ಗಡಿಭಾಗ ಮಾಸ್ತಿಯ ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ಕಟ್ಟಡವನ್ನು ದಾನಿಯೊಬ್ಬರ ₹8 ಕೋಟಿ ನೆರವಿನಿಂದ ಪುನರ್ ನಿರ್ಮಾಣ ಮಾಡಲಾಗಿದೆ. ಜುಲೈ 26ರಂದು ಶಾಲಾ ಕಟ್ಟಡ ಉದ್ಘಾಟನೆಯಾಗಲಿದೆ.

ಅಮೆರಿಕದಲ್ಲಿ ನೆಲಸಿರುವ ಗುಜರಾತ್ ಮೂಲದ ಉದ್ಯಮಿ ಜನಾರ್ದನ್ ಠಕ್ಕರ್ ಅವರು, ಠಕ್ಕರ್ ಕುಟುಂಬ ಪ್ರತಿಷ್ಠಾನ ಕಲಿಕಾ ಕೇಂದ್ರದ ಮೂಲಕ ಈ ನೆರವು ನೀಡಿದ್ದಾರೆ. 60 ವರ್ಷ ಹಳೆಯ ಕಟ್ಟಡಕ್ಕೆ ಈಗ ಹೊಸ ಹೊಳಪು ಬಂದಿದ್ದು, ಹೈಟೆಕ್ ಶಾಲೆಯಾಗಿ ಪರಿವರ್ತನೆ ಗೊಂಡಿದೆ.

ಒಸಾಟ್ (ಒನ್ ಸ್ಕೂಲ್ ಎಟ್ ಎ ಟೈಮ್) ಸ್ವಯಂ ಸೇವಾ ಸಂಸ್ಥೆ ನೇತೃತ್ವದಲ್ಲಿ, ಡಿಜಿಟಲ್ ಶಾಲೆ ಯೋಜನೆಯಡಿ ಸಂಸ್ಥೆಯು ಅಭಿವೃದ್ಧಿ ಪಡಿಸಿರುವ 100ನೇ ಸರ್ಕಾರಿ ಶಾಲೆ ಇದಾಗಿದೆ.

18 ತರಗತಿ ಕೊಠಡಿ, ಕಂಪ್ಯೂಟರ್, ವಿಜ್ಞಾನ ಪ್ರಯೋಗಾಲಯ, ಕಲಿಕಾ ಚಟುವಟಿಕೆ ಕೊಠಡಿ ಸೇರಿ ಶಾಲೆಗೆ 20 ಕೊಠಡಿ ನಿರ್ಮಿಸಲಾಗಿದೆ. ಗ್ರಂಥಾಲಯ, ಬೋರ್ಡ್, ಬೆಂಚ್, ಡೆಸ್ಕ್ ಸೌಲಭ್ಯವಿದೆ.

ಬಾಲಕರು, ಬಾಲಕಿಯರಿಗೆ ಪ್ರತ್ಯೇಕವಾಗಿ ಮೂರು ಶೌಚಾಲಯ ಬ್ಲಾಕ್ ನಿರ್ಮಾಣವಾಗಿದೆ. ಶುದ್ಧ ಕುಡಿಯುವ ನೀರಿನ ಘಟಕ, ಸೌರ ವಿದ್ಯುತ್ ವ್ಯವಸ್ಥೆ, ಡಿಜಿಟಲ್ ಟಿ.ವಿ, ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿದ್ದಾರೆ. ಅಲ್ಲದೇ, ವಿಶಾಲ ಅಡುಗೆ ಕೋಣೆ ನಿರ್ಮಾಣವಾಗುತ್ತಿದ್ದು, ಭೋಜನ ಕೊಠಡಿ ಹಾಗೂ ಸಿಬ್ಬಂದಿ ಕೊಠಡಿ ನಿರ್ಮಿಸಲು ಉದ್ದೇಶಿಸಿದ್ದಾರೆ. ಒಂದು ವರ್ಷದ ಮಟ್ಟಿಗೆ ದಾನಿಯೇ ನಿರ್ವಹಣೆ ಮಾಡಲಿದ್ದಾರೆ.

ಠಕ್ಕರ್ ಕುಟುಂಬ ಬೆಂಗಳೂರು ಸಮೀಪದ ಚಿಕ್ಕಜಾಲದಲ್ಲಿ ಅಕ್ಷಯಪಾತ್ರೆ ಯೋಜನೆಯ ಅಡಿ 35 ಸಾವಿರ ಮಕ್ಕಳಿಗೆ ನಿತ್ಯ ಊಟದ ವ್ಯವಸ್ಥೆಯನ್ನು ಕೂಡ ಮಾಡಿದೆ.

ಶಿಥಿಲಗೊಂಡಿದ್ದ ತರಗತಿ ಕೊಠಡಿಗಳನ್ನು ನೆಲಸಮಗೊಳಿಸಿ ಹೊಸದಾಗಿ ನಿರ್ಮಿಸಲಾಗಿದೆ. ಎಲ್‌ಕೆಜಿಯಿಂದ 8ನೇ ತರಗತಿಯಲ್ಲಿ ಕನ್ನಡ, ಇಂಗ್ಲಿಷ್ ಮಾಧ್ಯಮದಲ್ಲಿ 800 ಮಕ್ಕಳು ಓದುತ್ತಿದ್ದಾರೆ. ಪ್ರವೇಶಾತಿಗೆ ಹೆಚ್ಚಿನ ಬೇಡಿಕೆ ಇದೆ. ಇಲ್ಲಿ ದ್ವಿತೀಯ ಪಿಯುವರೆಗೂ ತರಗತಿ ಇವೆ. ಗ್ರಾಮಾಂತರ ಪ್ರದೇಶದಲ್ಲಿ ಇಷ್ಟು ಸೌಲಭ್ಯ ಸಿಕ್ಕಿರುವುದಕ್ಕೆ ಮಕ್ಕಳು, ಪೋಷಕರು, ಶಿಕ್ಷಕರಿಗೆ ಸಂತಸವಾಗಿದೆ.

‘ದಾನಿ ಜನಾರ್ದನ್ ಠಕ್ಕರ್ ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ (ಎನ್‌ಐಇ) ಕಾಲೇಜಿನಿಂದ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದು ಸದ್ಯ ಅಮೆರಿಕದಲ್ಲಿ ನೆಲಸಿದ್ದಾರೆ. ಅಲ್ಲಿಯೇ ಉನ್ನತ ವ್ಯಾಸಂಗ ಮಾಡಿ ಉದ್ಯಮ ನಡೆಸುತ್ತಿದ್ದಾರೆ. ಅವರಿಗೆ ಶಿಕ್ಷಣದ ಮೇಲೆ ತುಂಬಾ ಆಸಕ್ತಿ ಇದ್ದು ಪತ್ನಿ ಲಿಂಡಾ ಠಕ್ಕರ್ ಜೊತೆಗೂಡಿ ಕಲಿಕಾ ಗುಣಮಟ್ಟ ಸುಧಾರಣೆಗೆ ಸರ್ಕಾರಿ ಶಾಲೆಗಳಿಗೆ ಸೌಲಭ್ಯ ಕಲ್ಪಿಸುತ್ತಿದ್ದಾರೆ. ಅವರು ಈ ಹಿಂದೆ ಮಾಸ್ತಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದರು’ ಎಂದು ಒಸಾಟ್ ಸಂಸ್ಥೆ ನಿರ್ದೇಶಕ ಬಾಲಕೃಷ್ಣ ರಾವ್ ‘ಪ್ರಜಾವಾಣಿ’ಗೆ ತಿಳಿಸಿದರು.

ಒಸಾಟ್ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ಟ್ರಸ್ಟಿ ವಾದಿರಾಜ್ ಭಟ್, ಬಾಲಕೃಷ್ಣ ರಾವ್ ಹಾಗೂ ಯೋಜನಾ ಚಾಂಪಿಯನ್ ವೀರಣ್ಣ ಗೌಡ ನೇತೃತ್ವದಲ್ಲಿ ಮರುನಿರ್ಮಾಣ ನಡೆದಿದೆ. ಇದೇ ಸಂಸ್ಥೆ ಹಿಂದೆ ಮುಳಬಾಗಿಲಿನ ಡಿವಿಜಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ ನವೀಕರಣಗೊಳಿಸಿತ್ತು.

ಮಾಸ್ತಿಯಲ್ಲಿ ಮರು ನಿರ್ಮಾಣಗೊಂಡಿರುವ ಕರ್ನಾಟಕ ಪಬ್ಲಿಕ್ ಶಾಲೆ

ಒಸಾಟ್ ನೇತೃತ್ವದಲ್ಲಿ ಅಭಿವೃದ್ಧಿ

ಬೆಂಗಳೂರಿನ ಒಸಾಟ್ ಸಂಸ್ಥೆಯನ್ನು 2003ರಲ್ಲಿ ಅಮೆರಿಕದಲ್ಲಿ ಅನಿವಾಸಿ ಭಾರತೀಯರು ಸ್ಥಾಪಿಸಿದರು.

ಈ ಮೂಲಕ ಸಂಸ್ಥಾಪಕ ವಾದಿರಾಜ್ ಭಟ್, ಸಮಾನ ಮನಸ್ಕ ಸ್ನೇಹಿತರು ದಾನಿಗಳ ನೆರವಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ಕಟ್ಟಡಗಳನ್ನು ಮೂಲಸೌಕರ್ಯದೊಂದಿಗೆ ನಿರ್ಮಿಸಲು ಆದ್ಯತೆ ನೀಡುತ್ತಿದ್ದಾರೆ.

ಹಳೆಯ, ದುಸ್ಥಿತಿ ಆಧಾರದಲ್ಲಿ ಸಂಸ್ಥೆಯ ಸ್ವಯಂ ಸೇವಕರು ಮೂಲಸೌಕರ್ಯ ಅಗತ್ಯವಿರುವ ಶಾಲೆಗಳನ್ನು ಆಯ್ಕೆಮಾಡುತ್ತಾರೆ. ಈವರೆಗೆ 100ಕ್ಕೂ ಅಧಿಕ ಶಾಲಾ ಕಟ್ಟಡಗಳನ್ನು ವಿವಿಧ ಜಿಲ್ಲೆಗಳಲ್ಲಿ ನಿರ್ಮಿಸಿರುವ ಹೆಗ್ಗಳಿಕೆ ಸಂಸ್ಥೆಯದ್ದಾಗಿದೆ.

> ಶಾಲೆಯ ಕೆಲ ಕೊಠಡಿಗಳನ್ನು ಮರು ನಿರ್ಮಿಸಲಾಗಿದೆ. ಕೊಠಡಿ ಕೊರತೆ ನಿವಾರಿಸಿದೆ. ದಾನಿ ಜನಾರ್ದನ್ ಠಕ್ಕರ್ ಅವರು ₹ 8 ಕೋಟಿ ನೀಡಿದ್ದರು
> **ಬಾಲಕೃಷ್ಣ ರಾವ್,** ಒಸಾಟ್ ನಿರ್ದೇಶಕ

> ಗ್ರಾಮೀಣ ಮಕ್ಕಳಿಗೆ ಹೈಟೆಕ್ ಸೌಲಭ್ಯದ ಶಾಲೆಯಲ್ಲಿ ಕಲಿಯುವ ಸೌಲಭ್ಯ ಸಿಕ್ಕಿದೆ. ಮಾಸ್ತಿಗೆ ಈ ಶಾಲೆ ಕಿರೀಟಪ್ರಾಯವಾಗಲಿದೆ.
> **ವೆಂಕಟಪ್ಪ,** ಉಪ ಪ್ರಾಂಶುಪಾಲ, ಕರ್ನಾಟಕ ಪಬ್ಲಿಕ್ ಶಾಲೆ, ಮಾಸ್ತಿ

ಸುದ್ದಿ 2 ನಿಮಿಷ

‘ಗಡಿಗಳೇ ಕಾಣವು... ಭೂಮಿಯೇ ನಮ್ಮೆಲ್ಲರ ಮನೆ...’

ನವದೆಹಲಿ(ಪಿಟಿಐ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಗಗನಯಾನಿ ಶುಭಾಂಶು ಶುಕ್ಲಾ ಅವರು, ಅಂತರಿಕ್ಷದಿಂದ ಭೂಮಿ ಕಾಣಿಸುವ ಬಗೆ ಕುರಿತು ನೀಡಿದ ಹೇಳಿಕೆಯು ಈಗ ಎನ್‌ಸಿಇಆರ್‌ಟಿಯ ಹೊಸ ಪಠ್ಯಪುಸ್ತಕದಲ್ಲಿ ಸ್ಥಾನ ಪಡೆದಿದೆ.

ಐಎಸ್‌ಎಸ್ ತಲುಪಿದ ನಂತರ, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಸಂಭಾಷಣೆ ನಡೆಸಿದ್ದರು. ಈ ವೇಳೆ ಅವರು, ಭೂಮಿ ಕುರಿತಂತೆ ತಮ್ಮ ಅನಿಸಿಕೆ ಹಂಚಿಕೊಂಡಿದ್ದರು.

‘ಭೂಮಿ ಒಂದು ಪರಿಪೂರ್ಣ ಗೋಳ. ಅಂತರಿಕ್ಷದಿಂದ ನೋಡಿದಾಗ ಭೂಮಿಯಲ್ಲಿರುವ ಗಡಿಗಳು ಗೋಚರಿಸುವುದಿಲ್ಲ. ಬಾಹ್ಯಾಕಾಶದಿಂದ ಭೂಮಿಯನ್ನು ನೋಡಿದ ತಕ್ಷಣ ನನ್ನ ಮನಸಿನಲ್ಲಿ ಮೂಡಿದ ಭಾವನೆ ಇದು’ ಎಂದು ಶುಭಾಂಶು ಶುಕ್ಲಾ ಹೇಳಿದ್ದರು.



‘ಯಾವ ಗಡಿಯೂ ಇಲ್ಲ, ರಾಜ್ಯಗಳು ಹಾಗೂ ದೇಶಗಳೂ ಇಲ್ಲ. ನಾವೆಲ್ಲ ಮಾನವಕುಲದ ಭಾಗವೇ ಆಗಿದ್ದೇವೆ. ಭೂಮಿಯು ನಮ್ಮ ಏಕೈಕ ಮನೆಯಾಗಿದ್ದು, ನಾವೆಲ್ಲ ಇಲ್ಲಿ ಜೀವಿಸುತ್ತಿದ್ದೇವೆ’ ಎಂದೂ ಶುಕ್ಲಾ ಹೇಳಿದ್ದರು.

ಎನ್‌ಸಿಇಆರ್‌ಟಿ ಪ್ರಕಟಿಸಿರುವ 5ನೇ ತರಗತಿಯ ಪರಿಸರ ಅಧ್ಯಯನ (ಅವರ್ ವಂಡರಸ್ ವರ್ಲ್ಡ್) ಪಠ್ಯಪುಸ್ತಕದಲ್ಲಿನ ‘ಅರ್ಥ್, ಅವರ್ ಶೇರ್ಡ್ ಹೋಮ್’ ಎಂಬ ಅಧ್ಯಾಯದಲ್ಲಿ ಶುಕ್ಲಾ ಅವರ ಈ ಅಭಿಪ್ರಾಯವನ್ನು ಅಳವಡಿಸಲಾಗಿದೆ.

ಸೈಬರ್ ವಂಚನೆ: ₹7.88 ಕೋಟಿ ಕಳೆದುಕೊಂಡ ಮಹಿಳೆ

ಮುಂಬೈ (ಪಿಟಿಐ): ಷೇರುಪೇಟೆಯಲ್ಲಿ ಹಣ ತೊಡಗಿಸಿದರೆ, ಅಲ್ಪಾವಧಿಯಲ್ಲಿ ದುಪ್ಪಟ್ಟು ಲಾಭ ಸಿಗುತ್ತದೆ ಎಂಬ ಸೈಬರ್ ವಂಚಕರ ಮಾತಿಗೆ ಮರುಳಾಗಿ ಮುಂಬೈನ 62 ವರ್ಷದ ಗೃಹಿಣಿಯೊಬ್ಬರು ₹7.88 ಕೋಟಿ ಹಣ ಕಳೆದುಕೊಂಡಿದ್ದಾರೆ.

ಷೇರುಪೇಟೆ ವಹಿವಾಟು ನಿರ್ವಹಿಸುವ ಹೆಸರಾಂತ ಹಣಕಾಸು ಸಂಸ್ಥೆಯೊಂದರ ಪ್ರತಿನಿಧಿಗಳು ಎಂಬ ಹೆಸರಿನಲ್ಲಿ ವಂಚಕರು ವಾಟ್ಸ್‌ಆ್ಯಪ್ ಮೂಲಕ ಮಹಿಳೆಗೆ ಲಿಂಕ್ ಕಳುಹಿಸಿದ್ದರು. ಮಹಿಳೆ ಹೂಡಿಕೆ ಬಗ್ಗೆ ಹೆಚ್ಚಿನ ಮಾಹಿತಿ ಕೋರಿದಾಗ, ಅವರ ಮೊಬೈಲ್ ಸಂಖ್ಯೆಯನ್ನು ವಾಟ್ಸ್‌ಆ್ಯಪ್ ಗ್ರೂಪ್ ಒಂದಕ್ಕೆ ಸೇರಿಸಲಾಗಿತ್ತು.

‘ಕಲ್ಯಾಣ’, ಕರಾವಳಿಯಲ್ಲಿ ಮಳೆ ಬಿರುಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ, ಕರಾವಳಿ ಜಿಲ್ಲೆಗಳು ಸೇರಿ ರಾಜ್ಯದ ವಿವಿಧೆಡೆ ಮಳೆ ಮುಂದುವರಿದಿದೆ. ಬೀದರ್ ಜಿಲ್ಲೆಯಲ್ಲಿ ಎರಡು ಸೇತುವೆಗಳಿಗೆ ಹಾನಿಯಾಗಿದೆ. ಬಸವ ಕಲ್ಯಾಣದಲ್ಲಿ ಕಳೆದ 24 ಗಂಟೆಗಳಲ್ಲಿ ಗರಿಷ್ಠ 11 ಸೆಂ.ಮೀ ಮಳೆಯಾಗಿದೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಸೋಮವಾರ ರಾತ್ರಿಯಿಡೀ ಭಾರಿ ಪ್ರಮಾಣದಲ್ಲಿ ಮಳೆ ಸುರಿದಿದೆ.

ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಕೋಹಿನೂರ್ ವ್ಯಾಪ್ತಿಯಲ್ಲಿ 250 ಎಕರೆ ಜಮೀನಿನಲ್ಲಿ ಬೆಳೆ ಮಳೆಗೆ ಕೊಚ್ಚಿಹೋಗಿದೆ. ಎರಡು ಸೇತುವೆಗಳಿಗೆ ಹಾನಿಯಾಗಿದೆ. ಬಸವಕಲ್ಯಾಣದಲ್ಲಿ 11 ಸೆಂ.ಮೀ ಮಳೆ ಸುರಿದಿದೆ. ಬೀದರ್ ನಗರ ಹಾಗೂ ಸುತ್ತಮುತ್ತ ಮಂಗಳವಾರ ಸಂಜೆ ಉತ್ತಮವಾಗಿ ಮಳೆ ಬಿದ್ದಿದೆ.

ಕಲಬುರಗಿ ನಗರವೂ ಸೇರಿದಂತೆ ಸೇಡಂ, ಚಿತ್ತಾಪುರ, ಚಿಂಚೋಳಿ, ಕಾಳಗಿ ಹಾಗೂ ಜೇವರ್ಗಿ ತಾಲ್ಲೂಕುಗಳಲ್ಲಿ ಸೋಮವಾರ ರಾತ್ರಿ ಉತ್ತಮವಾಗಿ ಮಳೆ ಸುರಿದಿದೆ.

ಕೊಪ್ಪಳ ಜಿಲ್ಲೆಯ ಕೊಪ್ಪಳ, ಗಂಗಾವತಿ, ಮುನಿರಾಬಾದ್ ಭಾಗದಲ್ಲಿ ಮಂಗಳವಾರ ಮಳೆಯಾಗಿದೆ. ಮಳೆ ಚುರುಕಾಗಿರುವುದರಿಂದ ಯೂರಿಯಾ ರಸಗೊಬ್ಬರಕ್ಕಾಗಿ ರೈತರು ಪರದಾಡು-ವಂತಾಗಿದೆ.

ರಾಯಚೂರು, ಸಿಂಧನೂರು, ದೇವದುರ್ಗದಲ್ಲಿ ಮಂಗಳವಾರ ಸಾಧಾರಣ ಮಳೆಯಾಗಿದೆ. ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಉತ್ತಮವಾಗಿ ಮಳೆ ಸುರಿದಿದೆ.

26ರವರೆಗೆ ಯಲ್ಲೊ ಅಲರ್ಟ್ (ಮಂಗಳೂರು ವರದಿ): ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಚ ತಗ್ಗಿದ್ದ ಮಳೆ ಮಂಗಳವಾರ ಮತ್ತೆ ಬಿರುಸುಗೊಂಡಿತು. ಇಡೀ ದಿನ ಎಡೆಬಿಡದೆ ಹದವಾದ ಮಳೆ ಸುರಿಯಿತು.

ಜು.26ರವರೆಗೆ ಜಿಲ್ಲೆಯಲ್ಲಿ ಯಲ್ಲೊ ಅಲರ್ಟ್ ಘೋಷಿಸಲಾಗಿದೆ. ನಾಡದೋಣಿ ಮೀನುಗಾರರು ಕಡಲಿಗೆ ಇಳಿಯಬಾರದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ನಿರಂತರ ಮಳೆ (ಮಡಿಕೇರಿ ವರದಿ): ನಗರದಲ್ಲಿ ಮಂಗಳವಾರ ದಿನ ವಿಡೀ ಮಳೆಯಾಗಿದೆ. ಮಡಿಕೇರಿ, ಪೊನ್ನಂಪೇಟೆ ತಾಲ್ಲೂಕಿನಲ್ಲಿ ಸರಾಸರಿ 4 ಸೆಂ.ಮೀ ಮಳೆಯಾಗಿದೆ.

ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಬಟಗೇರಾ ರಸ್ತೆಯಲ್ಲಿ ಸೇತುವೆ ಹಾನಿಗೊಂಡಿದೆ

ಚಿತ್ರದುರ್ಗ: ಕೃಷಿಕರಿಗೆ ಖುಷಿ

ಚಿತ್ರದುರ್ಗ: ನಗರ, ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಚಿಕ್ಕಜಾಜೂರು, ಚಳ್ಳಕೆರೆ ತಾಲ್ಲೂಕಿನ ತಳಕು ಭಾಗದಲ್ಲಿ ಉತ್ತಮ ಮಳೆಯಾಗಿದೆ. ಬಿತ್ತನೆಗೆ ಜಮೀನು ಹದ ಮಾಡಿದ್ದ ರೈತರಲ್ಲಿ ಸಂತಸ ಮೂಡಿದೆ.

ತಿಂಗಳಿಂದ ತುಂತುರು ಮಳೆಯಾಗುತ್ತಿದ್ದರೂ ಹದವಾದ ಮಳೆ ಬಿದ್ದಿರಲಿಲ್ಲ. ಶೇಂಗಾ, ಮೆಕ್ಕೆಜೋಳ ಬಿತ್ತನೆಗೆ ತಡವಾಗುತ್ತಿದೆ ಎಂದು ರೈತರು ಆತಂಕ ಗೊಂಡಿದ್ದರು. ಮಂಗಳವಾರ ಮಧ್ಯಾಹ್ನ 1 ಗಂಟೆ ಉತ್ತಮ ಮಳೆ ಸುರಿಯಿತು. ತಾಲ್ಲೂಕಿನ ಸಿರಿಗೆರೆ, ಭರಮಸಾಗರ ಭಾಗದಲ್ಲೂ ಮಳೆ ಬಿದ್ದಿದೆ.

‘ಒಂದು ವಾರ ಭಾರಿ ಮಳೆ ಸಾಧ್ಯತೆ’

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ಒಂದು ವಾರ ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಬುಧವಾರ ನಿರಂತರ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡಿನ ಬೀದರ್, ಕಲಬುರಗಿ, ಬಾಗಲಕೋಟೆ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಹೆಚ್ಚಿನ ಸ್ಥಳಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಯಲ್ಲಿ ನಿರಂತರ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಮತ್ತು ವಿಜಯನಗರ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಮುನ್ಸೂಚನೆ ನೀಡಿದೆ.

ದೆಹಲಿಯಲ್ಲಿ ಭೂಕಂಪನ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮಂಗಳವಾರ ಬೆಳಿಗ್ಗೆ ಭೂಕಂಪನವಾಗಿದ್ದು, ಯಾವುದೇ ಹಾನಿಯಾಗಿಲ್ಲ.

ಬೆಳಿಗ್ಗೆ 6 ಗಂಟೆಗೆ 3.2 ತೀವ್ರತೆಯ ಭೂಕಂಪನ ಸಂಭವಿಸಿದ್ದು, ಫರಿದಾಬಾದ್ ಕೇಂದ್ರಬಿಂದುವಾಗಿದೆ ಎಂದು ರಾಷ್ಟ್ರೀಯ ಭೂಕಂಪನವಿಜ್ಞಾನ ಕೇಂದ್ರ ತಿಳಿಸಿದೆ.

ವಿಷಪೂರಿತ ಪಲ್ಯ ಸೇವನೆ: ಸಾವು

ಒಂದನೇ ಪುಟದಿಂದ...

ಮೂವರಿಗೂ ಲಿಂಗಸುಗೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ರಾಯಚೂರು ರಿಮ್ಸ್‌ಗೆ ದಾಖಲಿಸಲಾಗಿದೆ. ರಮೇಶ ನಾಯಕ ಅವರು ಎರಡು ಎಕರೆ ಸ್ವಂತ ಜಮೀನಿನಲ್ಲಿ ಹತ್ತಿ ಬೆಳೆದಿದ್ದರು. ಅದರಲ್ಲಿಯೇ ಮನೆ ಬಳಕೆಗಾಗಿ ತರಕಾರಿ ಬೆಳೆದಿದ್ದರು.

ಕೀಟ ನಿಯಂತ್ರಣಕ್ಕಾಗಿ ಹತ್ತಿ ಗಿಡಗಳ ಕೆಳಗೆ ಕೀಟನಾಶಕ ಮಾತ್ರೆಗಳನ್ನು ಇಟ್ಟಿದ್ದರು. ಸೋಮವಾರ ಹೊಲದಿಂದ ಚವಳೆಕಾಯಿ ತಂದು ಪಲ್ಯ ತಯಾರಿಸಿ ರಾತ್ರಿ ತಿಂದಿದ್ದರು. ನಂತರ ವಾಂತಿ–ಭೇದಿ ಕಾಣಿಸಿಕೊಂಡಿದೆ. ಗ್ರಾಮಸ್ಥರು ಎಲ್ಲರನ್ನು ಚಿಕಿತ್ಸೆಗೆ ಲಿಂಗಸುಗೂರು ಆಸ್ಪತ್ರೆಗೆ ದಾಖಲಿಸಿದ್ದರು. ಕವಿತಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.55	14,511	10,732
ಹಾರಂಗಿ	2,859	2,856.86	3,436	4,900
ಕಬಿನಿ	2,284.00	2,283.63	11,746	12,000
ಹೇಮಾವತಿ	2,922	2,921.03	7,223	6,825
ಲಿಂಗನಮಕ್ಕಿ	1,819	1,804	13,136	5,068
ಸೂಪಾ (ಮೀ)	564	547.34	8,241.35	5,344.21
ಮಾಣಿ	595	587.88	1,480	791
ತುಂಗಭದ್ರಾ	1,633	1,625.88	36,539	39,457
ಮಲಪ್ರಭಾ	2,079.5	2,073	2,850	1,494
ಘಟಪ್ರಭಾ	2,175	2,169	5,731	5,731
ಭದ್ರಾ *	186	179.4	8,065	6,919
ಆಲಮಟ್ಟಿ (ಮೀ)	519.6	517.96	49,551	51,160
ನಾರಾಯಣಪುರ (ಮೀ)	492.25	491.73	25,000	19,855

* ನೆಲಮಟ್ಟದಿಂದ

ಶೀಘ್ರವೇ ಧರ್ಮಸ್ಥಳಕ್ಕೆ ಎಸ್‌ಐಟಿ: ಗೃಹಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಪ್ರಕರಣಗಳ ತನಿಖೆಗೆ ರಚಿಸಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಸದ್ಯದಲ್ಲೇ ಧರ್ಮಸ್ಥಳಕ್ಕೆ ತೆರಳಿ ತನಿಖೆ ಆರಂಭಿಸಲಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ತನಿಖೆಗೆ ಧರ್ಮಸ್ಥಳಕ್ಕೆ ಹೋಗುವಂತೆ ಎಸ್ ಐಟಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಈ ಬಗ್ಗೆ ಧರ್ಮಸ್ಥಳ ಪೊಲೀಸರಿಗೂ ಸೂಚನೆ ನೀಡಿದ್ದೇವೆ’ ಎಂದರು.

‘ಎಸ್‌ಐಟಿಯಿಂದ ಯಾವ ಅಧಿಕಾರಿಯೂ ಹಿಂದೆ ಸರಿದಿಲ್ಲ’ ಎಂದು ಪುನರುಚ್ಚರಿಸಿದ ಅವರು, ‘ಹೊರಗೆ ಉಳಿಯಲು ಬಯಸುವ ಅಧಿಕಾರಿಗಳು ನಮಗೆ ತಿಳಿಸಲಿ. ಆ ನಂತರ, ಈ ಬಗ್ಗೆ ನಾವು ನಿರ್ಧರಿಸುತ್ತೇವೆ’ ಎಂದರು.

ಬಿಜೆಪಿಯವರಿಂದ ಯಾಕೆ ಆಕ್ಷೇಪ?: ‘ಎಸ್‌ಐಟಿ ರಚನೆಗೆ ಬಿಜೆಪಿಯವರು ಯಾಕೆ ಆಕ್ಷೇಪ ವ್ಯಕ್ತಪಡಿಸಬೇಕು? ಅವರ ವಿರೋಧ ನೋಡಿದರೆ ಅವರ ಮನಸ್ಸಿನಲ್ಲಿ ಏನೊ ಇರಬಹುದು’ ಎಂದು ಹೇಳಿದರು.

ವಿಳಂಬ ಏಕೆಂದು ಗೊತ್ತಿಲ್ಲ?: ನಿಗಮ ಮಂಡಳಿ ನೇಮಕ ವಿಚಾರವಾಗಿ ಪ್ರತಿಕ್ರಿಯಿಸಿದ ಪರಮೇಶ್ವರ, ‘ನಿಗಮ ಮಂಡಳಿಗಳಿಗೆ ನೇಮಕಕ್ಕೆ ಸದಸ್ಯರ ಪಟ್ಟಿ ಕೊಡಲು 11 ಜನರ ಸಮಿತಿ ಮಾಡಿದ್ದರು. ಪಟ್ಟಿ ನೀಡಿ ಆರು ತಿಂಗಳಾಯಿತು. ಯಾಕೆ ವಿಳಂಬ ಆಗುತ್ತಿದೆ ಎನ್ನುವುದೂ ಗೊತ್ತಿಲ್ಲ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಮ್ಮ ಪಟ್ಟಿಯನ್ನು ಒಪ್ಪಿದ್ದಾರೆಯೇ ಎನ್ನುವುದೂ ಗೊತ್ತಿಲ್ಲ. ಮುಂದಿನ ತೀರ್ಮಾನ ಅವರಿಗೇ ಬಿಟ್ಟಿದ್ದು’ ಎಂದರು.

‘ಗೊಂದಲ ನಿವಾರಿಸಲು ಎಸ್‌ಐಟಿ ರಚನೆ’

ಹುಬ್ಬಳ್ಳಿ: ಧರ್ಮಸ್ಥಳ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ರಚನೆ ‘ರಾಜಕೀಯ ಪ್ರೇರಿತ’ ಎಂಬ ಬಿಜೆಪಿಯವರ ಹೇಳಿಕೆ ಖಂಡನೀಯ’ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ದಿನೇಶ ಗುಂಡೂರಾವ್

ಮಂಗಳವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಧರ್ಮಸ್ಥಳದಲ್ಲಿ ಶವಗಳನ್ನು ಹೂತು ಹಾಕಿರುವುದು ಎಷ್ಟು ನಿಜವೋ ಗೊತ್ತಿಲ್ಲ. ಈ ಕುರಿತ ಗೊಂದಲ ನಿವಾರಿಸಲು ಉತ್ತಮ ಅಧಿಕಾರಿಗಳಿರುವ ಎಸ್‌ಐಟಿ ರಚಿಸಲಾಗಿದೆ’ ಎಂದು ತಿಳಿಸಿದರು.

ವಿಷ ಪ್ರಾಶನ ಆರೋಪ, ದಾಖಲೆ ನೀಡಲಿ: ‘ಪಂಚಮಸಾಲಿ ಪೀಠದ ಸ್ವಾಮೀಜಿಗೆ ನೀಡುವ ಆಹಾರದಲ್ಲಿ ಯಾರು ವಿಷಪ್ರಾಶನ ಮಾಡಿದ್ದಾರೆ ಎಂಬುದನ್ನು ದಾಖಲೆ ಸಮೇತ ಶಾಸಕ ಅರವಿಂದ ಬೆಲ್ಲದ ಅವರು ಪೊಲೀಸರಿಗೆ ನೀಡಲಿ’ ಎಂದು ಸಚಿವರು ಹೇಳಿದರು.

‘ಎಸ್‌ಐಟಿ ಸಹಾಯವಾಣಿ ಸ್ಥಾಪಿಸಿ’

ಮಂಗಳೂರು: ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ತನಿಖೆಗೆ ರಚಿಸಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ದೂರು ಸಲ್ಲಿಸಲು ‘ಸಹಾಯವಾಣಿ’ ಸ್ಥಾಪಿಸಬೇಕು ಎಂದು ಸರ್ಕಾರವನ್ನು ವಕೀಲ ಎನ್. ಮಂಜುನಾಥ್ ಒತ್ತಾಯಿಸಿದ್ದಾರೆ.

‘ಮಗಳು ಅನನ್ಯಾ 2003ರಲ್ಲಿ ಧರ್ಮಸ್ಥಳ ದೇಗುಲಕ್ಕೆ ಹೋಗಿದ್ದಾಗ ನಾಪತ್ತೆಯಾಗಿದ್ದಳು’ ಎಂದು ದೂರು ಸಲ್ಲಿಸಿರುವ ಬೆಂಗಳೂರಿನ ಸುಜಾತಾ ಭಟ್ ಅವರಿಗೆ ಮಂಜುನಾಥ ಅವರು ಕಾನೂನು ಸಲಹೆಗಾರರಾಗಿದ್ದಾರೆ.

‘ದುರಂತಗಳ ಬಗ್ಗೆ ಎಸ್‌ಐಟಿಗೆ ದೂರು ನೀಡಲು ಕೆಲವರು ಮುಂದಾಗಿದ್ದಾರೆ. ಆದರೆ, ಸ್ಥಳೀಯ ಠಾಣೆಗೆ ನೀಡಲು ಹಿಂದೇಟು ಹಾಕುತ್ತಿದ್ದಾರೆ. ಅಲ್ಲದೆ, ದೂರು ಸ್ವೀಕರಿಸಲು ಎಸ್‌ಐಟಿ ಕಚೇರಿಯನ್ನು ‘ಪೊಲೀಸ್ ಠಾಣೆ’ ಎಂದು ಅಧಿಸೂಚನೆ ಹೊರಡಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಎಸ್‌ಐಟಿಗೆ ಅಧಿಕಾರಿಗಳ ನಿಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ರಾಜ್ಯ ಸರ್ಕಾರವು ರಚಿಸಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಅಧಿಕಾರಿಗಳನ್ನು ನಿಯೋಜನೆ ಮಾಡಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಆದೇಶಿಸಿದ್ದಾರೆ.

ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾ ನಿರ್ದೇಶಕ ಪ್ರಣವ ಮೊಹಾಂತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿ ಭಾನುವಾರ ಸರ್ಕಾರ ಆದೇಶ ಹೊರಡಿಸಿತ್ತು. ಈ ತಂಡದಲ್ಲಿ ನೇಮಕಾತಿ ವಿಭಾಗದ ಡಿಐಜಿ ಎಂ.ಎನ್.ಅನುಚೇತ್, ಸಿಎಆರ್ ಕೇಂದ್ರದ ಡಿಸಿಪಿ ಸೌಮ್ಯಲತಾ ಮತ್ತು ಆಂತರಿಕ ಭದ್ರತಾ ವಿಭಾಗದ ಎಸ್‌ಪಿ ಜಿತೇಂದ್ರ ಕುಮಾರ್ ದಯಾಮ ಅವರು ಸದಸ್ಯರಾಗಿದ್ದಾರೆ.

ತಂಡದಲ್ಲಿರುವ ಅಧಿಕಾರಿಗಳು, ಸಿಬ್ಬಂದಿ: ಮಂಗಳೂರು ಡಿಸಿಆರ್‌ಇ ಎಸ್‌ಪಿ ಸಿ.ಎ.ಸೈಮನ್, ಉಡುಪಿ ಸಿಎಎನ್ ಠಾಣೆಯ ಡಿವೈಎಸ್ಪಿ ಎ.ಸಿ. ಲೋಕೇಶ್, ದಕ್ಷಿಣ ಕನ್ನಡ ಸಿಇಎನ್ ಠಾಣೆಯ ಡಿವೈಎಸ್‌ಪಿ ಮಂಜುನಾಥ್, ಸಿಎಸ್‌ಪಿ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥ್, ಸಿಎಸ್‌ಪಿ ಇನ್‌ಸ್ಪೆಕ್ಟರ್ ಇ.ಸಿ.ಸಂಪತ್, ಸಿಎಸ್‌ಪಿ ಪೊಲೀಸ್ ಇನ್‌ಸ್ಪೆಕ್ಟರ್ ಕೆ.ಕುಸುಮಧರ್, ಉತ್ತರ ಕನ್ನಡದ ಶಿರಸಿ ಗ್ರಾಮಾಂತರ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥಗೌಡ, ಉಡುಪಿ, ಬೈಂದೂರು ಇನ್‌ಸ್ಪೆಕ್ಟರ್ ಪಿ.ಡಿ.ಸವಿತ್ರ ತೇಜ್, ಸಿಎಸ್‌ಪಿ ಸಬ್ ಇನ್‌ಸ್ಪೆಕ್ಟರ್ ಕೋಕಿಲ ನಾಯಕ್, ಸಿಎಸ್‌ಪಿ ಸಬ್ ಇನ್‌ಸ್ಪೆಕ್ಟರ್ ಶಿವಶಂಕರ್, ಉತ್ತರ ಕನ್ನಡ, ಶಿರಸಿ ಎನ್‌ಎಂ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ರಾಜ್‌ಕುಮಾರ್ ಉಕ್ಕಲ್ಲಿ, ಉತ್ತರ ಕನ್ನಡ ಅಂಕೋಲ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಆರ್.ಸುಹಾಸ್, ಉತ್ತರ ಕನ್ನಡ ಮುಂಡಗೋಡ ಸಬ್ ಇನ್‌ಸ್ಪೆಕ್ಟರ್ ವಿನೋದ್ ಎಸ್. ಕಾಳಪ್ಪನವರ್, ಮಂಗಳೂರು ಮೆಸ್ಕಾಂ ಠಾಣೆಯ ಪಿಎಸ್‌ಐ ಜೆ.ಗುಣಪಾಲ್, ಉಡುಪಿ ನಗರ ಪೊಲೀಸ್ ಠಾಣೆಯ ಎಎಸ್‌ಐ ಶುಭಾಷ್ ಕಾಮತ್, ಉಡುಪಿ ಕೌಪ್ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಹರೀಶ್‌ಬಾಬು, ಉಡುಪಿ ಮಲ್ಪೆ ವೃತ್ತದ ಹೆಡ್ ಕಾನ್‌ಸ್ಟೆಬಲ್ ಪ್ರಕಾಶ್, ಉಡುಪಿ ಕುಂದಾಪುರ ನಗರ ಠಾಣೆಯ ನಾಗರಾಜ್ ಮತ್ತು ಚಿಕ್ಕಮಗಳೂರಿನ ಎಎಂಎಸ್ ಹೆಡ್ ಕಾನ್‌ಸ್ಟೆಬಲ್ ದೇವರಾಜ್ ಅವರನ್ನು ಎಸ್‌ಐಟಿಗೆ ನಿಯೋಜಿಸಿ ಆದೇಶಿಸಲಾಗಿದೆ.

ಎಸ್‌ಐಟಿಗೆ ಪೂರ್ಣ ಪ್ರಮಾಣದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಈ ತಂಡವು ಶೀಘ್ರದಲ್ಲೇ ದಕ್ಷಿಣ ಕನ್ನಡ ಜಿಲ್ಲೆಗೆ ತೆರಳಿ ತನಿಖೆ ನಡೆಸಲಿದೆ. ಧರ್ಮಸ್ಥಳ ಅಥವಾ ಉಜಿರೆ ಸಮೀಪದಲ್ಲಿ ಎಸ್‌ಐಟಿ ಕಾರ್ಯ ಚಟುವಟಿಕೆಗೆ ಕಚೇರಿ ತೆರೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಮುಂಬೈ ರೈಲಿನಲ್ಲಿ ಸರಣಿ ಬಾಂಬ್ ಸ್ಫೋಟ ಪ್ರಕರಣ

ಬಾಂಬೆ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: 2006ರಲ್ಲಿ ಮುಂಬೈ ಲೋಕಲ್ ರೈಲಿನಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದ ಎಲ್ಲ 12 ಅಪರಾಧಿ-ಗಳನ್ನು ಖುಲಾಸೆ ಗೊಳಿಸಿ ಬಾಂಬೆ ಹೈಕೋರ್ಟ್ ನೀಡಿರುವ ತೀರ್ಪು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಮೇಲ್ಮನವಿ ಸಲ್ಲಿಸಿದೆ.



‘ಮೇಲ್ಮನವಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು. ಈ ಸಂಬಂಧ ರಜಾಕಾಲದ ವಿಶೇಷ ಮೇಲ್ಮನವಿ ಕೂಡ ಸಿದ್ಧವಾಗಿದ್ದು, ಇದನ್ನು ಕೂಡಲೇ ವಿಚಾರಣೆ ಪಟ್ಟಿಗೆ ಸೇರಿಸಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಪೀಠಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, ಅರ್ಜಿಯನ್ನು ಗುರುವಾರದ ವಿಚಾರಣೆ ಪಟ್ಟಿಗೆ ಸೇರಿಸಲು ಸಮ್ಮತಿಸಿತು.

‘ನಾನು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಓದಿರುವೆ. ಹೈಕೋರ್ಟ್ ತೀರ್ಪಿನ ಬೆನ್ನಲ್ಲೇ 8 ಆರೋಪಿಗಳನ್ನು ಈಗಾಗಲೇ ಜೈಲಿನಿಂದ ಬಿಡುಗಡೆ ಮಾಡಲಾಗಿದೆ’ ಎಂದು ಸಿಜೆಐ ಗವಾಯಿ ಹೇಳಿದರು.

ಸಾಕ್ಷ್ಯಾಧಾರಗಳ ಕೊರತೆ ಕಾರಣ ಪ್ರಕರಣದ ಎಲ್ಲ ಅಪರಾಧಿಗಳನ್ನು ದೋಷಮುಕ್ತಗೊಳಿಸಿ ಬಾಂಬೆ ಹೈಕೋರ್ಟ್ ಜುಲೈ 21ರಂದು ತೀರ್ಪು ನೀಡಿತ್ತು.

ಎಸ್‌ಐಟಿಯಿಂದ ಮರು ತನಿಖೆ

2006ರ ಜುಲೈ 11ರಂದು ಮುಂಬೈನ ಸ್ಥಳೀಯ ರೈಲುಗಳನ್ನು ಗುರಿಯಾಗಿಸಿ 7 ಕಡೆ ಸ್ಫೋಟ ನಡೆದಿತ್ತು. ಈ ದಾಳಿಯಲ್ಲಿ 180ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು. ಹಲವರು ಗಾಯಗೊಂಡಿದ್ದರು. ಪ್ರಕರಣಕ್ಕೆ ಸಂಬಂಧಿಸಿ ಅಬ್ದುಲ್ ವಾಹಿದ್ ಶೇಖ್ ಸೇರಿ 13 ಮಂದಿಯನ್ನು ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ಪಡೆ (ಎಟಿಎಸ್) ಬಂಧಿಸಿತ್ತು.

9 ವರ್ಷಗಳ ಬಳಿಕ, ವಿಚಾರಣಾ ನ್ಯಾಯಾಲಯ ಶೇಖ್ ಅವರನ್ನು ಖುಲಾಸೆಗೊಳಿಸಿತ್ತು. ಉಳಿದ 12 ಮಂದಿ ಆರೋಪಿಗಳನ್ನು ದೋಷಮುಕ್ತಗೊಳಿಸಿ ಬಾಂಬೆ ಹೈಕೋರ್ಟ್ ಜುಲೈ 21ರಂದು ತೀರ್ಪು ನೀಡಿತ್ತು. ಈ ತೀರ್ಪಿನ ಬೆನ್ನಲ್ಲೇ, ಈ ಪ್ರಕರಣ ಬಗ್ಗೆ ಎಸ್‌ಐಟಿಯಿಂದ ಮರು ತನಿಖೆ ನಡೆಸಬೇಕು. ಪ್ರಕರಣದ ಹಿಂದಿನ ನಿಜವಾದ ಅಪರಾಧಿಗಳಿಗೆ ಶಿಕ್ಷೆಯಾಗಬೇಕು ಎಂದು ಶೇಖ್ ಒತ್ತಾಯಿಸಿದ್ದಾರೆ.

‘ಆರೋಪವನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ಸಂಪೂರ್ಣವಾಗಿ ವಿಫಲವಾಗಿದೆ’ ಎಂದು ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಗಳಾದ ಅನಿಲ್ ಕಿಲೋರ್, ಶ್ಯಾಮ್ ಚಾಂದಕ್ ನೇತೃತ್ವದ ನ್ಯಾಯಪೀಠ ತೀರ್ಪಿನಲ್ಲಿ ಹೇಳಿದೆ. 12 ಮಂದಿಗೆ ವಿಧಿಸಿದ್ದ ಶಿಕ್ಷೆಯನ್ನು ರದ್ದುಗೊಳಿಸಿದ ಜತೆಯಲ್ಲೇ, ಈ ಆರೋಪಿಗಳಿಗೆ ‘ಬಲವಂತವಾಗಿ ತಪ್ಪೊಪ್ಪಿಗೆ ಹೇಳಿಕೆ ನೀಡುವಂತೆ’ ಚಿತ್ರಹಿಂಸೆ ನೀಡಲಾಗಿತ್ತು’ ಎಂಬ ಅಂಶವನ್ನೂ ಪೀಠ ತೀರ್ಪಿನಲ್ಲಿ ಉಲ್ಲೇಖಿಸಿದೆ.

‘ಹಾದಿ ತಪ್ಪಿದ ತನಿಖೆಗಾಗಿ ‘ಎಟಿಎಸ್’ ಕ್ಷಮೆ-ಯಾಚಿಸಬೇಕು. 19 ವರ್ಷ ಜೈಲು ಶಿಕ್ಷೆ ಅನುಭವಿಸಿ ಖುಲಾಸೆಗೊಂಡಿರುವ 12 ಮಂದಿ ನಿರಾಪರಾಧಿಗಳಿಗೆ ಸರ್ಕಾರಿ ಉದ್ಯೋಗ, ಮನೆ ಸೇರಿ ₹19 ಕೋಟಿ ಪರಿಹಾರ ಕಲ್ಪಿಸಬೇಕು’ ಎಂದು ವಾಹಿದ್ ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ 42 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆ

ತೆಂಗಿಗೆ ಕಪ್ಪುತಲೆ ಹುಳು: ಸಮೀಕ್ಷೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸುಮಾರು 42 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಗೆ ಕಪ್ಪುತಲೆ ಹುಳುವಿನಿಂದ ಹಾನಿಯಾಗಿದ್ದು, ಈ ಸಮಸ್ಯೆಯ ಕುರಿತು ಖಾಸಗಿ ಸಂಸ್ಥೆಗಳಿಂದ ಸಮೀಕ್ಷೆ ನಡೆಸಲು ತೋಟಗಾರಿಕಾ ಇಲಾಖೆ ನಿರ್ಧರಿಸಿದೆ. ಇದಕ್ಕೆ ₹25 ಲಕ್ಷ ಅನುದಾನ ನಿಗದಿಪಡಿ-ಸಲಾಗಿದೆ.

ಸಮೀಕ್ಷೆಗಾಗಿ ಪ್ರತ್ಯೇಕವಾಗಿ ಬೆಳೆ ಸಮೀಕ್ಷೆ ತಂತ್ರಾಂಶ ಅಭಿವೃದ್ಧಿಪಡಿಸಲು, ಸಮೀಕ್ಷಾ ವರದಿ ಬಳಿಕ ಸಸ್ಯ ಸಂರಕ್ಷಣಾ ಕ್ರಮಗಳ ಶಿಫಾರಸು ಸೇರಿದಂತೆ ಸೂಕ್ತ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಲು ಇಲಾಖೆ ಮುಂದಾಗಿದೆ.

ಕಪ್ಪುತಲೆ ಹುಳು ಬಾಧೆ ನಿಯಂತ್ರಣದ ತುರ್ತು ಅಗತ್ಯದ ಬಗ್ಗೆ ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಈ ಮನವಿಗೆ ಸ್ಪಂದಿಸಿದ್ದ ಮುಖ್ಯಮಂತ್ರಿ, ತಜ್ಞರ ವರದಿ ಪಡೆದು ಪ್ರಸ್ತಾವ ಸಲ್ಲಿಸುವಂತೆ ತೋಟಗಾರಿಕಾ ಇಲಾಖೆಗೆ ಸೂಚಿಸಿದ್ದರು.

> ತೆಂಗಿಗೆ ಬಾಧಿಸಿರುವ ಕಪ್ಪುತಲೆ ಹುಳು ಬಾಧೆಯ ಕುರಿತು ತೋಟಗಾರಿಕಾ ಇಲಾಖೆ ತ್ವರಿತ ಗತಿಯಲ್ಲಿ ಸಮೀಕ್ಷೆ ನಡೆಸಿ, ನಿಯಂತ್ರಣಕ್ಕೆ ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು
> **ದಿನೇಶ್ ಗೂಳಿಗೌಡ,** ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ

ಈ ಕುರಿತಂತೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ತೋಟಗಾರಿಕೆ ನಿರ್ದೇಶನಾಲಯವು ಇಲಾಖೆಯ ಕಾರ್ಯದರ್ಶಿಗೆ ಪತ್ರದ ಮೂಲಕ ಮಾಹಿತಿ ನೀಡಿದೆ.

ರಾಜ್ಯದಲ್ಲಿ 27.41 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ವಾರ್ಷಿಕ 223.18 ಲಕ್ಷ ಟನ್ ಉತ್ಪಾದನೆಯಾಗಿದೆ. ಈ ಪೈಕಿ, ತೋಟದ ಬೆಳೆಗಳು ಶೇ 53.26ರಷ್ಟು ವಿಸ್ತೀರ್ಣವನ್ನು ಹೊಂದಿವೆ. ತೆಂಗನ್ನು 7.04 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, 34.79 ಲಕ್ಷ ಟನ್ ಉತ್ಪಾದನೆಯಾಗಿದೆ. ತುಮಕೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ದಾವಣಗೆರೆ ಜಿಲ್ಲೆಗಳಲ್ಲಿ ತೆಂಗನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಅಧಿಕ ಉಷ್ಣಾಂಶ ಇದ್ದುದರಿಂದ ತೆಂಗಿನಲ್ಲಿ ಕಪ್ಪುತಲೆ ಹುಳುವಿನ ಬಾಧೆ ಹೆಚ್ಚಾಗಿ ಕಂಡುಬಂದಿದ್ದು, ಸುಮಾರು 42 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈ ಬಾಧೆಯಿಂದ ಹಾನಿಯಾಗಿರುವುದಾಗಿ ಅಂದಾಜಿಸಿದೆ.

ತೆಂಗಿನ ಕಪ್ಪುತಲೆ ಹುಳು ಬಾಧೆಯ ಕುರಿತು ವೈಜ್ಞಾನಿಕ ಸಮೀಕ್ಷೆ ಕೈಗೊಂಡು ಅದರ ಆಧಾರದಲ್ಲಿ ಸಸ್ಯ ಸಂರಕ್ಷಣೆ ಕ್ರಮಗಳನ್ನು ಅನುಸರಿಸುವ ಬಗ್ಗೆ 2025-26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಸಮೀಕ್ಷೆ ಪೂರ್ಣಗೊಂಡ ಬಳಿಕ ಇಲಾಖೆ ಅಧಿಕಾರಿಗಳು ವರದಿಯನ್ನು ಪರಿಶೀಲಿಸಿ, ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜಿಲ್ಲಾ ಸಮಿತಿ ಸಭೆಯಲ್ಲಿ ಚರ್ಚಿಸಲಾಗುವುದು. ನಂತರ, ಕಪ್ಪುತಲೆ ಹುಳು ಬಾಧೆಯ ನಿಯಂತ್ರಣಕ್ಕಾಗಿ ಕ್ರಮಗಳ ಕುರಿತ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ತೋಟಗಾರಿಕೆ ಇಲಾಖೆ ತಿಳಿಸಿದೆ.

‘ಕಾಡಿಗೆ ಜಾನುವಾರು ಬಿಡುವಂತಿಲ್ಲ’

ಒಂದನೇ ಪುಟದಿಂದ...

ಅರಣ್ಯ ಸಂವರ್ಧನೆ ಯಾಗದಿದ್ದರೆ ಅದು ಆ ಅರಣ್ಯದಲ್ಲಿ ಹರಿಯುವ ನದಿಗಳ ಮೇಲೂ ಪರಿಣಾಮ ಬೀರುತ್ತದೆ. ಇದರಿಂದ ವನ್ಯಜೀವಿ–ಮಾನವ ಸಂಘರ್ಷ ಹೆಚ್ಚಳವಾಗುತ್ತದೆ. ಕಾಡಿನೊಳಗೆ ಹೋಗುವ ದನಗಾಹಿಗಳು ವನ್ಯಜೀವಿ ದಾಳಿಯಿಂದ ಮೃತಪಟ್ಟರೆ ಪರಿಹಾರ ನೀಡಲೂ ನಿಯಮದಲ್ಲಿ ಅವಕಾಶವಿಲ್ಲ. ಆದ್ದರಿಂದ ಕೂಡಲೇ ಅಭಯಾರಣ್ಯಗಳಲ್ಲಿ ಮೇಕೆ, ಕುರಿ, ದನಕರುಗಳನ್ನು ಮೇಯಿಸುವುದನ್ನು ನಿಷೇಧಿಸಬೇಕು ಎಂದು ವನ್ಯಜೀವಿ ಪ್ರೇಮಿಗಳು ಮತ್ತು ಪರಿಸರವಾದಿಗಳು ಅಭಿಪ್ರಾಯಪಟ್ಟಿದ್ದಾರೆ. ಆದ ಕಾರಣ ಈ ಬಗ್ಗೆ ಪರಿಶೀಲಿಸಿ ಕಾನೂನು ರೀತ್ಯ ಕ್ರಮವಹಿಸಬೇಕು ಎಂದು ಅವರು ಸೂಚಿಸಿದ್ದಾರೆ.

‘ಭೂ ಕುಸಿತ, ಕಡಲು ಕೊರೆತ ತಡೆಗೆ ₹800 ಕೋಟಿ’

ಪ್ರಜಾವಾಣಿ ವಾರ್ತೆ

ಕಾರವಾರ: ‘ಭೂಕುಸಿತ, ಕಡಲು ಕೊರೆತ ಸಮಸ್ಯೆ ಪೀಡಿತ ಜಿಲ್ಲೆಗಳಲ್ಲಿ ತುರ್ತು ಕಾಮಗಾರಿಗೆ ₹800 ಕೋಟಿ ಅನುದಾನಕ್ಕೆ ಅನುಮೋದನೆ ನೀಡಲಾಗುವುದು’ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಭೂಕುಸಿತದ ಸ್ಥಳಗಳನ್ನು ಮಂಗಳವಾರ ಪರಿಶೀಲಿಸಿದ ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

‘6 ಜಿಲ್ಲೆಗಳಲ್ಲಿ ಭೂಕುಸಿತ ಸಮಸ್ಯೆ ತೀವ್ರವಾಗಿದೆ. ತಡೆಗೋಡೆ ನಿರ್ಮಿಸುವ ಕೆಲಸ ಆಗಬೇಕಿದೆ. ಇದಕ್ಕಾಗಿ ₹500 ಕೋಟಿ ಮೀಸಲಿಡಲಾಗುವುದು. ಕರಾವಳಿಯ ಮೂರು ಜಿಲ್ಲೆಗಳಲ್ಲಿ ಕಡಲು ಕೊರೆತ ಸಮಸ್ಯೆ ತಡೆಗೆ ₹300 ಕೋಟಿ ಒದಗಿಸಲಾಗುವುದು. ತಡೆಗೋಡೆ ನಿರ್ಮಾಣ ಸೇರಿ ಪ್ರಕೃತಿ ವಿಕೋಪ ತಡೆಗೆ ಹಣದ ನೆರವು ಕೋರಿ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ’ ಎಂದರು.

‘ರಾಜ್ಯದ 1,500 ಸ್ಥಳಗಳಲ್ಲಿ ಮಳೆ ಮಾಪನ ಕೇಂದ್ರಗಳು ದುಸ್ಥಿತಿಯಲ್ಲಿವೆ. ₹20 ಕೋಟಿ ವೆಚ್ಚದಲ್ಲಿ ದುರಸ್ತಿ ನಡೆಯಲಿದೆ. ಸಂಪೂರ್ಣ ಹಾಳಾಗಿದ್ದರೆ, ಹೊಸ ಯಂತ್ರಗಳ ಅ ಳ ವ ಡಿ ಸ- ಲಾ ಗು ವು ದು ಎಂದರು.

ಕೃಷ್ಣ ಬೈರೇಗೌಡ

11 ಲಕ್ಷ **ಶಂಕಾಸ್ಪದ ಪಿಂಚಣಿದಾರರು:** ‘ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಯಡಿ ಅಹರ್ತೆ ಇಲ್ಲದಿದ್ದರೂ ಪಿಂಚಣಿ ಪಡೆಯುತ್ತಿರುವ 11 ಲಕ್ಷ ಹೆಚ್ಚು ಪಿಂಚಣಿದಾರರು ರಾಜ್ಯದಲ್ಲಿದ್ದಾರೆ ಎಂಬುದು ಪ್ರಾಥಮಿಕ ಸಮೀಕ್ಷೆಯಿಂದ ಗೊತ್ತಾಗಿದೆ’ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

‘ಪಿಂಚಣಿದಾರರ ಆಧಾರ್ ಕಾರ್ಡ್ ಪರಿಶೀಲಿಸಿದ ವೇಳೆ 60 ವರ್ಷ ಮೇಲ್ಪಟ್ಟದಿದ್ದರೂ ವೃದ್ಧಾಪ್ಯ ವೇತನ ಪಡೆಯುತ್ತಿರುವವರಿದ್ದಾರೆ ಎಂಬುದು ಗೊತ್ತಾಗಿದೆ. 13,702 ಮಂದಿ ಆದಾಯ ತೆರಿಗೆ ಪಾವತಿದಾರರಿದ್ದರೂ ಖಾತೆಗೆ ಪಿಂಚಣಿ ಜಮಾ ಆಗುತ್ತಿದೆ. 117 ಸರ್ಕಾರಿ ನೌಕರರೂ ಸೇರಿದ್ದಾರೆ. ಸದ್ಯಕ್ಕೆ ಈ ಪಿಂಚಣಿದಾರರನ್ನು ಅಮಾನತಾಸ್ಪದ ಪಿಂಚಣಿದಾರರು ಎಂದು ಗುರುತು ಮಾಡಲಾಗಿದೆ’ ಎಂದರು.

ಬಿಲ್ ಕಲೆಕ್ಟರ್, ಪಿಡಿಒಗೆ 1 ವರ್ಷ ಸಜೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾಯಿಯ ಹೆಸರಿಗೆ ಬಸವ ವಸತಿ ಯೋಜನೆಯಡಿ ಅಕ್ರಮವಾಗಿ ಮನೆ ಮಂಜೂರು ಮಾಡಿಸಿದ್ದ ಬಿಲ್ ಕಲೆಕ್ಟರ್ ಹಾಗೂ ಪಿಡಿಒಗೆ ತಲಾ ಒಂದು ವರ್ಷ ಸಜೆ ಹಾಗೂ ₹15 ಸಾವಿರ ದಂಡ ವಿಧಿಸಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ರಾಜೇಶ್ವರಿ ಎನ್.ಹೆಗಡೆ ಆದೇಶಿಸಿದ್ದಾರೆ. ಕೆಳಗೂರು ಗ್ರಾಮ ಪಂಚಾಯಿತಿಯಲ್ಲಿ 2010–11ನೇ ಸಾಲಿನಲ್ಲಿ ಈ ಅಕ್ರಮ ನಡೆದಿತ್ತು.

ವಿದ್ಯಾರ್ಥಿನಿಗೆ ಕಿರುಕುಳ: ಪ್ರೊ.ಮೂರ್ತಿ ಅಮಾನತು

ಪ್ರಜಾವಾಣಿ ವಾರ್ತೆ

ವಿಜಯಪುರ: ಸಂಶೋಧನಾ ವಿದ್ಯಾರ್ಥಿನಿಗೆ ಲೈಂಗಿಕ ಮತ್ತು ಮಾನಸಿಕ ಕಿರುಕುಳ ನೀಡಿದ ಆರೋಪದ ಮೇಲೆ ರಾಣಿ ಚನ್ನಮ್ಮ ವಿಶ್ವ ವಿದ್ಯಾಲಯದ (ಆರ್‌ಸಿಯು) ವಿಜಯಪುರ ಸ್ನಾತಕೋತ್ತರ ಕೇಂದ್ರದ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ. ಕೆ.ಎಲ್.ಎನ್. ಮೂರ್ತಿ ಅವರನ್ನು ಅಮಾನತು ಗೊಳಿಸಲಾಗಿದೆ.

‘ಮಾನಸಿಕ ಮತ್ತು ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ’ ಎಂದು ಸಂಶೋಧನಾ ವಿದ್ಯಾರ್ಥಿನಿಯೊಬ್ಬರು 2024ರ ನವೆಂಬರ್ 4ರಂದು ಕುಲಪತಿ ಮತ್ತು ಕುಲಸಚಿವರ ಮುಂದೆ ಮೌಖಿಕ ದೂರು ನೀಡಿದ್ದರು. ಲಿಖಿತ ದೂರು ಮತ್ತು ಸಾಕ್ಷ್ಯಗಳನ್ನು ಸಲ್ಲಿಸಲು ಅವರಿಗೆ ಏಳು ದಿನಗಳ ಕಾಲಾವಕಾಶ ನೀಡಲಾಗಿತ್ತು. ದೂರುದಾರರು ಕೈಬರಹದ ದೂರು ನೀಡಿ ರಿಜಿಸ್ಟ್ರಾರ್ ಮುಂದೆ ಸಾಕ್ಷ್ಯಗಳನ್ನು ಹಾಜರುಪಡಿಸಿದ್ದರು.

ವಿಶ್ವವಿದ್ಯಾಲಯದ ಆಂತರಿಕ ಕುಂದುಕೊರತೆ ಪರಿಹಾರ ಸಮಿತಿಯು ಸಂಶೋಧನಾ ವಿದ್ಯಾರ್ಥಿನಿ ನೀಡಿದ ದೂರಿನ ವಿಚಾರಣೆ ನಡೆಸಿ ಜುಲೈ 14 ರಂದು ರಿಜಿಸ್ಟ್ರಾರ್‌ಗೆ ವರದಿ ಸಲ್ಲಿಸಿತ್ತು. ಆರೋಪಗಳು ಮೇಲ್ನೋಟಕ್ಕೆ ನಿಜವೆಂದು ಕಂಡುಬಂದಿದೆ ಎಂದು ರಿಜಿಸ್ಟ್ರಾರ್ ಸಂತೋಷ್ ಕಾಮಗೌಡ ಅವರು ಮಾಹಿತಿ ನೀಡಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಸಿ ವಿ ರಾಮನ್ ನಗರ ವಿಭಾಗ, 8ನೇ ಕ್ರಾಸ್, 12ನೇ ಎ ಮುಖ್ಯರಸ್ತೆ, 2ನೇ ಹಂತ, ಇಂದಿರಾನಗರ, ಬೆಂಗಳೂರು–560038

ಸಂಖ್ಯೆ: ಕಾ.ಪಾ.ಅ/ಸಿವಿಆರ್/ಟೆಂಡರ್–09/ತಿದ್ದುಪಡಿ–1/2025–26 ದಿನಾಂಕ : 22.07.2025

ತಿದ್ದುಪಡಿ

ವಿಷಯ : ಟೆಂಡರ್ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದೂಡುವ ಬಗ್ಗೆ.
ಉಲ್ಲೇಖ : ಟೆಂಡರ್ ನೋಟಿಫಿಕೇಷನ್ ಸಂಖ್ಯೆ: No: EE/CVR/E-KPPP/09/2025-26 Date: 16.07.2025

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸಿ.ವಿ.ರಾಮನ್ ನಗರ ವಿಭಾಗದ ಒಟ್ಟು 02 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ತಾಂತ್ರಿಕ ದೋಷದ ಕಾರಣ ಸದರಿ ಟೆಂಡರ್‌ನ್ನು ಮುಂದೂಡಲಾಗಿರುತ್ತದೆ.

ಮುಂದುವರೆದು ಸದರಿ ಮುಂದೂಡಲಾದ ಟೆಂಡರ್‌ನ್ನು ತಾಂತ್ರಿಕ ದೋಷ ಸರಿಪಡಿಸಿದ ನಂತರ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆದುಕೊಳ್ಳಬಹುದು ಮತ್ತು https://kppp.karnataka.gov.in ವೆಬ್‌ಸೈಟ್‌ನಿಂದಲೂ ಸಹ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಸರ್.ಸಿ.ವಿ.ರಾಮನ್ ನಗರ ವಿಭಾಗ

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ. ದೂರವಾಣಿ: 08172–268876, 266719

ನಂ:ಹಾ.ನ.ಪ್ರಾ/ಸ.ಕಾ.ಅ/ಟೆಂಡರ್–07/25–26 ದಿನಾಂಕ: 21.07.2025

ಕೆ.ಪಿ.ಪಿ.ಪಿ ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಚುರಪಡಿಸುವುದೇನೆಂದರೆ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (visit:https://www.kppp.karnataka.gov.in/) ಮೂಲಕ ಈ ಕೆಳಗೆ ನಿಗದಿಪಡಿಸಿದ ದಿನಾಂಕಗಳಂದು ಆನ್ ಲೈನ್‌ನಲ್ಲಿ ಸಲ್ಲಿಸತಕ್ಕದ್ದು. 1)ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23-07-2025 to 22-08-2025 up to 17.30 hrs 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25-08-2025 at 11.00 hrs 3)ಆರ್ಥಿಕ ಬಿಡ್ ತೆರೆಯುವ ದಿನಾಂಕ: 30-08-2025 at 11.00 hrs ಕ್ರ.ಸಂ.1)ಕಾಮಗಾರಿಯ ಹೆಸರು: PROVIDING WATER SUPPLY FACILITY TO HASSAN AIR PORT FROM HUDA PROPOSED RESIDENTIAL LAYOUT (HSNUDA/2025-26/WS/WORK_INDENT5) ಟೆಂಡರ್‌ಗಟ್ಟ ಮೊತ್ತ (ರೂ ಲಕ್ಷಗಳಲ್ಲಿ) 333.00

ಸಹಿ/–(ಶ್ರೀ ಕೆ.ಎಂ. ರಮೇಶ್) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ವಾಪಾಸಂಇ/ಹಿಸ/ಹಾಸನ/364/ಕೆಎಸ್‌ಎಂಸಿಎ/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಕೆರೆಗಳು–ಯಲಹಂಕ)
3ನೇ ಮಹಡಿ, ಅನೆಕ್ಸ್ ಕಟ್ಟಡ–3, ನರಸಿಂಹಯ್ಯ ಚೌಕ, ಬೆಂಗಳೂರು – 560 002.
ಸಂಖ್ಯೆ: ಕಾಪಾಅ(ಕೆರೆಗಳು–ಯಲ)/ಟೆಂಡರ್–03/2025–26 ದಿನಾಂಕ: 22.07.2025

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ /ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಅಗ್ರಹಾರ ಕೆರೆ ಮತ್ತು ತಿರುಮೇನಹಳ್ಳಿ ಕೆರೆಯಲ್ಲಿ ಒಳಹರಿವು (Inlet) ನಿರ್ಮಾಣ ಮಾಡುವುದು ಮತ್ತು ಚೊಕ್ಕನಹಳ್ಳಿ ಕೆರೆಯಲ್ಲಿ ಹೊರಹರಿವು (Outlet) ನಿರ್ಮಾಣ ಮಾಡುವುದು. (2ನೇ ಕರೆ) **ಕಾಮಗಾರಿಯ ಅಂದಾಜು ಮೊತ್ತ : ₹125.00 ಲಕ್ಷಗಳು, ಇಎಂಡಿ: ₹1,87,500/–**
2.	ಅಳ್ಳಾಳಸಂದ್ರ ಕೆರೆಯಲ್ಲಿ ಚೈನ್‌ಲಿಂಕ್ ತಂತಿಬೇಲಿ ಒದಗಿಸುವುದು. **ಕಾಮಗಾರಿಯ ಅಂದಾಜು ಮೊತ್ತ : ₹50.00 ಲಕ್ಷಗಳು, ಇಎಂಡಿ: ₹1,00,000/–**
3.	ಅಮೃತಹಳ್ಳಿ ಕೆರೆಯಲ್ಲಿ ಚೈನ್‌ಲಿಂಕ್ ತಂತಿಬೇಲಿ ಒದಗಿಸುವುದು. **ಕಾಮಗಾರಿಯ ಅಂದಾಜು ಮೊತ್ತ : ₹40.00 ಲಕ್ಷಗಳು, ಇಎಂಡಿ: ₹80,000/–**
4.	ರಾಚೇನಹಳ್ಳಿ ಕೆರೆಯಲ್ಲಿ ಚೈನ್‌ಲಿಂಕ್ ತಂತಿಬೇಲಿ ಒದಗಿಸುವುದು. **ಕಾಮಗಾರಿಯ ಅಂದಾಜು ಮೊತ್ತ : ₹50.00 ಲಕ್ಷಗಳು, ಇಎಂಡಿ: ₹1,00,000/–**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ದಿನಾಂಕ: **23.07.2025ರ** ಸಂಜೆ **4:00** ಗಂಟೆಯ ನಂತರ ಲಭ್ಯವಿರುತ್ತದೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **30.07.2025ರ** ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **06.08.2025ರ** ಸಂಜೆ **4:00** ಗಂಟೆಯವರೆಗೆ (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **07.08.2025ರ** ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕೆರೆಗಳು–ಯಲಹಂಕ)

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಯಲ್ಲಾಪುರ ವಿಭಾಗ, ಯಲ್ಲಾಪುರ

ಕ್ರ.ಸಂ.ಎ4:ಡಿಐಎಸ್:ಅಗಸ್ತ್ಯ–2025:ಸೇಲ್–1:ಆರ್–5:2025–26 ದಿನಾಂಕ: 18.07.2025

ಮುಂಡಗೋಡ ಮತ್ತು ಕಿರವತ್ತಿ ಡಿಪೋಗಳಲ್ಲಿ ಮರಮಟ್ಟುಗಳ ಇ–ಟೆಂಡರ್ ಹಾಗೂ ಹರಾಜಿನ ವಿವರವಾದ ಪ್ರಕಟಣೆ

ಕರ್ನಾಟಕ ಅರಣ್ಯ ಕೋಡ್, 1976
ಅನುಬಂಧ XVIII A (ನಿಯಮ 64)

ಆಡಳಿತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆಯ ಮುಖ್ಯಸ್ಥರು), ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ ಅಪ್ರಮುಅಸಂ(ಅಸಂ)ಬಿ3:ಸೇಲ್:ಸಿಆರ್–01:2025–26 ಮತ್ತು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ FEE 168 FDP 2017 ದಿನಾಂಕ– 14–11–2017 ಮತ್ತು 27–02–2018, ಸರ್ಕಾರದ ಆದೇಶ ಸಂಖ್ಯೆ FEE 25 FDP 2020 ದಿನಾಂಕ: 16.08.2022

ಸಾರ್ವಜನಿಕರ ಮಾಹಿತಿಗಾಗಿ ಈ ಮೂಲಕ ಪ್ರಕಟಪಡಿಸುವುದೇನೆಂದರೆ, ಯಲ್ಲಾಪುರದ ಯಲ್ಲಾಪುರ ವಿಭಾಗದ ಮುಂಡಗೋಡ ಮತ್ತು ಕಿರವತ್ತಿ ಸರ್ಕಾರಿ ಮರಮುಟ್ಟು ಡಿಪೋಗಳಲ್ಲಿ ದಾಸ್ತಾನು ಮಾಡಿರುವ ಮತ್ತು ಲಾಟ್ ಮಾಡಿರುವ ಮರಮುಟ್ಟುಗಳನ್ನು ಮತ್ತು ಇತರೆ ಅರಣ್ಯ ಉತ್ಪನ್ನಗಳನ್ನು ಒಂದು ಅಥವಾ ಹೆಚ್ಚು ಸೆಷನ್‌ಗಳಲ್ಲಿ ಎಂಎಸ್‌ಟಿಸಿ ಪೋರ್ಟಲ್ ಮೂಲಕ ಬಹಿರಂಗ ಇ–ಟೆಂಡರ್ ಹಾಗೂ ಹರಾಜು ವಿಧಾನದಲ್ಲಿ ಮಾರಾಟ ಮಾಡಲಾಗುವುದು. ಮರಮುಟ್ಟು ಬಹಿರಂಗ ಇ–ಟೆಂಡರ್ ಹಾಗೂ ಹರಾಜು ಮಾರಾಟವನ್ನು **ಕಿರವತ್ತಿ ಸರ್ಕಾರಿ ಮರಮುಟ್ಟು ಡಿಪೋದಲ್ಲಿ 11.08.2025 ರಿಂದ 14.08.2025 (ಎಲ್ಲಾ ನಾಲ್ಕು ಸೆಷನ್‌ಗಳು)** ಮತ್ತು **ಮುಂಡಗೋಡ ಸರ್ಕಾರಿ ಮರಮುಟ್ಟು ಡಿಪೋದಲ್ಲಿ 18.08.2025 ರಿಂದ 22.08.2025 (ಎಲ್ಲಾ ನಾಲ್ಕು ಸೆಷನ್‌ಗಳು)** ಮತ್ತು **25.08.2025 (II ಸೆಷನ್‌ಗಳು)** ಬೆಳಿಗ್ಗೆ 10.00 ಗಂಟೆಯಿಂದ ಎಲ್ಲಾ ಲಾಟುಗಳ ಬಿಡ್ಡಿಂಗ್ ಪೂರ್ಣಗೊಳ್ಳುವವರೆಗೆ ನಡೆಸಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ವಿಭಾಗ ಯಲ್ಲಾಪುರ ಇವರು ಮಾರಾಟ ನಡೆಸುವ ಅಧಿಕಾರಿಯಾಗಿರುವರು.

ಯಾವುದೇ ಸ್ಪಷ್ಟನೆಗಳಿಗಾಗಿ ಸಂಪರ್ಕಿಸಬಹುದು:
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸರ್ಕಾರಿ ಮರಮುಟ್ಟು ಡಿಪೋ, ಕಿರವತ್ತಿ:–
acfgtdkwt@gmail.com ದೂರವಾಣಿ: 08419–238534
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸರ್ಕಾರಿ ಮರಮುಟ್ಟು ಡಿಪೋ, ಮುಂಡಗೋಡ :–
acfgtdmundgod@gmail.com ದೂರವಾಣಿ: 08301–222152
ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ವಿಭಾಗ, ಯಲ್ಲಾಪುರ:–
yellapurdcf5@yahoo.com, dcfyellapur@gmail.com ದೂರವಾಣಿ: 08419–261273
ಶ್ರೀ ದಾಮೋದರ್, ವ್ಯವಸ್ಥಾಪಕರು, ಎಂಎಸ್‌ಟಿಸಿ ಲಿಮಿಟೆಡ್, ಬೆಂಗಳೂರು. ಮೊಬೈಲ್: 98410022252/ 9535347426/ 9980147110

ಸಹಿ/– ಹರ್ಷ ಭಾನು ಜಿ.ಪಿ. ಭಾ.ಅ.ಸೇ. ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ವಿಭಾಗ, ಯಲ್ಲಾಪುರ

DIPR/KWR/KSMCA/306/25-26 Dt.22 07 2025

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಉಪ್ರವ್ಯ–2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/15/25–26 ದಿನಾಂಕ: 22.07.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ, ಇವರು ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಅರ್ಹ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾದ ಕೆಲಸಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (<https://kppp.karnataka.gov.in>) ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದು. ಬಿಡ್‌ದಾರರು ಗುತ್ತಿಗೆ ಅರ್ಹತೆ ಪಡೆಯಲು ಬಿಡ್‌ದಾರರ ದಾಖಲಾತಿ ಪ್ರಕಾರ ಸೂಚಿಸಲಾದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಬೇಕಾಗಿ ಸೂಚಿಸಿದೆ.
2. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
3. ಇತರೆ ವಿವರಗಳನ್ನು ಟೆಂಡರ್ ದಾಖಲಾತಿಗಳಲ್ಲಿ ವೀಕ್ಷಿಸಬಹುದು.

ಕ್ರಮ ಸಂಖ್ಯೆ	ಕೆಲಸದ ಹೆಸರು	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ.ಗಳಲ್ಲಿ	ಸೇವೆ ಗುತ್ತಿಗೆಯ ನಿಗದಿತ ಅವಧಿ
1	ಬಿನ್ನಿ ಮಿಲ್‌ನಲ್ಲಿನ ಸ್ವಯಂಚಾಲಿತ ವಿಂಗಡಣೆ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆ.	169.56	ರೂ.1,00,000/– ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ವಿಧಾನದಲ್ಲಿ ಇ–ಪಾವತಿ ಮೂಲಕ ಹಾಗೂ ಬಾಕಿ ರೂ.1,54,340/– ರಾಷ್ಟ್ರೀಯ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡಲಾದ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮುಖಾಂತರ ಪಾವತಿಸಬೇಕು.	12 ತಿಂಗಳು (ಮಳೆಗಾಲ ಸೇರಿ)

ವೇಳಾಪಟ್ಟಿ:
1. ಬಿಡ್ ಪೂರ್ವ–ಭಾವಿ ಸಭೆಯನ್ನು 01.08.2025 ರಂದು 15:00 ಗಂಟೆಗೆ ಮುಖ್ಯ ಇಂಜಿನಿಯರ್ & ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬಿಎಸ್‌ಡಬ್ಲ್ಯೂಎಂಎಲ್, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560052 ಇವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ.
2. ತಾಂತ್ರಿಕ ದಾಖಲಾತಿಗಳನ್ನು ಟೆಂಡರ್ ದಾಖಲೆ ಪ್ರಕಾರವಾಗಿ ಅಗತ್ಯವಿರುವ ಮಾಹಿತಿ/ದಾಖಲೆಗಳೊಂದಿಗೆ 11.08.2025 ರಂದು 16:00 ಗಂಟೆಗೆ ಅಥವಾ ಮುಂಚಿತವಾಗಿ ಕೆಪಿಪಿ ಪೋರ್ಟಲ್ https://www.kppp.karnataka.gov.in ನಲ್ಲಿ ಅಪ್‌ಲೋಡ್ ಮಾಡಬೇಕು. ಮೊದಲನೇ ಪೋಲ್ಡರ್‌ನಲ್ಲಿರುವ ತಾಂತ್ರಿಕ ಬಿಡ್‌ಗಳನ್ನು 12.08.2025 ರಂದು 16:30 ಗಂಟೆಯ ನಂತರ ಇ–ಪೋರ್ಟಲ್ ಮೂಲಕ ಮತ್ತು ನಿಗದಿತ ಸ್ಥಳದಲ್ಲಿ ತೆರೆಯುವ ಸಮಯದಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಒಂದು ವೇಳೆ ಬಿಡ್‌ಗಳನ್ನು ತೆರೆಯುವ ನಿಗದಿತ ದಿನಾಂಕವು ರಜೆದಿನವಾದಲ್ಲಿ, ಮುಂದಿನ ಕೆಲಸದ ದಿನದಂದು ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ತೆರೆಯಲಾಗುವುದು.
3. ತನ್ನ ನಿಯಂತ್ರಣಕ್ಕೆ ಮೀರಿ ಯಾವುದೇ ತಂತ್ರಜ್ಞಾನದ ವಿಫಲದಿಂದ ವಿಳಂಬವಾದಲ್ಲಿ ನಿಯಮಿತವು ಜವಾಬ್ದಾರಿ ವಹಿಸುವುದಿಲ್ಲ. ಯಾವುದೇ ಟೆಂಡರ್‌ನ ಅಪ್‌ಡೇಟ್‌ಗಳನ್ನು ಬಿಡ್‌ದಾರರಿಗೆ ತಂತ್ರಜ್ಞಾನದಿಂದ ಸೂಚಿಸಲು ಪ್ರಯತ್ನಿಸುವ ವಿಧಾನಗಳಲ್ಲದೂ ಸಹ ಒಂದು ವೇಳೆ ಬಿಡ್‌ದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವಲ್ಲಿ ನಿಯಮಿತದ ಹೊಣೆಯಿಲ್ಲ. ಬಿಡ್‌ಗೆ ಸಂಬಂಧಿಸಿದಂತೆ ಕೆಪಿಪಿ ಪೋರ್ಟಲ್‌ಗೆ ನಿಯಮಿತವು ಭೇಟಿ ನೀಡಿ ನೂತನ ಮಾಹಿತಿಗಳನ್ನು ಪಡೆಯುವುದು ಟೆಂಡರ್‌ದಾರರ ಜವಾಬ್ದಾರಿಯಾಗಿರುತ್ತದೆ. ಸಹಾಯವಾಣಿ ಇ–ಮೇಲ್ ವಿಳಾಸ hphelpdesk.blr@intarvo.com. ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಕಾಯದೇ ಮುಂಚಿತವಾಗಿ ತಮ್ಮ ಕಂಪ್ಯೂಟರ್ ಬ್ರೌಸರ್‌ನ ಸೂಕ್ತವಾದ ಸಾಮರ್ಥ್ಯದ ಬಗ್ಗೆ ಜಾಗೃತಿ ವಹಿಸಬೇಕು. ಇಂಟರ್‌ನೆಟ್ ವಿಫಲದ ಕಾರಣದಿಂದಾಗಿ ಕೆಪಿಪಿ ಪೋರ್ಟಲ್‌ನ ಪ್ರಕ್ರಿಯೆಯು ಅಥವಾ ಯಾವುದೇ ತಾಂತ್ರಿಕ ಅಡಚಣೆ ಉಂಟಾದಲ್ಲಿ ನಿಯಮಿತವು ಜವಾಬ್ದಾರಿ ವಹಿಸುವುದಿಲ್ಲ.
4. ಯಾವುದೇ ತಿದ್ದುಪಡಿ/ಬದಲಾವಣೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್

ವಾಪಾಸಂಇ/ವಾಪ್ರ/1982/ಅಕಾರ್/2025–26

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿತ್ರದುರ್ಗ
ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳ ಕಛೇರಿ, ಚಿತ್ರದುರ್ಗ

ಸಂಖ್ಯೆ:ಜಿ.ಆ.ಕು.ಕ:ಜಿ.ಮಾ.ಆ.ಕಾ/ 04/2025–26 ದಿನಾಂಕ: 08–07–2025

ಗುತ್ತಿಗೆ ನೇಮಕಾತಿ ಅಧಿಸೂಚನೆ ಪ್ರಕಟಣೆ

ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ (KaBHI) ಕಾರ್ಯಕ್ರಮದ ಅಡಿಯಲ್ಲಿ, ಜಿಲ್ಲಾ ಆಸ್ಪತ್ರೆ ಚಿತ್ರದುರ್ಗ, ಇಲ್ಲಿಗೆ ವಿವಿಧ ವೃಂದದ ವೈದ್ಯಕೀಯ ಮತ್ತು ಅರೆವೈದ್ಯಕೀಯ ಹುದ್ದೆಗಳನ್ನು ಮಾಸಿಕ ಗೌರವಧನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು **ದಿನಾಂಕ: 30/07/2025** ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 02:00 ಗಂಟೆ ವರೆಗೂ ನೇರ ಸಂದರ್ಶನವನ್ನು (Walk in interview) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಸಭಾಂಗಣ, ಚಿತ್ರದುರ್ಗ ಇಲ್ಲಿ ನಿಗದಿಪಡಿಸಲಾಗಿದ್ದು ಅಭ್ಯರ್ಥಿಗಳು ಸ್ವಯಂ ದೃಢೀಕೃತ ದಾಖಲಾತಿಗಳೊಂದಿಗೆ ಮತ್ತು ಒಂದು ಸೆಟ್ ದೃಢೀಕೃತ ನಕಲು ಪ್ರತಿಗಳೊಂದಿಗೆ ಹಾಜರಾಗಲು ತಿಳಿಸಿದೆ. ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ (KaBHI) ಕಾರ್ಯಕ್ರಮದ ಅಡಿಯಲ್ಲಿ ಈ ಹಿಂದೆ/ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.

ಕ್ರ ಸಂ	ಹುದ್ದೆಗಳ ವಿವರ	ವಿದ್ಯಾರ್ಹತೆ	ಮಾಸಿಕ ವೇತನ	ಹುದ್ದೆಗಳ ಸಂಖ್ಯೆ	ಅಭ್ಯರ್ಥಿ ವಯೋಮಿತಿ
1	Neurologist or	MD/DNB Neurology or MD/DNB General Medicine or MBBS with 05 years experience. Desirable (for MD/MBBS) Candidate with similar past experience is preferable	150000/-	01 ಹುದ್ದೆ ಸಾ.ಅ	60 ವರ್ಷ ಒಳಗಿರತಕ್ಕದ್ದು
	Physician or	For MD/DNB General Medicine with 02 years experience in working with neurological disease. Candidate with similar past experience is preferable	110000/-		
	Medical officer	Or MBBS with 05 years experience with neurological disease. Candidate with similar past experience is preferable	60000/-		
2	Nurse	BSc in nursing or equivalent degree from institution recognized by Karnataka nursing council of India, if not available general nursing (GNM) can be considered. Desirable: 01- Year of experience with evaluation and care of patients with neurological disorders. Candidate with similar past experience is preferable	15472.2/- To 19999.2/-	01 ಹುದ್ದೆ ಸಾ.ಅ	45 ವರ್ಷ ಒಳಗಿರತಕ್ಕದ್ದು
3	Physiotherapist	BPT from recognized University. 02 Years of experience working in hospitals. Desirable: 01 to 02- Year of experience with evaluation and rehabilitation of patients with neurological disorders. Candidate with similar past experience is preferable	25000/-	01 ಹುದ್ದೆ ಸಾ.ಅ	45 ವರ್ಷ ಒಳಗಿರತಕ್ಕದ್ದು
4	Speech Therapist (Speech Language Pathologist)	Bachelor in Audiology and Speech Language Pathology. 02 Years of experience working in hospitals. Desirable: 01 - Year of experience with evaluation and rehabilitation of patients with neurological disorders. Candidate with similar past experience is preferable	30000/-	01 ಹುದ್ದೆ ಸಾ.ಅ	45 ವರ್ಷ ಒಳಗಿರತಕ್ಕದ್ದು
5	Clinical Psychologist	MPhil in Mental health and Social Psychology obtained after completion of a full time course 02 years (Regular not correspondence) which includes clinical training approved and recognized by the RCI or Post graduated degree in Psychology /Applied psychology/Medical social psychology. Desirable: 01 - Year of experience with evaluation and Counselling of patients with neurological disorders. Candidate with similar past experience is preferable	26250/-	01 ಹುದ್ದೆ ಸಾ.ಅ	45 ವರ್ಷ ಒಳಗಿರತಕ್ಕದ್ದು
6	District Coordinator	First class, Masters in any of the fields of life Sciences/Public health/Sociology/Rural development/Economics/Human resource/Social work/Psychology Or equivalent. Desirable: Experience in coordinating in public health programs. Candidate with similar past experience is preferable	30000/-	01 ಹುದ್ದೆ ಸಾ.ಅ	45 ವರ್ಷ ಒಳಗಿರತಕ್ಕದ್ದು

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳ ಕಛೇರಿ, ಚಿತ್ರದುರ್ಗ ಇಲ್ಲಿಗೆ ಕೆಲಸದ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ. ಅಥವಾ ಕಛೇರಿಯ ದೂರವಾಣಿ ಸಂಖ್ಯೆ: 8971552887/9611783297 ಗೆ ಸಂಪರ್ಕಿಸಬಹುದಾಗಿದೆ. e-mail: dlochit@gmail.com

ಸಹಿ/– ಸದಸ್ಯ ಕಾರ್ಯದರ್ಶಿ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ಚಿತ್ರದುರ್ಗ
DIPR/CTA/KSMCA/230/2025-26
ಸಹಿ/– ಅಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿತ್ರದುರ್ಗ

ಕಂದಾಯ ಆಯುಕ್ತಾಲಯ

ಕೊಠಡಿ ಸಂಖ್ಯೆ: 711, 7ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001.ದೂ.ಸಂ: 080–22032691 ಇ–ಮೇಲ್: commrrd@gmail.com

ಸಂ: RC-CFSOADMN(ADM)/28/2023 ದಿನಾಂಕ: 21–07–2025

ಪ್ರಕಟಣೆ

ಕಂದಾಯ ಆಯುಕ್ತಾಲಯದ ಕಾನೂನು ಕೋಶ ವಿಭಾಗಕ್ಕೆ Law Clerks / Assistants ಹುದ್ದೆಯನ್ನು ತಾತ್ಕಾಲಿಕವಾಗಿ ಒಪ್ಪಂದದ ಆಧಾರದ ಮೇರೆ ನೇಮಕ ಮಾಡಲು ಅರ್ಥಿಕ ಇಲಾಖೆಯ ಅನುಮೋದನೆಯಾಗಿರುತ್ತದೆ.

ಅದರಂತೆ Law Clerks / Assistants ಹುದ್ದೆಯನ್ನು ತಾತ್ಕಾಲಿಕವಾಗಿ ಒಪ್ಪಂದದ ಆಧಾರದ ಮೇರೆ ನೇಮಕ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. ಆಸಕ್ತ ಉಳ್ಳವರು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಈ ಕಾರ್ಯಾಲಯಕ್ಕೆ ದಿನಾಂಕ: **31/07/2025ರೊಳಗಾಗಿ** ವೈಯಕ್ತಿಕ ಮಾಹಿತಿಗಳನ್ನು ವಿದ್ಯಾರ್ಹತೆಯ ದೃಢೀಕೃತ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸುವುದು.

ಕ್ರ. ಸಂ.	ಹುದ್ದೆ	ಸಂಖ್ಯೆ	ಅರ್ಹತೆ	ಮಾಹೆಯಾನ ವೇತನ
01.	Law Clerks / Assistants	04	Law interns or Law Graduates within 2 years of Law Degree (As on date: 31/07/2025)	Rs. 20000/-

ಷರತ್ತುಗಳು:– (1) ಮೇಲ್ಕಂಡ ನೇಮಕಾತಿ ಅವಧಿಯು ಕನಿಷ್ಠ ಒಂದು (01) ವರ್ಷಗಳಾಗಿದ್ದು, ಮುಂದುವರೆಸುವ ಅಥವಾ ತೆಗೆದು ಹಾಕುವ ಹಕ್ಕನ್ನು ಕಂದಾಯ ಆಯುಕ್ತರು ಹೊಂದಿರುತ್ತಾರೆ. (2) ಸೇವೆ ತೃಪ್ತಿಕರವಾಗದಿದ್ದಲ್ಲಿ ಯಾವುದೇ ಸೂಚನೆ ನೀಡದೆ ಸೇವೆಯಿಂದ ಬಿಡುಗಡೆ ಮಾಡಲಾಗುವುದು. (3) ಮೇಲ್ಕಂಡಂತೆ ಗುತ್ತಿಗೆ ಮೇಲೆ ನೇಮಕಗೊಳ್ಳುವವರಿಗೆ ಮಾಸಿಕ ವೇತನ ಹೊರತುಪಡಿಸಿ ಯಾವುದೇ ಭತ್ಯೆಗಳನ್ನು ಪಾವತಿಸಲಾಗುವುದಿಲ್ಲ. (4) ಕಛೇರಿ ವೇಳೆ ಬೆಳಿಗ್ಗೆ 10–00 ರಿಂದ ಸಂಜೆ 5–30 ಆಗಿದ್ದು, ಕಛೇರಿ ವೇಳೆಯಲ್ಲಿ ಕಡ್ಡಾಯವಾಗಿ ಹಾಜರಿರತಕ್ಕದ್ದು. (5) ಅವಶ್ಯಕತೆಗನುಗುಣವಾಗಿ ಸಾರ್ವತ್ರಿಕ ರಜೆ ದಿನಗಳಂದು ಕರ್ತವ್ಯನಿರ್ವಹಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ಸಹಿ/– ಕಂದಾಯ ಆಯುಕ್ತರು, ಕಂದಾಯ ಆಯುಕ್ತಾಲಯ

ವಾಪಾಸಂಇ/ವಾಪ್ರ/ಸ್ಟ್ರ್/1976/2025–26

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 21072025-264852
CG-DL-E-21072025-264852

असाधारण
EXTRAORDINARY
भाग - II - खण्ड - 3 - उप खण्ड - (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 3224] नई दिल्ली, शुक्रवार, जुलाई 18, 2025 / आषाढ 27, 1947
No. -3224] NEW DELHI, FRIDAY, JULY 18, 2025 / ASHADHA 27, 1947

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
ಹಿರಿಯೂರು – ಹುಳಿಯಾರ್ ಸೆಕ್ಷನ್ (ರಾ.ಹೆ. 150ಎ)

ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ವೃತ್ತ, ಪಿ.ಡಬ್ಲ್ಯೂ.ಡಿ. ಆವರಣ, ಬೆಂಗಳೂರು–560001.

ಸಾರ್ವಜನಿಕ ಪ್ರಕಟಣೆ

(ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಜ) ರಂತೆ)

ಎಸ್.ಓ. ನಂ. 3297 (ಇ), ದಿನಾಂಕ: 18.07.2025 – ಅಧಿಸೂಚನೆ ಸಂಖ್ಯೆ : ಎಸ್.ಓ. ನಂ. 5232(ಇ) ದಿನಾಂಕ: 04.12.2024ರಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997 ರ ಸೆಕ್ಷನ್ 3 (ಡಿ) (1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಂತೆ ಕರ್ನಾಟಕ ರಾಜ್ಯದಲ್ಲಿರುವ ಚಿತ್ರದುರ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎರಲ್ಲಿ **in the stretch of land from design Km 410.600 (Existing Km 413.740) to design Km 441.900 (Existing Km 447.610) (ಹಿರಿಯೂರು – ಹುಳಿಯಾರ್ ಸೆಕ್ಷನ್)** ರವರೆಗೆ ಎರಡು/ನಾಲ್ಕು ಪಥದ ರಸ್ತೆಯನ್ನಾಗಿ ಅಗಲಪಡಿಸುವ ಕಾಮಗಾರಿ ಮಾಡುವ ಸಲುವಾಗಿ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

ಸದರಿ ಅಂತಿಮ ಅಧಿಸೂಚನೆಯನ್ನು ಸೆಕ್ಷನ್ 3ಎ ರ ಸಬ್‌ಸೆಕ್ಷನ್ (3)ರಡಿ ಈ ಪ್ರಕಟಣೆಯನ್ನು **“ಪ್ರಜಾವಾಣಿ”** ಮತ್ತು **“ಡೆಕ್ಕನ್ ಹೆರಾಲ್ಡ್”** ದಿನಪತ್ರಿಕೆಗಳಲ್ಲಿ ದಿನಾಂಕ: **10.12.2024** ರ ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಅದರನುಸಾರ ಸಾರ್ವಜನಿಕರಿಂದ ಸ್ವೀಕೃತಗೊಂಡಿರುವ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ತಿರಸ್ಕರಿಸಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಡಿ) ಹಾಗೂ (2)ರ ಅನ್ವಯ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿನ ಎಲ್ಲಾ ಜಮೀನುಗಳು ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಎಲ್ಲಾ ಋಣಭಾರದಿಂದ ವಿಮುಕ್ತ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತವೆ.

ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997ರ ಪ್ರಕಾರ 3(ಜ)(1), 3(ಜ)(2), 3(ಜ)(3) ಮತ್ತು 3(ಜ)(4) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಗಿರುವ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ದಾಖಲಾತಿ ಪತ್ರಗಳೊಂದಿಗೆ ಈ ಕೆಳಕಾಣಿಸಿದ ವಿಳಾಸದಲ್ಲಿ ಹಾಜರಾಗುವುದು.

ಗ್ರಾಮಗಳ ಹೆಸರು	ವಿಚಾರಣೆಯ ದಿನಾಂಕ ಮತ್ತು ಸಮಯ	ಭೂಮಾಲೀಕರು/ ಹಿತಾಸಕ್ತಿಯುಳ್ಳವರು ಅವರ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ
ಹಿರಿಯೂರು ತಾಲ್ಲೂಕು: ಯಲ್ಲದಕೆರೆ	05.08.2025 ಮಧ್ಯಾಹ್ನ 12.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ	ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, ಕೆ.ಆರ್. ವೃತ್ತ, ಪಿ.ಡಬ್ಲ್ಯೂ.ಡಿ. ಆವರಣ, ಬೆಂಗಳೂರು–560001.

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ,
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ – 150ಎ
ಹಿರಿಯೂರು – ಹುಳಿಯಾರ್ ಸೆಕ್ಷನ್
ಕೆ.ಆರ್. ವೃತ್ತ, ಪಿ.ಡಬ್ಲ್ಯೂ.ಡಿ. ಆವರಣ, ಬೆಂಗಳೂರು–560001.

ಷೆಡ್ಯೂಲ್

ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎರಲ್ಲಿ **in the stretch of land from design Km 410.600 (Existing Km 413.740) to design Km 441.900 (Existing Km 447.610) (ಹಿರಿಯೂರು – ಹುಳಿಯಾರ್ ಸೆಕ್ಷನ್)** ರವರೆಗೆ ನಾಲ್ಕು ಪಥದ ರಸ್ತೆ ಮತ್ತು ರಸ್ತೆ ಅಗಲೀಕರಣಕ್ಕೆ ಜಮೀನು/ಅವಶ್ಯಕವಾಗಿರುವ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ ಜಮೀನುಗಳ/ಸ್ವತ್ತುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ — ಜಿಲ್ಲೆಯ ಹೆಸರು : ಚಿತ್ರದುರ್ಗ

ಕ್ರ. ಸಂ.	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹ	ವಿಸ್ತೀರ್ಣ (ಹೆಕ್ಟೇರ್)	ಭೂಮಾಲೀಕರು/ಹಿತಾಸಕ್ತಿಯುಳ್ಳವರ ಹೆಸರು
1	2	3	4	5	6
ತಾಲ್ಲೂಕು: ಹಿರಿಯೂರು					
ಗ್ರಾಮದ ಹೆಸರು : ಯಲ್ಲದಕೆರೆ					
1	90	ಖಾಸಗಿ	ಖುಷ್ಕಿ	0.040469	ದ್ಯಾಮಣ್ಣ ಬಿನ್ ಧ್ಯಾಮಯ್ಯ 90/2ಎ
2	90	ಖಾಸಗಿ	ಖುಷ್ಕಿ	0.0025	ದೊಡ್ಡಕಂಚಪ್ಪ ಬಿನ್ ದೊಡ್ಡ ಜಡಿಯಪ್ಪ 90/4
3	91/1	ಖಾಸಗಿ	ಭಾಗಾಯ್ತು	0.030352	ಲಕ್ಷ್ಮಮ್ಮ ಕೋಂ ಕಂಚಪ್ಪ, ಭೈರಪ್ಪ ಬಿನ್ ಕಂಚಪ್ಪ, ರಂಗಸ್ವಾಮಿ, ನರಸಿಂಹಯ್ಯ, ದೊಡ್ಡಕಂಚಪ್ಪ ಬಿನ್ ದೊಡ್ಡ ಜಡಿಯಪ್ಪ
			ಒಟ್ಟು	0.073321	

[F.No.12037/57/2016-KNT(P-6)/3D]
ಶೇಖ್ ಅಮೀನ್‌ಖಾನ್, ನಿರ್ದೇಶಕರು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ತಾನಾಗಿ ಬರುವುದು ಮಾತೃಭಾಷೆ. ಪ್ರಯತ್ನಪೂರ್ವಕವಾಗಿ ಕಲಿತು ಬರುವುದು ಅನ್ಯಭಾಷೆ. -ಎ.ಆರ್. ಕೃಷ್ಣಶಾಸ್ತ್ರಿ

ಸಂಪಾದಕೀಯ

ಕೋರ್ಟ್ ಮಾತಿಗೆ ಕಿವಿಗೊಡಿ ಇ.ಡಿ.ಯ ದುರ್ಬಳಕೆ ತಪ್ಪಿಸಿ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಕೈಗೊಂಡ ಕೆಲವು ಕ್ರಮಗಳು ಸುಪ್ರೀಂ ಕೋರ್ಟ್‌ನ ತೀವ್ರ ಟೀಕೆಗೆ ಗುರಿಯಾಗಿವೆ. ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರಿದ್ದ ಪೀಠ, ರಾಜಕೀಯ ಸೂಕ್ಷ್ಮ ಪ್ರಕರಣಗಳಲ್ಲಿ ಇ.ಡಿ.ಯ ಕಾರ್ಯವೈಖರಿ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ರಾಜಕೀಯ ಹೋರಾಟಕ್ಕಾಗಿ ನೀವು ಬಳಕೆಯಾಗುತ್ತಿರುವುದು ಏಕೆ ಎಂದು ಕಟುವಾಗಿ ಪ್ರಶ್ನಿಸಿದೆ. 'ಇ.ಡಿ.ಯೇ ತಪ್ಪಿತಸ್ಥ' ಎನ್ನುವಂತಿವೆ ಕೋರ್ಟ್ ಆಡಿರುವ ಮಾತುಗಳು. ಆ ಮಾತುಗಳನ್ನು ಒಂದು ಎಚ್ಚರಿಕೆಯಾಗಿ ಪರಿಗಣಿಸದೇ ಹೋದರೆ ಈ ತನಿಖಾ ಸಂಸ್ಥೆಯ ವಿಶ್ವಾಸಾರ್ಹತೆಗೆ ಇನ್ನಷ್ಟು ಮಸಿ ಮೆತ್ತಿಕೊಳ್ಳಲಿದೆ. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಮತ್ತು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ತಾನು ನೀಡಿದ್ದ ಸಮನ್ಸ್ ಅನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿರುವ ಕ್ರಮವನ್ನು ಇ.ಡಿ.ಯು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಆದರೆ, ಮೇಲ್ಮನವಿಯನ್ನು ರದ್ದುಗೊಳಿಸಿರುವ ಕೋರ್ಟ್, 'ಜಾರಿ ನಿರ್ದೇಶನಾಲಯದ ಬಗ್ಗೆ ನಾವು ತುಂಬಾ ಕಟುವಾದ ಟೀಕೆಗಳನ್ನು ಮಾಡಬೇಕಾಗುತ್ತದೆ. ರಾಜಕೀಯ ಹೋರಾಟಗಳು ಚುನಾವಣೆ ಸಂದರ್ಭದಲ್ಲಿ ನಡೆಯಲಿ. ಅದಕ್ಕಾಗಿ ನಿಮ್ಮನ್ನು ಏಕೆ ಬಳಸಲಾಗುತ್ತಿದೆ' ಎಂದು ತೀಕ್ಷ್ಣವಾಗಿ ಪ್ರಶ್ನಿಸಿದೆ. ಕೋರ್ಟ್ ಎತ್ತಿರುವ ಗಂಭೀರ ಪ್ರಶ್ನೆಗೆ ಕೇಂದ್ರ ಸರ್ಕಾರದ ಈ ತನಿಖಾ ಏಜೆನ್ಸಿಯ ಬಳಿ ಯಾವುದೇ ಉತ್ತರ ಇಲ್ಲ. ಆಡಳಿತಾರೂಢ ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳು ಆಡಳಿತದ ಚುಕ್ಕಾಣಿ ಹಿಡಿದಿರುವ ರಾಜ್ಯಗಳಲ್ಲಿನ ಕೆಲವು ಸಂಸ್ಥೆಗಳನ್ನು ಮತ್ತು ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳ ನಾಯಕರನ್ನು ಗುರಿಯಾಗಿಸಲು ಇ.ಡಿ ಹೊಂದಿರುವ ಉತ್ಸಾಹಕ್ಕೆ ಮುಡಾ ಪ್ರಕರಣವು ಮತ್ತೊಂದು ನಿದರ್ಶನ.

ಸರ್ಕಾರದ ಏಜೆನ್ಸಿಗಳನ್ನು ರಾಜಕೀಯ ವಿರೋಧಿಗಳ ವಿರುದ್ಧ ಬಳಕೆ ಮಾಡುವುದು ಒಕ್ಕೂಟ ವ್ಯವಸ್ಥೆಗೆ ಬೆದರಿಕೆ ಒಡ್ಡಿದಂತೆ. ಈ ನಿಟ್ಟಿನಲ್ಲಿ, ಕೋರ್ಟ್‌ನ ಮಾತುಗಳು ಎಚ್ಚರಿಕೆಯಾಗಿ ನಿಲ್ಲಬೇಕು.

ಅಕ್ರಮ ವರ್ಗಾವಣೆಗೆ ಬಳಸಲಾದ ಹಣವನ್ನು ಸೃಷ್ಟಿಸಿ ಕೊಡುವ ಅಪರಾಧವನ್ನು 'ಮೂಲ ಅಪರಾಧ' ಎಂದು ಗುರುತಿಸಲಾಗುತ್ತದೆ. ಆಗ ಇ.ಡಿ.ಯ ಪಾತ್ರದ ಪ್ರಶ್ನೆ ಬರುತ್ತದೆ. ಆದರೆ, ಮುಡಾ ಪ್ರಕರಣದ ಪಾರ್ವತಿ ಮತ್ತು ಸುರೇಶ್ ಅವರಿಗೆ ಸಂಬಂಧಿಸಿದ ಆರೋಪಗಳಲ್ಲಿ ಅಂತಹ ಅಕ್ರಮಗಳು ನಡೆದ ಕುರಿತು ಯಾವುದೇ ಸಾಕ್ಷ್ಯಾಧಾರಗಳು ಇಲ್ಲ ಎಂಬುದು ಕರ್ನಾಟಕ ಹೈಕೋರ್ಟ್‌ನ ಅಭಿಮತ. ನಿವೇಶನಗಳ ಅಕ್ರಮ ಹಂಚಿಕೆಯೇ ಈ ಪ್ರಕರಣದಲ್ಲಿ ಕೇಳಿ ಬಂದಿರುವ ಮುಖ್ಯ ಆರೋಪವಾಗಿದ್ದು, ಈ ಸಂಬಂಧ ಲೋಕಾಯುಕ್ತ ತನಿಖೆಯೂ ನಡೆಯುತ್ತಿದೆ. ವಸ್ತುಸ್ಥಿತಿ ಹೀಗಿರುವಾಗ ಇ.ಡಿ.ಯು ಪ್ರಕರಣದಲ್ಲಿ ಮೂಗು ತೂರಿಸುವ ಅಗತ್ಯವಿಲ್ಲ ಎನ್ನುವುದು ಕೋರ್ಟ್‌ನ ಸಂದೇಶವಾಗಿದೆ. ಈ ಕಾರಣದಿಂದಲೇ ಇ.ಡಿ ಕೂಡ ಮೇಲ್ಮನವಿಯಿಂದ ಹಿಂದೆ ಸರಿದು, ಪೀಠದ ಕೆಂಗಣ್ಣಿಗೆ ಮತ್ತಷ್ಟು ಗುರಿಯಾಗುವುದನ್ನು ತಪ್ಪಿಸಿಕೊಂಡಿದೆ. ಈ ಹಿಂದೆಯೂ ಕೆಲವು ಪ್ರಕರಣಗಳಲ್ಲಿ ಇ.ಡಿ ನಡೆಯನ್ನು ಕೋರ್ಟ್ ಕಟುವಾಗಿ ಟೀಕಿಸಿದೆ. ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮದಲ್ಲಿ (ಟಾಸ್ಮಾಕ್) ಅಕ್ರಮ ನಡೆದಿದೆ ಎಂಬ ಆರೋಪದ ಕುರಿತು ಹೀಗೆಯೇ 'ರಾಜಕೀಯ ಆತುರ'ದ ಕ್ರಮಕ್ಕೆ ಮುಂದಾಗಿದ್ದ ಇ.ಡಿ, ಆಗಲೂ ಛೀಮಾರಿಗೆ ಒಳಗಾಗಿತ್ತು. 'ನೀವು ಒಕ್ಕೂಟ ವ್ಯವಸ್ಥೆಯನ್ನು ಸಂಪೂರ್ಣವಾಗಿ ಉಲ್ಲಂಘಿಸುತ್ತಿದ್ದೀರಿ' ಎಂದು ಕೋರ್ಟ್ ಖಾರವಾಗಿ ಹೇಳಿತ್ತು. ಕೇಂದ್ರದ ಈ ತನಿಖಾ ಏಜೆನ್ಸಿಯನ್ನು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಮೂಲಕ ಜನರಿಗೆ ಕಿರುಕುಳ ನೀಡಲು, ಆರೋಪಿಗಳನ್ನು ಜೈಲಿನಲ್ಲಿ ಇರಿಸಲು ಬಳಸಿಕೊಳ್ಳಲಾಗುತ್ತಿದೆ, ಏಜೆನ್ಸಿಯು ಅತಿಯಾಗಿ ವರ್ತಿಸುತ್ತಿದೆ, ಅಮಾನವೀಯವಾಗಿ ನಡೆದುಕೊಳ್ಳುತ್ತಿದೆ ಎಂಬ ಟೀಕೆಯೂ ಈ ಹಿಂದೆ ಕೋರ್ಟ್‌ನಿಂದ ಬಂದಿತ್ತು. ಹಲವು ಬಾರಿ ಕೋರ್ಟ್‌ನಿಂದ ಕಿವಿ ಹಿಂಡಿಸಿಕೊಂಡರೂ ಇ.ಡಿ.ಯು ಇನ್ನೂ ಪಾಠ ಕಲಿತಂತಿಲ್ಲ. ರಾಷ್ಟ್ರಮಟ್ಟದ ತನಿಖಾ ಸಂಸ್ಥೆಗಳು ರಾಷ್ಟ್ರಕ್ಕೆ ಬೇಕಾಗಿರುವ ವಿಚಾರಗಳಿಗಾಗಿ ಕೆಲಸ ಮಾಡಬೇಕೇ ವಿನಾ ಆಡಳಿತಾರೂಢ ಪಕ್ಷದ ರಾಜಕೀಯ ಗುರಿಗಳನ್ನು ಈಡೇರಿಸುವುದಕ್ಕೆ ಅಲ್ಲ. ಕೇಂದ್ರದಲ್ಲಿ ಬಿಜೆಪಿಯು ಆಡಳಿತದ ಚುಕ್ಕಾಣಿ ಹಿಡಿದ ನಂತರದಲ್ಲಿ, ಇ.ಡಿ.ಯು ರಾಜಕಾರಣಿಗಳ ವಿರುದ್ಧ ಪ್ರಕರಣ ದಾಖಲಿಸುವುದು ಹಲವು ಪಟ್ಟು ಹೆಚ್ಚಾಗಿದೆ. ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಮುಖಂಡರನ್ನು ಕಿರುಕುಳಕ್ಕೆ ಗುರಿಪಡಿಸಲು ಇರುವ ಅಸ್ತ್ರವಾಗಿ ಇ.ಡಿ ಪರಿವರ್ತನೆ ಕಂಡಿದೆ. ಸರ್ಕಾರದ ಏಜೆನ್ಸಿಗಳನ್ನು ರಾಜಕೀಯ ವಿರೋಧಿಗಳ ವಿರುದ್ಧ ಬಳಕೆ ಮಾಡುವುದು ಒಕ್ಕೂಟ ವ್ಯವಸ್ಥೆಗೆ ಬೆದರಿಕೆ ಒಡ್ಡಿದಂತೆ. ಈ ನಿಟ್ಟಿನಲ್ಲಿ, ಕೋರ್ಟ್‌ನ ಮಾತುಗಳು ಎಚ್ಚರಿಕೆಯಾಗಿ ನಿಲ್ಲಬೇಕು.

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ವಾಸ್ತವಕ್ಕೆ ದೂರ, ಕಲಿಕೆ ಭಾರ!

ಎಸ್ಸೆಸ್ಸೆಲ್ಸಿ ಫಲಿತಾಂಶದ ಉತ್ತಮೀಕರಣದ ದೃಷ್ಟಿಯಿಂದ ಡಿಸೆಂಬರ್ ಒಳಗೆ ಪಾಠ ಬೋಧನೆಯನ್ನು ಮುಗಿಸುವಂತೆ ಆದೇಶಿಸಲಾಗಿದೆ. ಆದೇಶದ ಪಾಲನೆ ಆಗಲೇಬೇಕು, ಆಗುತ್ತದೆ. ಆದರೆ, ಶಿಕ್ಷಣದ ಗುಣಮಟ್ಟದ ಉನ್ನತೀಕರಣದಲ್ಲಿ ವಾಸ್ತವಿಕ ಶೈಕ್ಷಣಿಕ ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಜೂನ್‌ನಿಂದ ಮಾರ್ಚ್‌ವರೆಗಾಗಿ ಸಿದ್ಧಪಡಿಸಲಾಗಿರುವ ಪಠ್ಯಪುಸ್ತಕವನ್ನು ಡಿಸೆಂಬರ್ ಒಳಗೇ ಬೋಧಿಸಬೇಕಾದಾಗ ಇರುವ ವಾಸ್ತವವನ್ನು, ಸಮಾಜ ವಿಜ್ಞಾನ ಪಠ್ಯವೊಂದನ್ನು ಆಧರಿಸಿ ಹೀಗೆ ಕಂಡುಕೊಳ್ಳಬಹುದು:

ಒಟ್ಟು 33 ಪಾಠಗಳಿವೆ. ಅಂದರೆ 33 ಘಟಕ ಪರೀಕ್ಷೆಗಳನ್ನು ನಡೆಸಬೇಕು. ಒಂದು ಘಟಕ ಪರೀಕ್ಷೆಯ ಅವಧಿ 1 ಗಂಟೆ. ಪ್ರಶ್ನೆಗಳನ್ನು ಬರೆಯಲು 20 ನಿಮಿಷ, ವಿದ್ಯಾರ್ಥಿಗಳು ಕೂರುವ ಪ್ರಕ್ರಿಯೆಗೆ 10 ನಿಮಿಷ ಎಂದುಕೊಂಡರೆ- ಪ್ರತೀ ಪರೀಕ್ಷೆಗೆ 90 ನಿಮಿಷಗಳು ಎಂದರೆ 2 ಪಿರಿಯೆಡ್ ಬೇಕಾಗುತ್ತವೆ. 33 ಘಟಕ ಪರೀಕ್ಷೆಗಳಿಗೆ 66 ಪಿರಿಯೆಡ್‌ಗಳು. ಪ್ರತೀ ಪರೀಕ್ಷೆಯ ಫಲಿತಾಂಶದ ವಿಶ್ಲೇಷಣೆ ಮತ್ತು ಹಿಮ್ಮಾಹಿತಿಗೆ ತಲಾ 1 ಪಿರಿಯೆಡ್. ಒಟ್ಟು 99 ಪಿರಿಯೆಡ್‌ಗಳು ಘಟಕ ಪರೀಕ್ಷೆಗಳಿಗಾಗಿ ಬೇಕಾಗುತ್ತವೆ. ರೂಪಣಾತ್ಮಕ ಪರೀಕ್ಷೆಗಳಿಗೆ 8 ದಿನಗಳು. 4 ರೂಪಣಾತ್ಮಕ ಪರೀಕ್ಷೆಗಳ ಫಲಿತಾಂಶ ವಿಶ್ಲೇಷಣೆ ಮತ್ತು ಹಿಮ್ಮಾಹಿತಿಗೆ 4 ಪಿರಿಯೆಡ್‌ಗಳು. ಸಂಕಲನಾತ್ಮಕ ಮೌಲ್ಯಮಾಪನಕ್ಕೆ 7 ದಿನಗಳು ಮತ್ತು ವಿಶ್ಲೇಷಣೆಗೆ 1 ಪಿರಿಯೆಡ್. ಈ ಎಲ್ಲ ಕಾರ್ಯಗಳಿಗಾಗಿ ಡಿಸೆಂಬರ್ ತನಕ 119 ಪಿರಿಯೆಡ್‌ಗಳು ಬೇಕಾಗುತ್ತವೆ.

ಡಿಸೆಂಬರ್‌ವರೆಗೆ ಶಾಲಾ ದಿನಗಳು 160ರಿಂದ 165ರಷ್ಟಿರುತ್ತವೆ. ಅಂದರೆ, ವಿವಿಧ ಸಮ್ಮೇಳನ, ಕಾರ್ಯಕ್ರಮಗಳು, ತರಬೇತಿಗಳಿಗೆಲ್ಲ ವಿದ್ಯಾರ್ಥಿಗಳನ್ನು ಉಪಯೋಗಿಸದೆ ಇದ್ದರೆ ಪಾಠ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆ ನಡೆಸಲು 41ರಿಂದ 46 ಪಿರಿಯೆಡ್‌ಗಳು ದೊರೆಯುತ್ತವೆ. 41ರಿಂದ 46 ಪಿರಿಯೆಡ್‌ಗಳಲ್ಲಿ 33 ಪಾಠಗಳ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗಳು ಎಲ್ಲ ಬೋಧನೋದ್ದೇಶಗಳ ಸಹಿತ ಮುಗಿಯಬೇಕಾಗುತ್ತದೆ.

ಬದಲಾಗಿರುವ ಸಾಮಾಜಿಕ ಮತ್ತು ರಾಜಕೀಯ ಸನ್ನಿವೇಶದಲ್ಲಿ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆ ಎನ್ನುವುದು, ಪಠ್ಯ ವಸ್ತುವಿನ ವರ್ಗಾವಣೆ ಎನ್ನುವ ಸಾಮಾನ್ಯ ಅರ್ಥೈಸುವಿಕೆಯಾಗಿದೆ. ಆದರೆ, ಶಿಕ್ಷಣ ಶಾಸ್ತ್ರದ ಪ್ರಕಾರ ಬೋಧನೋದ್ದೇಶವು ಪಠ್ಯ ವಸ್ತುವಿನ ವರ್ಗಾವಣೆಗೆ ಸೀಮಿತ ಅಲ್ಲ. ಒಬ್ಬ ಸಂಗೀತಗಾರ ರಾಗದ ಮೂಲಕ ರಸಸ್ಫುರಣ ಮಾಡುವುದಕ್ಕಾಗಿ ಪದಗಳನ್ನು ಬಳಸುತ್ತಾನೆ. ಆ ಪದಗಳು 'ಲಲಲಲಾ' ಎಂದಿದ್ದರೂ, 'ವಾತಾಪಿ ಗಣಪತಿಂ ಭಜೇ' ಎಂದಿದ್ದರೂ ಸಂಗೀತಗಾರನಿಗೆ ಯಾವ ವ್ಯತ್ಯಾಸವೂ ಇರುವುದಿಲ್ಲ. ಅವನ ಉದ್ದೇಶ ರಾಗದ ಅನುಭೂತಿಯನ್ನು ವರ್ಗಾಯಿಸುವುದೇ ಹೊರತು ಪದಗಳನ್ನು ವರ್ಗಾಯಿಸುವುದಲ್ಲ.

ಅದೇ ರೀತಿಯಲ್ಲಿ, ಪಠ್ಯ ವಸ್ತು ಇರುವುದು ಸಾಮರ್ಥ್ಯದ ವರ್ಗಾವಣೆಗಾಗಿಯೇ ಹೊರತು ಪಠ್ಯ ವಸ್ತುವಿನ ವರ್ಗಾವಣೆಯೇ ಪ್ರಧಾನ ಅಲ್ಲ. ಯುದ್ಧದ ಪಾಠ ಮಾಡಿದಾಗ ಯುದ್ಧದ ವಿವರ ಗೊತ್ತಾಗುವುದಕ್ಕಿಂತ ಹೆಚ್ಚಾಗಿ, ಯುದ್ಧ ತಂತ್ರಗಳು ಹೇಗಿದ್ದಾಗ ಆ ಯುದ್ಧವನ್ನು ಗೆಲ್ಲಲು ಸಾಧ್ಯವಾಯಿತು ಎಂಬುದನ್ನು ಗ್ರಹಿಸುವ ಸಾಮರ್ಥ್ಯ ಬೆಳೆಯಬೇಕು. ಮೂಲಭೂತ ಕರ್ತವ್ಯಗಳ ಪಾಠ ಮಾಡಿದಾಗ, ಅವುಗಳ ವಿವರಗಳನ್ನು ನೆನಪಿರಿಸಿಕೊಳ್ಳುವುದೇ ಪ್ರಧಾನ ಅಲ್ಲ. ಮೂಲಭೂತ ಕರ್ತವ್ಯಗಳ ಆಶಯಕ್ಕನುಗುಣವಾಗಿ ತನ್ನ ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬುದನ್ನು ಗ್ರಹಿಸಿ ವಿದ್ಯಾರ್ಥಿಯ ವರ್ತನೆಯಲ್ಲಿ ಪರಿವರ್ತನೆ ತರುವುದು ಆ ಪಾಠ ಬೋಧನೆಯ ಉದ್ದೇಶವಾಗಿರುತ್ತದೆ.

ಸರ್ವ ಶಿಕ್ಷಣ ಅಭಿಯಾನದ ನಂತರದ ಕಾಲದಲ್ಲಿ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಬೋಧನೋದ್ದೇಶಗಳು ಬಹುಮಟ್ಟಿಗೆ ಹೊರಟುಹೋಗಿವೆ. ಪಠ್ಯ ವಸ್ತುವಿನ ವಿವರವನ್ನಷ್ಟೇ ಕೊಡಲಾಗುತ್ತದೆ. ಏಕೆಂದರೆ, ಬೋಧನೋದ್ದೇಶದ ಸಾಧನೆಯಾಗಿ ವಿದ್ಯಾರ್ಥಿಗಳ ಸಾಮರ್ಥ್ಯ ವೃದ್ಧಿ ಆಗಬೇಕಾದರೆ ಪಠ್ಯ ವಸ್ತು ಕಡಿಮೆ ಇರಬೇಕು. ಬೋಧನಾ ದಕ್ಷತೆ ಜಾಸ್ತಿ ಇರಬೇಕು. ಉದಾಹರಣೆಗೆ, ಇತಿಹಾಸದಲ್ಲಿ ನಡೆದ ಎಲ್ಲಾ ಯುದ್ಧಗಳನ್ನೂ ಪುಸ್ತಕದಲ್ಲಿ ಕೊಡಬೇಕಾಗಿಲ್ಲ. ಯುದ್ಧದ ನಿರ್ವಹಣೆಯಲ್ಲಿ ಒಂದಕ್ಕಿಂತ ಇನ್ನೊಂದು ಭಿನ್ನವಾಗಿರುವ ಯುದ್ಧಗಳನ್ನು ಕೊಟ್ಟರೆ ಸಾಕು.

ಪಠ್ಯಪುಸ್ತಕದಲ್ಲೇ ಆ ಭಿನ್ನತೆ ಏನು, ಯುದ್ಧ ತಂತ್ರಗಳು ಹೇಗಿದ್ದವು ಎಂದು ಹೇಳುವ ಅಗತ್ಯವಿಲ್ಲ. ಅದನ್ನು ಹೇಳುವುದಕ್ಕಾಗಿಯೇ ವಿಷಯ ತಜ್ಞ ಅಧ್ಯಾಪಕರ ನೇಮಕ ಆಗಿರುತ್ತದೆ. ಗಣಿತದಲ್ಲಿ ಭಾಗಿಸುವ ಲೆಕ್ಕಗಳನ್ನೇ 25-30 ಕೊಡಬೇಕಾಗಿಲ್ಲ. 4 ಲೆಕ್ಕಗಳು ಸಾಕು. ಭಾಗಿಸುವ ಸಾಮರ್ಥ್ಯ ವಿದ್ಯಾರ್ಥಿಗಳಿಗೆ ಬರಬೇಕು ಅಷ್ಟೇ. ಭಾಗಿಸುವ ಕ್ರಮದಲ್ಲೇ ವ್ಯತ್ಯಾಸ ಇದ್ದಾಗ ಭಿನ್ನ ಭಿನ್ನ ಭಾಗಾಕಾರ ಕ್ರಮಗಳನ್ನು ಪಠ್ಯಪುಸ್ತಕ ಹೊಂದಿರಬೇಕಾಗುತ್ತದೆ.

ಸರ್ವ ಶಿಕ್ಷಣ ಅಭಿಯಾನ ಹಾಗೂ ನಂತರ ಬಂದ ಶಿಕ್ಷಣ ನೀತಿಗಳೆಲ್ಲವೂ ವಿದ್ಯಾರ್ಥಿಗಳ ಸಾಮರ್ಥ್ಯ ವರ್ಧನೆ ಆಗಬೇಕು ಎಂದೇ ಹೇಳುತ್ತಿವೆ. ಆದರೆ, ಪಠ್ಯಪುಸ್ತಕವನ್ನು ರಚಿಸುವಾಗ ಶಿಕ್ಷಣ ನೀತಿಯು ಮಾರ್ಗದರ್ಶನ ಮಾಡುವುದಿಲ್ಲ. ಬದಲಿಗೆ ಅನೇಕ ಹಿತಾಸಕ್ತಿಗಳು ಮಾರ್ಗದರ್ಶನ ಮಾಡುತ್ತಿವೆ. ಆ ಹಿತಾಸಕ್ತಿಯ ತಂಡಗಳಿಗೆ ಶಿಕ್ಷಣ ಶಾಸ್ತ್ರದ ಜ್ಞಾನಕ್ಕಿಂತ ಬೇರೆಯದೇ ಅಜೆಂಡಾಗಳು ಮುಖ್ಯವಾಗಿವೆ. ಮಾನವಿಕಗಳು ಮತ್ತು ಭಾಷಿಕಗಳ ಮೇಲೆ ರಾಜಕೀಯ ಸಿದ್ಧಾಂತಗಳು ಮತ್ತು ಸಾಮಾಜಿಕ ಚಳವಳಿಗಳ ಒತ್ತಡ ಜಾಸ್ತಿ ಇದ್ದರೆ, ವಿಜ್ಞಾನ ಮತ್ತು ಗಣಿತದ ಮೇಲೆ ಪಾಲಕರ ಆರ್ಥಿಕ ಹಿತಾಸಕ್ತಿಯ ಒತ್ತಡಗಳು ಕೆಲಸ ಮಾಡುತ್ತವೆ. ಪಠ್ಯ ವಸ್ತುವನ್ನು ಕಡಿಮೆ ಮಾಡಿ ಬೋಧನೋದ್ದೇಶದ ಸಾಧನೆಗೆ ಹೆಚ್ಚು ಅವಕಾಶ ಕಲ್ಪಿಸೋಣ ಎಂದು ಹೊರಟರೆ, ಇಂದಿನ ಸಾಮಾಜಿಕ ವ್ಯವಸ್ಥೆ ಅಂತಹ ಪಠ್ಯಪುಸ್ತಕಗಳನ್ನು ತಿರಸ್ಕರಿಸಿ, ಪಾಠ ಪುಸ್ತಕದ ಗಾತ್ರವನ್ನು ದೊಡ್ಡದಾಗಿಸುವ ತನಕವೂ ವಿಶ್ರಮಿಸಲಾರದು.

> ಉತ್ತಮ ಫಲಿತಾಂಶಕ್ಕಾಗಿ ಹಲವು ಪ್ರಯೋಗಗಳನ್ನು ಕೈಗೊಳ್ಳಲಾಗುತ್ತಿದೆ. ವಾಸ್ತವಕ್ಕೆ ಹತ್ತಿರವಲ್ಲದ ಯೋಜನೆಗಳು ಮಕ್ಕಳು ಮತ್ತು ಬೋಧಕರ ಮೇಲೆ ಒತ್ತಡವನ್ನಷ್ಟೇ ಸೃಷ್ಟಿಸಿ, ಶಿಕ್ಷಣದ ಮೂಲ ಉದ್ದೇಶಗಳನ್ನು ಹಾಳುಮಾಡುತ್ತವೆ; ಮಕ್ಕಳ ಬಾಲ್ಯವನ್ನೂ ಕಸಿದುಕೊಳ್ಳುತ್ತವೆ.

'ಕಲಿಸಲು ಆಗದಿದ್ದರೆ ಇನ್‌ಕ್ರಿಮೆಂಟ್ ಕಡಿತ ಮಾಡುತ್ತೇವೆ' ಎಂದು ಅಧ್ಯಾಪಕರಿಗೆ ಹೇಳಿದರೂ, ಇನ್‌ಕ್ರಿಮೆಂಟ್ ಕಡಿತವೇ ಮಾಡಿದರೂ, ನಿಗದಿತ ಪಠ್ಯವನ್ನು ಕಲಿಯುವುದಕ್ಕೇ ಸಾಧ್ಯ ಇಲ್ಲದವರನ್ನು ಏನೂ ಮಾಡಲು ಸಾಧ್ಯವಿಲ್ಲ. ಅವರಿಗೆ ಬಹಳ ಸರಳೀಕೃತ ಪಠ್ಯವನ್ನು ಮಾಡಿ ಕನಿಷ್ಠ ಕಲಿಕೆಯ ಮಟ್ಟಕ್ಕೆ ತಂದು ಎನ್.ಐ.ಒ.ಎಸ್.ನಂತಹ ಸಂಸ್ಥೆಗಳು 12ನೇ ತರಗತಿ ಉತ್ತೀರ್ಣತೆಯ ಪ್ರಮಾಣ ಪತ್ರ ಕೊಡುತ್ತಿರುವಂತೆ, ಸಾರ್ವತ್ರಿಕ ಉಚಿತ ಶಿಕ್ಷಣದ ನೆಲೆಯಲ್ಲಿ ಮಾಡಬೇಕೇ ಹೊರತು, ಎಸ್ಸೆಸ್ಸೆಲ್ಸಿ ಉತ್ತೀರ್ಣ ಆಗಲಿಕ್ಕೇ ಬೇಕೆಂದು ಹಟ ಹಿಡಿದು ಉಪಯೋಗವಿಲ್ಲ. ಏಕೆಂದರೆ, ಇವರು ನಿಧಾನ ಕಲಿಕೆಯವರಲ್ಲ. ಕಲಿಯಲು ಆಗದೆ ಇರುವವರು.

ಶೈಕ್ಷಣಿಕ ಮನೋವಿಜ್ಞಾನದ ಅಧ್ಯಯನದ ಪ್ರಕಾರ, ಭಾರತದಲ್ಲಿ ಕಲಿಕಾ ಹಿಂದುಳಿಯುವಿಕೆಯು ಅತಿ ಹೆಚ್ಚಿನ ಪ್ರಮಾಣದಲ್ಲಿ ಸಾಮಾಜಿಕ ಹಿಂದುಳಿಯುವಿಕೆಯಿಂದ ಆಗಿದೆ. ಅದನ್ನು ಸರಿಪಡಿಸಬೇಕಾದರೆ, ಅಂಥ ಕುಟುಂಬಗಳ ಮಕ್ಕಳಲ್ಲಿ ಆತ್ಮವಿಶ್ವಾಸ ತರಬೇಕು. ಕಲಿಕಾ ಚಟುವಟಿಕೆಗಳಲ್ಲಿ ಅವರು ಹೆಚ್ಚು ತೊಡಗಿಕೊಳ್ಳುವಂತೆ ಉತ್ತೇಜಿಸಬೇಕು. ಇವೆರಡನ್ನೂ ಸಾಧಿಸಬೇಕಾದರೆ ದಕ್ಷತೆ ಮತ್ತು ಬದ್ಧತೆಗಳೆರಡೂ ಇದ್ದು ಬೋಧನೆಯಲ್ಲಿ ಸ್ವಾತಂತ್ರ್ಯ ಇರುವ ಅಧ್ಯಾಪಕರು ಬೇಕು.

ಅಧ್ಯಾಪಕರಿಗೆ ದಕ್ಷತೆ ಇಲ್ಲದೆ ಇದ್ದರೆ ಅಧ್ಯಾಪಕರನ್ನು ಆಯ್ಕೆ ಮಾಡಿದ ಪರೀಕ್ಷೆ ಸರಿ ಇಲ್ಲದೆ ಇರುವುದು ಅದಕ್ಕೆ ಕಾರಣವಾಗಿರುತ್ತದೆ. ಬದ್ಧತೆ ಇಲ್ಲದಿದ್ದರೆ ಅದಕ್ಕೆ ಅಧ್ಯಾಪಕನೇ ಕಾರಣನಾಗಿರುತ್ತಾನೆ. ಆದರೆ, ಕೆಲವು ಅಧ್ಯಾಪಕರು ದಕ್ಷತೆ ಮತ್ತು ಬದ್ಧತೆ ಇಲ್ಲದವರು ಎಂದು ಔದ್ಯೋಗಿಕ ಪರಿಸರದಲ್ಲೇ ಅಧ್ಯಾಪಕರಿಗಿರಬೇಕಾದ ಸ್ವಾತಂತ್ರ್ಯವನ್ನು ಕಡಿತಗೊಳಿಸುತ್ತಾ ಹೋದರೆ, ದಕ್ಷತೆ- ಬದ್ಧತೆ ಇರುವವರಿಗೂ ಏನೂ ಮಾಡಲು ಆಗುವುದಿಲ್ಲ.

ಉದಾಹರಣೆಗೆ, ಅತೀ ಕಡಿಮೆ ಪಿರಿಯೆಡ್‌ಗಳಿದ್ದು ಬೋಧನೆಯನ್ನು ವೇಗವಾಗಿ ಮಾಡಿದಾಗ ನಿಧಾನ ಕಲಿಕೆಯವರಿಗೆ ಗ್ರಹಿಸಲು ಆಗುವುದಿಲ್ಲ. ಆಗ ಅವರಿಗೆ ವಿಶೇಷ ತರಗತಿಗಳನ್ನು ಮಾಡಬೇಕು. 'ವಿಶೇಷ ತರಗತಿಗಳನ್ನು ಮಾಡಿ' ಎನ್ನುವುದು ಸುಲಭ. ಆದರೆ, ಸಾಮಾಜಿಕವಾಗಿ ಹಿಂದುಳಿದ ಸಾಕಷ್ಟು ಕುಟುಂಬಗಳಲ್ಲಿ ಶಾಲೆ ಪ್ರಾರಂಭವಾಗುವ ಮೊದಲು ಮತ್ತು ಶಾಲೆ ಮುಗಿದ ಮೇಲೆ ತಂದೆ, ತಾಯಿಗೆ ಮಕ್ಕಳು ಸಹಾಯ ಮಾಡಬೇಕಾದಂತಹ ಅವಶ್ಯಕತೆ ಇರುತ್ತದೆ. ಸಂಜೆ ಐದೂವರೆ ತನಕ ತರಗತಿ ಮಾಡಿದರೆ ಮಕ್ಕಳು ಮನೆಗೆ ತಲುಪುವಾಗ ರಾತ್ರಿ ಆಗಿಬಿಡುವ ಸಮಸ್ಯೆ ಇರುತ್ತದೆ. ಆಗ ಹೆಣ್ಣುಮಕ್ಕಳಿಗೆ ಮತ್ತಷ್ಟು ಸಮಸ್ಯೆ. ಎಲ್ಲಕ್ಕಿಂತ ಮುಖ್ಯವಾಗಿ, ವಿಶ್ವಸಂಸ್ಥೆ ಘೋಷಿಸಿದ ಮಕ್ಕಳ ಹಕ್ಕುಗಳಲ್ಲಿ ಮಕ್ಕಳಿಗೆ ವಿಶ್ರಾಂತಿಯ ಹಕ್ಕೂ ಇದೆ.

ಪರಿಸ್ಥಿತಿ ಹೀಗಿದ್ದಾಗ ದಕ್ಷತೆ ಮತ್ತು ಬದ್ಧತೆ ಇರುವ ಅಧ್ಯಾಪಕರೂ ಏನೂ ಮಾಡಲಾರದ ಪರಿಸ್ಥಿತಿ ಬರುತ್ತದೆ. ಫಲಿತಾಂಶ ಉನ್ನತೀಕರಣಕ್ಕಾಗಿ ಅಧ್ಯಾಪಕರ ಮೇಲೆ ಹಾಕುವ ಅತಿಯಾದ ಒತ್ತಡಗಳು ಅಂತಿಮವಾಗಿ ಅಧ್ಯಾಪಕರು ತಮ್ಮ ಒತ್ತಡವನ್ನು ಮಗುವಿನ ಮೇಲೆ ಹಾಕುವ ಮೂಲಕವೇ ಈಡೇರಿಸಬೇಕು. ಇದರ ಪರಿಣಾಮ ಮಗುವಿನ ಬಾಲ್ಯವನ್ನು ಕಸಿಯುವುದಾಗುತ್ತದೆ.

ನಿಧಾನ ಕಲಿಕೆಯ ವಿದ್ಯಾರ್ಥಿಗಳಲ್ಲಿ ಇವತ್ತು ಕಂಡುಬರುವ ಬಹುಮುಖ್ಯ ಸಮಸ್ಯೆ ಭಾಷೆಯದ್ದು. ಒಳ್ಳೆಯ ಫಲಿತಾಂಶ ಬರುವುದು ವಿದ್ಯಾರ್ಥಿಯ ಬಳಿ ಇರುವ ಜ್ಞಾನದ ಸಾಮರ್ಥ್ಯಕ್ಕಲ್ಲ. ಆ ಜ್ಞಾನವನ್ನು ಬರೆದು ಹೇಳಲು ಇರುವ ಸಾಮರ್ಥ್ಯಕ್ಕೆ. ಬರೆದು ಹೇಳಬೇಕಾದ ಭಾಷಾ ಸಾಮರ್ಥ್ಯ ಬೇಕೇಬೇಕು. ಆದರೆ, ವ್ಯಾಕರಣ ನಿಯಮಾನುಸಾರ ಭಾಷೆಯನ್ನು ಕಲಿಸುವ ಪದ್ಧತಿಯನ್ನು ಕೈಬಿಡುತ್ತಾ ಬಂದ ಹಾಗೆ ವಿದ್ಯಾರ್ಥಿಗಳಲ್ಲಿ ಭಾಷಾ ಸಾಮರ್ಥ್ಯ ಕುಸಿಯುತ್ತಾ ಹೋಗಿದೆ. ಇದರರ್ಥ, ಆಧುನಿಕ ಭಾಷಾ ಕಲಿಕೆಯ ಪದ್ಧತಿ ತಪ್ಪೆಂದಲ್ಲ. ಆದರದು ಸರಾಸರಿ ಮಟ್ಟ ಮತ್ತು ಅದಕ್ಕಿಂತ ಮೇಲಿರುವ ವಿದ್ಯಾರ್ಥಿಗಳಿಗೆ ಹೊಂದಿಕೊಳ್ಳುತ್ತದೆ. ಕಲಿಕೆಯಲ್ಲಿ ಹಿಂದುಳಿದವರಿಗೆ ಹೊಂದಿಕೊಳ್ಳುವುದಿಲ್ಲ. ಫಲಿತಾಂಶದಲ್ಲೇ ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯ ಕುಸಿದಿರುವುದು ಇನ್ನೂ ದೊಡ್ಡದಾಗಿ ಕಾಣಲು ಶುರುವಾಗಿಲ್ಲ.

ಭಾಷಾ ಪತ್ರಿಕೆಗಳಲ್ಲಿ ಅನುತ್ತೀರ್ಣ ಆಗುವವರಿಗಿಂತ ಕೋರ್ ವಿಷಯಗಳಲ್ಲಿ ಅನುತ್ತೀರ್ಣತೆ ಹೆಚ್ಚಾಗಿದೆ. ಫಲಿತಾಂಶದಲ್ಲಿ ಈ ರೀತಿ ಕಾಣಿಸಲು ಕಾರಣ, ಭಾಷಾ ಪತ್ರಿಕೆಗಳ ಪ್ರಶ್ನೆಪತ್ರಿಕೆಯ ವಿನ್ಯಾಸ. ಪದ್ಯ ಬಾಯಿಪಾಠ, ಪತ್ರ ಲೇಖನ, ಗಾದೆ ಮಾತು, ಪ್ರಬಂಧ ಮುಂತಾದ ಖಾತರಿಯ ಮತ್ತು ಸರಳ ಪ್ರಶ್ನೆಗಳಿರುವುದರಿಂದ ಅದರಲ್ಲಿ ಉತ್ತೀರ್ಣರಾಗಿಬಿಡುತ್ತಾರೆ. ಆದರೆ, ಜ್ಞಾನವನ್ನೇ ಭಾಷೆಯ ಮೂಲಕ ಬರೆಯಬೇಕಾದ ಕೋರ್ ವಿಷಯಗಳಲ್ಲಿ ಭಾಷೆ ಸಮರ್ಪಕವಾಗಿ ಗೊತ್ತಿಲ್ಲದಿದ್ದರೆ, ವಿದ್ಯಾರ್ಥಿ ತನ್ನ ಜ್ಞಾನವನ್ನು ವಾಕ್ಯ ರೂಪದಲ್ಲಿ ಹೇಳಲು ಆಗುವುದಿಲ್ಲ. ಆದ್ದರಿಂದ ಕೋರ್ ವಿಷಯಗಳಲ್ಲಿ ಅನುತ್ತೀರ್ಣತೆ ಜಾಸ್ತಿ. ಆದರೆ, ಕೋರ್ ವಿಷಯಗಳಲ್ಲೂ ಅನುತ್ತೀರ್ಣತೆಗೆ ಪ್ರಧಾನ ಕಾರಣ ಭಾಷೆಯೇ.

ಆಡಳಿತವು ಶಾಲೆಗಳ ವಾಸ್ತವವನ್ನು ತಾಯ್ತನದ ಭಾವದಿಂದ ಅರ್ಥ ಮಾಡಿಕೊಂಡು ಸ್ಪಂದಿಸಬೇಕಾದ ಅಗತ್ಯವಿದೆ. ಕಡತಗಳಂತೆ ಮಕ್ಕಳನ್ನು ನಿರ್ವಹಿಸಲು ಸಾಧ್ಯವಿಲ್ಲ. ಒಂದೊಂದು ಮಗುವೂ ಅನನ್ಯವಾದ ಜೀವಂತ ಕಡತವಾಗಿರುತ್ತದೆ. ಪ್ರತಿಯೊಂದು ಮಗುವಿನ ಹಿನ್ನಡೆಗೂ ಅದರದ್ದೇ ಆದ ಕಾರಣವಿರುತ್ತದೆ. ಆ ಕಾರಣಗಳನ್ನು ಅರಿತುಕೊಳ್ಳುವ ಹೃದಯಗಳು ಬೇಕಾಗಿವೆ.

ವಾಚಕರ ವಾಣಿ

ತನಿಖಾ ಸಂಸ್ಥೆಗಳು ದಾಳಗಳಲ್ಲ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣದ ತನಿಖೆಯಲ್ಲಿ 'ಜಾರಿ ನಿರ್ದೇಶನಾಲಯ' ನಿಷ್ಪಕ್ಷಪಾತವಾಗಿ ನಡೆದುಕೊಂಡಿಲ್ಲ ಎನ್ನುವ ಸುಪ್ರೀಂ ಕೋರ್ಟ್ ಅಭಿಪ್ರಾಯ ಸರಿ ಇದೆ.

ತನಿಖಾ ಸಂಸ್ಥೆಗಳು ರಾಜಕೀಯ ಉದ್ದೇಶಗಳಿಗಾಗಿ ಬಳಕೆಯಾದರೆ, ಅವುಗಳ ಮೇಲೆ ಸಾರ್ವಜನಿಕರಿಗೆ ನಂಬಿಕೆ ಉಳಿಯಲು ಹೇಗೆ ಸಾಧ್ಯ? ಕೇಂದ್ರ-ರಾಜ್ಯ ಸರ್ಕಾರದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ತನಿಖಾ ಸಂಸ್ಥೆಗಳು, ಯಾವುದೇ ಪ್ರಭಾವಕ್ಕೆ ಒಳಗಾಗದೆ ಕಾರ್ಯ ನಿರ್ವಹಿಸಿದಾಗಷ್ಟೇ ಅವುಗಳಿಗೆ ಸಾರ್ವಜನಿಕರಿಂದ ಗೌರವ ಸಿಗುವುದು ಸಾಧ್ಯ.

ವಿ.ಜಿ. ಇನಾಮದಾರ, ಸಾರವಾಡ

ರಾಜಕಾರಣಿಗಳಿಂದಾಗಿ ಜನರೂ ಸರಕು!

ಇಂದಿನ ರಾಜಕಾರಣಿಗಳು ಎಲ್ಲವನ್ನೂ ಖಾಸಗೀಕರಣ ಮಾಡಿ ಉದ್ಯಮಿಗಳಿಗೆ ಹಣ ಸಂಗ್ರಹಿಸಲು ಅವಕಾಶ ಮಾಡಿಕೊಡುತ್ತಿದ್ದಾರೆ. ಯಾವುದೇ, ಜಿಲ್ಲಾ ಕೇಂದ್ರದಿಂದ ಹೊರಗೆ ಹೋಗಬೇಕೆಂದರೆ ಶುಲ್ಕ ಕಟ್ಟಬೇಕು. ಸರಕುಗಳಿಗೆ ಸುಂಕವಿದ್ದ ಹಾಗೆ ಟೋಲ್‌ಗಳಲ್ಲಿ ಜನರನ್ನೂ ಸರಕನ್ನಾಗಿ ನೋಡಲಾಗುತ್ತಿದೆ; ಹಣ ಕಟ್ಟಿದರೆ ಮಾತ್ರ ಮುಂದೆ ಹೋಗಲು ಅವಕಾಶ ನೀಡಲಾಗುತ್ತಿದೆ.

ಖಾಸಗಿಯವರ ಬಳಿ ರಸ್ತೆ ಮಾಡಿಸಿ ಬಳಕೆದಾರರ ಶುಲ್ಕ ಸಂಗ್ರಹಿಸಲು ಅವಕಾಶ ಕಲ್ಪಿಸುವ ಸರ್ಕಾರದ ಮನಃಸ್ಥಿತಿ ಬ್ರಿಟಿಷರ ಕಾಲದ ಲ್ಯಾಂಡ್ ಲಾರ್ಡ್‌ಗಳನ್ನು ನೆನಪಿಸುವಂತಹದ್ದು. ನಗರ ಪ್ರದೇಶಗಳಲ್ಲಿದ್ದುಕೊಂಡೇ ರೈತರಿಂದ ಗೇಣಿಯ ದುಡ್ಡು ಪಡೆಯುತ್ತಿದ್ದ ಭೂಮಾಲೀಕರ ಮನಃಸ್ಥಿತಿ ಈಗ ಬೇರೆ ರೀತಿಯಲ್ಲಿ ಮುಂದುವರಿದಿದೆ. ಇಂದಿನ ರಾಜಕಾರಣಿಗಳು ಚುನಾವಣೆ ಸಂದರ್ಭದಲ್ಲಷ್ಟೇ ಜನರ ಬಳಿಗೆ ಬರುತ್ತಾರೆ. ಉಳಿದ ಎಲ್ಲ ವ್ಯವಹಾರ ರಾಜಧಾನಿಯಲ್ಲಿ, ಉದ್ಯಮಿಗಳ ಜೊತೆ.

ಪ್ರಶಾಂತ್ ಕೆ.ಸಿ., ಚಾಮರಾಜನಗರ

ಸಮಾವೇಶದ ಬದಲು ಗ್ರಾಮಾಭಿವೃದ್ಧಿ

ರಾಜಕೀಯ ಸಮಾವೇಶಗಳಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡಲಾಗುತ್ತದೆ. ಹಣವನ್ನು ಆಡಂಬರಕ್ಕೆ ಪೋಲು ಮಾಡುವ ಬದಲು, ಅರ್ಥಪೂರ್ಣವಾಗಿ ಬಳಸಬಹುದು. ಸಮಾವೇಶಕ್ಕೆ ಬಳಸುವ ಸಂಪನ್ಮೂಲಗಳನ್ನು ಕುಗ್ರಾಮಗಳ ಅಭಿವೃದ್ಧಿಗೆ ವಿನಿಯೋಗ ಮಾಡಬಹುದು.

ಎಷ್ಟೋ ಹಳ್ಳಿಗಳಿಗೆ ಇಂದಿಗೂ ಸಾರಿಗೆ ಸಂಪರ್ಕವಿಲ್ಲ. ಸ್ಮಶಾನಗಳಿಲ್ಲದ ಊರುಗಳು ಸಾಕಷ್ಟಿವೆ. ಇಂಥ ಹಳ್ಳಿಗಳಿಗೆ ಮೂಲ ಸೌಕರ್ಯ ಒದಗಿಸಲು ರಾಜಕೀಯ ಪಕ್ಷಗಳು ಮುಂದಾಗಬೇಕು. ಆಗ, ಅಭಿವೃದ್ಧಿ ಹೊಂದಿದ ಊರಿನ ಫಲಾನುಭವಿಗಳ ಅಭಿಮಾನ ಮತ್ತು ಪ್ರೀತಿ ದೊರೆಯುತ್ತದೆ. ಸಂಪರ್ಕ ಕ್ರಾಂತಿಯ ದಿನಗಳಲ್ಲಿ 'ಸಾಧನೆ'ಯನ್ನು ಸಮಾವೇಶದ ಮೂಲಕ ತೋರಿಸುವ ಅಗತ್ಯವಿಲ್ಲ. ಯಾವುದಾದರೂ ಗ್ರಾಮವನ್ನು ಅಭಿವೃದ್ಧಿಪಡಿಸುವ ಮೂಲಕ ತಮ್ಮ ಪಕ್ಷ- ಸರ್ಕಾರದ ಯಶೋಗಾಥೆಯನ್ನು ಜನರಿಗೆ ಪರಿಣಾಮಕಾರಿಯಾಗಿ ಮುಟ್ಟಿಸಬಹುದಾಗಿದೆ.

ಸುರೇಶ್ ಎಸ್., ವಡಗಲಪುರ

ಕತ್ತಿ- ಕುಡಗೋಲು: ಅವಘಡ ತಪ್ಪಿಸಿ

ಕೆಪಿಟಿಸಿಎಲ್ ಮತ್ತು ಎಸ್ಕಾಂ ಸಿಬ್ಬಂದಿ, ರಸ್ತೆಬದಿಯ ಮರಗಳ ಟೊಂಗೆಗಳನ್ನು ವಿದ್ಯುತ್ ತಂತಿಗಳಿಗೆ ತಾಗದಂತೆ ಕತ್ತರಿಸುವುದು ವಾಡಿಕೆ. ಇದು ಮಳೆಗಾಲದಲ್ಲಿ ಸಂಭವನೀಯ ಅಪಾಯ ತಪ್ಪಿಸಲು ನಡೆಯುವ ವಾರ್ಷಿಕ ಪ್ರಕ್ರಿಯೆ. ಸಿಬ್ಬಂದಿಯು ಉದ್ದದ ಕೋಲಿಗೆ ಕತ್ತಿ ಅಥವಾ ಕುಡಗೋಲು ಕಟ್ಟಿಕೊಂಡು ದ್ವಿಚಕ್ರ ವಾಹನಗಳಲ್ಲಿ ಧಾವಿಸುತ್ತಿರುತ್ತಾರೆ. ಹಾಗೆ ಸಾಗುವಾಗ ಹರಿತವಾದ ಕುಡಗೋಲು ರಸ್ತೆಯಲ್ಲಿ ಸಂಚರಿಸುತ್ತಿರುವ ಅಮಾಯಕರಿಗೆ ತಾಗಿ ಅವಘಡ ಸಂಭವಿಸುವ ಸಾಧ್ಯತೆಯಿದೆ. ಇಂಧನ ಸಚಿವರು, ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕಿದೆ.

ಡಾ. ಜ್ಞಾನೇಶ್ವರ ಕೆ.ಬಿ., ಮೈಸೂರು

ರಾಜಕೀಯ ಗೊಡವೆ ಸ್ವಾಮಿಗಳಿಗೇಕೆ?

ಇತ್ತೀಚೆಗೆ ಚಿಕ್ಕ ಮಠದ ಸ್ವಾಮೀಜಿಗಳಿಂದ ಹಿಡಿದು 'ಜಗದ್ಗುರು' ಎಂದು ಕರೆಸಿಕೊಳ್ಳುವವರೂ ಇಂಥವರೇ ಮುಖ್ಯಮಂತ್ರಿ ಆಗಬೇಕೆಂದು ಫರ್ಮಾನು ಹೊರಡಿಸುತ್ತಿದ್ದಾರೆ. ಕೆಲವರದ್ದು ಜಾತಿ ವ್ಯಾಮೋಹ; ಹಲವರದ್ದು ಫಲಾಪೇಕ್ಷೆ. ಅವರು ಮಾತನಾಡುವ ಶೈಲಿ ಆಶೀರ್ವಾದದಂತಿರದೆ ಆಜ್ಞೆಯೇನೋ ಎಂಬಂತೆ ಭಾಸವಾಗುತ್ತದೆ.

ಮುಖ್ಯಮಂತ್ರಿಯ ಆಯ್ಕೆ ಮಾಡುವುದು ಶಾಸಕರು ಇಲ್ಲವೇ ಪಕ್ಷದ ಹೈಕಮಾಂಡ್ ಎನ್ನುವುದು ಸಾಮಾನ್ಯ ಜ್ಞಾನ. ಯಾವುದೇ ಸರ್ಕಾರ ಬಂದರೂ ಮಠಗಳಿಗೆ ಕೊಡುವ ಅನುದಾನಕ್ಕಂತೂ ಕೊರತೆಯಾಗುವುದಿಲ್ಲ. ಹೀಗಿರುವಾಗ ನಮ್ಮ ಕುಲದವರೇ ಸಿ.ಎಂ ಆಗಬೇಕೆಂಬ ಹುಕಿಗೆ ಬಿದ್ದರೆ ಜಗದ್ಗುರುಗಳೆಲ್ಲ ಜಾತಿ ಗುರುವಾಗಿ ಬಿಡುತ್ತಾರಷ್ಟೇ. ಕರ್ನಾಟಕದಲ್ಲಂತೂ ಎಲ್ಲರೂ ಜಾತಿ ಗುರುಗಳಂತೆ ಕಾಣಿಸುತ್ತಿದ್ದಾರೆ. ಇರುವ ಮಠಗಳೆಲ್ಲ ಜಾತಿ ಮಠಗಳೆಂಬ ಸತ್ಯ ಜನಸಾಮಾನ್ಯರಿಗೆ ಅರ್ಥವಾಗಿದೆ. ಇತ್ತೀಚೆಗೆ ಕೆಲವು ಸ್ವಾಮೀಜಿಗಳು ಸಲ್ಲದ ಕಾರಣಗಳಿಗಾಗಿ ಸುದ್ದಿಯಾಗುತ್ತಿದ್ದಾರೆ. ಅಂತಹವರನ್ನು ನೋಡಿದಾಗ- ರಾಜಕೀಯ ಗೊಡವೆ ಅವರಿಗೇಕೆ, ಕಾವಿ ಬಿಸಾಕಿ ಚುನಾವಣೆಗೆ ಸ್ಪರ್ಧಿಸುವುದು ಉತ್ತಮವಲ್ಲವೇ ಅನ್ನಿಸುತ್ತದೆ.

ಬಿ.ಎಲ್. ವೇಣು, ಚಿತ್ರದುರ್ಗ

ಎಲ್ಲಾ ಶಾಲೆಗೂ ಸಿ.ಸಿ.ಟಿ.ವಿ ಅಳವಡಿಸಿ

ಸಿಬಿಎಸ್‌ಸಿ ಶಾಲೆಗಳಲ್ಲಿ ಧ್ವನಿಸಹಿತ ದೃಶ್ಯ ದಾಖಲಿಸುವ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆಗೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ ಸೂಚಿಸಿರುವುದು ಸ್ವಾಗತಾರ್ಹ (ಪ್ರ.ವಾ., ಜುಲೈ 22). ಮಕ್ಕಳೆಂದರೆ ಎಲ್ಲರೂ ಒಂದೇ; ದೇವರ ಸಮಾನ ಎಂಬ ಮಾತಿದೆ. ಮಕ್ಕಳ ರಕ್ಷಣೆಯ ದೃಷ್ಟಿಯಿಂದ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲೂ ಈ ನಿಯಮ ರೂಪಿಸಬೇಕಿದೆ.

ಗೂಗಿ ಸತ್ಯಮೂರ್ತಿ, ಬೆಂಗಳೂರು

ಜಾಲತಾಣ

ನಾಲಿಗೆ ತುಕ್ಕು ಹಿಡಿಯದಿರಲಿ

ಪ್ರಶ್ನಿಸದೆ ಏನನ್ನೂ ಒಪ್ಪಿಕೊಳ್ಳಬಾರದು. ನಾಲಿಗೆಗೆ ತುಕ್ಕು ಹಿಡಿದರೆ, ಬಾಯಿ ಕೊಳೆತು ನಾರುತ್ತದೆ. ಇದು ಪ್ರಜಾಪ್ರಭುತ್ವ ರಾಷ್ಟ್ರ. ನಾವು ಯಾರ ಗುಲಾಮರೂ ಅಲ್ಲ. ಇಲ್ಲಿ ಯಾರೂ ಸರ್ವಾಧಿಕಾರಿ ಅಲ್ಲ. ಇರುವ ಕ್ಷಣಿಕ ಜೀವನದಲ್ಲಿ ನಾವು ಮಾತನಾಡದೇ ಮಣ್ಣಾಗಿಬಿಟ್ಟರೆ ಹೇಗೆ?

ಮಧು ಹೊಲೆಯಾರ್, ಬರಹಗಾರ್ತಿ, ಫೇಸ್‌ಬುಕ್‌ನಿಂದ

ಕಿಡಿನುಡಿ

ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ, ಸಿಬಿಐನಂತಹ ಸ್ವಾಯತ್ತ ಸಂಸ್ಥೆಗಳನ್ನು ಬಿಜೆಪಿ ತನ್ನ ಅಂಗಸಂಸ್ಥೆಗಳನ್ನಾಗಿ ಮಾಡಿಕೊಂಡು ಅವುಗಳನ್ನು ದುರ್ಬಲಗೊಳಿಸುತ್ತಿದೆ. ಬಿಜೆಪಿಯವರಿಗೆ ನೈತಿಕತೆ ಇದೆಯೇ?

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 23-7-2000

● **ಷರೀಫ್‌ಗೆ 14 ವರ್ಷ ಜೈಲು**

ಇಸ್ಲಾಮಾಬಾದ್, ಜುಲೈ 22 (ಎಎಫ್‌ಪಿ)- ತೆರಿಗೆ ವಂಚನೆ ಆರೋಪಕ್ಕಾಗಿ ಭ್ರಷ್ಟಾಚಾರ ವಿರೋಧಿ ನ್ಯಾಯಾಲಯವು, ಪಾಕಿಸ್ತಾನದ ಪದಚ್ಯುತ ಪ್ರಧಾನಿ ನವಾಜ್ ಷರೀಫ್ ಅವರಿಗೆ 14 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಅಲ್ಲದೆ, 21 ವರ್ಷಗಳವರೆಗೆ ರಾಜಕೀಯ ನಿಷೇಧವನ್ನೂ ಹೇರಿದೆ.

ಅಪಹರಣ ಮತ್ತು ಭಯೋತ್ಪಾದನೆ ಕುರಿತಂತೆ ಈಗಾಗಲೇ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಷರೀಫ್‌ಗೆ ನ್ಯಾಯಾಧೀಶ ಫಾರೂಕ್ ಲತೀಫ್ ಅವರು, ಎರಡು ಕೋಟಿ ರೂಪಾಯಿ (37,000 ಡಾಲರ್) ದಂಡ ವಿಧಿಸಿದ್ದಾರೆ. ದಂಡ ಕಟ್ಟಲು ವಿಫಲವಾದರೆ ಇನ್ನೂ ಮೂರು ವರ್ಷ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ.

● **ಕೇಂದ್ರಕ್ಕೆ ಮಹಾರಾಷ್ಟ್ರ ಸಡ್ಡು ಬಾಳಾ ಠಾಕ್ರೆ ಬಂಧನಕ್ಕೆ ಸಿದ್ಧತೆ**

ಮುಂಬೈ, ಜುಲೈ 22 (ಪಿಟಿಐ)- ಅರೆ ಸೈನಿಕ ಪಡೆ ಕಳಿಸಲು ನಿರಾಕರಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಸಡ್ಡು ಹೊಡೆದಿರುವ ಮಹಾರಾಷ್ಟ್ರ ಸರ್ಕಾರವು, ಶಿವಸೇನೆಯ ಮುಖ್ಯಸ್ಥ ಬಾಳಾ ಸಾಹೇಬ್ ಠಾಕ್ರೆ ಅವರ ಬಂಧನದಿಂದ ಉಂಟಾಗಬಹುದಾದ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ಎದುರಿಸಲು ನೆರೆಯ ರಾಜ್ಯಗಳಿಂದ ಭದ್ರತಾ ಪಡೆಗಳನ್ನು ಕರೆಸಿಕೊಳ್ಳಲು ನಿರ್ಧರಿಸಿದೆ.

75 ವರ್ಷಗಳ ಹಿಂದೆ

ಭಾನುವಾರ, 23-7-1950

● **ಅನ್ನ ಕೊಡಿ- ಕೆಲಸ ಕೊಡಿ**

ಪಾಟ್ನಾ, ಜುಲೈ 22- ಮಾಂಘೀರ್ ಜಿಲ್ಲೆಯ ಖಗಾರಿಯಾ ಸಬ್ ಡಿವಿಜನ್‌ಗೆ ಸೇರಿದ ರಾಮಗಂಜ್ ಮತ್ತು ಸಂಸಾರ್‌ಪೂರ್ ಎಂಬ ಹಳ್ಳಿಗಳ ಸುಮಾರು ಮೂರು ನೂರು ರೈತರು, 'ಅನ್ನ ಕೊಡಿ', 'ಕೆಲಸ ಕೊಡಿ' ಎಂದು ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಮೂಲಕ ಸಬ್ ಡಿವಿಜನ್ ಕೋರ್ಟ್ ಮುಂದೆ ಪ್ರದರ್ಶನ ನಡೆಸಿದರೆಂದು ವರದಿಯಾಗಿದೆ.

ಮಾಂಘೀರ್ ಜಿಲ್ಲೆಯ ಕೆಲವು ಭಾಗದಲ್ಲಿ ಆಹಾರ ಅಭಾವದ ಉತ್ಕಟಾವಸ್ಥೆ ಹೆಚ್ಚಾಗಿದೆಯೆಂದು, ಅದಕ್ಕಾಗಿ ಈ ರೀತಿ ಪ್ರದರ್ಶನ ಮಾಡಲಾಯಿತು ಎಂದು ವರದಿಯಾಗಿದೆ.

ಎಸ್.ಡಿ.ಓ ಅವರು, ಭರವಸೆ ಇತ್ತ ಬಳಿಕ ಅಲ್ಲಿಂದ ಎಲ್ಲರೂ ಚದುರಿದರೆಂದು ಗೊತ್ತಾಗಿದೆ.

ಚುರುಮುರಿ

ಸರಿಗನ್ನಡಂ...

● ಮಣ್ಣೆ ರಾಜು

ಮಗಳು ಹೋಂ ವರ್ಕ್ ಬರೆಯುತ್ತಿದ್ದಳು. ಶಂಕ್ರಿ, ಹೆಂಡ್ತಿ ಹೇಳುವ ತರಕಾರಿಯ ಪಟ್ಟಿ ಬರೆಯುತ್ತಿದ್ದ.

'ಮಮ್ಮಿ, 'ಬೇದಿ'ಗೆ ಹೊಕ್ಕುಳ ಸೀಳಬೇಕಾ?' ಮಗಳು ಕೇಳಿದಳು.

'ಥೂ, ಸೀಳಬೇಡ, ಗಲೀಜು' ಸುಮಿ ಮುಖ ಕಿವುಚಿಕೊಂಡಳು.

'ಸೀಳಬೇಕು ಪುಟ್ಟಿ. 'ಬೇ'ಗೆ ಹೊಕ್ಕುಳ ಸೀಳಿದರೆ ಸರಿಯಾದ 'ಭೇದಿ' ಆಗುತ್ತದೆ' ಅಂದ ಶಂಕ್ರಿ.

'ಸರಿ ಡ್ಯಾಡಿ, ಹೋಂ ವರ್ಕ್ ಮುಗಿಸಿದೆ ನೋಡಿ' ಮಗಳು ಪುಸ್ತಕ ಕೊಟ್ಟಳು.

ಪರಿಶೀಲಿಸಿದ ಶಂಕ್ರಿ, 'ಪುಟ್ಟಿ, 'ಹಸು'ವನ್ನು 'ಹಸ' ಅಂತ ಬರೆದಿದ್ದೀಯ, 'ಕೊಂಬು' ಕೊಟ್ಟು 'ಹಸು' ಮಾಡು'.

'ಡ್ಯಾಡಿ, ಕೊಂಬು ಕೊಟ್ಟರೆ ಹಸು ಹಾಯೋದಿಲ್ವಾ?!' ಮಗಳು ಕಿಸಕ್ಕನೆ ನಕ್ಕಳು.

'ಹಾಯುತ್ತೋ ಬಿಡುತ್ತೋ ಹಸುಗೆ ಕೊಂಬು ಕೊಡಬೇಕು'.

'ತರಕಾರಿ ಲಿಸ್ಟ್ ಕೊಡ್ರಿ, ನೋಡಿ ಇನ್ನೇನು ಬೇಕು ಅಂತ ಹೇಳ್ತೀನಿ' ಎಂದು ಪಟ್ಟಿ ಈಸ್ಕೊಂಡ ಸುಮಿ, 'ಇದೇನ್ರೀ, ಹ್ಯಾಂಡ್ ರೈಟಿಂಗ್ ಇಷ್ಟು ಕೆಟ್ಟದಾಗಿದೆ' ಎಂದಳು.

'ಕಂಪ್ಯೂಟರ್‌ನಲ್ಲಿ ಬರವಣಿಗೆ ಶುರುವಾದ ಮೇಲೆ ಕೈಬರಹದ ಅಭ್ಯಾಸ ತಪ್ಪಿ ಅಕ್ಷರಗಳು ಹಿಡಿತ ತಪ್ಪಿವೆ'.

'ಮಗಳ ಜೊತೆ ನೀವೂ ಕಾಪಿ ರೈಟಿಂಗ್ ಬರೆದು ಹ್ಯಾಂಡ್ ರೈಟಿಂಗ್ ಇಂಪ್ರೂವ್ ಮಾಡಿಕೊಳ್ಳಿ... ಇದೇನ್ರೀ, ಮೂಲಂಗಿಯನ್ನು 'ಮೇಲಂಗಿ' ಅಂತ ಬರೆದಿದ್ದೀರಿ, ಆಲೂಗೆಡ್ಡೆಯನ್ನು 'ಹಾಲುಗೆಡ್ಡೆ' ಮಾಡಿದ್ದೀರಿ...'

'ನಮ್ಮ ಮನೆಗನ್ನಡ ಅಂಗಡಿಯವರಿಗೆ ಅರ್ಥವಾಗುತ್ತೆ, ಮೊನ್ನೆ ನೀನು ತುಪ್ಪವನ್ನು 'ತಪ್ಪ' ಅಂತ ಬರೆದಿದ್ದೆ, ಅಂಗಡಿಯವನು ಸರಿಯಾದ ತುಪ್ಪ ಕೊಟ್ಟ. ಡಾಕ್ಟರ್‌ಗಳ ಪ್ರಿಸ್ಕ್ರಿಪ್ಷನ್ ನಮಗೆ ಅರ್ಥವಾಗದಿದ್ದರೂ ಮೆಡಿಕಲ್ ಸ್ಟೋರ್‌ನವರಿಗೆ ಅರ್ಥವಾಗುತ್ತದಲ್ಲ, ಇದೂ ಹಾಗೇ!'

'ಕನ್ನಡಿಗರಾದ ನಾವೇ ಕನ್ನಡವನ್ನು ತಪ್ಪಾಗಿ ಬರೆಯೋದು ಸರಿಯಲ್ಲ, ಮೊನ್ನೆ ನೀವು ವಾಟ್ಸ್‌ಆ್ಯಪ್‌ನಲ್ಲಿ 'ಸಿರಿಗನ್ನಡಂ ಗೆಲ್ಗೆ' ಎಂಬುದನ್ನು 'ಗಲ್ಗೆ' ಎಂದು ಬರೆದು ಗ್ರೂಪ್ ಗೆಳೆಯರೆದುರು ನಗೆಪಾಟಲಿಗೀಡಾದ್ರಿ, ಇನ್ಮೇಲಾದರೂ ಸರಿಗನ್ನಡ ಬರೆಯಿರಿ...' ಎಂದಳು ಸುಮಿ.

ಸಂಗತ

ಕಾಲದ ಹೊಳೆಯಲ್ಲಿ ಉಳಿದ ರೇಡಿಯೊ

ಮಾತಿನ ಸಾಧ್ಯತೆ ಹಾಗೂ ಧ್ವನಿಶಕ್ತಿಯನ್ನು ರೇಡಿಯೊ ಬಳಸಿಕೊಂಡಂತೆ ಬೇರೆ ಯಾವುದೇ ಮಾಧ್ಯಮ ಬಳಸಿಕೊಂಡಿರುವುದು ಕಡಿಮೆ.

● ಜಿ.ಎಂ. ಶಿರಹಟ್ಟಿ

ಎಲ್ಲ ರಸಗಳನ್ನು ಕಿವಿಯಿಂದಲೇ ಸವಿಯುವ ಒಂದು ಅವಕಾಶವಿದೆ ಎಂದರೆ ತಕ್ಷಣಕ್ಕೆ ನಂಬುವುದು ಕಷ್ಟ. ಯೋಚಿಸಿ ನೋಡಿದರೆ, 'ಕರ್ಣಯಜ್ಞ'ದ ಆ ಸಾಧ್ಯತೆ ಹೊಳೆಯುತ್ತದೆ. ಆ ಯಜ್ಞದ ಯಂತ್ರ ರೇಡಿಯೊ. ಅದು ಧ್ವನಿ ಪ್ರಪಂಚದ ಆಸ್ತಿ!

ನಮ್ಮ ಸಾಮಾಜಿಕ ಜೀವನದಲ್ಲಿ ಸಪ್ಪಳ ಹಾಗೂ ಸಾಂಸ್ಕೃತಿಕ ನಡೆ- ನುಡಿಗಳಲ್ಲಿನ ಧ್ವನಿ, ಇವೆರಡೂ ನಮ್ಮ ಜೊತೆಗೇ ಇರುವುದನ್ನು ನಾವು ಗಮನಿಸುವುದು ಅತ್ಯಂತ ವಿರಳ. ನೋಡುವುದು ಬೇಡವಾಗಿದ್ದರೆ ಕಣ್ಣು ಮುಚ್ಚಿಕೊಳ್ಳುತ್ತೇವೆ. ಮಾತನಾಡಲು ಬೇಡವಾಗಿದ್ದರೆ ಬಾಯಿ ಮುಚ್ಚಿಕೊಳ್ಳುತ್ತೇವೆ. ಇವೆರಡೂ ಕ್ರಿಯೆ ತಮ್ಮಷ್ಟಕ್ಕೆ ತಾವೇ, ಅಪ್ರಜ್ಞಾಪೂರ್ವಕವಾಗಿ ಜರುಗುತ್ತವೆ. ಆದರೆ, ಕೇಳಲು ಬೇಡವಾಗಿದ್ದರೆ ಕಿವಿಗಳು ತಮ್ಮಿಂದ ತಾವೇ ಮುಚ್ಚಿಕೊಳ್ಳುವುದಿಲ್ಲ. ಅವನ್ನು ಮುಚ್ಚಲು ಎರಡೂ ಕೈಗಳ ನೆರವು ಬೇಕು. ಅದೊಂದು ಪ್ರಜ್ಞಾಪೂರ್ವಕ ಕ್ರಿಯೆ. ಧ್ವನಿ-ಸಪ್ಪಳ, ಎಲ್ಲಿ ಬೇಕಾದರಲ್ಲಿ ಧಾರಾಳವಾಗಿ ಸಿಗುತ್ತವೆ. ಕಿವಿ ಇದ್ದು ಕಿವುಡರಾಗುವುದು ಈ ಪ್ರಪಂಚದಲ್ಲಿ ಕಷ್ಟದ ಕೆಲಸ. ಇಂಥ ಧ್ವನಿ ಪ್ರಪಂಚಕ್ಕೆ ಮೌಲ್ಯ ಒದಗಿಸಿರುವಂತಹದ್ದು ರೇಡಿಯೊ ಮಾಧ್ಯಮ.

ಬಹಳಷ್ಟು ಸಂದರ್ಭಗಳಲ್ಲಿ ಧ್ವನಿ ಪ್ರಪಂಚವೂ ಒಂದಿದೆ ಎಂಬುದು ಸಹ ನಮಗೆ ಗೊತ್ತೇ ಇರುವುದಿಲ್ಲ. ಈ ಪ್ರಪಂಚದಲ್ಲಿ ಕಣ್ಣುಗಳಿಗೇನೂ ಕೆಲಸವಿಲ್ಲ. ಕಿವಿಗಳಿಗೆ ಮಾತ್ರ ಕಿವಿತುಂಬ ಕೆಲಸ. ಧ್ವನಿಗಳನ್ನು ಗ್ರಹಿಸುತ್ತ, ಮನಸ್ಸಿಗೆ ತಲುಪಿಸುವ ಕೆಲಸವನ್ನು ನಮ್ಮ ಎರಡೂ ಕಿವಿಗಳು ಮಾಡುತ್ತಲೇ ಇರುತ್ತವೆ.

ಮಾತನಾಡಿ ಮಾತನಾಡಿ ಬಾಯಿ ನೋಯುತ್ತದೆ. ಆದರೆ, ಕೇಳಿ ಕೇಳಿ ಕಿವಿಗಳಂತೂ ನೋಯುವುದಿಲ್ಲವಲ್ಲ ಅಥವಾ ಆ ನೋವು ದೈಹಿಕವಾಗಿ ಅರಿವಿಗೆ ಬರುವುದಿಲ್ಲ. ಈ ಗುಟ್ಟನ್ನು ತಿಳಿದ ವಾಚಾಳಿಗಳು ತಮ್ಮ ಮಾತಿಗೆ ಎಂದೂ ಪೂರ್ಣವಿರಾಮ ಕೊಡುವುದಿಲ್ಲ. ಬಾಯಿ ಮತ್ತು ಕಿವಿಯ ನಡುವಿನ ತೊಟ್ಟಿಲು ತೂಗಿ ತೂಗಿ ನಿಂತು ಹರಿದು ಬಿದ್ದರೂ ಅವರ ಮಾತುಗಳು ಮುಂದುವರಿದೇ ಇರುತ್ತವೆ.

ಧ್ವನಿ ಪ್ರಪಂಚದಲ್ಲಿ ನಿರಂತರವಾಗಿ ನಡೆಯುವ ಒಂದು ಕೆಲಸವೆಂದರೆ ಕರ್ಣಯಜ್ಞ. ಈ ಯಜ್ಞ ನಡೆಯುವುದು ಯಾವುದೇ ಆಶ್ರಮದಲ್ಲಿ ಅಲ್ಲ. ರೇಡಿಯೊ ಸ್ಟೇಷನ್‌ನಲ್ಲಿ. ಅಲ್ಲಿ, ದಿನದ ಇಪ್ಪತ್ತನಾಲ್ಕು ತಾಸೂ ಧ್ವನಿಗಳನ್ನು ಸೃಷ್ಟಿಸಿ, ಹೊರಗೆ ಹಾಕಿ ಹಾಕಿ ಸ್ಟೇಷನ್ನಿನ ಹೊರಗೆ ಒಂದು ಪ್ರಪಂಚವೇ ನಿರ್ಮಾಣವಾಗಿರುತ್ತದೆ. ಆ ಧ್ವನಿ ಪ್ರಪಂಚದ ಅಚ್ಚರಿಗಳಲ್ಲಿ ಒಂದು, ಅಲ್ಲಿ ಇರುವವರ ವಯಸ್ಸೇ ಬೇರೆ, ಅವರ ಧ್ವನಿಯ ವಯಸ್ಸೇ ಬೇರೆ. ರೇಡಿಯೊ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ವಯಸ್ಸಾದರೂ ಅವರ ಧ್ವನಿಗೆ ಸದಾ ತಾರುಣ್ಯ.

ರೇಡಿಯೊ ನಾಟಕದಲ್ಲಿ ಭೀಮನ ಪಾತ್ರ ಮಾಡುವವನು ಭೀಮನಂತೆ ದೃಢಕಾಯ ಆಗಿರಬೇಕೆಂದೇನೂ ಇಲ್ಲ. ಮಾತನಾಡುವ ಕಲಾವಿದನ ಶಾರೀರವೇ ಶರೀರದ ಸಾಧ್ಯತೆಗಳನ್ನು ಧ್ವನಿಯ ಮೂಲಕವೇ ಕೇಳುಗರ ಮನಸ್ಸಿನಲ್ಲಿ ಉಂಟು ಮಾಡುತ್ತದೆ. ಬಿಸಿಲಿನ ತಾಪಮಾನ, ಮಳೆಯ ತಂಪು, ಚಳಿಯ ನಡುಕ ಎಲ್ಲವೂ ಮಾತುಗಳ ಮೂಲಕವೇ ಸಹೃದಯರಿಗೆ ಮುಟ್ಟುವುದು ರೇಡಿಯೊ ಮಾಧ್ಯಮದಲ್ಲಿ ಸಾಧ್ಯ.

'ರೇಡಿಯೊ ಮನುಷ್ಯ' ಅಂದರೆ ಕುರುಡ ಎಂದು ಹಿಂದೆ ಯಾರೋ ಹೇಳಿದ್ದು ನೆನಪು. ರೇಡಿಯೊ ಎದುರು ಕುಳಿತಿರುವವನಿಗೆ ದೇವರು ಎರಡು ಕಿವಿ ಕೊಟ್ಟಿದ್ದರೆ ಸಾಕು. ಇಲ್ಲಿ ಕೇಳುವವನಿಗೆ ಕಿವಿ ಇರುವಂತೆ ಹೇಳುವವನಿಗೆ ಬಾಯಿ ಬೇಕು. ಬಾಯಿ ಅಂದರೆ ಕೇವಲ ಬಾಯಿ ಅಲ್ಲ, ಮಾತನಾಡುವ ಬಾಯಿ. ಈ ಪ್ರಪಂಚದಲ್ಲಿ ಮಾತನಾಡುವವ, ಕೇಳುವವ ಇವರಿಬ್ಬರನ್ನೂ ಜೋಡಿಸುವ ಕೊಂಡಿ, ಪ್ರಸಾರ ಯಂತ್ರ. ಬಾಯಿ ಮತ್ತು ಕಿವಿ, ಧ್ವನಿ ಪ್ರಪಂಚದ ಆಧಾರ ಸ್ತಂಭಗಳು. ಈ ಆಧಾರ ಸ್ತಂಭಗಳಿಗೆ ಜೋತುಬಿದ್ದವನಿಗೆ 'ಪ್ರಸಾರಕ' ಎಂದು ಕರೆಯುತ್ತಾರೆ. ಕೇಳುವವರ ಕಿವಿಗಳನ್ನು ಹಚ್ಚಿಕೊಂಡೇ ಪ್ರಸಾರದ ಕೆಲಸ ಮಾಡಬೇಕಾಗುತ್ತದೆ.

ಧ್ವನಿ ಪ್ರಪಂಚದಲ್ಲಿ ರೇಡಿಯೊ ಒಂದು ಪ್ರಬಲ ಯಾಂತ್ರಿಕ ಸಂಪರ್ಕ ಸಾಧನ. ಇಲ್ಲಿ ಒಂದೆಡೆ ಹೇಳುವ ಕ್ರಿಯೆ ನಡೆದಿರುತ್ತದೆ, ಇನ್ನೊಂದೆಡೆ ಕೇಳುವ ಕ್ರಿಯೆ. ಪುರಾಣ, ಪುಣ್ಯ, ಪ್ರವಚನ ಕಥೆಗಳನ್ನು ಓದಿದವರಿಗೆ ಕೇಳಿದವರಿಗೆ ಅಲ್ಲಿ ಬರುವ ಅಶರೀರವಾಣಿಗಳು ಅಪರಿಚಿತವೇನಲ್ಲ. ಈ ಅಶರೀರವಾಣಿಗಳು ಶಾಪ, ವರ, ಆಜ್ಞೆಗಳ ರೂಪದಲ್ಲಿ ಹಿತ ಅಹಿತವಾಗಿದ್ದರೂ ಭಾಷೆ, ಶೈಲಿ, ಗಾತ್ರಗಳಲ್ಲಿ ಮಿತವಾಗಿರಬೇಕು. ಹೇಳುವವರು ಏನೇ ಹೇಳಲಿ, ಅವರು ಮಿತ ಭಾಷಿಗಳಾಗಿರಬೇಕೆಂಬುದೇ ನಮ್ಮ ಶ್ರವಣ ಸಂಸ್ಕೃತಿಯ ಶಿಷ್ಟಾಚಾರ.

ಕೇಳುಗರ ಎದುರು ಧ್ವನಿಚಿತ್ರ ನಿರ್ಮಿಸುವ ಕಲಾವಿದನ ಹತ್ತಿರ ಕುಂಚ-ಬಣ್ಣಗಳು ಇರದಿದ್ದರೂ, ರೂಪಿಸುವ ಕಲಾಕೃತಿ ಅಚ್ಚಳಿಯದೇ ಉಳಿಯುತ್ತದೆ. ಕೇಳು, ಕೇಳಿರಿ, ಲಾಲಿಸು, ಆಲಿಸು ಮುಂತಾದ ಅನೇಕ ಶಬ್ದಗಳನ್ನು ನಮ್ಮ ದೇಶದ ಯಾವುದೇ ಸಂಸ್ಕೃತಿಯಲ್ಲೂ ಕೇಳಬಹುದು. ನಮ್ಮ ಸಂಸ್ಕೃತಿ ಪ್ರಾರಂಭವಾಗಿದ್ದೇ ಧ್ವನಿ ಪ್ರಪಂಚದ ಮೂಲಕ. ಈ ಪ್ರಪಂಚದಲ್ಲಿ ಇರುವವರು ಮಾತನಾಡುವುದು, ಕೇಳುವುದೂ ಇದ್ದೇ ಇದೆ; ಕೇಳಲು ಯೋಗ್ಯವಾದುದನ್ನು ಆಡುವುದು ಹೇಗೆ ಎನ್ನುವುದೇ ಸವಾಲು. ಇದು ಮಾತಿನ ಕಾಲ. ಮಾತನ್ನು ಮೌಲ್ಯದಂತೆ ಬಳಸಬೇಕಾದ ಕಾಲ. ಆ ಮೌಲ್ಯದ ಪ್ರತಿನಿಧಿಯಂತೆ ಗುರ್ತಿಸಿಕೊಂಡಿರುವ ಕಾರಣದಿಂದಲೇ ರೇಡಿಯೊಕ್ಕೆ ಇನ್ನಿಲ್ಲದ ಮಹತ್ವ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಕೀಯ ಸುಳಿಯಲ್ಲಿ ಪಂಚಮಸಾಲಿ ಪೀಠ

ರಾಜ್ಯದ ಪ್ರಮುಖ ಸಮುದಾಯಗಳಲ್ಲಿ ಒಂದಾದ ಲಿಂಗಾಯತ ಪಂಚಮಸಾಲಿ ಸಮಾಜದ ಕೂಡಲಸಂಗಮ ಪೀಠವು ಈಗ ಮತ್ತೆ ಸುದ್ದಿಯಲ್ಲಿದೆ. 2ಎ ಮೀಸಲಾತಿ ಹೋರಾಟದ ಕಾರಣಕ್ಕೆ ಈ ಪೀಠ ಹಾಗೂ ಅದರ ನೇತೃತ್ವ ವಹಿಸಿದ್ದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸುದ್ದಿಯಲ್ಲಿದ್ದರು. ಈಗ ಸ್ವಾಮೀಜಿ ಮತ್ತು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ಆಡಳಿತ ಮಂಡಳಿಯ ಸದಸ್ಯರ ನಡುವಿನ ವೈಮನಸ್ಸಿನ ಕಾರಣಕ್ಕೆ ಉಂಟಾಗಿರುವ ವಿವಾದ ಸದ್ದು ಮಾಡುತ್ತಿದೆ. ಸ್ವಾಮೀಜಿಯವರ ಉಚ್ಚಾಟನೆ, ಮತ್ತೊಂದು ಪೀಠ ಸ್ಥಾಪನೆ ಇನ್ನಿತರ ವಿಚಾರಗಳೆಲ್ಲ ಚರ್ಚೆಯಾಗುತ್ತಿವೆ

• ಬಸವರಾಜ ಹವಾಲ್ದಾರ

ರಾಜ್ಯದ ಪಂಚಮಸಾಲಿ ಸಮಾಜವು ಮೀಸಲಾತಿ ಹೋರಾಟ, ಅದರ ಹಿನ್ನೆಲೆಯಲ್ಲಿ ನಡೆಯುವ ರಾಜಕೀಯ ಬೆಳವಣಿಗೆ, ಅಧಿಕಾರ ಮೇಲಾಟದಿಂದಾಗಿ ಸದಾ ಸುದ್ದಿಯಲ್ಲಿರುತ್ತದೆ. ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಬೇಕು ಎಂದು ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಕೂಡಲಸಂಗಮದ ಪಂಚಮಸಾಲಿ ಪೀಠದ ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರ ಪೀಠದ ಪ್ರವೇಶಕ್ಕೆ ಸಂಚಕಾರ ತಂದಿದೆ.

ಬಿಜೆಪಿ ಹಾಗೂ ಕಾಂಗ್ರೆಸ್‌ನಲ್ಲಿ ಇರುವ ಪಂಚಮಸಾಲಿ ಸಮಾಜದ ಜನಪ್ರತಿನಿಧಿಗಳ ರಾಜಕಾರಣಕ್ಕೆ 2ಎ ಮೀಸಲಾತಿ ಹೋರಾಟ ಮಾತ್ರವಲ್ಲದೆ, ಕೂಡಲಸಂಗಮದ ಪೀಠವೂ ಆಗಾಗ್ಗೆ ದಾಳವಾಗುತ್ತಾ ಬಂದಿದೆ. ಸ್ವಾಮೀಜಿಯನ್ನು ಪೀಠದಲ್ಲಿ ಕೂಡಿಸಿದವರು, ಪೀಠ ಸ್ಥಾಪನೆಗೆ ಆರ್ಥಿಕ ನೆರವು ನೀಡಿ ಬೆನ್ನೆಲುಬು ಆದವರು, ಸಚಿವ ಸ್ಥಾನಕ್ಕೇರಲು, ಟಿಕೆಟ್ ಪಡೆಯಲು ಸ್ವಾಮೀಜಿ ನೆರವು ಪಡೆದವರೇ ಪೀಠದ ವಿರುದ್ಧ ಸಮರ ಸಾರಿದವರೆನ್ನುತ್ತಾರೆ ಭಕ್ತರು.

ಪೀಠದ ಸ್ಥಾಪನೆ, ವಿವಾದ: ಕೂಡಲಸಂಗಮ ಪೀಠಕ್ಕೂ ವಿವಾದಕ್ಕೂ ಹಳೆಯ ನಂಟು. ಆರಂಭದಲ್ಲಿಯೇ ಈ ಪೀಠದಲ್ಲಿ ರಾಜಕೀಯ ಬೆರೆತುಕೊಂಡಿದೆ. ಚುನಾವಣೆಯಲ್ಲಿ ಮತಗಳಿಕೆ, ಸೋಲು ಗೆಲುವು ಎಲ್ಲಾ ಲೆಕ್ಕಾಚಾರವೂ ಇದರೊಳಗಿದೆ ಎಂದು ಹೇಳುತ್ತಾರೆ ಸಮಾಜದ ಆಳ ಅಗಲ ಬಲ್ಲವರು.

2008ರಲ್ಲಿ ಪಂಚಮಸಾಲಿ ಸಮಾಜದ ಬಾಪು ಗೌಡ ಪಾಟೀಲ, ಉಮಾಪತಿ, ಬಸವರಾಜ ದಿಂಡೂರ ಮತ್ತಿತರ ಮುಖಂಡರು ಹರಿಹರದಲ್ಲಿ ಪಂಚಮಸಾಲಿ ಪೀಠ ಸ್ಥಾಪಿಸಲು ಮುಂದಾದರು. 'ವೀರಶೈವ ಲಿಂಗಾಯತ ಪಂಚಮಸಾಲಿ ಪೀಠ'ದ ಹೆಸರಿನಲ್ಲಿ, ಪಂಚಪೀಠಾಧೀಶರ ಮಾರ್ಗದರ್ಶನದಲ್ಲಿ ಸ್ಥಾಪನೆಯಾಯಿತು.

'ವೀರಶೈವ ಲಿಂಗಾಯತ' ಎಂಬುದನ್ನು ಒಪ್ಪದ ಹುಬ್ಬಳ್ಳಿ–ಧಾರವಾಡ, ಗದಗ ಭಾಗದ ಭಕ್ತರು ಬಸವಣ್ಣನ ತತ್ವ ಆಧಾರಿತ ಲಿಂಗಾಯತ ಪಂಚಮಸಾಲಿ ಪೀಠ ಸ್ಥಾಪನೆಗೆ ಮುಂದಾದರು. ಪ್ರಭಣ್ಣ ಹುಣಶಿಕಟ್ಟಿ ಅಧ್ಯಕ್ಷ, ನೀಲಕಂಠ ಅಸೂಟಿ ಪ್ರಧಾನ ಕಾರ್ಯದರ್ಶಿಯಾಗಿರುವ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ರಚನೆಯಾಯಿತು. ಬಸವಣ್ಣನ ಕಾರ್ಯಕ್ಷೇತ್ರವಾದ ಕೂಡಲಸಂಗಮದಲ್ಲೇ ಪೀಠ ಸ್ಥಾಪಿಸಲು ನಿರ್ಧರಿಸಲಾಯಿತು. ಆಗ ಚಿತ್ರದುರ್ಗ ಮುರುಘಾಮಠದ ಶಿವಮೂರ್ತಿ ಮುರುಘಾ ಶರಣರ ಬಳಿ ವಿಷಯ ಹೋದಾಗ, ಅವರು ತಮ್ಮಲ್ಲೇ ಇದ್ದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಸೂಚಿಸಿದರು. ಅದೇ ವರ್ಷ (2008ರಲ್ಲಿ) ಪೀಠ ಸ್ಥಾಪನೆಯಾಗಿ, ಬಸವಜಯ ಮೃತ್ಯುಂಜಯ ಸ್ವಾಮೀಜಿ ಪೀಠಾಧ್ಯಕ್ಷರಾದರು.

ಬಾಡಿಗೆ ಕಟ್ಟಡದಲ್ಲಿದ್ದ ಪಂಚಮಸಾಲಿ ಪೀಠಕ್ಕೆ ಭೂಮಿ ಖರೀದಿಸಲು ಮಾಜಿ ಸಚಿವ ಮುರುಗೇಶ ನಿರಾಣಿ ಆರ್ಥಿಕ ನೆರವು ನೀಡಿದರು. ಯಡಿಯೂರಪ್ಪ, ಸದಾನಂದಗೌಡ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸರ್ಕಾರ ನೀಡಿದ ಅನುದಾನದಲ್ಲಿ ಪೀಠದ ಕಟ್ಟಡ ನಿರ್ಮಾಣವಾಯಿತು.

ಮುಂಚೂಣಿಗೆ ಸ್ವಾಮೀಜಿ: ಪೀಠಾಧ್ಯಕ್ಷರಾದ ಕೂಡಲೇ ಸಮಾಜದ ಗಮನಸೆಳೆಯುವಂತಹ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಜನಪ್ರಿಯರಾದರು. ಪೀಠದಿಂದ ರಾಷ್ಟ್ರೀಯ ಬಸವ ಕೃಷಿ ಪ್ರಶಸ್ತಿ ಆರಂಭಿಸಿ, ಹೋರಾಟಗಾರ ಅಣ್ಣಾಹಜಾರೆ, ಮೇಧಾ ಪಾಟ್ಕರ್, ಮಾಣಿಕ್ ಸರ್ಕಾರ್, ಎಂ.ಎಸ್. ಸ್ವಾಮಿನಾಥನ್, ರಾಜೇಂದ್ರ ಸಿಂಗ್ ಅವರಿಗೆ ಪ್ರದಾನ ಮಾಡಿದರು. ನಾಗರ ಪಂಚಮಿಯನ್ನು ಬಸವ ಪಂಚಮಿಯಾಗಿಸಿ, ಕಲ್ಲು ನಾಗರಕ್ಕೆ ಹಾಲೆರೆಯದೇ, ಮಕ್ಕಳಿಗೆ ಹಾಲು ಕುಡಿಸಿ ಎಂಬ ಅಭಿಯಾನ ನಡೆಸಿದರು.

ಮಹದಾಯಿ ಹೋರಾಟ, ಗೋವಾದಲ್ಲಿ ಕನ್ನಡಿಗರ ಮೇಲೆ ದೌರ್ಜನ್ಯವಾದಾಗ ಗೋವಾ ರಾಜ್ಯಕ್ಕೆ ಹೋಗಿ ನಡೆಸಿದ ಪ್ರತಿಭಟನೆ, ಕಪ್ಪತ್ತಗುಡ್ಡ ಉಳಿಸುವ ಹೋರಾಟ, ಪ್ರತ್ಯೇಕ ಲಿಂಗಾಯತ ಧರ್ಮ ಹೋರಾಟದಲ್ಲಿ ಭಾಗಿಯಾದ ನಂತರ ಅವರ ಜನಪ್ರಿಯತೆ ಉತ್ತುಂಗಕ್ಕೆ ಏರಿತು. ಮಂತ್ರಿಗಳು, ಶಾಸಕರು, ಸಂಸದರು ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಒಡನಾಟವೂ ಹೆಚ್ಚಾಯಿತು. 2019ರಲ್ಲಿ ಟ್ರಸ್ಟ್‌ನಲ್ಲಿ ಆರಂಭವಾದ ಭಿನ್ನಾಭಿಪ್ರಾಯದ ಕಾರಣಕ್ಕೆ ಮಠದಲ್ಲಿದ್ದು, ಧಾರ್ಮಿಕ ಕಾರ್ಯಕ್ರಮ ಆಯೋಜಿಸಬೇಕು ಎಂದು ಟ್ರಸ್ಟ್ ಅವರಿಗೆ ನೋಟಿಸ್ ನೀಡಿತ್ತು. ಮತ್ತೆ ಸ್ವಾಮೀಜಿ ಮುನ್ನೆಲೆಗೆ ಬಂದಿದ್ದು 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಬೇಕು' ಎನ್ನುವ ಹೋರಾಟದ ಮೂಲಕ.

ರಾಜಕೀಯ ನಾಯಕರ ಜಟಾಪಟಿ: ಮೀಸಲಾತಿಗಾಗಿ ಆಗ್ರಹಿಸಿ ಕೂಡಲಸಂಗಮದಿಂದ ಬೆಂಗಳೂರುವರೆಗೆ ಪಾದಯಾತ್ರೆ ನಡೆಸಲು ಸ್ವಾಮೀಜಿ ಮುಂದಾದರು. ಅವರನ್ನು ವಿಜಯಾನಂದ ಕಾಶಪ್ಪನವರ ಸಂಪೂರ್ಣವಾಗಿ ಬೆಂಬಲಿಸಿದರು. ಸ್ವಾಮೀಜಿ ನೇತೃತ್ವದ ಹೋರಾಟ ಬಿಜೆಪಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು.

ಪಂಚಮಸಾಲಿ ಸಮಾಜದ ಮುರುಗೇಶ ನಿರಾಣಿ, ಬಸನಗೌಡ ಪಾಟೀಲ ಯತ್ನಾಳ ಅವರು ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರ ಸಂಪುಟದಲ್ಲಿ ಇರಲಿಲ್ಲ. ಸಂಪುಟ ಸೇರ್ಪಡೆ ವಿಚಾರದಲ್ಲಿ ಇಬ್ಬರ ನಡುವೆ ತೆರೆಮರೆಯಲ್ಲಿ ತೀವ್ರ ಪೈಪೋಟಿ ನಡೆಯುತ್ತಿತ್ತು. ಯಡಿಯೂರಪ್ಪ ಅವರು ಮುರುಗೇಶ ನಿರಾಣಿ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲು ಒಲವು ತೋರಿದ್ದರು. ಅವರನ್ನು ಸಚಿವರನ್ನಾಗಿಸಿದರೆ ಮೀಸಲಾತಿ ಹೋರಾಟವನ್ನು ತಣ್ಣಗಾಗಿಸಬಹುದು ಎಂಬುದು ಲೆಕ್ಕಾಚಾರವಾಗಿತ್ತು. ನಿರಾಣಿ ಅವರು 'ಪಾದಯಾತ್ರೆ ರದ್ದು' ಎಂಬ ಹೇಳಿಕೆ ನೀಡುವ ಮೂಲಕ ಹೋರಾಟ ನಿಲ್ಲಿಸಲು ಮುಂದಾದರು. ಇದರಿಂದ ಅಸಮಾಧಾನಗೊಂಡಿದ್ದ ಯತ್ನಾಳ, 'ಯಾವುದೇ ಕಾರಣಕ್ಕೂ ಮೀಸಲಾತಿ ಹೋರಾಟ ನಿಲ್ಲುವುದಿಲ್ಲ' ಎಂದು ಹೇಳಿ ಪಾದಯಾತ್ರೆಗೆ ಅವರೇ ಚಾಲನೆ ನೀಡಿದರು. ಯಡಿಯೂರಪ್ಪ ವಿರುದ್ಧದ ತಮ್ಮ ವಾಗ್ದಾಳಿಯನ್ನೂ ಮುಂದುವರಿಸಿದರು.

ಮೀಸಲಾತಿ ಹೋರಾಟ ನಿಲ್ಲಿಸಲು ಸಾಧ್ಯವಾಗದ ಮುರುಗೇಶ ನಿರಾಣಿ ಅವರು ಕೂಡಲಸಂಗಮ ಪೀಠದ ಪ್ರಾಬಲ್ಯ ತಪ್ಪಿಸಲು, ಜನರ ಗಮನ ಬೇರೆಡೆ ಸೆಳೆಯಲು ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಆಲಗೂರಿನಲ್ಲಿ ಪಂಚಮಸಾಲಿ ಮೂರನೇ ಪೀಠ ಸ್ಥಾಪನೆಗೆ ಸಹಕರಿಸಿದರು ಎನ್ನುವ ಮಾತಿದೆ. ಮಹಾದೇವ ಶಿವಾಚಾರ್ಯ ಸ್ವಾಮೀಜಿ ಮೂರನೇ ಪೀಠಕ್ಕೆ ಪೀಠಾಧಿಪತಿಯಾದರು.

ಮೀಸಲಾತಿ ಹೋರಾಟದ ಹಾದಿಯಲ್ಲಿ ಸರ್ಕಾರ ಹಾಗೂ ಹೋರಾಟಗಾರರ ನಡುವೆ ಕೊಂಡಿಯಾಗಿ ಆಗ ಸಚಿವರಾಗಿದ್ದ ಸಿ.ಸಿ.ಪಾಟೀಲ ಕೆಲಸ ಮಾಡಿದರು. ಬಿಜೆಪಿ ಸರ್ಕಾರ '2ಡಿ' ಅಡಿಯಲ್ಲಿ ಮೀಸಲಾತಿ ಕಲ್ಪಿಸುವ ನಿರ್ಧಾರ ಮಾಡಿ, ಅದನ್ನು ಜಾರಿಗೊಳಿಸಿತು. ಅದನ್ನು ಕೂಡಲಸಂಗಮ ಪೀಠದ ಸ್ವಾಮೀಜಿ, ವಿಜಯಾನಂದ ಕಾಶಪ್ಪನವರ ಒಪ್ಪಲಿಲ್ಲ. ಆದರೆ, ಬಸನಗೌಡ ಪಾಟೀಲ ಯತ್ನಾಳ ಸ್ವಾಗತಿಸಿದರು. ಇದರಿಂದ ಯತ್ನಾಳ ಮತ್ತು ಕಾಶಪ್ಪನವರ ನಡುವೆ ಬಿರುಕುಂಟಾಯಿತು.

ಅಂದು ಬಿಜೆಪಿ, ಈಗ ಕಾಂಗ್ರೆಸ್: 2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂತು. ಮೀಸಲಾತಿ ಹೋರಾಟವನ್ನು ಸ್ವಾಮೀಜಿ ಮುಂದುವರಿಸಿದರು. ಸಿ.ಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ಆರಂಭಿಸಿದರು. ಮೀಸಲಾತಿ ಹೋರಾಟವನ್ನು ಶಮನಗೊಳಿಸುವ ಜವಾಬ್ದಾರಿ ಶಾಸಕ ಕಾಶಪ್ಪನವರ ಹೆಗಲೇರಿತು.

ಆಗ ಕಾಶಪ್ಪನವರ, 'ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾವು ಮಾಡಿದ 2ಎ ಮೀಸಲಾತಿ ಹೋರಾಟಕ್ಕೆ ನಿರ್ದಿಷ್ಟ ಗುರಿ ಇತ್ತು. ಯತ್ನಾಳರ ಕುತಂತ್ರದಿಂದ ಹೋರಾಟ ದಿಕ್ಕು ತಪ್ಪುತ್ತಿದೆ. ಸ್ವಾಮೀಜಿ ಒಂದು ಪಕ್ಷಕ್ಕೆ ಸಿಮೀತರಾಗಿ ಹೋರಾಟ ಮಾಡುತ್ತಿದ್ದಾರೆ. ಶ್ರೀಗಳು ಎಲ್ಲ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋರಾಟ ಮಾಡಬೇಕು' ಎಂದರಲ್ಲದೆ, ಮೀಸಲಾತಿ ಹೋರಾಟದಿಂದ ಅಂತರ ಕಾಯ್ದುಕೊಂಡರು.

ಬಿಜೆಪಿಯಿಂದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಉಚ್ಚಾಟಿಸಿದಾಗ, ಅದರ ವಿರುದ್ಧ ಸ್ವಾಮೀಜಿ ಧ್ವನಿ ಎತ್ತಿದ್ದು, ವಿಜಯಾನಂದ ಕಾಶಪ್ಪನವರ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ ಎನ್ನುವ ಮಾತೂ ಇದೆ.

ನಿಯಂತ್ರಣಕ್ಕೆ ಯತ್ನ: ಶಾಸಕ ವಿಜಯಾನಂದ ಕಾಶಪ್ಪನವರ ಅವರು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್‌ನ ನೂತನ ಅಧ್ಯಕ್ಷರಾಗಿ ಆಯ್ಕೆ ಆಗುತ್ತಿದ್ದಂತೆಯೇ, ಏಪ್ರಿಲ್‌ನಲ್ಲಿ ಸಭೆ ಕರೆದು ಸ್ವಾಮೀಜಿಗೆ ಕಡಿವಾಣ ಹಾಕಲು ಮುಂದಾದರು ಎನ್ನಲಾಗುತ್ತಿದ್ದು, ಇದಕ್ಕೆ ಪ್ರತಿಯಾಗಿ ಮರುದಿನವೇ ಸ್ವಾಮೀಜಿ ಕೂಡಲಸಂಗಮದಲ್ಲಿ ಭಕ್ತರ ಸಭೆ ಕರೆದರು.

'ಈ ಕಿತ್ತಾಟದ ನಂತರ ಸ್ವಾಮೀಜಿ ಕೂಡಲಸಂಗಮ ಪೀಠಕ್ಕೆ ಬಂದಿರಲಿಲ್ಲ. ಆದರೆ, ಅಲ್ಲಲ್ಲಿ ಮೀಸಲಾತಿಗೆ ಆಗ್ರಹಿಸುವ, ಹೋರಾಟ ಮಾಡುವ ಹೇಳಿಕೆಗಳನ್ನು ನೀಡುತ್ತಲೇ ಇದ್ದರು. ಇದು ಕಾಂಗ್ರೆಸ್ ಸರ್ಕಾರಕ್ಕೆ ಇರುಸುಮುರುಸು ಉಂಟುಮಾಡುತ್ತಿತ್ತು. ಇದೇ ಕಾರಣಕ್ಕೆ ಟ್ರಸ್ಟ್ ಅಧ್ಯಕ್ಷ ಕಾಶಪ್ಪನವರ, ಅನೈತಿಕ ಚಟುವಟಿಕೆ ನಡೆಯಬಾರದು ಎನ್ನುವ ಹೆಸರಿನಲ್ಲಿ ಪೀಠದ ಕಟ್ಟಡಕ್ಕೆ ಬೀಗ ಹಾಕಿಸಿದರು. ಸ್ವಾಮೀಜಿ ಕಾವಲಿಗೆ ಕೆಲವರನ್ನು ನೇಮಿಸಿದರು. ಪೀಠಕ್ಕೆ ಬಂದವರ ಮೇಲೆ ಕಣ್ಣಿಡಲು ಹೇಳಿದರು' ಎಂಬುದು ಪಂಚಮಸಾಲಿ ಸಮಾಜದ ಮುಖಂಡರ ಆರೋಪ.

ಈಗ ಮಾತುಕತೆಯ ಮೂಲಕ ಪೀಠದ ಕಟ್ಟಡಕ್ಕೆ ಹಾಕಿರುವ ಬಾಗಿಲು ತೆಗೆಯಲಾಗಿದೆ. ಸ್ವಾಮೀಜಿ ಬಂದಿದ್ದಾರೆ. ಹಾಗಿದ್ದರೂ, ಪೀಠಕ್ಕೆ ಇನ್ನೊಬ್ಬರು ಸ್ವಾಮೀಜಿಯನ್ನು ನೇಮಕ ಮಾಡುವುದಾಗಿ ಹೇಳುವ ಮೂಲಕ ವಿಜಯಾನಂದ ಕಾಶಪ್ಪನವರ ಮತ್ತೊಂದು ಸಮರಕ್ಕೆ ಮುಂದಾಗಿದ್ದಾರೆ. ಬಿಜೆಪಿಯ ನಾಯಕರು ಸ್ವಾಮೀಜಿ ಪರವಾಗಿ ಹೇಳಿಕೆ ನೀಡುತ್ತಿದ್ದಾರೆ. 'ಸ್ವಾಮೀಜಿ ಆಹಾರದಲ್ಲಿ ವಿಷ ಬೆರೆಸಿರುವ ಶಂಕೆ ಇದೆ' ಎನ್ನುವ ಗಂಭೀರ ಆರೋಪವನ್ನು ಪಂಚಮಸಾಲಿ ಸಮಾಜದ ಶಾಸಕ ಅರವಿಂದ ಬೆಲ್ಲದ ಮಾಡಿದ್ದಾರೆ.

ಈ ವಿಚಾರದಲ್ಲಿ ಟೀಕೆ, ಪ್ರತಿಟೀಕೆ, ಆರೋಪ, ಪ್ರತ್ಯಾರೋಪಗಳು ತೀವ್ರಗೊಳ್ಳುತ್ತಿದ್ದು, ವಿವಾದ ಸದ್ಯಕ್ಕೆ ಶಮನಗೊಳ್ಳುವ ಲಕ್ಷಣ ಕಾಣುತ್ತಿಲ್ಲ.

ಇನ್ನೆರಡು ಪೀಠ ಸ್ಥಾಪನೆ

ಆರಂಭದಲ್ಲಿಯೇ ಎರಡು ಪೀಠಗಳನ್ನು ಸ್ಥಾಪಿಸಿದ ಪಂಚಮಸಾಲಿ ಸಮಾಜದ ಮುಖಂಡರು, ಎರಡೇ ದಶಕದಲ್ಲಿ ಮತ್ತೊಂದು ಪೀಠ ಸ್ಥಾಪನೆ ಮಾಡಿದ್ದಾರೆ. ಈಗ ಇನ್ನೆರಡು ಪೀಠ ಸ್ಥಾಪಿಸುವ ಬಗ್ಗೆ ಮಾತನಾಡುತ್ತಿದ್ದಾರೆ.

'ಪಂಚಮಸಾಲಿ ಬಹಳ ದೊಡ್ಡ ಸಮಾಜ. ಜನರಿಗೆ ಅನುಕೂಲವಾಗಲಿ ಎಂದು ಐದು ಪೀಠಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ಪೈಕಿ ಒಂದು ಮಹಿಳಾ ಪೀಠ ಸ್ಥಾಪನೆಯಾಗಲಿದೆ' ಎನ್ನುತ್ತಾರೆ ಮಾಜಿ ಸಚಿವ ಮುರುಗೇಶ ನಿರಾಣಿ.



ಮೀಸಲಾತಿ ಹೋರಾಟದಿಂದ ಕೆಲವರಿಗೆ ಇರುಸುಮುರುಸು ಆಗಿರಬಹುದು. ನನ್ನದು ಪ್ರಾಮಾಣಿಕ ಹೋರಾಟ. ನಂಬಿದ ಜನರಿಗೆ ದ್ರೋಹ ಮಾಡುವುದಿಲ್ಲ. ಇದು ಜನಪರ ಹೋರಾಟವೇ ವಿನಾ ಯಾವುದೇ ವ್ಯಕ್ತಿ, ಪಕ್ಷ ಪರವಾದುದಲ್ಲ

ಬಸವಜಯ ಮೃತ್ಯುಂಜಯ ಸ್ವಾಮೀಜಿ, ಪೀಠಾಧ್ಯಕ್ಷ

ಪೀಠಕ್ಕೆ ಹೊಸ ಸ್ವಾಮೀಜಿಯನ್ನು ಆಯ್ಕೆ ಮಾಡಲು ನಿರ್ಧರಿಸಲಾಗಿದ್ದು, ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಾಗಿಯೇ ಪೀಠ ತೊರೆದರೆ ಸಂತೋಷ

ವಿಜಯಾನಂದ ಕಾಶಪ್ಪನವರ, ಅಧ್ಯಕ್ಷ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್



ಕಾಶಪ್ಪನವರ ಆಗಲಿ ಅಥವಾ ಸ್ವಾಮೀಜಿ ಅವರಾಗಲಿ ಒಂದು ಹೆಜ್ಜೆ ಹಿಂದೆ ಸರಿದು ಪಂಚಮಸಾಲಿ ಸಮಾಜದ ಹಿತ ಕಾಯಬೇಕು. ಇದರಿಂದ ಇಡೀ ಸಮಾಜಕ್ಕೆ ಒಳ್ಳೆಯದಾಗುತ್ತದೆ

ಸಿ.ಸಿ.ಪಾಟೀಲ, ಶಾಸಕ

ಮುಳುವಾಯಿತೇ ರಾಜಕೀಯ ಸಖ್ಯ?

ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಿಗೆ ಪಂಚಮಸಾಲಿ ಸಮಾಜದ ರಾಜಕೀಯ ನಾಯಕರ ಸಖ್ಯವೇ ಮುಳುವಾಯಿತು ಎನ್ನುವುದು ಭಕ್ತರ ಅನಿಸಿಕೆ.

ಪೀಠಕ್ಕೆ ಬಂದ ಹೊಸದರಲ್ಲಿ ಸ್ವಾಮೀಜಿ ಧಾರ್ಮಿಕ ಜಾಗೃತಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾಗ ಯಾವುದೇ ಸಮಸ್ಯೆ ಇರಲಿಲ್ಲ. ಎಲ್ಲ ಪಕ್ಷಗಳ ರಾಜಕೀಯ ನಾಯಕರೂ ಮಠಕ್ಕೆ ಬರುತ್ತಿದ್ದರು. ಮೀಸಲಾತಿ ಹೋರಾಟಕ್ಕೆ ಸಮಾಜದ ಜನರಿಗಿಂತ ಆರ್ಥಿಕ ಸಂಪನ್ಮೂಲ, ಜನರನ್ನು ಸೇರಿಸುವುದಕ್ಕಾಗಿ ಸ್ವಾಮೀಜಿ, ರಾಜಕೀಯ ನಾಯಕರನ್ನು ಹೆಚ್ಚು ಅವಲಂಬಿಸಿದರು.

ಬಿಜೆಪಿ ಸರ್ಕಾರವಿದ್ದಾಗ ಕಾಂಗ್ರೆಸ್ ನಾಯಕರೊಂದಿಗೆ, ಕಾಂಗ್ರೆಸ್ ಸರ್ಕಾರವಿದ್ದಾಗ ಬಿಜೆಪಿ ನಾಯಕರೊಂದಿಗೆ ಹೆಚ್ಚಿಗೆ ಕಾಣಿಸಿಕೊಂಡಿದ್ದೇ ಇಂದಿನ ಪೀಠದ ಸಮಸ್ಯೆಗೆ ಕಾರಣ ಎನ್ನುತ್ತಾರೆ ಭಕ್ತರು.

'ಅಧಿಕಾರವಿಲ್ಲದಾಗ ಸ್ವಾಮೀಜಿಯೊಂದಿಗೆ ನಿಂತು ಮೀಸಲಾತಿ ಹೋರಾಟದ ಕೂಗು ಹಾಕುವ ನಾಯಕರು, ಅಧಿಕಾರ ಸಿಕ್ಕಿದೊಡನೆ ಹೋರಾಟ ಹತ್ತಿಕ್ಕುವ ಕೆಲಸ ಮಾಡುತ್ತಲೇ ಬಂದಿದ್ದಾರೆ. ರಾಜಕೀಯ ಒತ್ತಡಗಳಿಗೆ ಮಣಿಯದೇ ಸಮಾಜದ ಜನರಿಗೆ ಮೀಸಲಾತಿ ಹೋರಾಟ ಮುಂದುವರಿಸುವ ಸ್ವಾಮೀಜಿ ನಿರ್ಧಾರ ರಾಜಕೀಯ ನಾಯಕರಿಗೆ ಪಥ್ಯವಾಗುತ್ತಿಲ್ಲ' ಎಂಬುದು ಅವರ ಮಾತು.

ಟ್ರಸ್ಟ್ ಪರ, ವಿರೋಧ

ಪಂಚಮಸಾಲಿ ಪೀಠದ ಎಲ್ಲ ಆಗುಹೋಗುಗಳನ್ನು ನೋಡಿಕೊಂಡು ಹೋಗುವ ಜವಾಬ್ದಾರಿ ಟ್ರಸ್ಟ್‌ನದ್ದು ಎಂದು ಹೇಳಲಾಗುತ್ತಿದೆ. ಹೀಗಿದ್ದರೂ, ಟ್ರಸ್ಟ್ ಅಸ್ತಿತ್ವವನ್ನೇ ಪ್ರಶ್ನಿಸಲಾಗುತ್ತಿದೆ.

'ಪೀಠಕ್ಕೆ ಸ್ವಾಮೀಜಿಯವರು ಬರುತ್ತಿರಲಿಲ್ಲ. ಅನೈತಿಕ ಚಟುವಟಿಕೆಗಳಿಗೆ ತಾಣವಾಗಬಾರದು ಎಂಬುದು ಪೀಠದ ಹೊಣೆ ನೋಡಿಕೊಳ್ಳುತ್ತಿರುವ ಟ್ರಸ್ಟ್ ಜವಾಬ್ದಾರಿಯಾಗಿದೆ. ಆ ಕಾರಣಕ್ಕೆ ಪೀಠಕ್ಕೆ ಗೇಟ್ ಅಳವಡಿಸಿ ಬೀಗ ಹಾಕಲಾಗಿತ್ತು' ಎನ್ನುತ್ತಾರೆ ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ.

'ಟ್ರಸ್ಟ್ ವತಿಯಿಂದ ಪೀಠಕ್ಕೆ ಸ್ವಾಮೀಜಿ ಅವರನ್ನು ನೇಮಕ ಮಾಡಲಾಗಿದೆ. ಅವರು ಸಮಾಜ ಸಂಘಟನೆ ಬಿಟ್ಟು, ಬೇರೆ ಕಾರ್ಯಗಳಲ್ಲಿ ತೊಡಗಿಸಿಕೊಂಡರೆ, ಅವರನ್ನು ತೆಗೆದು ಹಾಕುವ ಹಕ್ಕನ್ನೂ ಬೈಲಾದಲ್ಲಿ ಟ್ರಸ್ಟ್‌ಗೆ ನೀಡಲಾಗಿದೆ. ಹಿಂದೆ ಎಚ್ಚರಿಕೆ ನೀಡಿದ ನಂತರವೂ ಸ್ವಾಮೀಜಿ ತಮ್ಮ ವರ್ತನೆಯಲ್ಲಿ ಬದಲಾವಣೆ ಮಾಡಿಕೊಳ್ಳದಿದ್ದರಿಂದ ಬೇರೆ ಸ್ವಾಮೀಜಿ ನೇಮಕ ಮಾಡಿಕೊಳ್ಳಬಹುದಾಗಿದೆ' ಎಂದು ಅಭಿಪ್ರಾಯ ಪಡುತ್ತಾರೆ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ನೀಲಕಂಠ ಅಸೂಟಿ.

'ಕೆಲವೇ ಜನರು ಸೇರಿ ರಚಿಸಿಕೊಂಡಿರುವ ಟ್ರಸ್ಟ್ ಅದು. ಅದಕ್ಕೆ ಸಮಾಜದ ಮಾನ್ಯತೆ ಇಲ್ಲ. ಪೀಠಕ್ಕೆ ಶಾಸಕ ವಿಜಯಾನಂದ ಕಾಶಪ್ಪನವರ ಕೊಡುಗೆ ಏನು' ಎಂದು ಟ್ರಸ್ಟ್ ಅಸ್ತಿತ್ವವನ್ನೇ ಪ್ರಶ್ನಿಸುತ್ತಾರೆ ಶಾಸಕ ಸಿ.ಸಿ. ಪಾಟೀಲ.

ಪ್ರಜಾವಾಣಿ DH — ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ರವಿ ಬಾಳೆ,** ಸಂಕಲ್ಪ ಸೆಂಟ್ರಲ್ ಪಾರ್ಕ್, ಜಾವಾ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು	2,00,000
2	**ಛಾಯಾ ಕುಮಾರಿ ಎಂ.ವಿ,** 149, ಶ್ರೀನಿವಾಸ, 4ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬನಶಂಕರಿ ಮೊದಲ ಹಂತ, ಬೆಂಗಳೂರು	25,000
3	**ಮಂಜುಳಾ,** ಬನಶಂಕರಿ ಮೂರನೇ ಹಂತ, ಬೆಂಗಳೂರು	20,000
4	**ಲಲಿತಾ ಎನ್.ಕೆ. ಮೂರ್ತಿ,** #203, 'ಬಿ' ಬ್ಲಾಕ್, ಆದರ್ಶ ಪ್ರೀಮಿಯ, ನಂ. 3, ಕದಿರೇನಹಳ್ಳಿ ಔಟರ್ ರಿಂಗ್ ರೋಡ್, ಬೆಂಗಳೂರು	15,000
5	**ಆನಂದ ದೊಡ್ಡಮನಿ,** ನಂ 102, ಎಸ್‌ಎಲ್‌ಎನ್ ಕಂಫರ್ಟ್ಸ್, 13ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು	10,001
6	**ಡಾ. ರತ್ನಮ್ಮ ಜಾರ್ಮಲೆ,** ಶಿವಮೊಗ್ಗ	10,000
7	**ಗಧೀಶಯ್ಯ ಎಂ,** ಬೆಂಗಳೂರು	10,000
8	**ಭಾಸ್ಕರ್ ಎಂ.ವಿ,** 73, ಶ್ರೀನಿಕೇತನ, ಮೂರನೇ ಮುಖ್ಯರಸ್ತೆ, ಎಂಟನೇ ಅಡ್ಡರಸ್ತೆ, ಜೆ.ಪಿ.ನಗರ, ಬೆಂಗಳೂರು	10,000
9	**ನಯನಾ ಕೆ.ಎನ್,**#127, ಏಳನೇ ಮುಖ್ಯರಸ್ತೆ, ಎರಡನೇ ಹಂತ, ಎಲ್‌ಐಜಿ ಕೆಎಚ್‌ಬಿ ಕಾಲೊನಿ, ಬಸವೇಶ್ವರ ನಗರ, ಬೆಂಗಳೂರು	10,000
10	**ಹರಿಹರನ್ ಎ,** ಬೆಂಗಳೂರು	10,000
11	**ಕೆ.ಎಲ್. ಗುಂಡೂರಾವ್,** ಕೆ.ಆರ್.ಲೇಔಟ್, ಬೆಂಗಳೂರು	10,000
12	**ಲೋಕೇಶ್, ಕೆ,** #77, ಆವಲಹಳ್ಳಿ ಮುಖ್ಯರಸ್ತೆ, ಜಿಕೆಎಫ್ ಪೋಸ್ಟ್, ಆವಲಹಳ್ಳಿ, ಬೆಂಗಳೂರು	10,000
13	**ಮುರಳೀಧರ,** ನಂ. 413, ಅಹಲ್ಯಾ, ಒಂಬತ್ತನೇ ಅಡ್ಡರಸ್ತೆ, ಆರ್‌ಎಚ್‌ಸಿಎಸ್ ಲೇಔಟ್, ಅನ್ನಪೂರ್ಣೇಶ್ವರಿ ನಗರ, ಬೆಂಗಳೂರು	10,000
14	**ರಘುನಾಥ್ ಎಂ. ಸುಬ್ಬರಾವ್,** ಎಚ್‌ಐಜಿ 40, ಆರನೇ ಮುಖ್ಯರಸ್ತೆ, ಕೆಎಚ್‌ಬಿ ಕಾಲೊನಿ, ಬಸವೇಶ್ವರನಗರ, ಬೆಂಗಳೂರು	6,000
15	**ಬಸವರಾಜು ಎಚ್.ಆರ್,** ಒಂದನೇ 'ಎ' ಅಡ್ಡರಸ್ತೆ, ಮೊದಲ ಮುಖ್ಯರಸ್ತೆ, ಸುಪ್ರೀಂ ರೆಸಿಡೆನ್ಸಿ ಲೇಔಟ್, ಕೂಡಿಚಿಕ್ಕನಹಳ್ಳಿ, ಬೆಂಗಳೂರು	5,735
16	**ಎನ್.ಸಿ. ಮಂಜುನಾಥ,** ನಂ. 31, ಶ್ರೀಪಂಪ ನಿವಾಸ, ಅಶೋಕ ನಗರ, ಬೆಂಗಳೂರು	5,100
17	**ಚೇತನ್ ಯು,** ಪ್ರಕಾಶ್ ನಗರ, ಬೆಂಗಳೂರು	5,001
18	**ವೀರೇಶ್,** ದೇವನೂರು, ನಂಜನಗೂಡು ತಾಲ್ಲೂಕು, ಮೈಸೂರು	5,001
19	**ಶಶಿಕಾಂತ್ ಎಂ,** #573, 7ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ವಿನಾಯಕ ಲೇಔಟ್, ನಾಗರಬಾವಿ, ಬೆಂಗಳೂರು	5,001
20	**ಶ್ರೀರಾಮ್ ಎಂ.ಎಸ್,** ಡಿ .ಎಸ್.ಮ್ಯಾಕ್ಸ್, ಸ್ಟರ್ಲಿಂಗ್, ವರ್ತೂರು	5,001
21	**ಬಿ.ಆರ್.ಪದ್ಮಾ,** ಬೆಳ್ಳಂದೂರು, ಬೆಂಗಳೂರು	5,000
22	**ಉಮೇಶ್ ಅಡಿಗ,** 151, ವಿಶೇಷ, ನಾಲ್ಕನೇ ಮುಖ್ಯರಸ್ತೆ, ವಿಠ್ಠಲ ನಗರ, ಹೌಸಿಂಗ್ ಕಾಲೊನಿ, ಇಸ್ರೊ ಲೇಔಟ್ ಸಮೀಪ, ಬೆಂಗಳೂರು	5,000
23	**ವಿಜಯಕುಮಾರ್,** ನಂ 37–38, ಕೌಸ್ತುಭ ಸಪ್ತಗಿರಿ, ಗಿರಿ ಲೇಔಟ್, ಚನ್ನಸಂದ್ರ, ಬೆಂಗಳೂರು	5,000
24	**ವಲೇರಿಯನ್ ಮಿನೇಜಸ್,** ಸೆಲೆಸ್ಟ್, 101, ಮರ್ಕೆರಾ ಹಿಲ್ ರೋಡ್, ಬೆಂದೂರು, ಮಂಗಳೂರು	5,000
25	**ಶಿವಕುಮಾರ್ ಮಾವಳ್ಳಿ,** #2772, 14ನೇ ಎ ಮುಖ್ಯರಸ್ತೆ, ಬೆಂಗಳೂರು	5,000
26	**ಸಂಜನಾ ಆದ್ಯ,** ಮೈಸೂರು	5,000
27	**ಎನ್.ನಾಗರಾಜ,** 130, ಮೂರನೇ ಅಡ್ಡರಸ್ತೆ, ಕೆಎಸ್‌ಆರ್‌ಟಿಸಿ ಲೇಔಟ್, ಬೆಂಗಳೂರು	5,000

ರಾಷ್ಟ್ರೀಯ

'ಮಹದಾಯಿ: ಕರ್ನಾಟಕದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ'

ಪಣಜಿ (ಪಿಟಿಐ): ಮಹದಾಯಿ ನದಿ ನೀರನ್ನು ತಿರುಗಿಸುವ ಉದ್ದೇಶದಿಂದ ಕರ್ನಾಟಕ ನಡೆಸುತ್ತಿರುವ ಚಟುವಟಿಕೆಗಳನ್ನು ಆಕ್ಷೇಪಿಸಿ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸುವುದಾಗಿ ಗೋವಾ ಸರ್ಕಾರ ಹೇಳಿದೆ.

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಮಂಗಳವಾರ ವಿಧಾನಸಭೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ.

'ಮಹದಾಯಿ ನೀರನ್ನು ತಿರುಗಿಸುವ ಚಟುವಟಿಕೆಯಲ್ಲಿ ಕರ್ನಾಟಕ ತೊಡಗಿದೆ. ಕರ್ನಾಟಕದ ಗಡಿಭಾಗದ ಒಳಗೆ ಕಾಮಗಾರಿ ನಡೆಸುತ್ತಿರುವ ಕಾರಣದಿಂದ ತಡೆಯಲು ನಮಗೆ ಸಾಧ್ಯವಾಗುತ್ತಿಲ್ಲ. ಆದರೆ, ಮಹದಾಯಿ ನದಿ ನೀರನ್ನು ತಿರುಗಿಸಲು ಕರ್ನಾಟಕ ಮಾಡುವ ಪ್ರತಿ ಪ್ರಯತ್ನಕ್ಕೂ ತಡೆಯೊಡ್ಡುವ ಯತ್ನ ಮಾಡುತ್ತಿದ್ದೇವೆ' ಎಂದಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮೇಲ್ಸೇತುವೆಯೊಂದು ಕುಸಿಯುತ್ತಿರುವ ವಿಡಿಯೊ ತುಣುಕೊಂದನ್ನು ಸಾಮಾಜಿಕ ಜಾಲತಾಣಗಳ ಬಳಕೆದಾರರು ವ್ಯಾಪಕವಾಗಿ ಹಂಚಿಕೊಳ್ಳುತ್ತಿದ್ದಾರೆ. ಬಿಹಾರದಲ್ಲಿ ಈ ಹಿಂದೆ ಸಂಭವಿಸಿದ್ದ ಸೇತುವೆ ಕುಸಿತದ ಸರಣಿ ಪ್ರಕರಣಗಳನ್ನು ಪ್ರಸ್ತಾಪಿಸಿ, 'ಸಿವಾನ್ ಮತ್ತು ಛಪ್ರಾ ಜಿಲ್ಲೆಗಳಲ್ಲಿ ಒಂದೇ ದಿನ ಐದು ಸೇತುವೆಗಳು ಕುಸಿದಿವೆ. ಇದು ಸರ್ಕಾರ ನಡೆಸಿರುವ ಭ್ರಷ್ಟಾಚಾರವಲ್ಲವೇ? ಎಂಬ ಒಕ್ಕಣೆಯೊಂದಿಗೆ ಪೋಸ್ಟ್ ಅನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಹಲವರು ಇದೇ ಪ್ರತಿಪಾದನೆಯೊಂದಿಗೆ ಪೋಸ್ಟ್ ಹಂಚಿರುವುದು ಕಂಡು ಬಂತು. ಬಿಹಾರದಲ್ಲಿ ಮತ್ತೆ ಸೇತುವೆ ಕುಸಿದಿದೆಯೇ ಎಂಬುದನ್ನು ಪರಿಶೀಲಿಸುವುದಕ್ಕಾಗಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಲಾಯಿತು. ಆದರೆ, ಈ ಬಗ್ಗೆ ನಂಬಲರ್ಹವಾದ ಮಾಧ್ಯಮ ವರದಿಗಳು ಸಿಗಲಿಲ್ಲ. ವಿಡಿಯೊ ತುಣುಕನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ, ಅದು ಎಐ ವಿಡಿಯೊ ಆಗಿರಬಹುದೇ ಎಂಬ ಅನುಮಾನ ಬಂತು. ವಿಡಿಯೊ ತುಣುಕನ್ನು ಹೈವ್ ಮಾಡರೇಷನ್ ಎಂಬ ಎಐ ಪತ್ತೆ ಟೂಲ್‌ನಲ್ಲಿ ಹಾಕಿದಾಗ, ಅದು ಎಐ ವಿಡಿಯೊ ಎಂಬುದು ದೃಢಪಟ್ಟಿತು. ಎಐ ತಂತ್ರಜ್ಞಾನದಲ್ಲಿ ಸೃಷ್ಟಿಸಿದ ವಿಡಿಯೊವನ್ನು ಬಿಹಾರದಲ್ಲಿ ಸೇತುವೆ ಕುಸಿದಿರುವ ವಿಡಿಯೊ ಎಂದು ಬಿಂಬಿಸಿ ಪೋಸ್ಟ್ ಮಾಡಲಾಗಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು



ವಾಸುದೇವ ನಾಡಿಗ್

ಜೀವ ಮಿಡಿತದ ಸದ್ದು

ಬರೀ ರಾಜ್ಯ ವಿಸ್ತರಣೆ, ಶತ್ರುಗಳ ನಿಗ್ರಹ ಮತ್ತು ಲಾಭಲೋಭಕೋರತನಗಳಲ್ಲೇ ಸಾಮ್ರಾಜ್ಯಗಳು ಮಗ್ನವಾಗಿದ್ದವು. ಹಸ್ತಿನಾವತಿಯೂ ಈ ಮಾತಿಗೆ ಹೊರತಲ್ಲ. ಹಿರಿಯರಿಗೆಲ್ಲ ತಮ್ಮ ಸಂತತಿಗಳನ್ನು ಯುದ್ಧ ಹೋರಾಟಕ್ಕೆ ತಯಾರಿ ಮಾಡುವುದೇ ಕಾಯಕ. ಪಾಂಡವ ಮತ್ತು ಕೌರವ ವಂಶದ ಪುಟ್ಟ ಮಕ್ಕಳಿಗೂ ಇದೇ ಪಾಠ. ಬಿಲ್ಲು, ಗದೆ, ಈಟಿ... ಇದರ ತಯಾರಿ, ತರಬೇತಿಗಳೇ. ಜೀವನ ಸಾರವನ್ನು ಶಸ್ತ್ರಗಳ ಮೂಲಕವೇ ಕಲಿಯಬೇಕೆಂದು ಪಣತೊಟ್ಟಂತಿದ್ದ ವ್ಯವಸ್ಥೆ.

ದ್ರೋಣರೇನು ಕಡಿಮೆ ಅಲ್ಲ. ತಮ್ಮ ಶಿಷ್ಯಂದಿರಿಗೆ ಯುದ್ಧವನ್ನು ಹೂಡಿ ಶತ್ರುಗಳ ಎದೆ ಬಗೆಯುವ ನೈಪುಣ್ಯವನ್ನು ಕಲಿಸುವ ಉತ್ಸಾಹಿ ಗುರು. ಯಾರು ಯಾವ ವಿದ್ಯೆಯಲ್ಲಿ ಪರಿಣಿತರಾಗಬಲ್ಲರೋ ಎಂದು ಪತ್ತೆ ಹಚ್ಚಿ ತರಬೇತಿ ಕೊಡುವಿಕೆ. ಅರ್ಜುನ ಬಿಲ್ವಿದ್ಯೆ, ಭೀಮ, ದುಶ್ಯಾಸನ, ದುರ್ಯೋಧನರಿಗೆ ಗದಾ ವಿದ್ಯೆ ಹೀಗೆ... ಆದರೂ ಎಲ್ಲ ಶಸ್ತ್ರಗಳ ಬಗ್ಗೆ ಸ್ವಲ್ಪವಾದರೂ ಅರಿವಿರಬೇಕು ಎಂಬ ಅಭಿಪ್ರಾಯ ದ್ರೋಣರದ್ದು. ಎಲ್ಲರನ್ನೂ ದೊಡ್ಡ ಮರದ ಕೆಳಗೆ ಕರೆದು ನಿಲ್ಲಿಸಿ ಎಲ್ಲರ ಕೈಗೆ ಬಿಲ್ಲನ್ನು ಕೊಟ್ಟು ಗುರಿ ಹೂಡಲು ಹೇಳಿದರು.

ಎತ್ತರದ ಕೊಂಬೆಯ ದಟ್ಟವಾದ ಎಲೆಗಳ ನಡುವೆ ಕೂತಿದ್ದ ಹಕ್ಕಿಯೊಂದಕ್ಕೆ ಗುರಿ ಇಡಬೇಕಾಗಿತ್ತು. ಹಕ್ಕಿ ಸುಲಭವಾಗಿ ಕಣ್ಣಿಗೆ ಬೀಳುವಂತಿರಲಿಲ್ಲ. ಎಲೆ–ರೆಂಬೆಗಳ ನಡುವೆ ಇದ್ದ ಹಸಿರು ಬಣ್ಣದ ಪುಟ್ಟ ಹಕ್ಕಿ ಅದು. ದ್ರೋಣರು ಎಲ್ಲರನ್ನೂ ಕೇಳುತ್ತಾ ಹೋದರು. ಮರದ ತುದಿಗೆ ಏನು ಕಾಣುತ್ತಿದೆ? ಕೆಲವರು, ಮೋಡ, ರೆಂಬೆ, ಒಂದು ಗೂಡು, ಒಂದು ಹಕ್ಕಿ, ಹೀಗೇ ಹೇಳುತ್ತ ಹೊರಟರು. ಅರ್ಜುನನ ಸರದಿ ಬಂದಾಗ ಅವನು ಕೇವಲ ಹಕ್ಕಿಯ ಕಣ್ಣು ಮಾತ್ರ ಕಾಣುತ್ತಿದೆ ಎಂದು ಉತ್ತರ ಕೊಟ್ಟ. ದ್ರೋಣರಿಗೂ ಇಂತಹ ಏಕಾಗ್ರತೆ ದೃಷ್ಟಿಯ ಉತ್ತರವೇ ಬೇಕಿತ್ತು. ಕೊನೆಗೆ ಹಕ್ಕಿಯ ಎಡೆಗೆ ಗುರಿ ಇಟ್ಟವನೂ ಅರ್ಜುನನೇ. ಗೆದ್ದವನೂ ಅವನೇ.

ಬಹುಶಃ ದ್ರೋಣರ ಬದಲಿಗೆ ವಿದುರನು ಅಲ್ಲಿ ವಿದ್ಯೆ ಕಲಿಸುವಂತೆ ಇದ್ದರೆ, ಅವನಿಗೆ ಯಾರ ಉತ್ತರವೂ ಸಮಾಧಾನ ತರುತ್ತಿರಲಿಲ್ಲವೇನೋ. ಮಕ್ಕಳಿಗೆ ಕೇವಲ ಎಲೆ, ಕೊಂಬೆ, ಮೋಡ, ಗೂಡು, ಹಕ್ಕಿ, ಕಣ್ಣು ಅಷ್ಟೇ ಕಂಡ ಬಗ್ಗೆ ವಿಷಾದ ಪಡುತ್ತಿದ್ದನೇನೋ. ಇಡೀ ಹಸ್ತಿನಾವತಿಯಲ್ಲಿ ಮಾನವತೆಗೆ ಮಿಡುಕುತ್ತಿದ್ದ ಏಕೈಕ ಮನುಷ್ಯ ವಿದುರ. ಯಾವ ಮಕ್ಕಳಿಗೂ ಹಕ್ಕಿಯ ಒಡಲಿನೊಳಗೆ ಇದ್ದ ಜೀವ ಯಾಕೆ ಕಾಣುತ್ತಿಲ್ಲ ಅಂತ ಮಿಡುಕುತ್ತಿದ್ದ. ಇಂತಹ ಆಲೋಚನೆಗಳು ಎಷ್ಟು ಅಗತ್ಯ ನೋಡಿ. ವ್ಯವಹಾರ ಲಾಭ ಸ್ವಾರ್ಥಗಳ ಮಧ್ಯೆ ಮುಳುಗಿರುವ ನಮ್ಮ ಬಾಳಿನಲ್ಲಿ ಜೀವಾಂತಃಕರಣ ಗೋಚರವಾಗಬೇಕು. ❖

ಗುಂಡಣ್ಣ



ಪದಬಂಧ 6112

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಗುರಿಯನ್ನು ಮುಟ್ಟಲು ಸಂಕಲ್ಪ ಮಾಡಿದವನು (5)
3.ಸಮಾಧಾನದಿಂದಲೇ ನಡೆದಿರುವ ರಾಜಿ (3)
6.ಖಾನೇಸುಮಾರಿಯಲ್ಲಿ ಕೊಲ್ಲಿಯನ್ನು ಹುಡುಕಿ! (2)
7.ವೀರಾಜಮಾನವಾಗಿ ಕುಳಿತಿರುವ ಒಡೆಯ (4)
10.ವಿದ್ಯಾರ್ಹತೆಯ ಪ್ರಶಸ್ತಿ ನೀಡುವುದು (5)
13.ಮತದೊಳಗೆ ಮೂಡಿರುವ ಅಭಿಪ್ರಾಯ (4)
16.ಅರಿವೆಯೊಳಗಡಗಿದ ಶತ್ರು (2)
17.ಸ್ವಚ್ಛಂದತೆಯನ್ನು ಹೀಗೆನ್ನಿ (3)
18.ಇದು ಕನ್ನಡಿಗನ ಲೈಬ್ರರಿ! (5)

ಮೇಲಿಂದ ಕೆಳಕ್ಕೆ

1.ಕ್ಷಾಮದಿಂದ ಆರಂಭವಾದ ಮುಕ್ತಾಯ! (4)
2.ಮಠದ ಹತ್ತಿರ ಕಾಣಿಸಿದ ಆಮೆ (3)
4.ತುಸುವೇ ಬೀರಿದ ಮಂದಹಾಸ (4)
5.ಪಾರಾಯಣ ಮಾಡುತ್ತಾ ಹಾಕಿದ ಬುನಾದಿ (2)
8.ಜನರ ನಡುವಿರುವ ಸೇವಕ (3)
9.ಈತ ಬಲು ನಿಷ್ಣಾತ (3)
10.ಆತಂಕದಿಂದ ಹಾರುತ್ತಿರುವ ಚಿಟ್ಟೆ (3)
11.ನಿಯಮವಾಗಿಯೇ ಇದು ಮನೋಹರ! (4)
12.ಈ ಪರಿ ನಡೆದಿರುವ ಲಗ್ನ (4)
14.ಕಿರಿಯ ಸಹೋದರ ಇಲ್ಲಿದ್ದಾನೆ (2)
15.ಬಲದ ವಿರುದ್ಧಕ್ಕಿರುವ ರೊಡ್ಡ! (3)

6111ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪಸ್ವರ 3.ವಜ್ರೋತ್ಸವ 5.ಸನ್ಮಾನ 6.ಕಲಹ 8.ಬಾಳಕ 9.ಉತ್ತರ 10.ಕನಕ 12.ಅಂದುಗೆ 14.ಕರಣಿಕ 15.ಹತಬಲ

ಮೇಲಿಂದ ಕೆಳಕ್ಕೆ:
1.ಅಭ್ರಕ 2.ರಸ 3.ವನ 4.ವಲ್ಮೀಕ 7.ಹರಟೆಗಾರ 8.ಬಾಲಬಡುಕ 9.ಉದಕ 11.ಕಲಿಲ 12.ಅಂಕ 13.ಗೆಹ

ಸುಡೊಕು 6496

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			2				5
3		6	5		8			
	4			7		2		
	6				5			
9		1		8			6	2
4			2			1	3	
		2	3		7		5	
7	1			5		6		3
5		3	4					1

6495 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

23 ಜುಲೈ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಚತುರ್ದಶಿ ಗಂ. 26-29 **ನಕ್ಷತ್ರ:** ಆರ್ದ್ರಾ ಗಂ. 17-55 **ಯೋಗ:** ವ್ಯಾಘಾತ ಗಂ. 12-34 **ಕರಣ:** ವಿಷ್ಠಿ ಗಂ. 15-32, ಕರ್ಕಾಟಕ ಮಾಸದ 07 ನೇ ದಿನ. **ಮಳೆ ನಕ್ಷತ್ರ :** ಪುಷ್ಯ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 –01-30 , **ಸೂರ್ಯೋದಯ :** 06-17 **ಸೂರ್ಯಾಸ್ತ :** 06-57, **ಮುಸ್ಲಿಂ ದಿನಾಂಕ :** 27 ಮೊಹರಮ್ , **ಅದೃಷ್ಟ ಸಂಖ್ಯೆ :** 1, 7

ಮೇಷ: ವೃತ್ತಿಭೂಮಿಕೆಯಲ್ಲಿ ಕೆಲವರು ನಾಯಕರಾಗುವ ಸಂಭವವಿದೆ. ಹಿತಶತ್ರುಗಳ ಮೇಲೆ ಗಮನವಿರಲಿ. ಹಣ್ಣು ಹಾಗೂ ತರಕಾರಿ ವ್ಯಾಪಾರಿಗಳಿಗೆ ಸರಕು ಸಾಗಣೆಯಲ್ಲಿ ತೊಂದರೆಗಳಾಗಬಹುದು. ಮುನ್ನೆಚ್ಚರಿಕೆ ತೆಗೆದುಕೊಳ್ಳಿ.

ವೃಷಭ: ಚಿತ್ರರಂಗಕ್ಕೆ ಸೇರಿದ ಕಲಾವಿದರಿಗೆ ವಿಭಿನ್ನವಾದ ಕಲೆ, ಸಾಮರ್ಥ್ಯದಿಂದ ದೊಡ್ಡ ಮಟ್ಟದ ಪ್ರಚಾರ ದೊರೆಯುವುದು. ವ್ಯಾಪಾರ ಕ್ಷೇತ್ರದಲ್ಲಿರುವವರಿಗೆ ಗುರಿ ಮುಟ್ಟುವ ವಿಚಾರವಾಗಿ ಸವಾಲುಗಳು ಎದುರಾಗುತ್ತವೆ.

ಮಿಥುನ: ವಿದ್ಯಾಭ್ಯಾಸಕ್ಕಾಗಿ ಮನೆಯಿಂದ ದೂರ ಇರುವ ವ್ಯಕ್ತಿಗಳಿಗೆ ಮನೆಗೆ ಹೋಗಿಬರುವ ಅವಕಾಶ ಶೀಘ್ರ ಲಭಿಸಲಿದೆ. ವಿದ್ಯಾರ್ಥಿಗಳು ಓದಿನಲ್ಲಿ ಏಕಾಗ್ರತೆ ಸಾಧಿಸದಿದ್ದರೆ ಅಭ್ಯುದಯ ಅಸಾಧ್ಯ.

ಕರ್ಕಾಟಕ: ಮಾತಿನಲ್ಲಿ ಹಿಡಿತವಿರಲಿ. ನೀವಾಡಿದ ಮಾತುಗಳಲ್ಲಿ ನೀವೇ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ಗೌರವವನ್ನು ಕಳೆದುಕೊಳ್ಳುವ ಲಕ್ಷಣವೂ ಇದೆ. ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆಯನ್ನು ಕಾಣಬಹುದು.

ಸಿಂಹ: ವಿಜ್ಞಾನ, ಶಿಕ್ಷಣ ಹಾಗೂ ಸಂಶೋಧನೆ ಕ್ಷೇತ್ರದಲ್ಲಿರುವ ವೃತ್ತಿಪರರು ಅಭಿವೃದ್ಧಿ ಕಾಣುವ ಲಕ್ಷಣಗಳಿವೆ. ವ್ಯಾಪಾರಕ್ಕೆ ಬಂಡವಾಳ ಹೂಡುವಂತೆ ಮಗನಿಂದ ಒತ್ತಾಯ ಹೆಚ್ಚಲಿದೆ. ಬುದ್ಧಿವಂತಿಕೆಯಿಂದ ಬದುಕಬೇಕಾದ ದಿನ.

ಕನ್ಯಾ: ಧರ್ಮ ಕಾರ್ಯಗಳಿಗಾಗಿ ಧನ ವಿನಿಯೋಗಿಸುವ ಬಗ್ಗೆ ಯೋಚಿಸಿ. ವ್ಯಾಪಾರ, ವ್ಯವಹಾರಗಳಲ್ಲಿ ಪೈಪೋಟಿ ಎದುರಾಗಿ ಆತಂಕಕ್ಕೆ ಕಾರಣವಾಗಲಿದೆ. ಕಾರ್ಮಿಕರ ಬೇಡಿಕೆಗಳನ್ನು ಪೂರೈಸುವ ತೀರ್ಮಾನ ಅನಿವಾರ್ಯ.

ತುಲಾ: ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಪ್ರಯತ್ನ ನಡೆಸಿ. ಸಾಧಿಸಲೇಬೇಕೆಂಬ ಛಲವಿರುವವರಿಗೆ ಕಾರ್ಯಗಳೆಲ್ಲವೂ ಸಿದ್ಧಿಸಲಿವೆ. ಧನಾಗಮನದಲ್ಲಿ ವಿಳಂಬ. ಸಿದ್ಧಉಡುಪು ಮಾರಾಟಗಾರರಿಗೆ ಶುಭದಿನ.

ವೃಶ್ಚಿಕ: ವೈದ್ಯಕೀಯ ಖರ್ಚು ಹೆಚ್ಚಲಿದೆ. ಆದಾಯ ವೃದ್ಧಿಯೂ ವ್ಯಯಾಧಿಕ್ಯವೂ ಸಮತೋಲನವನ್ನು ಸಾಧಿಸುವುದು. ಅವಿವಾಹಿತರು ಬಾಳಸಂಗಾತಿಯನ್ನು ಪಡೆಯಲು ಧಾರ್ಮಿಕ ಮಾರ್ಗದಲ್ಲೂ ಯೋಚಿಸಿ.

ಧನು: ಪ್ರಾರಂಭಿಕ ಸಫಲತೆಯ ಬಗ್ಗೆ ಸಂತಸಗೊಳ್ಳುವಿರಿ. ಎಲ್ಲಾ ಕಾರ್ಯಗಳನ್ನು ಸಫಲತೆಗೆ ಮಾರ್ಪಡಿಸುವತ್ತ ಪ್ರಯತ್ನಿಸುವಿರಿ. ಈಶ್ವರನ ಆರಾಧನೆಯಿಂದ ಕೆಲಸದಲ್ಲಿ ತೊಡಕನ್ನುಂಟುಮಾಡುವ ಶತ್ರುಗಳ ಪ್ರಯತ್ನ ವಿಫಲವಾಗುವುದು.

ಮಕರ: ವಿದೇಶದಿಂದ ಶುಭ ಸಂದೇಶ ಬರಲಿದೆ. ಅನವಶ್ಯಕ ತಿರುಗಾಟ ಇದ್ದರೂ ರಿಯಲ್ ಎಸ್ಟೇಟ್ ಏಜೆಂಟರಿಗೆ ಅಧಿಕ ಲಾಭ. ತಾಯಿಯವರ ದೇಹಾರೋಗ್ಯ ತಪಾಸಣೆ ನಡೆಸಲು ವೈದ್ಯರನ್ನು ಸಂದರ್ಶಿಸುವುದು ಉತ್ತಮ.

ಕುಂಭ: ಹೊಸ ಜನರ ಸಂಪರ್ಕವು ಉತ್ತಮ ಧನಲಾಭ ತರಲಿದೆ. ಚರ್ಮದ ವಸ್ತುಗಳ ತಯಾರಿ ಅಥವಾ ಮಾರಾಟದಿಂದ ಲಾಭ ಬರಲಿದೆ. ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ಗೌರವ ಲಭಿಸಲಿದೆ.

ಮೀನ: ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ಸಮಸ್ಯೆಗಳಿಗೂ ಸುಲಭವಾಗಿ ಪರಿಹಾರ ಸಿಗಲಿದೆ. ಆಭರಣ ಅಥವಾ ಕಲಾವಸ್ತುಗಳನ್ನು ಖರೀದಿಸಲಿದ್ದೀರಿ. ನೂತನ ಸಂಸ್ಥೆಯೊಂದರಲ್ಲಿ ಉದ್ಯೋಗ ಪಡೆದುಕೊಳ್ಳುವಿರಿ.



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,090
ಇಂದಿನ ಅಂತ್ಯ:	25,060
ದಿನದ ಕನಿಷ್ಠ:	25,035
	29

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹545
	12 ಕ್ಕೆ	₹75
ಮೈಸೂರು:	100 ಕ್ಕೆ	₹545

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹343-578
ದ್ವಿತಳಿ (ಬಿ.ವಿ)	₹360-695

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹208.50
ಆರ್‌ಎಸ್‌ಎಸ್-5	₹202.50
ಗುಡ್ ಲಾಟ್	₹186.50

ಮುದ್ರೆ-ಮನೆ ಕಾಫಿ (50 ಕೆಜಿಗೆ)	
ಎಪಿ	₹25,500
ಎಸಿ	₹14,000
ಆರ್‌ಪಿ	₹16,400
ಆರ್‌ಸಿ	₹9,250

ಮಧ್ಯಂತರ ವ್ಯಾಪಾರ ಒಪ್ಪಂದ ವಿಳಂಬ

ಕೃಷಿ, ಹೈನು ಉತ್ಪನ್ನ ವಿಚಾರದಲ್ಲಿ ಭಾರತ, ಅಮೆರಿಕದ ನಡುವೆ ಮೂಡದ ಒಮ್ಮತ

ಮುಖ್ಯಾಂಶಗಳು
- ಉಕ್ಕು, ಅಲ್ಯೂಮಿನಿಯಂಗೆ ಹೆಚ್ಚು ಸುಂಕ ವಿಧಿಸದಂತೆ ಭಾರತ ಮನವಿ
- ಹೆಚ್ಚಿನ ಸುಂಕ ಜಾರಿಗೆ ಬಂದರೆ ರಫ್ತು ವಹಿವಾಟಿಗೆ ಧಕ್ಕೆ
- ಭಾರತಕ್ಕೆ ಭೇಟಿ ನೀಡಲಿರುವ ಅಮೆರಿಕದ ನಿಯೋಗ

ನವದೆಹಲಿ (ರಾಯಿಟರ್ಸ್): ಭಾರತ ಮತ್ತು ಅಮೆರಿಕದ ನಡುವೆ ಆಗಸ್ಟ್ 1ಕ್ಕೂ ಮೊದಲು ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಸಹಿ ಬೀಳುವ ಸಾಧ್ಯತೆ ಕ್ಷೀಣಿಸಿದೆ.

ಕೃಷಿ ಹಾಗೂ ಹೈನುಗಾರಿಕೆ ಉತ್ಪನ್ನ-ಗಳಿಗೆ ವಿಧಿಸುವ ತೆರಿಗೆಯ ವಿಚಾರದಲ್ಲಿ ಮಾತುಕತೆ ಮುಂದಕ್ಕೆ ಸಾಗುತ್ತಿಲ್ಲವಾದ ಕಾರಣಕ್ಕೆ ಹೀಗಾಗಿದೆ ಎಂದು ಕೇಂದ್ರ ಸರ್ಕಾರದ ಅಧಿಕಾರಿಗಳು ಹೇಳಿದ್ದಾರೆ.

ಭಾರತದಿಂದ ಆಮದಾಗುವ ಸರಕುಗಳ ಮೇಲೆ ಶೇ 26ರಷ್ಟು ತೆರಿಗೆ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್ಚರಿಕೆ ನೀಡಿದ್ದರು. ಆದರೆ ಮಾತುಕತೆ ನಡೆಯುವುದಕ್ಕೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ತೆರಿಗೆ ವಿಧಿಸುವುದನ್ನು ಆಗಸ್ಟ್ 1ರವರೆಗೆ ಮುಂದೂಡಿದ್ದಾರೆ. ಮಾತುಕತೆ ಪೂರ್ಣಗೊಂಡು ಮಧ್ಯಂತರ ಒಪ್ಪಂದ ಏರ್ಪಡದೆ ಇದ್ದರೆ ಆಗಸ್ಟ್ 1ರ ನಂತರ ತೆರಿಗೆ ಕ್ರಮಗಳು ಜಾರಿಗೆ ಬರುವ ಸಾಧ್ಯತೆ ಇದೆ.

ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸಲು ರಾಜೇಶ್ ಅಗರ್ವಾಲ್ ನೇತೃತ್ವದಲ್ಲಿ ಅಮೆರಿಕಕ್ಕೆ ತೆರಳಿದ್ದ ತಂಡವು ವಾಷಿಂಗ್ಟನ್‌ನಿಂದ ವಾಪಸ್ ಬಂದಿದೆ. ಐದು ಸುತ್ತುಗಳಲ್ಲಿ ಮಾತುಕತೆ ನಡೆದಿದ್ದರೂ ಮಹತ್ವದ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ.

'ವರ್ಚುವಲ್ ವೇದಿಕೆಗಳನ್ನು ಬಳಸಿ ಮಾತುಕತೆ ಮುಂದುವರಿಸಲಾ-ಗಿದೆ. ಆದರೂ, ಆಗಸ್ಟ್ 1ಕ್ಕೆ ಮೊದಲು ಮಧ್ಯಂತರ ಒಪ್ಪಂದ ಸಾಧ್ಯವಾಗುವುದು ಅನುಮಾನ' ಎಂದು ಕೇಂದ್ರ ಸರ್ಕಾರದ ಮೂಲವೊಂದು ಹೇಳಿದೆ. ಮಾತುಕತೆ ಮುಂದುವರಿಸಲು ಅಮೆರಿಕದ ನಿಯೋಗವೊಂದು ಭಾರತಕ್ಕೆ ಶೀಘ್ರ ಭೇಟಿ ನೀಡಲಿದೆ ಎಂದು ಗೊತ್ತಾಗಿದೆ.

ರಾಜಕೀಯವಾಗಿ ಬಹಳ ಸೂಕ್ಷ್ಮವಾ-ಗಿರುವ ಕೃಷಿ ಮತ್ತು ಹೈನು ಉತ್ಪನ್ನಗಳ ವಲಯವನ್ನು ಅಮೆರಿಕದ ಉತ್ಪನ್ನಗ-ಳಿಗೆ ಮುಕ್ತವಾಗಿಸಲು ಕೇಂದ್ರ ಸರ್ಕಾರವು ಒಪ್ಪುತ್ತಿಲ್ಲ. ಉಕ್ಕು, ಅಲ್ಯೂಮಿನಿಯಂ ಮತ್ತು ಆಟೊಮೊಬೈಲ್ ಉತ್ಪನ್ನಗಳ ಮೇಲೆ ಹೆಚ್ಚಿನ ಸುಂಕ ವಿಧಿಸಬಾರದು ಎಂದು ಭಾರತ ಇರಿಸಿರುವ ಬೇಡಿಕೆಯನ್ನು ಅಮೆರಿಕ ಒಪ್ಪುತ್ತಿಲ್ಲ. ಹೀಗಾಗಿ ಮಾತುಕತೆ ಮುಂದಕ್ಕೆ ಸಾಗುತ್ತಿಲ್ಲ ಎಂದು ಮೂಲಗಳು ವಿವರಿಸಿವೆ.

ಆದರೆ, ಈ ವಿಷಯಗಳನ್ನು ಈಗ ಬಾಕಿ ಇರಿಸಿಕೊಂಡು, ಮಧ್ಯಂತರ ಒಪ್ಪಂದವನ್ನು ಮಾಡಿಕೊಳ್ಳ ಬಹುದೇ ಎಂಬ ಬಗ್ಗೆಯೂ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿ-ದ್ದಾರೆ ಎಂದು ಗೊತ್ತಾಗಿದೆ. ಮಧ್ಯಂತರ ಒಪ್ಪಂದ ಸಾಧ್ಯವಾದ ನಂತರದಲ್ಲಿ ಈ ವಿಷಯಗಳನ್ನು ಇತ್ಯರ್ಥ ಮಾಡಿ ಕೊಳ್ಳಬಹುದು ಎಂಬ ಆಲೋಚನೆಯು ಅವರಲ್ಲಿದೆ.

ಭಾರತದ ಸರಕುಗಳ ಮೇಲೆ ಅಮೆರಿಕವು ಹೇಳಿರುವ ಶೇ 26ರ ಪ್ರಮಾಣದ ಸುಂಕ ಜಾರಿಗೆ ಬಂದಲ್ಲಿ ಮುತ್ತು ಹಾಗೂ ಆಭರಣ ಉದ್ಯಮಕ್ಕೆ ಹೆಚ್ಚಿನ ಏಟು ಬೀಳುತ್ತದೆ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟದ ಮಹಾನಿರ್ದೇಶಕ ಅಜಯ್ ಸಹಾಯ್ ಎಚ್ಚರಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತವು ವ್ಯಾಪಾರ ಒಪ್ಪಂದದ ಸಮಯಕ್ಕಿಂತ ಹೆಚ್ಚಾಗಿ ಒಪ್ಪಂದವು ಎಷ್ಟರಮಟ್ಟಿಗೆ ಅನುಕೂಲಕರ ಆಗಿರುತ್ತದೆ ಎಂಬುದರ ಬಗ್ಗೆ ಗಮನ ನೀಡಿದೆ ಎಂದು ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಸೋಮವಾರ ಹೇಳಿದ್ದಾರೆ.

Together We Can
ಕೆನರಾ ಬ್ಯಾಂಕ್
Canara Bank
A Government of India Undertaking

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸತೀಶ್ ಪ್ರಭು, ಮಂಗಳೂರು

● **ಪ್ರಶ್ನೆ: ನಾನು ಮತ್ತು ನನ್ನ ಪತ್ನಿ ಈಗ ಮಂಗಳೂರಿನಲ್ಲಿ ವಾಸವಾಗಿದ್ದೇವೆ. ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನೆಲೆಸಿದ್ದೆವು. ಆಗ ಅಲ್ಲಿ ನಮ್ಮ ಮಗ ಒಂದು ಫ್ಲ್ಯಾಟ್ ಖರೀದಿಸಿದ್ದ. ಆಗ ಆತ ಬೆಂಗಳೂರಿನಲ್ಲೇ ಇದ್ದು ಉದ್ಯೋಗ ಮಾಡುತ್ತಿದ್ದ. ಕೋವಿಡ್ ನಂತರ ವಿದೇಶಕ್ಕೆ ಉದ್ಯೋಗದ ನಿಮಿತ್ತ ಹೋಗಿದ್ದಾನೆ, ನಾಲ್ಕು ವರ್ಷಗಳಿಂದ ಅಮೆರಿಕದಲ್ಲಿ ಸಂಸಾರದೊಂದಿಗೆ ನೆಲೆಸಿದ್ದಾನೆ. ನಮಗೆ ಇತರ ಅಗತ್ಯಗಳಿಗಾಗಿ ಹಣ ಬೇಕಿದೆ. ಬೆಂಗಳೂರಿನಲ್ಲಿ ಮಗ ಖರೀದಿಸಿದ ಮನೆ ಮಾರಾಟ ಮಾಡುವ ಯೋಚನೆಯಲ್ಲಿದ್ದೇವೆ. ಆತ ಅನಿವಾಸಿ ಭಾರತೀಯನಾಗಿರುವುದರಿಂದ ಈ ಮನೆಯನ್ನು ಮಾರಾಟ ಮಾಡಿದರೆ ಅನ್ವಯವಾಗುವ ತೆರಿಗೆ ಎಷ್ಟು? ನಿವಾಸಿ ಭಾರತೀಯರೊಂದಿಗೆ ತುಲನೆ ಮಾಡಿದರೆ ವ್ಯತ್ಯಾಸ ರೀತಿಯಲ್ಲಿ ಅನ್ವಯಿಸುತ್ತವೆಯೇ? ಈ ಬಗ್ಗೆ ನಮಗೆ ತುಸು ಮಾಹಿತಿ ಅಗತ್ಯವಿದೆ. ಆತ ಪದೇ ಪದೇ ಈ ಕಡೆಗೆ ಬರುವುದು ಅಸಾಧ್ಯ. ಅಲ್ಲದೆ, ಉತ್ತಮ ಖರೀದಿದಾರರು ಸಿಕ್ಕಿದರೆ ಮಾರಾಟ ಪ್ರಕ್ರಿಯೆ - ತೆರಿಗೆ ವಿಲೇವಾರಿ ಇತ್ಯಾದಿ ಒಂದೇ ಬಾರಿಗೆ ಪೂರ್ಣಗೊಳಿಸುವ ಅಂದಾಜು ನಮ್ಮದು. ಇದಲ್ಲದೆ, ತೆರಿಗೆ ಉಳಿತಾಯಕ್ಕೆ ಅವಕಾಶ ಇದೆಯೇ?**

ಉತ್ತರ: ನಿಮ್ಮ ಮಗ 'ಅನಿವಾಸಿ ಭಾರತೀಯ' ಆಗಿರುವುದರಿಂದ, ಆಸ್ತಿ ಮಾರಾಟದ ಮೇಲೆ ಅನ್ವಯವಾಗುವ ತೆರಿಗೆಯು ನಿವಾಸಿ ಭಾರತೀಯರಿಗೆ ಅನ್ವಯಿಸುವ ತೆರಿಗೆಗಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಅನಿವಾಸಿ ಭಾರತೀಯರ ವಿಚಾರದಲ್ಲಿ, ಫ್ಲ್ಯಾಟ್ ಮಾರಾಟದ ಸಮಯದಲ್ಲಿ ಖರೀದಿದಾರನಿಂದ ಮಾಲೀಕನಿಗೆ ಕೊಡುವ ಯಾವುದೇ ಪ್ರಮಾಣದ ಮೊತ್ತದ ಮೇಲೆ ತೆರಿಗೆ ಕಡಿತ ಮಾಡಬೇಕಾಗುತ್ತದೆ. ನಿವಾಸಿ ಭಾರತೀಯರು, ಆಸ್ತಿ ಮಾರಾಟದ ಮೇಲೆ ಸಾಮಾನ್ಯವಾಗಿ ₹50 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಆಸ್ತಿ ಖರೀದಿ-ಮಾರಾಟ ಆದಾಗ ಮಾತ್ರ ತೆರಿಗೆ ಕಡಿತದ ಪರಿಧಿಗೊಳಪಡುತ್ತಾರೆ.

ನೀವು ಮಾರಾಟ ಮಾಡಲು ಉದ್ದೇಶಿಸಿರುವ ಆಸ್ತಿಯು ಎರಡು ವರ್ಷಗಳಿಗಿಂತ ಹೆಚ್ಚು ಕಾಲ ನಿಮ್ಮಲ್ಲಿ ಇದ್ದಿದ್ದಾಗಿದ್ದರೆ, ಅದರಿಂದ ಬರುವ ಲಾಭವು ದೀರ್ಘಾವಧಿ ಬಂಡವಾಳ ಲಾಭವಾಗುತ್ತದೆ. 2024ರ ಜುಲೈ 23ರಿಂದ ಅನಿವಾಸಿ ಭಾರತೀಯರು ಮಾರಾಟ ಮಾಡುವ ಸ್ಥಿರ ಆಸ್ತಿಗಳ ಲಾಭದ ಮೇಲೆ ಶೇ 12.5ರಷ್ಟು ತೆರಿಗೆ ಅನ್ವಯಿಸುತ್ತದೆ. ಆದರೆ ನಿವಾಸಿ ಭಾರತೀಯರಿಗೆ ಸಿಗುವ ಇಂಡೆಕ್ಸೇಶನ್ (ಹಣದುಬ್ಬರದ ಪ್ರಮಾಣದೊಂದಿಗೆ ಸರಿಹೊಂದಿಸುವುದು) ಸಹಿತ ಶೇ 20ರ ತೆರಿಗೆ ಅಥವಾ ಇಂಡೆಕ್ಸೇಶನ್ ರಹಿತ ಶೇ 12.5ರ ತೆರಿಗೆ ದರಗಳ ಲಾಭದಾಯಕ ಆಯ್ಕೆ ಅವರಿಗಿಲ್ಲ ಎಂಬುದು ಪ್ರಮುಖ ವ್ಯತ್ಯಾಸ.

ನೀವು ಕೇಳಿದಂತೆ ಈ ಆಸ್ತಿ ಮಾರಾಟದಿಂದ ಬರುವ ಲಾಭದ ಮೇಲಿನ ತೆರಿಗೆ ಉಳಿತಾಯಕ್ಕೆ ಅವಕಾಶಗಳೂ ಇವೆ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 54ರ ಅನ್ವಯ, ಬಂದ ಲಾಭದ ಹಣವನ್ನು ಭಾರತದಲ್ಲೇ ಮತ್ತೊಂದು ವಾಸದ ಮನೆಗಾಗಿ ಹೂಡಿಕೆ ಮಾಡಿದರೆ, ಲಾಭದ ಮೇಲೆ ಅನ್ವಯಿಸುವ ತೆರಿಗೆಗೆ ವಿನಾಯಿತಿ ಸಿಗುತ್ತದೆ. ಅದಲ್ಲದೆ, ಮಾರಾಟ ಮಾಡಿದ ಆರು ತಿಂಗಳೊಳಗೆ, ಸೆಕ್ಷನ್ 54 ಇ.ಸಿ ಅಡಿ ಉಲ್ಲೇಖಿತ ಬಾಂಡ್‌ಗಳಲ್ಲಿ ₹ 50 ಲಕ್ಷದವರೆಗೆ ಹೂಡಿಕೆ ಮಾಡಿದರೆ, ಲಾಭದ ಮೇಲಿನ ತೆರಿಗೆಗೆ ವಿನಾಯಿತಿ ಲಭಿಸುತ್ತದೆ. ನೀವು ಹೆಚ್ಚಿನ ಮಾಹಿತಿಯೊಂದಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ. ಅವರ ಒಟ್ಟಾರೆ ಆದಾಯ ಎಷ್ಟಾಗಬಹುದು ಎಂಬ ಬಗ್ಗೆಯೂ ಯೋಜಿಸಿ. ಅಗತ್ಯ ಬಿದ್ದರೆ ಕಡಿಮೆ ಪ್ರಮಾಣದ ತೆರಿಗೆ ಕಡಿತಕ್ಕಿರುವ ಫಾರ್ಮ್ 13 ಸಲ್ಲಿಸಲು ಸೂಕ್ತ ಮಾರ್ಗದರ್ಶನ ಪಡೆಯಿರಿ.

ವಿಜಯ್ ಕೆ.ಎಂ., ಉಡುಪಿ

● **ಪ್ರಶ್ನೆ: ಸಿಬಿಲ್ ಅಂಕಗಳನ್ನು ಆಗಾಗ ಪರಿಶೀಲಿಸಬೇಕು ಎಂದು ತಜ್ಞರು ಕೆಲವರು ಸಲಹೆ ನೀಡುತ್ತಾರೆ. ಅದರ ಪ್ರಕಾರ ನಾನು ನನ್ನ ಸಿಬಿಲ್ ಅಂಕವನ್ನು ಕಾಲಕಾಲಕ್ಕೆ (ತಿಂಗಳಿಗೊಮ್ಮೆ) ಪರಿಶೀಲಿಸುತ್ತೇನೆ. ಆದರೆ ಈಗ ಬ್ಯಾಂಕಿನ ಒಬ್ಬರು ಹೇಳಿರುವ ಪ್ರಕಾರ ಸಿಬಿಲ್ ಅಂಕವನ್ನು ಪದೇ ಪದೇ ಪರಿಶೀಲಿಸುವುದು ಒಳ್ಳೆಯದಲ್ಲವಂತೆ. ಇದು ನಿಜವೇ? ಮತ್ತೆ ಮತ್ತೆ ಸಿಬಿಲ್ ವರದಿ ಪಡೆಯುತ್ತಿದ್ದರೆ ಅದು ಹಣಕಾಸು ಸಂಸ್ಥೆಗಳಿಗೆ ನಮ್ಮ ಬಗ್ಗೆ ತಪ್ಪು ಸಂದೇಶ ನೀಡುತ್ತದೆಯೇ? ಈ ವ್ಯಕ್ತಿಯು ಸಾಲಕ್ಕಾಗಿ ಪರಿತಪಿಸುತ್ತ ಇದ್ದಾನೆ ಎಂಬ ಅರ್ಥವನ್ನು ಅದು ನೀಡುತ್ತದೆಯೇ? ನಿಜವೇ?**

ಉತ್ತರ: ನಿಮ್ಮ ಪ್ರಶ್ನೆ ವಾಸ್ತವದಿಂದ ಕೂಡಿದೆ. ಕೆಲವೊಮ್ಮೆ ಇಂತಹ ದ್ವಂದ್ವಗಳು ನಮ್ಮನ್ನು ಸಹಜವಾಗಿ ಕಾಡುತ್ತವೆ. ಟ್ರಾನ್ಸ್‌ಯೂನಿಯನ್ ಸಿಬಿಲ್ ಲಿಮಿಟೆಡ್ ಎಂಬ ಸಂಸ್ಥೆಯು 'ಸಿಬಿಲ್ ಸ್ಕೋರ್' ಎಂಬ ಅಂಕ ನೀಡುತ್ತದೆ. ಇದು ವೈಯಕ್ತಿಕ ಆರ್ಥಿಕ ಕ್ರಮಶಿಸ್ತು ಬಗ್ಗೆ ಮಾಹಿತಿ ನೀಡುತ್ತದೆ. ಸಾಲ ನೀಡುವ ಸಂಸ್ಥೆಗಳು, ಈ ಶ್ರೇಯಾಂಕ ಹೆಚ್ಚಿರುವವರನ್ನು ಅರ್ಹರೆಂದು ಉತ್ತಮ ಸ್ಥಿರತೆ ಹೊಂದಿರುವವರೆಂದು ಪರಿಗಣಿಸುತ್ತವೆ. ಇದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ (ಆರ್‌ಬಿಐ) ಅಧಿಕೃತ ಮಾನ್ಯತೆಯ ಮೇರೆಗೆ ಸಾಲಗಾರರ ಮಾಹಿತಿ ಸಂಗ್ರಹಿಸುವ ಹಾಗೂ ಅಂತಹ ಅಂಕಗಳನ್ನು ನೀಡುವ ಅಧಿಕಾರ ಹೊಂದಿದೆ. ಇದು ಯಾವುದೇ ಸಾಲ ಪಡೆಯುವಾಗ ಸಾಲದಾತ ಕಂಪನಿಗಳು ವೈಯಕ್ತಿಕ ಸಾಲಗಾರರ ಬಳಿ ಕೇಳುವ ಮೊದಲ ಮಾಹಿತಿ.

ನಮ್ಮ ಸಿಬಿಲ್ ಅಂಕವನ್ನು ನಾವೇ ಪರಿಶೀಲಿಸುವ ಅವಕಾಶ ಇದೆ. ಇದನ್ನು 'ಸಾಫ್ಟ್ ಎನ್‌ಕ್ವೈರಿ' ಎಂದು ಕರೆಯುತ್ತಾರೆ. ಯಾವುದೇ ಸಾಲದಾತ ಕಂಪನಿ ಅಥವಾ ಬ್ಯಾಂಕ್ ಮಾಡುವ ಇದೇ ಅಂಕ ಪರಿಶೀಲನೆಯನ್ನು 'ಹಾರ್ಡ್ ಎನ್‌ಕ್ವೈರಿ' ಎಂದು ಕರೆಯಲಾಗುತ್ತದೆ. ನಾವೇ ನಮ್ಮ ಶ್ರೇಯಾಂಕ ಪರಿಶೀಲನೆ ಮಾಡುವುದರಿಂದ ಅಂಕಗಳಿಗೆ ಧಕ್ಕೆ ಆಗುವುದಿಲ್ಲ. ಆದರೆ, ನಾವು ಸಾಲಕ್ಕಾಗಿ ವಿವಿಧ ಸಂಸ್ಥೆಗಳ ಮುಂದೆ ಪದೇ ಪದೇ ಅರ್ಜಿ ಸಲ್ಲಿಸುತ್ತಾ ಹೋದರೆ, ಸಾಲ ನೀಡುವ ಸಂಸ್ಥೆಗಳು ಮಾಡುವ ಮೌಲ್ಯಾಂಕ ಪರಿಶೀಲನೆಯಿಂದ ಅಂಕದ ಮೇಲೆ ಅಲ್ಪ ಪ್ರಮಾಣದ ಪರಿಣಾಮ ಉಂಟಾಗುತ್ತದೆ. ಇದು ಸಾಲದ ತೀವ್ರ ಅಗತ್ಯ ವ್ಯಕ್ತಿಗೆ ಇದೆ ಎಂಬ ಚಿತ್ರಣವನ್ನು ನೀಡುತ್ತದೆ.

ಆದರೆ, ಸಾಲದ ಮರುಪಾವತಿ ಕಂತುಗಳನ್ನು ಸಕಾಲದಲ್ಲಿ ಪಾವತಿಸಿ, ಕ್ರೆಡಿಟ್ ಕಾರ್ಡ್ ಪಾವತಿಗಳನ್ನು ಸರಿಯಾಗಿ ಮಾಡಿ ಸಿಬಿಲ್ ಅಂಕಗಳಲ್ಲಿ ಸುಧಾರಣೆ ತಂದುಕೊಳ್ಳಲು ಅವಕಾಶ ಇರುತ್ತದೆ. ಹೀಗಾಗಿ ನೀವೇ ಸಿಬಿಲ್ ಅಂಕ ಪರಿಶೀಲಿಸಿದರೆ ತೊಂದರೆ ಆದೀತೆಂಬ ಭಯ ಬೇಡ. ಸಾಲ ನೀಡುವ ಅನೇಕ ಸಂಸ್ಥೆಗಳು ಅದನ್ನು ಪರಿಶೀಲಿಸಿದಾಗ ಮಾತ್ರ ಅಲ್ಪ ಪ್ರಮಾಣದಲ್ಲಿ ಈ ಸಮಸ್ಯೆ ಆಗುತ್ತದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಅಡಿಕೆ ಧಾರಣೆ

ಸಾಗರ		ಸರಕು	52899-90996	ಚಾಲಿ	35899-43369
ಬಿಳಿಗೋಟು	25214-27214	**ಸಿದ್ದಾಪುರ**		ಕೆಂಪುಗೋಟು	17859-23699
ಚಾಲಿ	27709-37211	ಬಿಳಿಗೋಟು	24899-31729	ರಾಶಿ	43989-47699
ಕೋಕ	16999-21699	ಚಾಲಿ	34599-41919	**ಯಲ್ಲಾಪುರ**	
ಕೆಂಪುಗೋಟು	15999-28100	ಕೋಕ	17119-23899	ಆಪಿ	56209-60299
ರಾಶಿ	43310-54329	ಕೆಂಪುಗೋಟು	22122-23119	ಬಿಳಿಗೋಟು	16899-32199
ಸಿಪ್ಪೆಗೋಟು	8099-19199	ರಾಶಿ	43599-48099	ಚಾಲಿ	33000-42603
ಶಿವಮೊಗ್ಗ		ತಟ್ಟಿಬೆಟ್ಟೆ	30619-35599	ಕೋಕ	8909-17699
ಬೆಟ್ಟೆ	50524-61572	**ಶಿರಸಿ**		ಕೆಂಪುಗೋಟು	17699-24699
ಗೊರಬಲು	16168-32430	ಬೆಟ್ಟೆ	24699-38969	ರಾಶಿ	39699-52209
ರಾಶಿ	46009-57699	ಬಿಳಿಗೋಟು	23099-34899	ತಟ್ಟಬೆಟ್ಟೆ	2000-36799

ಜಿಎಸ್‌ಟಿ ಜಾರಿ: ಇರಲಿ ಸೂಕ್ಷ್ಮಗ್ರಾಹಿತ್ವ

ವರ್ತಕರಿಗೆ ನೋಟಿಸ್ ಕೊಟ್ಟ ಹೊತ್ತಿನಲ್ಲಿ ಎಸ್‌ಬಿಐ ಕಿವಿಮಾತು

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ನಿಯಮಗಳನ್ನು ಜಾರಿಗೆ ತರುವಾಗ ಸೂಕ್ಷ್ಮಗ್ರಾಹಿತ್ವದ ಅಗತ್ಯವೂ ಇದೆ ಎಂದು ಎಸ್‌ಬಿಐ ರಿಸರ್ಚ್ ಹೇಳಿದೆ.

ಕರ್ನಾಟಕದಲ್ಲಿ ಕೆಲವು ವ್ಯಾಪಾರಿಗಳಿಗೆ ವಾಣಿಜ್ಯ ತೆರಿಗೆ ಇಲಾಖೆಯು ನೀಡಿರುವ ನೋಟಿಸ್ ವಿವಾದದ ಸ್ವರೂಪ ಪಡೆದಿರುವ ಹಾಗೂ ಕೆಲವು ವ್ಯಾಪಾರಿಗಳು ಯುಪಿಐ ಪಾವತಿ ಸ್ವೀಕರಿಸಲು ಹಿಂದೇಟು ಹಾಕುತ್ತಿದ್ದಾರೆ ಎಂಬ ವರದಿಗಳು ಇರುವ ಈ ಹೊತ್ತಿನಲ್ಲಿ ಎಸ್‌ಬಿಐ ರಿಸರ್ಚ್‌ನ ಮಾತುಗಳು ಮಹತ್ವ ಪಡೆದಿವೆ.

ಯುಪಿಐ ವ್ಯವಸ್ಥೆಯ ಮೂಲಕ ನಡೆದಿರುವ ವಹಿವಾಟುಗಳ ಆಧಾರದಲ್ಲಿ ತೀರಾ ಬಲವಂತದ ಮಾರ್ಗ ಅನುಸರಿಸಿ ಪರಿಶೀಲನೆ ನಡೆಸುವುದರಿಂದ ಸಣ್ಣ ಉದ್ದಿಮೆಗಳನ್ನು ನಡೆಸುವವರು ನಗದನ್ನು ಮಾತ್ರ ಸ್ವೀಕರಿಸುವ ಅಸಂಘಟಿತ ವ್ಯವಸ್ಥೆಗೆ ಮರಳುವ ಸಾಧ್ಯತೆ ಇರುತ್ತದೆ ಎಂದು ಅದು ಹೇಳಿದೆ.

ಪರೋಕ್ಷ ತೆರಿಗೆ ಪದ್ಧತಿಯು ಹೆಚ್ಚಿನ ಉತ್ತರದಾಯಿತ್ವಕ್ಕೆ ಮತ್ತು ಹೆಚ್ಚಿನ ವರಮಾನ ಸೃಷ್ಟಿಗೆ ಬುನಾದಿ ಹಾಕಿಕೊಟ್ಟಿದೆ. ಆದರೆ ಸಣ್ಣ ವರ್ತಕರಿಗೆ ದಂಡ ವಿಧಿಸುವ ಬದಲು, ಅವರ ಬಲವನ್ನು ಹೆಚ್ಚಿಸುವುದರ ಮೇಲೆ ಈ ವ್ಯವಸ್ಥೆಯ ದೀರ್ಘಾವಧಿ ಯಶಸ್ಸು ನಿಂತಿದೆ ಎಂದು ಎಸ್‌ಬಿಐ ರಿಸರ್ಚ್‌ನ ವರದಿಯು ಹೇಳಿದೆ.

ಬೆಂಗಳೂರಿನ ಹಲವು ಅಂಗಡಿಗಳ ಮಾಲೀಕರು ಹಾಗೂ ವರ್ತಕರಿಗೆ ಅವರ ವಹಿವಾಟಿನ ಗಾತ್ರಕ್ಕಿಂತ ಹೆಚ್ಚಿನ ಪ್ರಮಾಣದ ತೆರಿಗೆ ನೋಟಿಸ್ ನೀಡಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಆರ್ಥಿಕ ಚಟುವಟಿಕೆಗಳ ಹೆಚ್ಚು ನಿಖರವಾದ ಚಿತ್ರಣವನ್ನು ಕಾಣುವ ಹಾಗೂ ತೆರಿಗೆ ವಂಚನೆಯನ್ನು ಕಡಿಮೆ ಮಾಡುವ ಉದ್ದೇಶವು ಒಳ್ಳೆಯದು. ಆದರೆ ಈ ಕೆಲಸವನ್ನು ಮಾಡುವಾಗ ಸೂಕ್ಷ್ಮಗ್ರಾಹಿತ್ವ ಬೇಕು' ಎಂದು ಅದು ಕಿವಿಮಾತು ಹೇಳಿದೆ.

'ಅತಿಯಾದ ಬಲವಂತದ ಕ್ರಮಗಳ ಮೂಲಕ ನಡೆಯುವ ಪರಿಶೀಲನೆಯ ಪರಿಣಾಮವಾಗಿ ಸಣ್ಣ ಉದ್ದಿಮೆಗಳು ನಗದು ಆಧಾರಿತವಾದ ಪಾವತಿ ವ್ಯವಸ್ಥೆಗೆ ಮರಳಬಹುದು. ಹಾಗೆ ಆದರೆ, ಹಣಕಾಸಿನ ವಹಿವಾಟುಗಳನ್ನು ಬ್ಯಾಂಕಿಂಗ್ ವ್ಯವಸ್ಥೆಯೊಳಕ್ಕೆ ತರಬೇಕು ಎಂಬ ಉದ್ದೇಶಕ್ಕೇ ಸೋಲಾಗುತ್ತದೆ' ಎಂದು ಕೂಡ ವರದಿಯು ಎಚ್ಚರಿಸಿದೆ.

ಟಾಟಾ ಅತ್ಯಂತ ಆಕರ್ಷಕ ಉದ್ಯೋಗದಾತ ಬ್ರ್ಯಾಂಡ್

ನವದೆಹಲಿ (ಪಿಟಿಐ): ಭಾರತದ ಅತ್ಯಂತ ಆಕರ್ಷಕ ಉದ್ಯೋಗದಾತ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ಟಾಟಾ ಸಮೂಹ, ಗೂಗಲ್ ಇಂಡಿಯಾ ಮತ್ತು ಇನ್ಫೊಸಿಸ್ ಮೊದಲ ಮೂರು ಸ್ಥಾನಗಳಲ್ಲಿವೆ ಎಂದು ರ್‍ಯಾಂಡ್‌ಸ್ಟಡ್ ಎಂಪ್ಲಾಯರ್ ಬ್ರ್ಯಾಂಡ್ ರಿಸರ್ಚ್ ಹೇಳಿದೆ.

ಭಾರತದ ಉದ್ಯೋಗಿಗಳು ಕೆಲಸ ಮತ್ತು ವೈಯಕ್ತಿಕ ಬದುಕಿನ ನಡುವಿನ ಸಮತೋಲನಕ್ಕೆ, ಆಕರ್ಷಕ ವೇತನ ಹಾಗೂ ಇತರ ಸೌಲಭ್ಯಗಳಿಗೆ ಆದ್ಯತೆ ನೀಡುತ್ತಿದ್ದಾರೆ ಎಂದು ವರದಿ ಹೇಳಿದೆ.

2025ರಲ್ಲಿ ಅತ್ಯಂತ ಆಕರ್ಷಕವಾಗಿ-ರುವ ಇತರ ಉದ್ಯೋಗದಾತ ಬ್ರ್ಯಾಂಡ್‌ಗಳೆಂದರೆ: ಸ್ಯಾಮ್ಸಂಗ್ ಇಂಡಿಯಾ, ಜೆಪಿ ಮಾರ್ಗನ್ ಚೇಸ್, ಐಬಿಎಂ, ವಿಪ್ರೊ, ರಿಲಯನ್ಸ್ ಇಂಡಸ್ಟ್ರೀಸ್, ಡೆಲ್ ಟೆಕ್ನಾಲಜೀಸ್ ಮತ್ತು ಎಸ್‌ಬಿಐ.

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1440 (1440)
ಸೋಯಾ (ರಿಫೈನ್ಡ್)	₹1225 (1225)
ಸೂರ್ಯಕಾಂತಿ (ರಿಫೈನ್ಡ್)	₹1370 (1370)
ಪಾಮೋಲಿನ್	₹1200 (1200)

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC,Degree, ITI, Diplomaದವರು.18,000/- ದಿಂದ 86,000/-. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ14,000-18,000. 8951315839, 7022770052

Wanted

ಬೆಂಗಳೂರಿನಲ್ಲಿ ಭಾರತದ ನಂ.1 ಕ್ಯಾಶ್ ಲಾಜಿಸ್ಟಿಕ್ಸ್ ಕಂಪನಿಗೆ ರಾಜಾಜಿನಗರ, ಕೂಡ್ಲು ಗೇಟ್, HBR ಲೇಔಟ್ ಶಾಖೆಗಳಿಗೆ
ATM ಆಪರೇಟರ್‌ಗಳು ಬೇಕಾಗಿದ್ದಾರೆ.
ಅರ್ಹತೆ: 10 ನೇ ತರಗತಿ ಪಾಸ್ / +2 ಪಾಸ್ / ಪದವಿ / ಡಿಪ್ಲೊಮಾ
ಸಂಬಳ + ಭತ್ಯೆ ರೂ. 18,000 ರಿಂದ 25,000
18 ರಿಂದ 40 ವರ್ಷದೊಳಗಿನ ಪುರುಷರು ಮಾತ್ರ ಅರ್ಜಿ ಸಲ್ಲಿಸಿ
ವಾಕ್-ಇನ್ ಸಂದರ್ಶನ: ಸೋಮವಾರದಿಂದ ಶನಿವಾರ ಬೆ. 10 ರಿಂದ ಸಂಜೆ 5 ರವರೆಗೆ.
ಸ್ಥಳ: ರಾಜಾಜಿನಗರ-560010 ಕೂಡ್ಲು ಗೇಟ್-560068 HBR ಲೇಔಟ್-560043
8217081781 / 8762730620 8928003550

ಪ್ರವಾಸ

Travel

16.10.2025 11.11.2025 08.12.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 11.09.2025 04.10.2025 ಭೂತಾನ್ 8 ದಿನಗಳು.11 .10.2025 01.11.2025 ಶ್ರೀಲಂಕಾ 7 ದಿನಗಳು. 15.09.2025 06.10.2025 03.11.2025 ಕಾಶಿ,ಗಯಾ,ಅಯೋಧ್ಯ 7 ದಿನಗಳು. 11.10.2025 16.11.2025 ಅಸ್ಸಾಂ ಮೇಘಾಲಯ 6/9 ದಿನಗಳು. 04.10.2025 16.11.2025 ಮಧ್ಯಪ್ರದೇಶ 4/10 ದಿನಗಳು. 20.09.2025 06.10.2025 03.11.2025 ಗುಜರಾತ್ 8 ದಿನಗಳು. 22.09.2025 16.10.2025 11.11.2025 ರಾಜಸ್ಥಾನ 9ದಿನಗಳು. ಸಂಪರ್ಕಿಸಿ. ಜೈನ್ ಟ್ರಾವೆಲ್ಸ್ ಬೆಂಗಳೂರು.03. 7022547922 9448402248

ಸುಸಜ್ಜಿತ ವ್ಯವಸ್ಥೆಯೊಂದಿಗೆ 11.09.2025 02.10.2025 ರಿಂದ 8 ದಿನಗಳ ಕಾಶಿ,ಗಯಾ,ಅಯೋಧ್ಯ. 30.08.2025 23.10.2025 ರಿಂದ 11 ದಿನಗಳ ಮುಕ್ತಿನಾಥ ಕಾಶಿ,ನೇಪಾಳ. 17.9.2025 04.10.2025 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆಗಳು. 04.11.2025 14.11.2025 ರಿಂದ 10 ದಿನಗಳ ಅಸ್ಸಾಂ,ಮೇಘಾಲಯ ಅರುಣಾಚಲ. 18.09.2025 25.09.2025 ರಿಂದ 7 ದಿನಗಳ ಭೂತಾನ್. 14.09.2025 11.10.2025 ರಿಂದ 3 ದಿನಗಳ ಪೂರಿ ಕೋನಾರ್ಕ್ ಭುವನೇಶ್ವರ್. 02.10.2025 23.10.2025 ರಿಂದ 8 ದಿನಗಳ ಶಿಮ್ಲಾ ಕುಲ್ಲುಮನಾಲಿ. 01.11.2025 16.11.2025 ರಿಂದ 11 ದಿನಗಳ ಮಧ್ಯಪ್ರದೇಶ. 04.11.2025 23.11.2025 ರಿಂದ 8/11/17 ದಿನಗಳ ಗುಜರಾತ್ ರಾಜಸ್ಥಾನ ಪ್ರವಾಸಗಳು. 31.08.2025 04.10.2025 ರಿಂದ 7/11 ಸಿಂಗಾಪುರ್ ಮಲೇಷ್ಯಯಾ ಥೈಲ್ಯಾಂಡ್. 16.11.2025 ರಿಂದ 8/11/17 ದಿನಗಳ ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್. 25.10.2025 ರಿಂದ 10 ದಿನಗಳ ಕಾಂಬೋಡಿಯ ವಿಯೆಟ್ನಾಂ. 15.09.2025 ರಿಂದ 13 ದಿನಗಳ ಯುಕೆ,ಯುರೋಪ್ 09.10.2025 16.11.2025 ರಿಂದ 6 ದಿನಗಳ ದುಬೈ,ಅಬುಧಾಬಿ ಶಾರ್ಜಾ. ಪ್ರವಾಸಗಳು ಸಂಪರ್ಕಿಸಿ. ಆನಂದ್ ವಿಹಾರಿ ಬೆಂಗಳೂರು.23 080-23385837 8088887677

ಭಾರತಪರಂಪರ ದರ್ಶನ: 17.8.25 ಪುರಿಜಗನ್ನಾಥ, 2ಶಕ್ತಿಪೀಠ, ಕೊಲ್ಕತ್ತ,6ದಿನ ವಿಮಾನದಲ್ಲಿ. 5.10.25 11ದಿನ ನೇಪಾಳ್ ಮುಕ್ತಿನಾಥ್, ಕಾಶಿ,ಅಯೋಧ್ಯ, ಪ್ರಕಾಶ್ ಹೆಬ್ಬಾರ್. 9448792891.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಯುನೆಸ್ಕೊದಿಂದ ಮತ್ತೆ ಹೊರಬರಲಿರುವ ಅಮೆರಿಕ

ಪ್ಯಾರಿಸ್ (ಎಪಿ): ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾದ ಯುನೆಸ್ಕೊ ಇಸ್ರೇಲ್ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ ಎಂದು ಆರೋಪಿಸಿ, ಅದರಿಂದ ಮತ್ತೆ ಹೊರಬರುವುದಾಗಿ ಅಮೆರಿಕ ಮಂಗಳವಾರ ಹೇಳಿದೆ. ಈ ಹಿಂದೆ ಕೂಡಾ ಅದರಿಂದ ಹೊರಬಂದಿದ್ದ ಅಮೆರಿಕ, ಎರಡು ವರ್ಷಗಳ ಹಿಂದೆಯಷ್ಟೆ ಮತ್ತೆ ಸೇರಿಕೊಂಡಿತ್ತು.

'ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಯುನೆಸ್ಕೊದಿಂದ ಹೊರಬರಲು ನಿರ್ಧರಿಸಿದ್ದಾರೆ' ಎಂದು ಶ್ವೇತಭವನದ ಉಪ ವಕ್ತಾರೆ ಅನ್ನಾ ಕೆಲ್ಲಿ 'ನ್ಯೂಯಾರ್ಕ್ ಪೋಸ್ಟ್'ಗೆ ತಿಳಿಸಿದ್ದಾರೆ.

ಯುನೆಸ್ಕೊವನ್ನು ಅಮೆರಿಕ ತೊರೆಯುತ್ತಿರುವುದು ಇದು ಮೂರನೇ ಬಾರಿಯಾಗಿದ್ದು, ಟ್ರಂಪ್ ಆಡಳಿತದಲ್ಲಿ ಎರಡನೇ ಬಾರಿಯಾಗಿದೆ. ಟ್ರಂಪ್ ಮೊದಲನೇ ಅಧಿಕಾರಾವಧಿಯಲ್ಲಿ ಅದರಿಂದ ಅಮೆರಿಕ ಹೊರಬಂದಿತ್ತು. ಐದು ವರ್ಷಗಳ ನಂತರ, ಆಗ ಅಮೆರಿಕ ಅಧ್ಯಕ್ಷರಾಗಿದ್ದ ಜೋ ಬೈಡನ್ ಮತ್ತೆ ಸಂಸ್ಥೆಗೆ ಸೇರಿಕೊಳ್ಳಲು ಅರ್ಜಿ ಸಲ್ಲಿಸಿದ್ದರು. ಪಸ್ತುತ ನಿರ್ಧಾರವು 2026ರ ಡಿಸೆಂಬರ್ ಕೊನೆಯ ವೇಳೆ ಜಾರಿಗೆ ಬರಲಿದೆ.

'₹99 ಸಾವಿರ ಕೋಟಿ ಬಿಟ್ಟುಕೊಟ್ಟ ಕೇಂದ್ರ'

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದಲ್ಲಿ ಕಾರ್ಪೊರೇಟ್ ಸಂಸ್ಥೆಗಳಿಗೆ ನೀಡಿದ ತೆರಿಗೆ ಪ್ರಯೋಜನಗಳ ಕಾರಣದಿಂದಾಗಿ ಕೇಂದ್ರ ಸರ್ಕಾರವು ಅಂದಾಜು ₹99 ಸಾವಿರ ಕೋಟಿ ವರಮಾನವನ್ನು ಬಿಟ್ಟುಕೊಟ್ಟಿದೆ.

ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಮಂಗಳವಾರ ಈ ವಿಷಯವನ್ನು ರಾಜ್ಯಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. 2016ರ ನಂತರದಲ್ಲಿ ಕಾರ್ಪೊರೇಟ್ ತೆರಿಗೆಯನ್ನು ಹಂತ ಹಂತವಾಗಿ ಕಡಿಮೆ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ಕೇಂದ್ರವು ಬಿಟ್ಟುಕೊಟ್ಟಿರುವ ಕಾರ್ಪೊರೇಟ್ ತೆರಿಗೆ ವರಮಾನದ ಮೊತ್ತವು 2022–23ರಲ್ಲಿ ₹88,109 ಕೋಟಿ, 2021–22ರಲ್ಲಿ ₹96,892 ಆಗಿದೆ ಎಂದು ಅವರು ಹೇಳಿದ್ದಾರೆ. ಎಎಪಿ ಸದಸ್ಯ ರಾಘವ ಛಡ್ಡಾ ಅವರ ಪ್ರಶ್ನೆಗೆ ಉತ್ತರವಾಗಿ ಸಚಿವರು ಈ ವಿವರ ನೀಡಿದ್ದಾರೆ.

ಐಎಂಎಫ್ ತೊರೆದ ಗೀತಾ ಗೋಪಿನಾಥ್

ನ್ಯೂಯಾರ್ಕ್ (ಪಿಟಿಐ): ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕರಾಗಿರುವ ಭಾರತೀಯ ಅಮೆರಿಕನ್ ಗೀತಾ ಗೋಪಿನಾಥ್ ಅವರು ಈ ಹುದ್ದೆ ತ್ಯಜಿಸಿದ್ದು, ಪುನಃ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುವುದಾಗಿ ಹೇಳಿದ್ದಾರೆ.

'ಐಎಂಎಫ್‌ನಲ್ಲಿ ಅದ್ಭುತವಾದ ಏಳು ವರ್ಷಗಳನ್ನು ಕಳೆದಿದ್ದೇನೆ. ಇದೀಗ ನನ್ನ ಶೈಕ್ಷಣಿಕ ವೃತ್ತಿಗೆ ಮರಳಲು ನಿರ್ಧರಿಸಿ-ದ್ದೇನೆ' ಎಂದು ಅವರು ಗೀತಾ ಗೋಪಿನಾಥ್ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಐಎಂಎಫ್ ಇತಿಹಾಸದಲ್ಲಿ ಮೊದಲ ಮಹಿಳಾ ಮುಖ್ಯ ಅರ್ಥ-ಶಾಸ್ತ್ರಜ್ಞೆಯಾಗಿ ಕಾರ್ಯನಿರ್ವಹಿಸಿರುವ ಅವರು, ಸೆಪ್ಟೆಂಬರ್ 1ರಿಂದ ಹಾರ್ವರ್ಡ್ ಅರ್ಥಶಾಸ್ತ್ರ ವಿಭಾಗಕ್ಕೆ ಮರಳಲಿದ್ದಾರೆ.

'ಐಎಂಎಫ್‌ನಲ್ಲಿ ಮುಖ್ಯ ಅರ್ಥಶಾಸ್ತ್ರಜ್ಞೆಯಾಗಿ ಮತ್ತು ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕಳಾಗಿ ಕಾರ್ಯ ನಿರ್ವಹಿಸಿದ್ದೇನೆ. ಇದು ನನ್ನ ಜೀವಮಾನದಲ್ಲಿ ದೊರೆತ ಅತ್ಯುತ್ತಮ ಅವಕಾಶ. ಅದಕ್ಕಾಗಿ ನಾನು ಐಎಂಎಫ್‌ಗೆ ಕೃತಜ್ಞಳಾ-ಗಿರುತ್ತೇನೆ' ಎಂದು ಅವರು ತಿಳಿಸಿದ್ದಾರೆ.

ಬಾಂಗ್ಲಾದೇಶ: ಮೃತರ ಸಂಖ್ಯೆ 31ಕ್ಕೆ ಏರಿಕೆ

ಶಾಲೆ ಮೇಲೆ ವಾಯುಪಡೆಯ ತರಬೇತಿ ವಿಮಾನ ಪತನ

ಢಾಕಾ (ಪಿಟಿಐ): ಬಾಂಗ್ಲಾದೇಶ ವಾಯುಪಡೆಯ ತರಬೇತಿ ವಿಮಾನ ಶಾಲಾ ಕಟ್ಟಡದ ಮೇಲೆ ಪತನಗೊಂಡು ಮೃತಪಟ್ಟವರ ಸಂಖ್ಯೆಯು 31ಕ್ಕೆ ಏರಿಕೆಯಾಗಿದೆ ಎಂದು ಸೇನೆಯ ಮಾಧ್ಯಮ ವಿಭಾಗ 'ಅಂತರ್ ಸೇವೆ–ಸಾರ್ವಜನಿಕ ವಿಭಾಗ' (ಐಎಸ್‌ಪಿಆರ್) ತಿಳಿಸಿದೆ.

ಗಾಯಗೊಂಡು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 11 ಮಂದಿ ಮಂಗಳವಾರ ಮೃತಪಟ್ಟಿದ್ದಾರೆ.

ಸೋಮವಾರ ಮಧ್ಯಾಹ್ನ 1:06ಕ್ಕೆ ಟೇಕ್‌ಆಫ್ ಆದ ಎಫ್–7 ಬಿಜಿಐ ತರಬೇತಿ ವಿಮಾನವು, ಢಾಕಾ ಸಮೀಪದ ಉತ್ತರಾ ಪ್ರದೇಶದಲ್ಲಿನ ಮೈಲ್‌ಸ್ಟೋನ್ ಶಾಲೆ ಮತ್ತು ಕಾಲೇಜು ಆವರಣದಲ್ಲಿನ ಎರಡು ಮಹಡಿಯ ಕಟ್ಟಡಕ್ಕೆ ಅಪ್ಪಳಿಸಿತ್ತು.

'ಮೃತರಲ್ಲಿ 25 ಮಂದಿ ಮಕ್ಕಳು ಸೇರಿದ್ದಾರೆ' ಎಂದು ಬಾಂಗ್ಲಾದೇಶ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರ ವಿಶೇಷ ಸಲಹೆಗಾರ ಸೈದುರ್ ರೆಹಮಾನ್ ತಿಳಿಸಿದರು.

ಢಾಕಾದ ಶಿಕ್ಷಣ ಸಂಸ್ಥೆಯ ಮೇಲೆ ಪತನಗೊಂಡ ಯುದ್ಧ ವಿಮಾನದಿಂದ ಮೃತಪಟ್ಟವರ ನಿಖರ ಸಂಖ್ಯೆ ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು–ಎಎಫ್‌ಪಿ ಚಿತ್ರ

'ಮೃತಪಟ್ಟವರಲ್ಲಿ ಬಹುತೇಕ ಮಕ್ಕಳು 12 ವರ್ಷದ ಒಳಗಿನವರು. 20 ಮಂದಿಯ ಮೃತದೇಹಗಳನ್ನು ಕುಟುಂಬ ಸ್ಥರಿಗೆ ಹಸ್ತಾಂತರಿಸಲಾಗಿದೆ. ಸಾವಿನ ಸಂಖ್ಯೆ ಇನ್ನಷ್ಟು ಏರಿಕೆಯಾಗುವ ಸಾಧ್ಯತೆಯಿದೆ' ಎಂದು ಅವರು ತಿಳಿಸಿದರು.

'ಗಾಯಗೊಂಡವರ ಪೈಕಿ ಕೆಲವರ ಸ್ಥಿತಿ ಚಿಂತಾಜನಕವಾಗಿದೆ. ಎಲ್ಲ ರೀತಿಯ ಚಿಕಿತ್ಸೆ ಒದಗಿಸಲು ಸರ್ಕಾರ ಯತ್ನಿಸುತ್ತಿದೆ' ಎಂದರು.

ವಿಮಾನ ದುರಂತದಿಂದ 170 ಮಂದಿ ಗಾಯಗೊಂಡಿದ್ದಾರೆ. ಮೃತರಲ್ಲಿ ವಿಮಾನದ ಪೈಲಟ್ ಲೆಫ್ಟಿನೆಂಟ್ ಮೊಹಮ್ಮದ್ ತೌಕೀರ್ ಇಸ್ಲಾಮ್ ಕೂಡ ಸೇರಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
22-07-2025

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1450 (-)
ಒಂದು ವಾರದ ಡೆಲಿವರಿ	1445 (-)
ಪಾಮ್ ವಾರದ ಡೆಲಿವರಿ	1198 (-)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (-)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,500 (-)
ಬೆಳ್ಳಿ ಕೆ.ಜಿಗೆ	1,15,000 (-)

ಹಿಂದಿನ ದಿನದ ಧಾರಣೆ ಲಭ್ಯವಿಲ್ಲ

ಪುಟಿನ್ ಜತೆ ಮಾತುಕತೆಗೆ ಪ್ರಸ್ತಾವ

ಕೀವ್ (ಎಪಿ): ರಷ್ಯಾ ಮತ್ತು ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸುವ ಉದ್ದೇಶದಿಂದ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುವ ಪ್ರಸ್ತಾವವನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತೆ ಇಟ್ಟಿದ್ದಾರೆ.

ಆದರೆ, ಮುಖಾಮುಖಿ ಚರ್ಚೆಗೆ ಸಂಬಂಧಿಸಿದಂತೆ ಈ ಹಿಂದೆ ಝೆಲೆನ್‌ಸ್ಕಿ ಅವರು ಮುಂದಿಟ್ಟಿದ್ದ ಪ್ರಸ್ತಾವಗಳನ್ನು ಪುಟಿನ್ ತಿರಸ್ಕರಿಸಿದ್ದರು.

'ಉಕ್ರೇನ್ ಎಂದಿಗೂ ಯುದ್ಧವನ್ನು ಬಯಸಿರಲಿಲ್ಲ. ರಷ್ಯಾ ಆರಂಭಿಸಿದ ಈ ಯುದ್ಧವನ್ನು ಅದೇ ಕೊನೆಗೊಳಿಸಬೇಕು' ಎಂದು ಝೆಲೆನ್‌ಸ್ಕಿ ಟೆಲಿಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕನ್ನಡದಲ್ಲಿ 'ನುಡಿ ಬರವಣಿಗೆ' ತಂತ್ರಾಂಶ

ಒಂದನೇ ಪುಟದಿಂದ...

ಹೊಂದಾಣಿಕೆಯ ತಂತ್ರಾಂಶ: 'ಈ ತಂತ್ರಾಂಶ, ವಿಂಡೋಸ್ 7 ಆಪರೇಟಿಂಗ್ ಸಿಸ್ಟಂಗಿಂತ (ಒಎಸ್) ಮೇಲ್ಪಟ್ಟ ಎಲ್ಲ ಒಎಸ್ ಆಧಾರಿತ ತಂತ್ರಾಂಶಗಳಿಗೂ ಹೊಂದಿಕೆಯಾಗುತ್ತದೆ. ಮಾತ್ರವಲ್ಲ, ಪುಟವಿನ್ಯಾಸದ ತಂತ್ರಾಂಶಗಳಿಗೂ ಹೊಂದಿಕೊ-ಳ್ಳುತ್ತದೆ. ಇದನ್ನು ಲ್ಯಾಪ್‌ಟಾಪ್, ಡೆಸ್ಕ್‌ಟಾಪ್ ಕಂಪ್ಯೂಟರ್‌ಗೂ ಅಳವಡಿಸಬಹುದು.

ಟೈಪ್ ಮಾಡಿದ ಫೈಲ್ ಅನ್ನು ವರ್ಡ್ (97, 2003 ವರ್ಡ್ ಫಾರ್ಮ್ಯಾಟ್), ಟೆಕ್ಸ್ಟ್, ಆರ್‌ಟಿಎಫ್, ವೆಬ್‌ಪೇಜ್, ಒಡಿಟಿ ಫಾರ್ಮ್ಯಾಟ್‌ನಲ್ಲೂ (ಸೇವ್) ಉಳಿಸಬಹುದು. ಮಾತ್ರವಲ್ಲ, 'ಪಿಡಿಎಫ್' ಆಗಿ ಪರಿವರ್ತಿಸುವ ಸೌಲಭ್ಯ ಇದೆ. ಮುಂದೆ ಧ್ವನಿಮುದ್ರಿತ ಫೈಲ್ ಅನ್ನು ಪಠ್ಯವಾಗಿಸುವಂತಹ ಸೌಲಭ್ಯವನ್ನು ಅಭಿವೃದ್ಧಿಪಡಿಸಲಾಗುತ್ತದೆ.

'ನಾವು ಅಭಿವೃದ್ಧಿಪಡಿಸಿರುವ 'ನುಡಿ ಬರವಣಿಗೆ ೧.೦' ತಂತ್ರಾಂಶವನ್ನು ಸೋರ್ಸ್ ಕೋಡ್ ಸಹಿತ ಓಪನ್ ಸೋರ್ಸ್‌ನಲ್ಲಿ (ಗಿಟ್ ಹಬ್) ಇಡುತ್ತೇವೆ. ಬೇರೆ ಯಾರಾದರೂ ಇದನ್ನು ತೆಗೆದುಕೊಂಡು ಅಭಿವೃದ್ಧಿಪಡಿಸಲು ಅವಕಾಶವಿದೆ' ಎಂದು ನರಸಿಂಹ ಮೂರ್ತಿ ತಿಳಿಸಿದರು.

ಕುಟುಂಬಸ್ಥರ ವಿರೋಧದ ನಡುವೆ ದಾಖಲೆ ಬಿಡುಗಡೆಗೊಳಿಸಿದ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ಜ್ಯೂ. ಮಾರ್ಟಿನ್ ಲೂಥರ್ ಕಿಂಗ್– ದಾಖಲೆ ಬಿಡುಗಡೆ

ವಾಷಿಂಗ್ಟನ್ (ಎಪಿ): ಅಮೆರಿಕದ ನಾಗರಿಕ ಹಕ್ಕುಗಳ ಚಳವಳಿಯ ಪ್ರಮುಖ ನಾಯಕ ಜ್ಯೂ.ಮಾರ್ಟಿನ್ ಲೂಥರ್‌ಕಿಂಗ್‌ಗೆ ಸಂಬಂಧಿಸಿದ ದಾಖಲೆಗಳನ್ನು ಅವರ ಕುಟುಂಬದ ಸದಸ್ಯರು, ನಾಗರಿಕ ಹಕ್ಕುಗಳ ಸಂಘಟನೆಯ ವಿರೋಧದ ನಡುವೆಯೂ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಬಿಡುಗಡೆಗೊಳಿಸಿದ್ದಾರೆ.

2.40 ಲಕ್ಷ ಪುಟಗಳನ್ನು ಒಳಗೊಂಡ ದಾಖಲೆಗಳನ್ನು ನ್ಯಾಯಾಲಯದ ಆದೇಶದಂತೆ 1977ರಿಂದಲೂ ಸಂಗ್ರಹಿಸಿ ಮುಚ್ಚಿ ಇಡಲಾಗಿತ್ತು. ಬಳಿಕ ಅವುಗಳನ್ನು ರಾಷ್ಟ್ರೀಯ ದಾಖಲೆಗಳ ನಿರ್ವಹಣಾ ವಿಭಾಗಕ್ಕೆ ವರ್ಗಾಯಿಸಲಾಗಿತ್ತು.

1968ರ ಏಪ್ರಿಲ್ 18ರಂದು ಮಾರ್ಟಿನ್ ಲೂಥರ್ ಕಿಂಗ್ (ಜ್ಯೂನಿಯರ್) ಅವರನ್ನು ಟೆನ್ನೆಸ್ಸಿ-ಯಲ್ಲಿರುವ ಮೆಂಫಿಸ್‌ನಲ್ಲಿ ಗುಂಡಿಕ್ಕಿ ಕೊಲ್ಲಲಾಗಿತ್ತು.

ಡಾ. ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್–ಎಎಫ್‌ಪಿ ಚಿತ್ರ

ತಂದೆಯ ಹತ್ಯೆಯ ಕುರಿತು 'ದಶಕದಿಂದಲೂ ಸಾರ್ವಜನಿಕರ ಕುತೂಹಲ ಕೆರಳಿಸಿತ್ತು. ಈ ಎಲ್ಲ ದಾಖಲೆಗಳನ್ನು ಐತಿಹಾಸಿಕ ಸೃಷ್ಟಿಯಿಂದಲೇ ನೋಡಬೇಕು' ಎಂದು ಮಾರ್ಟಿನ್ ಅವರ ಇಬ್ಬರು ಮಕ್ಕಳಾದ ಮಾರ್ಟಿನ್–3 (67) ಹಾಗೂ ಬೆರ್ನೈಸ್ (62) ಅವರು ಬಿಡುಗಡೆಗೊಳಿ-ಸಿದ ದೀರ್ಘವಾದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರ್ಟಿನ್‌ಗೆ ಸಂಬಂಧಿಸಿದ ದಾಖಲೆಗಳು ಮುಂಚಿತವಾಗಿ ಅವರ ಕುಟುಂಬಕ್ಕೆ ಲಭ್ಯವಾಗಿದ್ದವು, ಅದನ್ನು ಅವರ ತಂಡವು ವಿಸ್ತೃತವಾಗಿ ಪರಿಶೀಲಿಸಿತು. ಇದಾದ ಬಳಿಕವೇ, ಸಾರ್ವಜನಿಕರ ಬಳಕೆಗೆ ಬಿಡುಗಡೆಗೊ-ಳಿಸಲಾಯಿತು. ಆದರೆ, ಸೋಮವಾರ ಬಿಡುಗಡೆಯಾದ ದಾಖಲೆಗಳ ಪ್ರಕಾರ, ಮಾರ್ಟಿನ್ ಅವರ ಜೀವನ, ನಾಗರಿಕ ಹಕ್ಕುಗಳ ಅವರ ಹೋರಾಟ, ಹತ್ಯೆಗೆ ಸಂಬಂಧಿಸಿದಂತೆ ಹೊಸ ಬೆಳಕು ಚೆಲ್ಲುವ ಅಂಶಗಳು ಪ್ರಕಟಗೊಂಡಿ ವೆಯೇ ಎಂಬುದು ಖಚಿತಪಟ್ಟಿಲ್ಲ.

'ಮಾರ್ಟಿನ್ ಲೂಥರ್ ಕಿಂಗ್, ಕೊರೆಟ್ಟಾ ಸ್ಕಾಟ್ ಕಿಂಗ್ ಮಕ್ಕಳಾಗಿ ಅವರ ದುರಂತ ಸಾವಿನಿಂದ ವೈಯಕ್ತಿಕವಾಗಿ ನೋವು, ನಷ್ಟ ಉಂಟಾಗಿದೆ. ಅವರ ಅನುಪಸ್ಥಿತಿಯಲ್ಲಿ 57 ವರ್ಷ ನಾವು ನಮ್ಮ ಜೀವನವನ್ನು ನಡೆಸಿಕೊಂಡು ಬಂದಿದ್ದೇವೆ. ಈ ದಾಖಲೆಗಳ ಬಿಡುಗಡೆಯಲ್ಲಿ ತೊಡಗಿದವರು ಕುಟುಂಬದ ಮೇಲೂ ಸಹಾನುಭೂತಿ, ಸಂಯಮ ಹಾಗೂ ಗೌರವ ಹೊಂದಬೇಕೆಂದು ಬಯಸುತ್ತೇವೆ' ಎಂದು ಇಬ್ಬರು ಮಕ್ಕಳು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಾರ್ಟಿನ್ ಅವರ ಹತ್ಯೆಯಲ್ಲಿ ಜೇಮ್ಸ್ ಅರ್ಲ್ ರೇ ಒಬ್ಬರೇ ಜವಾಬ್ದಾರರಲ್ಲ ಎಂದು ಕುಟುಂಬವು ಹಿಂದಿನಿಂದಲೂ ವಾದಿಸಿಕೊಂಡು ಬಂದಿದ್ದ ಹೇಳಿಕೆಯನ್ನು ಮಕ್ಕಳು ಕೂಡ ಪುನಾರಾವರ್ತಿಸಿದ್ದಾರೆ.

ಮೆಚ್ಚುಗೆ: 'ದಾಖಲೆಗಳನ್ನು ಬಿಡುಗಡೆಗೊಳಿಸಿರುವುದು ಅಭೂತಪೂರ್ವ ಕ್ರಮ. ಹಲವು ದಾಖಲೆ ಡಿಜಿಟಲೀಕರಣ ಮಾಡಿರುವ ಕಾರಣ, ಸಾರ್ವಜನಿಕರ ಮುಂದಿಡಲು ಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ಡೊನಾಲ್ಡ್ ಟ್ರಂಪ್ ಅವರ ನಿರ್ಧಾರ ಮೆಚ್ಚುವಂತದ್ದು' ಎಂದು ರಾಷ್ಟ್ರೀಯ ಗುಪ್ತಚರ ಇಲಾಖೆಯ ನಿರ್ದೇಶಕಿ ತುಳಸಿ ಗಬ್ಬಾರ್ಡ್ ಅವರ ಕಚೇರಿಯು ಪ್ರಕಟಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

‘ಆರ್ಕೆಸ್ಟ್ರಾ ಮೈಸೂರು’ ಚಿತ್ರದಲ್ಲಿ ನಾಯಕನಾಗಿ ನಟಿಸಿ ಹಲವು ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳನ್ನು ನಿಭಾಯಿಸಿದ ನಟ ಪೂರ್ಣಚಂದ್ರ ಮೈಸೂರು ಸದ್ಯ ‘ಎಕ್ಕ’ ಸಿನಿಮಾ ಬಿಡುಗಡೆಯಾದ ಬಳಿಕ ‘ಡ್ಯಾಡಿ’ಯಾಗಿದ್ದಾರೆ! ರಂಗಭೂಮಿಯಿಂದ ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟ ಅವರ ಸಿನಿಬ್ಯಾಂಕ್‌ನಲ್ಲಿ ನಾಲ್ಕೈದು ಸಿನಿಮಾಗಳಿವೆ.

ಪೂರ್ಣಚಂದ್ರ ಮೈಸೂರು

ಡ್ಯಾಡಿ ಪೂರ್ಣಚಂದ್ರ ಮೈಸೂರು

• ಅಭಿಲಾಷ್ ಪಿ.ಎಸ್.

• ‘ಡಾಲಿ’ ಗ್ಯಾಂಗ್‌ನಲ್ಲಿದ್ದವರು ‘ಮಸ್ತಾನ್’ ಗ್ಯಾಂಗ್ ಸೇರಿದ್ದು ಹೇಗೆ?

‘ಮೈಸೂರು ಗ್ಯಾಂಗ್’ ಒಂದು ರೀತಿ ಹರಿಯುವ ಕಾವೇರಿ. ಎಲ್ಲಾ ಕಡೆ ಹೋಗುತ್ತೇವೆ. ಎಲ್ಲಿಗೆ ದಾರಿ ಮಾಡಿ ಕೊಡುತ್ತಾರೋ ಅಲ್ಲಿಗೆ ಹರಿಯುತ್ತೇವೆ. ನಿರ್ದೇಶಕರಾದ ರೋಹಿತ್ ಪದಕಿ ಕರೆ ಮಾಡಿ ‘ಡ್ಯಾಡಿ’ ಪಾತ್ರವನ್ನು ವಿವರಿಸಿದರು. ಈ ಪಾತ್ರಕ್ಕೆ ಒಂದು ರೆಫರೆನ್ಸ್ ಕೊಟ್ಟರು. ರಾಮ್ ಗೋಪಾಲ್ ವರ್ಮಾ ನಿರ್ದೇಶನದ ‘ಸತ್ಯ’ ಸಿನಿಮಾದಲ್ಲಿನ ಮನೋಜ್ ಬಾಜ್‌ಪೇಯಿ ಪಾತ್ರದ ರೀತಿ ‘ಡ್ಯಾಡಿ’ ಪಾತ್ರವಿರಲಿದೆ ಎಂದರು. ಆ ಪಾತ್ರದಷ್ಟೇ ವೈಬ್ ಈ ಪಾತ್ರಕ್ಕೆ ಇರುತ್ತದೆ ಎಂದು ಹೇಳಿ ಕಥೆ ಕೇಳಲು ಕರೆದರು. ಕಥೆ ಕೇಳಿದ ಬಳಿಕ ಈ ಪಾತ್ರವನ್ನು ನಿಭಾಯಿಸಲು ಇನ್ನಷ್ಟು ಉತ್ಸುಕನಾದೆ. ಪಾತ್ರಕ್ಕೆ ಬೇಕಾದ ಏರಿಳಿತಗಳೆಲ್ಲವೂ ‘ಡ್ಯಾಡಿ’ ಪಾತ್ರದಲ್ಲಿದ್ದವು. ಈ ಪಾತ್ರವನ್ನು ಮಾಡದೇ ಇದ್ದರೆ ಏನನ್ನೋ ಕಳೆದುಕೊಳ್ಳುತ್ತೇನೆ ಎಂಬ ಭಯವಿತ್ತು. ಹೀಗಾಗಿ ತಕ್ಷಣ ಒಪ್ಪಿಕೊಂಡೆ.

> ನಾನು ನಟರಾದ ಇರ್ಫಾನ್ ಖಾನ್, ಮನೋಜ್ ಬಾಜ್‌ಪೇಯಿ ಅವರನ್ನು ಅನುಸರಿಸುತ್ತೇನೆ. ನಟನಾಗಿ ಒಂದು ಪಾತ್ರ ಖುಷಿ ಕೊಡುತ್ತದೆ, ಈ ಪಾತ್ರವನ್ನು ನೋಡಿ ಪ್ರೇಕ್ಷಕರಿಗೆ ಮನರಂಜನೆ ಸಿಗುತ್ತದೆ ಎಂದರೆ ಒಪ್ಪಿಕೊಳ್ಳುತ್ತೇನೆ. ಅದು ನಾಯಕನ ಪಾತ್ರವೇ ಆಗಿರಲಿ ಅಥವಾ ಸಿನಿಮಾದೊಳಗಿನ ಯಾವುದೇ ಪಾತ್ರವಾಗಿರಲಿ. ಪರಿಪೂರ್ಣ ನಟನಾಗುವ ಪ್ರಯತ್ನದಲ್ಲಿ ನಾನಿದ್ದೇನೆ.
> –**ಪೂರ್ಣಚಂದ್ರ ಮೈಸೂರು,** ನಟ

• ‘ಡ್ಯಾಡಿ’ಯಾದ ಖುಷಿ ಹೇಗಿದೆ?

ರಂಗಭೂಮಿ ಹಾಗೂ ಕಿರುಚಿತ್ರಗಳಲ್ಲಿ ನಟಿಸಿದ ಅನುಭವದ ಜೊತೆಗೆ ‘ಆರ್ಕೆಸ್ಟ್ರಾ ಮೈಸೂರು’, ‘ಬಡವ ರಾಸ್ಕಲ್’, ‘ಪಾಪ್‌ಕಾರ್ನ್ ಮಂಕಿ ಟೈಗರ್’, ‘ಫ್ಯಾಮಿಲಿ ಡ್ರಾಮಾ’, ‘ಡೇರ್‌ಡೆವಿಲ್ ಮುಸ್ತಾಫಾ’, ‘ಮರ್ಯಾದೆ ಪ್ರಶ್ನೆ’ ಸಿನಿಮಾಗಳಲ್ಲಿ ನಟಿಸಿದ ಅನುಭವಗಳಿಂದ ಇಂತಹ ಪಾತ್ರ ದೊರೆಯಿತು. ಒಂದು ಸಿನಿಮಾ ಕಮರ್ಷಿಯಲ್ ಆಗಿ ಹಿಟ್ ಆದಾಗಷ್ಟೇ ಅದರೊಳಗಿರುವ ಪಾತ್ರಗಳೂ ಹಿಟ್ ಆಗುತ್ತವೆ. ಜನರು ಆ ಪಾತ್ರಗಳಿಂದ ನಮ್ಮನ್ನು ಗುರುತಿಸಲು ಆರಂಭಿಸುತ್ತಾರೆ. ನಮ್ಮನ್ನಷ್ಟೇ ಅಲ್ಲ ಚಿತ್ರದಲ್ಲಿ ಕೆಲಸ ಮಾಡಿದ ತಂತ್ರಜ್ಞರನ್ನೂ ಜನ ಗುರುತಿಸುತ್ತಾರೆ. ಹೊಸ ಬದುಕು ಇಲ್ಲಿಂದ ಆರಂಭವಾಗುತ್ತದೆ. ಈ ಹಿಂದೆ ‘ಬಡವ ರಾಸ್ಕಲ್’ ಸಿನಿಮಾದಲ್ಲಿ ನಟಿಸಿದವರಲ್ಲವೇ ಎಂದು ಗುರುತಿಸುತ್ತಿದ್ದರು. ಇದೀಗ ಪ್ರಚಾರದ ಸಲುವಾಗಿ ಚಿತ್ರಮಂದಿರಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ‘ಡ್ಯಾಡಿ’ ಎಂದು ಕೂಗುತ್ತಿದ್ದಾರೆ. ಇದು ಖುಷಿ ತರುತ್ತದೆ.

• ಸಂಭಾಷಣೆ ನಿಮ್ಮ ಪಾತ್ರಕ್ಕೆ ಇನ್ನಷ್ಟು ಇಂಬು ನೀಡಿತು ಅಲ್ಲವೇ?

ಖಂಡಿತಾ ಹೌದು. ರೋಹಿತ್ ಪದಕಿ ಹಾಗೂ ಮಾಸ್ತಿ ಅವರು ಸೇರಿ ಪಾತ್ರಗಳ ಸಂಭಾಷಣೆಯನ್ನು ಬರೆದಿದ್ದರು. ಇದು ಎಲ್ಲಾ ಪಾತ್ರಗಳ ಗ್ರಾಫ್ ಅನ್ನು ಇನ್ನಷ್ಟು ಏರಿಸಿದೆ. ಮಾಸ್ತಿ ಸದ್ಯಕ್ಕೆ ಕನ್ನಡ ಚಿತ್ರರಂಗದ ಆಸ್ತಿ. ಒಂದು ಪಾತ್ರ ಹೇಗೆ ಮಾತನಾಡುತ್ತದೆ ಎನ್ನುವುದನ್ನು ಇವರು ಅನುಭವದಿಂದಲೇ ಹೇಳುತ್ತಾರೆ. ಚಿತ್ರೀಕರಣದ ಸಂದರ್ಭದಲ್ಲಿ ನಟನೆ ಮಾಡುವುದಷ್ಟೇ ನಮ್ಮ ಕೆಲಸವಾಗಿರುತ್ತದೆ. ಪಾತ್ರಕ್ಕೆ ಸೂಕ್ತವಾದ ಭಾವನೆಗಳು, ಡೈಲಾಗ್ಸ್ ತುಂಬಿದರಷ್ಟೇ ಆ ಪಾತ್ರಗಳನ್ನು ನಿಭಾಯಿಸಲು ಸಾಧ್ಯ. ಸಂಭಾಷಣೆಯಿಂದಲೇ ‘ಡ್ಯಾಡಿ’ ಪಾತ್ರ ಹಲವರಿಗೆ ಹತ್ತಿರವಾಗಿದೆ.

• ಮುಂದಿನ ಸಿನಿಮಾಗಳು..

ಒಂದು ಸಿನಿಮಾದಲ್ಲಿ ನಾಯಕನಾಗಿ ನಟಿಸುತ್ತಿದ್ದೇನೆ. ಇದು ಇನ್ನಷ್ಟೇ ಘೋಷಣೆಯಾಗಬೇಕಿದೆ. ಶಂಕರ್ ಗುರು ನಿರ್ದೇಶನದ, ಡಾಲಿ ಧನಂಜಯ ನಟನೆಯ ‘ಅಣ್ಣ ಫ್ರಂ ಮೆಕ್ಸಿಕೋ’ದಲ್ಲಿ ನಟಿಸುತ್ತಿದ್ದೇನೆ. ಇದು ಇದೇ ವರ್ಷಾಂತ್ಯದಲ್ಲಿ ತೆರೆಗೆ ಬರಲಿದೆ. ಇನ್ನೂ ಒಂದು ಚಿತ್ರ ಒಪ್ಪಿಕೊಂಡಿದ್ದೇನೆ.

ಸೋನಲ್ ಮೊಂತೆರೊ

ಇದು ಸೋನಲ್ ‘ಲವ್ ಮ್ಯಾಟ್ರು’

ಸೋನಲ್ ಮೊಂತೆರೊ, ವಿರಾಟ ಬಿಲ್ವ ಜತೆಯಾಗಿ ನಟಿಸಿರುವ ‘ಲವ್ ಮ್ಯಾಟ್ರು’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿರಾಟ ಬಿಲ್ವ ನಿರ್ದೇಶನದ ಈ ಚಿತ್ರ ಆ.1ರಂದು ತೆರೆಗೆ ಬರಲಿದೆ.

‘ಒಂದು ವಿಭಿನ್ನ ಪ್ರೇಮಕಥೆಯನ್ನು ತೆರೆಯ ಮೇಲೆ ತೋರಿಸುವುದು ನಮ್ಮ ಉದ್ದೇಶ. ಪ್ರೇಕ್ಷಕರು ಸುಲಭವಾಗಿ ಊಹಿಸುವಂತೆ ಇರುವುದಿಲ್ಲ ಚಿತ್ರಕಥೆ. ನಾನು ಈ ಮೊದಲು ರಂಗಭೂಮಿ, ಕಿರುತೆರೆಗಳಲ್ಲಿ ಕೆಲಸ ಮಾಡಿದ್ದೆ. ಸಹಾಯಕ ನಿರ್ದೇಶಕನಾಗಿ ಕೆ.ಎಂ.ಚೈತನ್ಯ, ಸುಕ್ಕ ಸೂರಿ, ಪ್ರಶಾಂತ್ ನೀಲ್ ಅವರ ಸಿನಿಮಾಗಳಲ್ಲಿ ಕೆಲಸ ಮಾಡಿರುವೆ. ‘ಕಡ್ಡಿಪುಡಿ’ ಚಿತ್ರದಲ್ಲಿ ನಟಿಸಿದ್ದೆ. ಈ ಎಲ್ಲ ಅನುಭವ ಇಟ್ಟುಕೊಂಡು ಸ್ವತಂತ್ರ ನಿರ್ದೇಶಕನಾಗಿರುವೆ’ ಎಂದರು ನಿರ್ದೇಶಕರು.

ವಂದನಾ ಪ್ರಿಯ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ‘ಲವ್ ಮ್ಯಾಟ್ರು’ ಶೀರ್ಷಿಕೆಯೇ ಹೇಳುವಂತೆ ಪ್ರೇಮಕಥೆಯ ಚಿತ್ರ. ಕಥಾವಸ್ತು ಬಹಳ ಕುತೂಹಲಕಾರಿಯಾಗಿದೆ. ಎರಡು ಕಾಲಘಟ್ಟಗಳ ಪಯಣ ಇರುವ ಚಿತ್ರ. ನಾನು ಪ್ರೇಮಿಯಾಗಿ ಕಾಣಿಸಿಕೊಂಡಿದ್ದೇನೆ’ ಎಂದರು ಸೋನಲ್.

ಅಚ್ಯುತ್ ಕುಮಾರ್, ಅನಿತಾ ಭಟ್, ಸುಮನ್ ರಂಗನಾಥ್ ಮುಂತಾದವರು ಚಿತ್ರದಲ್ಲಿದ್ದಾರೆ. ಸೋಲಮಾನ್ ಸಂಗೀತ, ಪರಮ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

‘ನೆಕ್ಸ್ಟ್ ಲೆವೆಲ್’ ಎಂದ ಉಪೇಂದ್ರ

ಉಪೇಂದ್ರ ಕೈಯಲ್ಲಿ ಸಾಲು, ಸಾಲು ಚಿತ್ರಗಳಿವೆ. ‘45’ ಚಿತ್ರದ ಚಿತ್ರೀಕರಣ ಮುಗಿಸಿರುವ ಅವರು ಸದ್ಯ ರಾಮ್ ಪೋತಿನೇನಿ ಅವರ ತೆಲುಗು ಚಿತ್ರದ ಚಿತ್ರೀಕರಣದಲ್ಲಿ ಮಗ್ನರಾಗಿದ್ದಾರೆ. ತಮಿಳಿನ ‘ಕೂಲಿ’ ಚಿತ್ರ ಕೂಡ ಬಿಡುಗಡೆಗೆ ಸಿದ್ಧವಿದೆ. ಅದರ ನಡುವೆಯೇ ‘ನೆಕ್ಸ್ಟ್ ಲೆವೆಲ್’ ಸಿನಿಮಾ ಘೋಷಿಸಿದ್ದಾರೆ. ಅರವಿಂದ್ ಕೌಶಿಕ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ.



‘ನಮ್ ಏರಿಯಾಲ್ ಒಂದಿನ’ ಚಿತ್ರದ ಮೂಲಕ ಗುರುತಿಸಿಕೊಂಡ ನಿರ್ದೇಶಕ ಅರವಿಂದ್ ಕೌಶಿಕ್ ಕಿರುತೆರೆ, ಹಿರಿತೆರೆಯಲ್ಲಿ ಪರಿಚಿತರು. ಅವರ ಹಿಂದಿನ ಚಿತ್ರ ‘ಅರ್ಧಂಬರ್ಧ ಪ್ರೇಮಕಥೆ’ ಅಷ್ಟೇನು ಯಶಸ್ಸು ಕಂಡಿರಲಿಲ್ಲ. ಬಹುತೇಕ ಹೊಸಬರೊಂದಿಗೆ ಕಂಟೆಂಟ್ ಸಿನಿಮಾಗಳನ್ನೇ ಮಾಡಿಕೊಂಡು ಬಂದಿರುವ ಇವರ ಜತೆ ಉಪೇಂದ್ರ ಕೈಜೋಡಿಸಿರುವುದು ಕುತೂಹಲ ಮೂಡಿಸಿದೆ.

ಉಪೇಂದ್ರ ಅವರ ‘ಬುದ್ಧಿವಂತ 2’ ಬಿಡುಗಡೆಗೆ ಸಿದ್ಧವಿದೆ. ನಿರ್ದೇಶಕ ನಾಗಣ್ಣ ಜತೆ ‘ಭಾರ್ಗವ’ ಮಾಡುತ್ತಿದ್ದು, ಅದರ ಚಿತ್ರೀಕರಣವೂ ಪ್ರಗತಿಯಲ್ಲಿದೆ. ‘ಕಬ್ಜ 2’ ಚಿತ್ರ ಕೂಡ ಘೋಷಣೆಗೊಂಡಿತ್ತು. ಇದರ ನಡುವೆ ತೆಲುಗಿನಲ್ಲಿ ನಿರ್ದೇಶಕ ಜಯಶಂಕರ್ ಜತೆ ಉಪೇಂದ್ರ ಸಿನಿಮಾ ಮಾಡಲಿದ್ದಾರೆ ಎಂಬ ಸುದ್ದಿಯೂ ಇದೆ.

‘ನೆಕ್ಸ್ಟ್ ಲೆವೆಲ್’ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ತರುಣ್ ಶಿವಪ್ಪ ಬಂಡವಾಳ ಹೂಡುತ್ತಿದ್ದಾರೆ. ಅವರ ತರುಣ್ ಸ್ಟುಡಿಯೋಸ್ ಬ್ಯಾನರ್ ಅಡಿ ನಿರ್ಮಾಣವಾಗುತ್ತಿರುವ ಆರನೇ ಚಿತ್ರವಿದು. ‘ಹಿಂದಿ, ತೆಲುಗು, ತಮಿಳು ಕಲಾವಿದರು ಈ ಚಿತ್ರದಲ್ಲಿ ನಟಿಸಲಿದ್ದಾರೆ. ಉಪೇಂದ್ರ ಅವರ ‘ಎ’, ‘ಉಪೇಂದ್ರ’ ರೀತಿಯದ್ದೇ ಸಿನಿಮಾವಿದು.



ಉಪೇಂದ್ರ

ಸದ್ಯ ಪ್ರೀ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಯಲಿದೆ’ ಎಂದು ಚಿತ್ರತಂಡ ಹೇಳಿದೆ.

ಚುಟುಕು ಸುದ್ದಿ

‘ಚುನಾವಣಾ ಪರಿಶುದ್ಧತೆ ಹೆಚ್ಚುತ್ತದೆ’

ನವದೆಹಲಿ (ಪಿಟಿಐ): ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯವನ್ನು ಸಮರ್ಥಿಸಿಕೊಂಡಿರುವ ಭಾರತೀಯ ಚುನಾವಣಾ ಆಯೋಗ, ಈ ಪ್ರಕ್ರಿಯೆಯು ಮತದಾರರ ಪಟ್ಟಿಯಿಂದ ಅನರ್ಹರನ್ನು ತೆಗೆಯುವ ಮೂಲಕ ಚುನಾವಣಾ ಪರಿಶುದ್ಧತೆಯನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದೆ.

ದೇಶದಾದ್ಯಂತ ಮತದಾರರ ಪಟ್ಟಿ ಪರಿಷ್ಕರಣೆಯನ್ನು ನಿರ್ದೇಶಿಸುವ ಜೂನ್ 24ರ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಆಯೋಗ ಪ್ರಮಾಣಪತ್ರ ಸಲ್ಲಿಸಿದೆ.

‘ಕೆಲ ಕಾನೂನಾತ್ಮಕ ಸಮಸ್ಯೆಗಳ ನಡುವೆಯೂ ಆಧಾರ್, ಮತದಾರರ ಗುರುತಿನ ಚೀಟಿ ಮತ್ತು ಪಡಿತರ ಚೀಟಿಯನ್ನು ಆಯೋಗವು 2025ರ ಎಸ್‌ಐಆರ್‌ನಲ್ಲಿ, ಗುರುತಿನ ಸೀಮಿತ ಉದ್ದೇಶಕ್ಕಾಗಿ ಈಗಾಗಲೇ ಗಣನೆಗೆ ತೆಗೆದುಕೊಂಡಿದೆ’ ಎಂದು ಹೇಳಿದೆ.

ಚೈತನ್ಯ ಬಘೇಲ್‌ಗೆ ನ್ಯಾಯಾಂಗ ಬಂಧನ

ರಾಯಪುರ (ಪಿಟಿಐ): ಅಬಕಾರಿ ಹಗರಣಕ್ಕೆ ಸಂಬಂಧಿಸಿ, ಛತ್ತೀಸಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ಪುತ್ರ ಚೈತನ್ಯ ಬಘೇಲ್ ಅವರನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಚೈತನ್ಯ ಬಘೇಲ್

ಚೈತನ್ಯ ಮನೆಯಲ್ಲಿ ಶೋಧ ನಡೆಸಿದ್ದ ಜಾರಿ ನಿರ್ದೇಶನಾಲಯ (ಇ.ಡಿ) ಜುಲೈ 18ರಂದು ಅವರನ್ನು ಬಂಧಿಸಿತ್ತು. ಅವರ ಇ.ಡಿ ಕಸ್ಟಡಿ ಅವಧಿಯು ಅಂತ್ಯಗೊಂಡ ಕಾರಣ ಮಂಗಳವಾರ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿತ್ತು.

ಮಣಿಪುರ: 7 ಬಂಡುಕೋರರ ಬಂಧನ

ಇಂಫಾಲ್ (ಪಿಟಿಐ): ಮಣಿಪುರದ ವಿವಿಧ ಭಾಗಗಳಿಂದ ಏಳು ಬಂಡುಕೋರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಸ್ಥಳೀಯ ವ್ಯಾಪಾರಿಗಳನ್ನು ಸುಲಿಗೆ ಮಾಡಿದ ಆರೋಪ ಅವರ ಮೇಲಿದ್ದು, ಗುಪ್ತಚರ ಮಾಹಿತಿಯ ಮೇರೆಗೆ ಬಂಧಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಬಂಧಿತರಲ್ಲಿ ಕಾಂಗ್ಲಿಪಾಕ್ ಕಮ್ಯುನಿಸ್ಟ್ ಪಕ್ಷದ ಮೂವರು ಸದಸ್ಯರಿದ್ದು, ಅವರನ್ನು ತೆಂಗನೊವುಪಾಲ್ ಜಿಲ್ಲೆಯ ಪಂಗಲ್ ಬಸ್ತಿಯಲ್ಲಿ ಭಾನುವಾರ ಬಂಧಿಸಲಾಗಿತ್ತು. ಇಂಫಾಲ್ ಪೂರ್ವ ಜಿಲ್ಲೆಯ ಕೊಯಿರೆಂಗೈ ಚಿಂಗೋಲ್ ಲೈಕೈಯಿಂದ ನಿಷೇಧಿತ ಯುಪಿಪಿಕೆಯ ನಾಲ್ವರು ಸದಸ್ಯರನ್ನು ಸೋಮವಾರ ಬಂಧಿಸಲಾಗಿದೆ.

ಎರಡನೇ ದಿನವೂ ಕಲಾಪಕ್ಕೆ ಭಂಗ

ಬಿಹಾರದಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ವಿರೋಧಿಸಿ ವಿಪಕ್ಷ ಗದ್ದಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರದಲ್ಲಿ ಭಾರತೀಯ ಚುನಾವಣಾ ಆಯೋಗವು ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಂಸತ್‌ನ ಒಳಗೆ ಹಾಗೂ ಹೊರಗೆ ಪ್ರತಿಧ್ವನಿಸಿತು. ಚುನಾವಣಾ ಆಯೋಗದ ಕ್ರಮ ವಿರೋಧಿಸಿ ವಿರೋಧ ಪಕ್ಷಗಳ ಸದಸ್ಯರು ಗದ್ದಲ ಎಬ್ಬಿಸಿದ್ದರಿಂದ ಲೋಕಸಭೆ ಹಾಗೂ ರಾಜ್ಯಸಭೆಯ ಕಲಾಪ ಮಂಗಳವಾರ ನಡೆಯಲಿಲ್ಲ.

ಸಂಸತ್ ಭವನದ ‘ಮಕರ ದ್ವಾರ’ದಲ್ಲಿ ಸಂಸದರು ಪ್ರತಿಭಟನೆ ನಡೆಸಿದರು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಸೇರಿದಂತೆ ಹಲವು ನಾಯಕರು ಪ್ರತಿಭಟನೆಯಲ್ಲಿ ಭಾಗಿಯಾದರು.

ಲೋಕಸಭೆ ಹಾಗೂ ರಾಜ್ಯಸಭೆಯ ಕಲಾಪ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ನೇತೃತ್ವದಲ್ಲಿ ವಿಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗಿದರು. ಸುಗಮ ಕಲಾಪಕ್ಕೆ ಅನುವು ಮಾಡಿಕೊಡುವಂತೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಹಾಗೂ ರಾಜ್ಯಸಭೆಯ ಉಪಸಭಾಪತಿ ಹರಿವಂಶ್ ಮನವಿ ಮಾಡಿದರು. ಇದಕ್ಕೆ ವಿಪಕ್ಷಗಳ ಸದಸ್ಯರು ಕಿವಿಗೊಡಲಿಲ್ಲ. ಶೂನ್ಯ ವೇಳೆ ಮತ್ತು ಪ್ರಶ್ನೋತ್ತರ ಅವಧಿಯಲ್ಲಿ ಕಲಾಪವನ್ನು ಎರಡು ಸಲ ಮುಂದೂಡಲಾಯಿತು.

ಉಪರಾಷ್ಟ್ರಪತಿ ಜಗದೀಪ್ ಧನಕರ್ ರಾಜೀನಾಮೆ ನೀಡಿದ್ದರಿಂದ ಮಂಗಳವಾರ ಎಲ್ಲರ ಕಣ್ಣು ರಾಜ್ಯಸಭೆಯ ಮೇಲಿತ್ತು. ಉಪಸಭಾಪತಿ ಹರಿವಂಶ್, ‘ಸಭಾಧ್ಯಕ್ಷರ ಹುದ್ದೆ ಖಾಲಿಯಾಗಿದೆ’ ಎಂದು ಸದನಕ್ಕೆ ತಿಳಿಸಿದರು. ಎಸ್‌ಐಆರ್ ಕುರಿತು ಚರ್ಚಿಸಲು ಕೂಡಲೇ ಅವಕಾಶ ನೀಡಬೇಕೆಂಬ ವಿರೋಧ ಪಕ್ಷಗಳ ಮನವಿಯನ್ನು ತಿರಸ್ಕರಿಸಿದರು.

ಉಪರಾಷ್ಟ್ರಪತಿಯವರ ಅನಿರೀಕ್ಷಿತ ರಾಜೀನಾಮೆ ಕುರಿತು ತಕ್ಷಣ ಚರ್ಚಿಸಲು ಅವಕಾಶ ನೀಡಬೇಕೆಂಬ ಸಿಪಿಐನ ಪಿ. ಸಂದೋಷ್ ಕುಮಾರ್ ಅವರ ನೋಟಿಸ್ ಅನ್ನು ಸಹ ತಿರಸ್ಕರಿಸಲಾಯಿತು.

ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಚರ್ಚೆಗೆ ಒತ್ತಾಯಿಸಿ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟಿಸಿ ಸಭಾಪತಿಯವರ ಪೀಠದ ಎದುರು ಧಾವಿಸಿದರು. ಹರಿವಂಶ್ ಅವರು ಮಧ್ಯಾಹ್ನ 12 ಗಂಟೆಯವರೆಗೆ ಕಲಾಪ ಮುಂದೂಡಿದರು. ಪ್ರಶ್ನೋತ್ತರ ಅವಧಿಗೆ ಸದನ ಮತ್ತೆ ಸೇರಿದಾಗ, ಸಭಾಪತಿ ಪೀಠದಲ್ಲಿದ್ದ ಘನಶ್ಯಾಮ್ ತಿವಾರಿ, ‘ಧನಕರ್ ರಾಜೀನಾಮೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸ್ವೀಕರಿಸಲಾಗಿದೆ ಎಂಬ ಗೃಹ ಸಚಿವಾಲಯದ ಅಧಿಸೂಚನೆಯ ಬಗ್ಗೆ ಸದನಕ್ಕೆ ಮಾಹಿತಿ ನೀಡಿದರು. ಕಲಾಪವನ್ನು ಮಧ್ಯಾಹ್ನ 2 ಗಂಟೆಯವರೆಗೆ ಮುಂದೂಡಿದರು. ಮಧ್ಯಾಹ್ನ ನಂತರವೂ ಕಲಾಪ ನಡೆಯಲಿಲ್ಲ.

ಲೋಕಸಭೆಯಲ್ಲಿ ಕಲಾಪ ನಡೆಸಲು ಸಹಕಾರ ನೀಡುವಂತೆ ಬಿರ್ಲಾ ಹಾಗೂ ಕೃಷಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಕೋರಿದರು. ಇದಕ್ಕೆ ವಿಪಕ್ಷಗಳ ಸದಸ್ಯರು ಒಪ್ಪಲಿಲ್ಲ. 12 ಗಂಟೆವರೆಗೆ ಕಲಾಪ ಮುಂದೂಡಲಾಯಿತು. ‘ಪ್ರಶ್ನೋತ್ತರ ಅವಧಿಯಲ್ಲಿ ರೈತರಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ನೀಡಬೇಕಿದೆ. ಸದಸ್ಯರು ತಮ್ಮ ಸ್ಥಾನಗಳಿಗೆ ವಾಪಸಾಗಬೇಕು’ ಎಂದು ಚೌಹಾಣ್ ಮನವಿ ಮಾಡಿದರು. ‘ಘೋಷಣೆಗಳನ್ನು ಕೂಗಿ ಫಲಕಗಳನ್ನು ಪ್ರದರ್ಶಿಸುವುದ ರಿಂದ ಸದನದ ಘನತೆ ಕುಗ್ಗುತ್ತದೆ’ ಎಂದು ಬಿರ್ಲಾ ಅಸಮಾಧಾನ ವ್ಯಕ್ತಪಡಿಸಿದರು.

ಮಧ್ಯಾಹ್ನದ ನಂತರ ಕಲಾಪ ಆರಂಭವಾದಾಗ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ‘ದ್ವಿಮುಖ ನೀತಿ ತಪ್ಪು. ಒಂದೆಡೆ ಅವರು ಚರ್ಚೆ ನಡೆಸಬೇಕೆಂದು ಕೇಳುತ್ತಾರೆ ಮತ್ತು ನಂತರ ಈ ರೀತಿಯ ಗದ್ದಲ ನಡೆಸುತ್ತಾರೆ’ ಎಂದು ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು ವಿರೋಧಿಸಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಆರ್‌ಜೆಡಿ ಪಕ್ಷದ ಮೀಸಾ ಭಾರತಿ, ಡಿಎಂಕೆಯ ಕನಿಮೊಳಿ ಮತ್ತು ‘ಇಂಡಿಯಾ’ ಮೈತ್ರಿಕೂಟದ ಇತರ ಸಂಸದರು ನವದೆಹಲಿಯ ಸಂಸತ್ ಭವನದ ಮುಂದೆ ಮಂಗಳವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

‘ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ರದ್ದುಗೊಳಿಸುವ ಪ್ರಸ್ತಾವ ಇಲ್ಲ’

‘ಪರಿಶಿಷ್ಟ ಜಾತಿ ಹಾಗೂ ಪರಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ರದ್ದುಗೊಳಿಸುವ ಪ್ರಸ್ತಾವ ಇಲ್ಲ’ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಈ ಯೋಜನೆಯು 2025–26ರಲ್ಲಿಯೂ ಮುಂದುವರಿಯುವ ಕುರಿತು ಕಳವಳ ವ್ಯಕ್ತವಾಗಿತ್ತು.

ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ್ ಆಠವಳೆ, ‘ಉನ್ನತ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಒಟ್ಟು ದಾಖಲಾತಿ ಅನುಪಾತ (ಜಿಇಆರ್) ಹೆಚ್ಚಿಸುವ ಉದ್ದೇಶವನ್ನು ಇದು ಹೊಂದಿದೆ’ ಎಂದರು.

‘ಪರಿಶಿಷ್ಟರ ಪಟ್ಟಿಗಿಲ್ಲ ಕುಡುಬಿ’

ಕುಡುಬಿ ಸಮುದಾಯವನ್ನು ಪರಿಶಿಷ್ಟ ಜಾತಿ (ಎಸ್‌ಸಿ) ಪಟ್ಟಿಯಲ್ಲಿ ಸೇರಿಸಲು ಕರ್ನಾಟಕ ಸರ್ಕಾರದಿಂದ ಕೇಂದ್ರಕ್ಕೆ ಯಾವುದೇ ಶಿಫಾರಸು ಬಂದಿಲ್ಲ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ್ ಆಠವಳೆ ತಿಳಿಸಿದ್ದಾರೆ.

ಕುಡುಬಿ ಸಮಾಜವನ್ನು ಎಸ್‌ಸಿ ಪಟ್ಟಿಗೆ ಸೇರ್ಪಡೆಗೊಳಿಸಲು ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆ ಹಾಗೂ ಈ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ-ಗತಿಗಳ ಕುರಿತು ನಡೆಸಿರುವ ಅಧ್ಯಯನ ಕುರಿತು ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಅವರು ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ್ದಾರೆ.

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರ್ಪಡೆ ಅಥವಾ ಹೊರಗಿಡುವಿಕೆ ಮತ್ತು ಇತರ ಮಾರ್ಪಾಡುಗಳಿಗಾಗಿ, ಅಸ್ತಿತ್ವದಲ್ಲಿರುವ ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ಪರಿಷ್ಕರಿಸಲು ಆ ಜನಾಂಗದ ಅಧ್ಯಯನದೊಂದಿಗೆ ಸಂಪೂರ್ಣ ಪ್ರಸ್ತಾವನೆಯನ್ನು ಸಂಬಂಧಪಟ್ಟ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ನೀಡಬೇಕು ಎಂದಿದ್ದಾರೆ.

ದೇಶದಲ್ಲಿ 3,104 ಕಳಪೆ ಔಷಧ ಪತ್ತೆ

ನವದೆಹಲಿ (ಪಿಟಿಐ): 2024ರ ಏಪ್ರಿಲ್‌ನಿಂದ 2025ರ ಮಾರ್ಚ್‌ವರೆಗೆ 1,16,323 ಔಷಧ ಮಾದರಿಗಳನ್ನು ಪರೀಕ್ಷಿಸಿದ್ದು, ಈ ಪೈಕಿ 3,104 ಔಷಧಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು, 245 ನಕಲಿಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ತಿಳಿಸಿದ್ದಾರೆ.

ಜೆ.ಪಿ. ನಡ್ಡಾ

ರಾಜ್ಯಸಭೆಯಲ್ಲಿ ಮಂಗಳವಾರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ದೇಶದ ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಔಷಧ ನಿಯಂತ್ರಣ ಸಂಸ್ಥೆಗಳಿಂದ ಪಡೆದ ಮಾಹಿತಿ ಪ್ರಕಾರ, ನಕಲಿ/ಕಲಬೆರಕೆ ಔಷಧಗಳ ತಯಾರಿಕೆ, ಮಾರಾಟ ಹಾಗೂ ವಿತರಣೆಗೆ ಸಂಬಂಧಿಸಿದಂತೆ 961 ಪ್ರಕರಣಗಳಲ್ಲಿ ಕಾನೂನು ಕ್ರಮ ಜರುಗಿಸಲಾಗಿದೆ’ ಎಂದಿದ್ದಾರೆ.

‘2023ರ ಏಪ್ರಿಲ್‌ನಿಂದ 2024ರ ಮಾರ್ಚ್‌ವರೆಗೆ 1,06,150 ಔಷಧ ಮಾದರಿಗಳ ಪರೀಕ್ಷೆ ನಡೆಸಿದ್ದು, 2,988 ನಿಗದಿತ ಗುಣಮಟ್ಟ ಹೊಂದಿಲ್ಲ. 282 ಔಷಧಗಳು ಕಳಪೆಯಾಗಿವೆ. ಇದೇ ಅವಧಿಯಲ್ಲಿ 604 ಪ್ರಕರಣಗಳಲ್ಲಿ ಕಾನೂನು ಕ್ರಮ ಜರುಗಿಸಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ನಕಲಿ, ಕಲಬೆರಕೆ ಹಾಗೂ ಕಳಪೆ ಗುಣಮಟ್ಟದ ಔಷಧಗಳ ತಯಾರಿಕೆಯು ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆಯಡಿ ಶಿಕ್ಷಾರ್ಹ ಅಪರಾಧವಾಗಿದೆ. ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಅಧಿಕಾರವಿದೆ ಎಂದು ಹೇಳಿದ್ದಾರೆ.

ಮಳೆ: 18,097 ಹೆಕ್ಟೇರ್ ಕೃಷಿಗೆ ಹಾನಿ

ನವದೆಹಲಿ: ಕರ್ನಾಟಕದಲ್ಲಿ ಅಕಾಲಿಕ ಹಾಗೂ ಅಧಿಕ ಮಳೆಯಿಂದಾಗಿ ಏಪ್ರಿಲ್ 1ರಿಂದ ಜುಲೈ 16ರ ನಡುವೆ 18,097 ಹೆಕ್ಟೇರ್ ಕೃಷಿ ಪ್ರದೇಶಕ್ಕೆ ಹಾನಿಯಾಗಿದೆ.

ಲೋಕಸಭೆಯಲ್ಲಿ ಮಂಗಳವಾರ ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್, ‘ಮಳೆಯಿಂದಾಗಿ 89 ಮಂದಿ ಮೃತಪಟ್ಟಿದ್ದಾರೆ. 807 ಜಾನುವಾರುಗಳು ಸತ್ತಿವೆ. 3,901 ಮನೆಗಳಿಗೆ ಹಾನಿಯಾಗಿದೆ’ ಎಂದು ತಿಳಿಸಿದ್ದಾರೆ.

ವಿಪತ್ತು ಪರಿಹಾರ ನಿಧಿಯಡಿ ಈ ವರ್ಷ ಕೇಂದ್ರ ಸರ್ಕಾರವು 22 ರಾಜ್ಯಗಳಿಗೆ ₹9,578 ಕೋಟಿ ಬಿಡುಗಡೆ ಮಾಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಗಡಿಯಲ್ಲಿ ‘ಡ್ರೋನ್ ಸ್ಕ್ವಾಡ್ರನ್’

ನವದೆಹಲಿ (ಪಿಟಿಐ): ತನ್ನ ರಕ್ಷಣಾ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಿಕೊಳ್ಳುವ ನಿಟ್ಟಿನಲ್ಲಿ ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಭಾರತ–ಪಾಕಿಸ್ತಾನ ಗಡಿಯಲ್ಲಿ ಮೊದಲ ‘ಡ್ರೋನ್ ಸ್ಕ್ವಾಡ್ರನ್’ ಅನ್ನು ರಚಿಸುತ್ತಿದೆ.

ಆಪರೇಷನ್ ಸಿಂಧೂರ ವೇಳೆ ಕಲಿತ ಪಾಠಗಳು ಮತ್ತು ಡ್ರೋನ್‌ಗಳ ಮಾರಕ ದಾಳಿಯನ್ನು ಸಮರ್ಪಕವಾಗಿ ಎದುರಿಸಲು ಈ ವ್ಯವಸ್ಥೆಯನ್ನು ಬಿಎಸ್‌ಎಫ್ ಸಜ್ಜುಗೊಳಿಸುತ್ತಿದೆ.

ನಿರ್ದಿಷ್ಟ ಗಡಿ ಹೊರಠಾಣೆಗಳಲ್ಲಿ ಈ ‘ಸ್ಕ್ವಾಡ್ರನ್’ ನೆಲೆಗೊಳಿಸಲಾಗುತ್ತದೆ. ಇದು ವಿಚಕ್ಷಣೆ, ಕಣ್ಗಾವಲು ಮತ್ತು ಡ್ರೋನ್ ದಾಳಿಗಳನ್ನು ಸಮರ್ಪಕವಾಗಿ ನಿರ್ವಹಿಸಬಲ್ಲ ವಿಶೇಷ ತರಬೇತಿ ಹೊಂದಿದ ಸಿಬ್ಬಂದಿಯನ್ನು ಒಳಗೊಂಡಿರುತ್ತದೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗೆ ನಡೆದ ಪರಿಶೀಲನೆ ವೇಳೆ ‘ಡ್ರೋನ್ ಸ್ಕ್ವಾಡ್ರನ್’ ರಚಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಇಂಧನ ನಿಯಂತ್ರಣ ಸ್ವಿಚ್‌ನಲ್ಲಿ ಸಮಸ್ಯೆ ಇರಲಿಲ್ಲ: ಏರ್ ಇಂಡಿಯಾ

ಮುಂಬೈ (ಪಿಟಿಐ): ‘ಬೋಯಿಂಗ್ 787 ಮತ್ತು 737 ಸರಣಿಯ ವಿಮಾನಗಳ ಇಂಧನ ನಿಯಂತ್ರಣ ಸ್ವಿಚ್‌ನಲ್ಲಿ (ಎಫ್‌ಸಿಎಸ್) ಯಾವುದೇ ಸಮಸ್ಯೆ ಇರಲಿಲ್ಲ’ ಎಂದು ಏರ್ ಇಂಡಿಯಾ ಮಂಗಳವಾರ ಹೇಳಿದೆ.

‘ಅಹಮದಾಬಾದ್ ನಲ್ಲಿ ಜೂನ್ 12ರಂದು ಪತನಗೊಂಡಿದ್ದ ಏರ್ ಇಂಡಿಯಾ ಬೋಯಿಂಗ್ 787–8 ವಿಮಾನದಲ್ಲಿ ಇಂಧನ ನಿಯಂತ್ರಣ ಸ್ವಿಚ್ ‘ಕಟ್ ಆಫ್’ ಸ್ಥಿತಿಯಲ್ಲಿ ಇತ್ತು ಎಂದು ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ) ಪ್ರಾಥಮಿಕ ವರದಿಯಲ್ಲಿ ಹೇಳಿತ್ತು. ಇದರ ಬೆನ್ನಲ್ಲೇ, ನಾಗರಿಕ ವಿಮಾನ ಯಾನ ನಿರ್ದೇಶನಾಲಯ (ಡಿಜಿಸಿಎ), ಬೋಯಿಂಗ್ 787 ಮತ್ತು 737 ಸರಣಿಯ ವಿಮಾನಗಳಲ್ಲಿ ‘ಎಫ್‌ಸಿಎಸ್’ ತಪಾಸಣೆ ನಡೆಸಿ, ಜುಲೈ 21ರ ಒಳಗಾಗಿ ವರದಿ ಸಲ್ಲಿಸುವಂತೆ ಏರ್ ಇಂಡಿಯಾಕ್ಕೆ ಸೂಚಿಸಿತ್ತು.

‘ಮುಂಜಾಗ್ರತಾ ಕ್ರಮವಾಗಿ ಕೈಗೊಳ್ಳಲಾಗಿದ್ದ ತಪಾಸಣೆ ಪೂರ್ಣಗೊಂಡಿದೆ. ಬೋಯಿಂಗ್ 787 ಮತ್ತು 737 ಸರಣಿಯ ವಿಮಾನಗಳ ಎಂಜಿನ್‌ಗೆ ಇಂಧನ ಪೂರೈಸುವ ‘ಸ್ವಿಚ್‌ಗಳ ಲಾಕಿಂಗ್ ವ್ಯವಸ್ಥೆಯಲ್ಲಿ ಯಾವುದೇ ಲೋಪ ಕಂಡುಬಂದಿಲ್ಲ’ ಎಂದು ಏರ್ ಇಂಡಿಯಾ ಪ್ರಕಟಣೆಯಲ್ಲಿ ತಿಳಿಸಿದೆ.

ವಿಮಾನ ಹೆಚ್ಚುವರಿ ವಿದ್ಯುತ್ ಘಟಕದಲ್ಲಿ ಬೆಂಕಿ

ನವದೆಹಲಿ (ಪಿಟಿಐ): ಹಾಂಗ್‌ಕಾಂಗ್‌ನಿಂದ ಬಂದಿದ್ದ ಏರ್ ಇಂಡಿಯಾ ವಿಮಾನವು (ಎ315) ಇಲ್ಲಿನ ವಿಮಾನನಿಲ್ದಾಣದಲ್ಲಿ ಮಂಗಳವಾರ ಇಳಿದ ಬಳಿಕ ಅದರಲ್ಲಿನ ಹೆಚ್ಚುವರಿ ವಿದ್ಯುತ್ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿತು.

ವಿಮಾನ ಸಿಬ್ಬಂದಿ ಹಾಗೂ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ ಎಂದು ಏರ್ ಇಂಡಿಯಾ ಪ್ರಕಟಣೆ ತಿಳಿಸಿದೆ.

ಮಸೂದೆಗಳಿಗೆ ಅಂಕಿತ ಹಾಕುವ ವಿಚಾರ; 14 ಪ್ರಶ್ನೆ ಕೇಳಿದ್ದ ರಾಷ್ಟ್ರಪತಿ

ಕೇಂದ್ರ, ರಾಜ್ಯಗಳ ಅಭಿಪ್ರಾಯ ಕೇಳಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ರಾಜ್ಯ ವಿಧಾನಸಭೆಗಳಲ್ಲಿ ಅಂಗೀಕಾರಗೊಂಡ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಕಾಲಮಿತಿ ವಿಧಿಸುವುದಕ್ಕೆ ಸಂಬಂಧಿಸಿದಂತೆ 14 ಅಂಶಗಳ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೋರಿರುವ ಸ್ಪಷ್ಟನೆ ಕುರಿತು ಅಭಿಪ್ರಾಯ ತಿಳಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಪ್ರೀಂಕೋರ್ಟ್ ಸೂಚಿಸಿದೆ.

‘ರಾಷ್ಟ್ರಪತಿಗಳು ಉಲ್ಲೇಖಿಸಿರುವ ವಿಚಾರಗಳು ಇಡೀ ದೇಶಕ್ಕೆ ಸಂಬಂಧಿಸಿದ್ದಾಗಿವೆ’ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರನ್ನು ಒಳಗೊಂಡ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ನ್ಯಾಯಪೀಠವು ತಿಳಿಸಿದೆ. ಈ ಕುರಿತ ಉತ್ತರವನ್ನು ವಾರದ ಒಳಗಾಗಿ ಸಲ್ಲಿಸುವಂತೆ ತಿಳಿಸಿದ್ದು, ಜುಲೈ 29ರ ಒಳಗಾಗಿ ಕಾಲಾನುಕ್ರಮಣಿಕೆ ಹಾಗೂ ಕಾರ್ಯವಿಧಾನದ ವಿವರಗಳನ್ನು ಸಲ್ಲಿಸುವಂತೆಯೂ ನಿರ್ದೇಶನ ನೀಡಿದೆ.

‘ಸಂವಿಧಾನದ ವ್ಯಾಖ್ಯಾನದ ಕುರಿತು ಸಮಸ್ಯೆಗಳಿವೆ. ಈ ಕುರಿತು ನಮಗೆ ನೆರವಾಗುವಂತೆ ಅಟಾರ್ನಿ ಜನರಲ್ ಅವರಿಗೆ ಮನವಿ ಮಾಡಿದ್ದೇವೆ. ಮುಂದಿನ ಮಂಗಳವಾರ ಈ ಪ್ರಕರಣವನ್ನು ವಿಚಾರಣೆಗೆ ಪಟ್ಟಿ ಮಾಡಲಾಗಿದೆ’ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ವಿಕ್ರಮ್ ನಾಥ್, ಪಿ.ಎಸ್.ನರಸಿಂಹ ಹಾಗೂ ಎ.ಎಸ್. ಚಂದೂರ್‌ಕರ್ ಅವರನ್ನು ಒಳಗೊಂಡ ನ್ಯಾಯಪೀಠವು ಆದೇಶ ನೀಡಿದೆ.

ಸಂಕ್ಷಿಪ್ತ ವಿಚಾರಣೆಯ ಸಂದರ್ಭದಲ್ಲಿ ಕೇರಳ ಹಾಗೂ ತಮಿಳುನಾಡು ಸರ್ಕಾರದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲರಾದ ಕೆ.ಕೆ.ವೇಣುಗೋಪಾಲ್, ಪಿ. ವಿಲ್ಸನ್ ಅವರು, ರಾಷ್ಟ್ರಪತಿಯವರು ಸ್ಪಷ್ಟನೆ ಕೋರಿರುವುದನ್ನು ವಿರೋಧಿಸಿದರು ಮತ್ತು ಅದು ವಿಚಾರಣೆಗೆ ಯೋಗ್ಯವೇ ಎಂದು ಪ್ರಶ್ನಿಸಿದರು.

‘ಈ ಆಕ್ಷೇಪಣೆಗಳನ್ನು ನಂತರ ಎತ್ತಬಹುದು’ ಎಂದು ತಿಳಿಸಿದ ಸಿಜೆಐ, ‘ಈ ವಿಚಾರವನ್ನು ಆಗಸ್ಟ್ ತಿಂಗಳ ಮಧ್ಯಭಾಗದಲ್ಲಿ ಪರಿಗಣಿಸಲಾಗುವುದು’ ಎಂದರು.

ಸಂಸದ ರಶೀದ್‌ಗೆ ಕಸ್ಟಡಿ ಪೆರೋಲ್

ನವದೆಹಲಿ (ಪಿಟಿಐ): ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಭಾಗವಹಿಸಲು ಜಮ್ಮು ಮತ್ತು ಕಾಶ್ಮೀರದ ಸಂಸದ, ಸದ್ಯ ಜೈಲಿನಲ್ಲಿರುವ ಎಂಜಿನಿಯರ್ ರಶೀದ್ ಅವರಿಗೆ ದೆಹಲಿ ನ್ಯಾಯಾಲಯ ‘ಕಸ್ಟಡಿ ಪೆರೋಲ್’ ಮೂಲಕ ಅನುಮತಿ ನೀಡಿದೆ.



ರಶೀದ್

‘ರಶೀದ್ ಅವರು, ಜುಲೈ 24ರಿಂದ ಆಗಸ್ಟ್ 4ರವರೆಗೆ ಪೊಲೀಸ್ ಬೆಂಗಾವಲಿನಲ್ಲಿ ಕಲಾಪಕ್ಕೆ ತೆರಳಬಹುದು’ ಎಂದು ಕೋರ್ಟ್ ಹೇಳಿದೆ.

ಭಯೋತ್ಪಾದಕ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡಿದ ಆರೋಪದಡಿ ಶೇಖ್ ಅಬ್ದುಲ್ ರಶೀದ್ ಅವರನ್ನು ಎನ್‌ಐಎ 2017ರಲ್ಲಿ ಬಂಧಿಸಿತ್ತು. ಅವರ ವಿರುದ್ಧ ಕಾನೂನುಬಾಹಿರ ಚಟುವಟಿಕೆ (ನಿಯಂತ್ರಣ) ಕಾಯ್ದೆಯಡಿ ಮೊಕದ್ದಮೆ ದಾಖಲಿಸಲಾಗಿದೆ. 2019ರಿಂದ ಅವರು ತಿಹಾರ್ ಜೈಲಿನಲ್ಲಿದ್ದಾರೆ.

ಸಂಸತ್ ಕಲಾಪದಲ್ಲಿ ಭಾಗವಹಿಸಲು ಮಧ್ಯಂತರ ಜಾಮೀನು ಅಥವಾ ಕಸ್ಟಡಿ ಪೆರೋಲ್ ನೀಡುವಂತೆ ಬಾರಾಮುಲ್ಲಾ ಕ್ಷೇತ್ರದ ಸಂಸದರಾದ ರಶೀದ್, ಕೋರ್ಟ್‌ಗೆ ಮನವಿ ಮಾಡಿದ್ದರು. ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಚಂದ್ರಜಿತ್ ಸಿಂಗ್ ಅವರು ಪೆರೋಲ್ ಮಂಜೂರು ಮಾಡಿದ್ದಾರೆ.

‘ಪ್ರಯಾಣದ ವೆಚ್ಚವನ್ನು ತಮ್ಮ ಜೇಬಿನಿಂದಲೇ ಭರಿಸುವಂತೆ ಸೂಚಿಸಿ’ ಕೋರ್ಟ್ ಪೆರೋಲ್ ನೀಡಿದೆ ಎಂದು ರಶೀದ್ ಪರ ವಕೀಲರು ಹೇಳಿದ್ದಾರೆ.

ಸೇನೆಗೆ 3 ಅಪಾಚೆ ಹೆಲಿಕಾಪ್ಟರ್

ನವದೆಹಲಿ (ಪಿಟಿಐ): ಅಮೆರಿಕದ ಬೋಯಿಂಗ್ ಕಂಪನಿಯು ಭಾರತೀಯ ಸೇನೆಗೆ ಮೂರು ಅಪಾಚೆ ಹೆಲಿಕಾಪ್ಟರ್‌ಗಳನ್ನು ಮಂಗಳವಾರ ಹಸ್ತಾಂತರಿಸಿದೆ.

ಆರು ಹೆಲಿಕಾಪ್ಟರ್‌ಗಳನ್ನು ಪೂರೈಸುವ ಒಪ್ಪಂದದ ಭಾಗವಾಗಿ ಎಎಚ್– 64ಇ ಅಪಾಚೆ ಹೆಲಿಕಾಪ್ಟರ್‌ಗಳನ್ನು ಪೂರೈಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ವಿಶ್ವದ ಅತ್ಯಾಧುನಿಕ ಯುದ್ಧ ಹೆಲಿಕಾಪ್ಟರ್‌ಗಳಾಗಿರುವ ಎಎಚ್– 64 ಅಪಾಚೆ ಹೆಲಿಕಾಪ್ಟರ್‌ಗಳನ್ನು ಅಮೆರಿಕ ಸೈನ್ಯವು ಬಳಸುತ್ತಿದ್ದು, ಇವು ಭಾರತೀಯ ಸೈನ್ಯದ ಕಾರ್ಯಾಚರಣೆಯ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಲಿವೆ’ ಎಂದು ಸೇನೆಯು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದೆ.

ಭಾರತೀಯ ವಾಯುಪಡೆ ಮತ್ತು ಬೋಯಿಂಗ್ ಕಂಪನಿಯು 2020ರಲ್ಲಿ ಈ ಸಂಬಂಧ ಒಪ್ಪಂದಕ್ಕೆ ಸಹಿ ಹಾಕಿತ್ತು.

‘ಗಾಯ’ಕ್ಕೆ ಜಯದ ಮುಲಾಮು ಲೇಪನ?

ಇಂಗ್ಲೆಂಡ್ ಎದುರು ನಾಲ್ಕನೇ ಟೆಸ್ಟ್ ಇಂದಿನಿಂದ: ಗೆಲ್ಲುವ ಒತ್ತಡದಲ್ಲಿ ಗಿಲ್ ಪಡೆ

• ಸಿದ್ನಿ ಕಿರಣ್

ಮ್ಯಾಂಚೆಸ್ಟರ್: ಆರ್ದ್ರತೆ ಮತ್ತು ಕೊಂಚ ಮಬ್ಬು ಕವಿದ ವಾತಾವರಣವಿರುವ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾಗುವ ಟೆಸ್ಟ್ ಪಂದ್ಯದಲ್ಲಿ ಗಾಯಾಳು ಆಟಗಾರರ ಸಮಸ್ಯೆಯನ್ನು ಮೀರಿ ಬಳಗವನ್ನು ಕಣಕ್ಕಿಳಿಸುವ ಸವಾಲು ಭಾರತದ ಮುಂದಿದೆ.

ಆಟಗಾರರಿಗೆ ವೃತ್ತಿಜೀವನದಲ್ಲಿ ಐದು ಟೆಸ್ಟ್ ಪಂದ್ಯಗಳ ಸರಣಿಯುವ ಕಠಿಣ ಸವಾಲುಗಳನ್ನು ಒಡ್ಡುತ್ತದೆ. ಅದರಲ್ಲೂ ವೇಗದ ಬೌಲರ್ ಮತ್ತು ಆಲ್‌ರೌಂಡರ್‌ಗಳು ಗಾಯದ ಸಮಸ್ಯೆ ಅನುಭವಿಸುವ ಸಾಧ್ಯತೆಗಳು ಹೆಚ್ಚು. ಸದ್ಯ ನಡೆಯುತ್ತಿರುವ ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಭಾರತವು 1–2 ಹಿನ್ನಡೆಯಲ್ಲಿದೆ. ಸರಣಿ ಜಯದ ಕನಸು ಜೀವಂತವಾಗಿ ಉಳಿಯಬೇಕಾದರೆ, ನಾಲ್ಕನೇ ಪಂದ್ಯದಲ್ಲಿ ಜಯಿಸಲೇಬೇಕಾದ ಒತ್ತಡದಲ್ಲಿದೆ.

ಆದರೆ ಸೋಮವಾರ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಗಾಯಗೊಂಡಿದ್ದಾರೆ. ಅವರು ಈ ಪಂದ್ಯದಲ್ಲಿ ಆಡುವುದಿಲ್ಲ. ಲಾರ್ಡ್ಸ್ ಟೆಸ್ಟ್‌ನಲ್ಲಿ ನಿತೀಶ್ ಉತ್ತಮವಾಗಿ ಬೌಲಿಂಗ್ ಮಾಡಿದ್ದರು. ಇನ್ನೊಂದೆಡೆ ವೇಗಿ ಆಕಾಶ್ ದೀಪ್ ಕೂಡ ತೊಡೆಸಂಧು ನೋವಿನಿಂದ ಹೊರ ನಡೆದಿದ್ದಾರೆ. ಇದರಿಂದಾಗಿ ಕೊನೆಪಕ್ಷ ತಂಡದಲ್ಲಿ ಎರಡು ಬದಲಾವಣೆಗಳಂತೂ ಖಚಿತವಾಗಿದೆ.

ಮಂಗಳವಾರದ ಸುದ್ದಿಗೋಷ್ಠಿಯಲ್ಲಿ ನಾಯಕ ಶುಭಮನ್ ಗಿಲ್ ಅವರು, ನವಪ್ರತಿಭೆ ಅನ್ಶುಲ್ ಕಂಬೋಜ್ ಅವರು ಆಡುವ ಅವಕಾಶ ಪಡೆಯುವ ಸಾಧ್ಯತೆ ಹೆಚ್ಚಿದೆ. ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರಿಗೆ ಅನ್ಶುಲ್ ಜೊತೆಗೂಡಬಹುದು ಎಂದಿದ್ದಾರೆ.

ಮ್ಯಾಂಚೆಸ್ಟರ್ ಕ್ರೀಡಾಂಗಣದಲ್ಲಿ ಕೆ.ಎಲ್. ರಾಹುಲ್

ಬಲಾಬಲ



ಹರಿಯಾಣದ 24 ವರ್ಷದ ಅನ್ಶುಲ್ ಅವರು ಹೋದ ವರ್ಷದ ರಣಜಿ ಟ್ರೋಫಿ ಪಂದ್ಯದಲ್ಲಿ ಕೇರಳ ವಿರುದ್ಧದ ಒಂದು ಇನಿಂಗ್ಸ್‌ನಲ್ಲಿ (49ಕ್ಕೆ10) ಮಿಂಚಿದ್ದರು. ಭಾರತ ಎ ತಂಡದಲ್ಲಿ ಆಡಿದ್ದ ಅವರು ಭರವಸೆ ಮೂಡಿಸಿದ್ದರು. ಆದರೆ ಒಂದೊಮ್ಮೆ ಗಿಲ್ ಅವರು ಅನುಭವಿ ಪ್ರಸಿದ್ಧಕೃಷ್ಣ ಅವರ ಆಯ್ಕೆಗೆ ಒತ್ತುಕೊಟ್ಟರೆ ಅನ್ಶುಲ್ ಪದಾರ್ಪಣೆ ಸಾಧ್ಯವಾಗಲಿಕ್ಕಿಲ್ಲ.

ಓಲ್ಡ್ ಟ್ರಾಫರ್ಡ್‌ನಲ್ಲಿ ಇದುವರೆಗೂ ಭಾರತ ತಂಡವು ಒಂದು ಬಾರಿಯೂ ಟೆಸ್ಟ್ ಪಂದ್ಯ ಗೆದ್ದಿಲ್ಲ. ಇಲ್ಲಿ ಇದುವರೆಗೆ ಉಭಯ ತಂಡಗಳು 9 ಸಲ ಮುಖಾಮುಖಿಯಾಗಿವೆ. ಅದರಲ್ಲಿ ಭಾರತ ತಂಡವು ನಾಲ್ಕು ಪಂದ್ಯ ಸೋತಿದೆ. ಐದು ಪಂದ್ಯಗಳು ಡ್ರಾ ಆಗಿವೆ.

ಇಲ್ಲಿಯ ವಾತಾವರಣ ಮತ್ತು ಪಿಚ್ ಸ್ಥಿತಿ–ಗತಿ ಅವಲೋಕಿಸಿದ ನಂತರ, ಆಲ್‌ರೌಂಡರ್ ಆಯ್ಕೆ ಮಾಡಿಕೊಳ್ಳಲು ಚಿಂತಕರ ಚಾವಡಿ ಮನಸ್ಸು ಮಾಡಿದರೆ ಶಾರ್ದೂಲ್ ಠಾಕೂರ್ ಅವಕಾಶ ಪಡೆಯಬಹುದು. ಇಲ್ಲಿ ತೇವಾಂಶ ಹೆಚ್ಚಾಗಿರುವುದರಿಂದ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ಸಿಗುವುದು ಅನುಮಾನ. ಆದ್ದರಿಂದ ಸ್ಪಿನ್ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರನ್ನು ಕಣಕ್ಕಿಳಿಸುವ ಕುರಿತು ಅನುಮಾನವಿದೆ. ಆದರೆ ಅವರು ಕಳೆದ ಎರಡು ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದರು. ಅದೇ ಮೊದಲ ಪಂದ್ಯದಲ್ಲಿ ಶಾರ್ದೂಲ್ ಅವರು ಲಯ ಕಂಡುಕೊಂಡಿರಲಿಲ್ಲ.

ಯುವ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿರುವ ಭಾರತ ತಂಡವು ಸರಣಿಯುದ್ದಕ್ಕೂ ಉತ್ತಮವಾಗಿ ಆಡಿದೆ. ಎಜ್‌ಬಾಸ್ಟನ್‌ನಲ್ಲಿ ಅಮೋಘ ಜಯ ಸಾಧಿಸಿತ್ತು. ಉಳಿದ ಎರಡೂ ಪಂದ್ಯಗಳಲ್ಲಿಯೂ ಕಠಿಣ ಪೈಪೋಟಿ ಒಡ್ಡಿಯೂ ಸೋತಿತ್ತು. ಆದ್ದರಿಂದ ಪಂದ್ಯದ ಪ್ರಮುಖ ಹಂತಗಳಲ್ಲಿ ಪುಟಿದೇಳುವ ಹಾಗೂ ನಿಯಂತ್ರಣ ಸಾಧಿಸುವ ಪ್ರೌಢಿಮೆಯನ್ನು ಗಿಲ್ ಬಗಳವು ತೋರಬೇಕಿದೆ. ಇನಿಂಗ್ಸ್ ಬೆಳವಣಿಗೆ ಏರುಗತಿಯಲ್ಲಿರುವಾಗಲೇ ಸತತ ವಿಕೆಟ್‌ಗಳ ಪತನ ಕಾಣುವ, ಫೀಲ್ಡಿಂಗ್‌ನಲ್ಲಿ ಲೋಪ ಮತ್ತು ಬೌಲರ್‌ಗಳು ರನ್ ನಿಯಂತ್ರಿಸುವಲ್ಲಿ ವಿಫಲರಾಗುವುದನ್ನು ತಪ್ಪಿಸಬೇಕಿದೆ.

ಎಲ್ಲ ಐದು ದಿನಗಳಲ್ಲಿಯೂ ಶಿಸ್ತು, ಏಕಾಗ್ರತೆ ಮತ್ತು ಯೋಜನಾಬದ್ಧ ಆಟವನ್ನು ನಿರಂತರವಾಗಿ ತೋರಬೇಕು. ಆಗಲೇ ಅನುಭವಿ ನಾಯಕ ಬೆನ್ ಸ್ಟೋಕ್ಸ್ ಅವರ ಬಳಗಕ್ಕೆ ತಿರುಗೇಟು ನೀಡಲು ಸಾಧ್ಯ.

ಮುಖ್ಯಾಂಶಗಳು

- ಸರಣಿಯಲ್ಲಿ 2–1ರ ಮುನ್ನಡೆಯಲ್ಲಿರುವ ಇಂಗ್ಲೆಂಡ್ ತಂಡ
- ನಿತೀಶ್, ಅರ್ಷದೀಪ್ ಸಿಂಗ್ ಅವರಿಗೆ ಗಾಯ
- ಬ್ಯಾಟರ್ ಕರುಣ್ ನಾಯರ್‌ಗೆ ಮತ್ತೊಂದು ಅವಕಾಶದ ನಿರೀಕ್ಷೆ

ತಾಲೀಮು ಸಂದರ್ಭದಲ್ಲಿ ಭಾರತ ತಂಡದ ಬೌಲರ್‌ಗಳಾದ ಶಾರ್ದೂಲ್ ಠಾಕೂರ್, ಅನ್ಶುಲ್ ಕಂಬೋಜ್ ಮತ್ತು ಮೊಹಮ್ಮದ್ ಸಿರಾಜ್

ಪಿಟಿಐ ಚಿತ್ರಗಳು

‘ಕ್ರಿಕೆಟ್ ಸ್ಫೂರ್ತಿ ಕಡೆಗಣಿಸಿದ ಇಂಗ್ಲೆಂಡ್’

ಶುಭಮನ್ ಗಿಲ್

ಮ್ಯಾಂಚೆಸ್ಟರ್ (ಎಎಫ್‌ಪಿ): ಲಾರ್ಡ್ಸ್‌ನಲ್ಲಿ ನಡೆದ ಮೂರನೇ ಟೆಸ್ಟ್‌ನ ಮೂರನೇ ದಿನದ ಕೊನೆಯಲ್ಲಿ ಇಂಗ್ಲೆಂಡ್ ಕಾಲಹರಣ ತಂತ್ರ ಅನುಸರಿಸಿ ‘ಕ್ರಿಕೆಟ್ ಸ್ಫೂರ್ತಿ’ಯನ್ನು ನಿರ್ಲಕ್ಷಿಸಿತು ಎಂದು ಭಾರತ ತಂಡದ ನಾಯಕ ಶುಭಮನ್ ಗಿಲ್ ಮಂಗಳವಾರ ದೂರಿದರು.

ಇಂಗ್ಲೆಂಡ್‌ನ ಈ ತಂತ್ರ ಉಭಯ ತಂಡಗಳ ನಡುವೆ ಕಾವೇರಿದ ವಾತಾವರಣಕ್ಕೆ ದಾರಿಮಾಡಿಕೊಟ್ಟಿತ್ತು. ನಾಲ್ಕನೇ ದಿನವೂ ಆಗಾಗ ಪರಸ್ಪರರತ್ತ ವಾಗ್ಬಾಣಗಳು ವಿನಿಮಯವಾದವು.

ಇಂಗ್ಲೆಂಡ್‌ನ 387 ರನ್‌ಗಳಿಗೆ ಉತ್ತರವಾಗಿ ಮೂರನೇ ದಿನದ ಅಂತ್ಯಕ್ಕೆ ಕೆಲವೇ ನಿಮಿಷ ಮೊದಲು ಭಾರತ ತಂಡ ಕೂಡ ಅಷ್ಟೇ ಮೊತ್ತಕ್ಕೆ ಆಲೌಟ್ ಆಗಿತ್ತು. ನಂತರ ಇಂಗ್ಲೆಂಡ್ ಎರಡನೇ ಇನಿಂಗ್ಸ್ ಆಡಲು ಏಳು ನಿಮಿಷಗಳಿದ್ದವು. ಆದರೆ ಭಾರತ ಎರಡನೇ ಓವರ್ ಮಾಡದಂತೆ ಜಾಕ್ ಕ್ರಾಲಿ ಕಾಲಹರಣ ಮಾಡಿದ್ದರು. ಎರಡು ಸಲ ಕೊನೆಗಳಿಗೆಯಲ್ಲಿ ಸ್ಟ್ಯಾನ್ಸ್ ಬದಲಿಸಿದ್ದರು. ಒಮ್ಮೆ ಚೆಂಡು ಗ್ಲೋವ್‌ಗೆ ಸವರಿದರೂ, ಫಿಸಿಯೊರನ್ನು ಕರೆಸಿದ್ದರು. ಹೀಗಾಗಿ ಎರಡನೇ ಓವರ್‌ಗೆ ಅವಕಾಶವಾಗಲಿಲ್ಲ. ಗಿಲ್ ಅವರು ಕ್ರಾಲಿ ಅವರನ್ನು ದುರುಗುಟ್ಟಿಸಿ ನೋಡಿ ಬೈದಿದ್ದರು.

ನಾಲ್ಕನೇ ಟೆಸ್ಟ್‌ಗೆ ಮುನ್ನಾದಿನವಾದ ಮಂಗಳವಾರ ಈ ಬಗ್ಗೆ ಗಿಲ್ ಸ್ಪಷ್ಟನೆ ನೀಡಿದರು. ಇಂಗ್ಲೆಂಡ್ ಆಡಲು ಇಳಿಯುವಾಗ ಏಳು ನಿಮಿಷಗಳು ಉಳಿದಿದ್ದವು. ಆದರೆ ಕ್ರೀಸಿಗೆ ಬರಲು 10, 20 ಸೆಕೆಂಡು ಅಲ್ಲ, 90 ಸೆಕೆಂಡು ತೆಗೆದುಕೊಂಡಿದ್ದು ಗಿಲ್ ಸಿಡಿಮಿಡಿಗೆ ಕಾರಣವಾಯಿತು. ‘ನಿಜ, ಹಲವು ತಂಡಗಳು ಈ ರೀತಿ (ಕಾಲಹರಣ) ಮಾಡುತ್ತವೆ. ನಾವೂ ಆ ಸ್ಥಿತಿಯಲ್ಲಿದ್ದರೆ ಕಡಿಮೆ ಓವರ್ ಆಡುತ್ತಿದ್ದೆವು. ಆದರೆ ಅದಕ್ಕೂ ಒಂದು ಮಿತಿಯಿದೆ’ ಎಂದರು.

ಇಷ್ಟೊಂದು ತಡವಾಗಿ ಕ್ರೀಸಿಗೆ ಬಂದಿದ್ದು ಸಹ ಕ್ರೀಡಾ ಸ್ಫೂರ್ತಿಯ ನಡವಳಿಕೆಯಲ್ಲ ಎಂದು ಹೇಳಿದರು.

‘ನಾನು ಕ್ರಾಲಿ ಅವರಿಗೆ ನಿಂದಿಸಿದ್ದನ್ನು ಸಮರ್ಥಿಸಿಕೊಳ್ಳುವುದಿಲ್ಲ. ಕಾವೇರಿದ ಆ ಕ್ಷಣದಲ್ಲಿ ಹಾಗೆ ಹೇಳಿಹೋಯಿತು’ ಎಂದು ಗಿಲ್ ಒಪ್ಪಿಕೊಂಡರು.

ಸರಣಿಯಲ್ಲಿ ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳು

ಆಟಗಾರ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಭಾರತ					
ಶುಭಮನ್ ಗಿಲ್	3	607	269	3	0
ರಿಷಭ್ ಪಂತ್	3	425	134	2	2
ಕೆ.ಎಲ್.ರಾಹುಲ್	3	375	137	2	1
ರವೀಂದ್ರ ಜಡೇಜ	3	327	89	-	4
ಇಂಗ್ಲೆಂಡ್					
ಜೇಮಿ ಸ್ಮಿತ್	3	415	184	1	2
ಹ್ಯಾರಿ ಬ್ರೂಕ್	3	314	158	1	1
ಬೆನ್ ಡಕೆಟ್	3	271	149	1	1
ಜೋ ರೂಟ್	3	253	104	1	1

ಸರಣಿಯಲ್ಲಿ ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ಪಂದ್ಯ	ವಿಕೆಟ್	ಶ್ರೇಷ್ಠ (ಇನಿಂಗ್ಸ್)
ಭಾರತ			
ಮೊಹಮ್ಮದ್ ಸಿರಾಜ್	3	13	70ಕ್ಕೆ6
ಜಸ್‌ಪ್ರೀತ್ ಬೂಮ್ರಾ	2	12	83ಕ್ಕೆ5
ಆಕಾಶ್ ದೀಪ್	2	11	99ಕ್ಕೆ6
ಪ್ರಸಿದ್ಧಕೃಷ್ಣ	2	6	128ಕ್ಕೆ3
ಇಂಗ್ಲೆಂಡ್			
ಬೆನ್ ಸ್ಟೋಕ್ಸ್	3	11	48ಕ್ಕೆ3
ಜೋಶ್ ಟಂಗ್	2	11	72ಕ್ಕೆ3
ಶೋಯಬ್ ಬಶೀರ್	3	10	167ಕ್ಕೆ3
ಬ್ರೈಡನ್ ಕಾರ್ಸ್	3	9	80ಕ್ಕೆ3

ಪಂದ್ಯ ಆರಂಭ: ಮಧ್ಯಾಹ್ನ 3.30 ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಸಿಗದ ವೀಸಾ: ಆತಂಕದಲ್ಲಿ ಭಾರತ ಕೆಡೆಟ್ ಕುಸ್ತಿ ತಂಡ

ನವದೆಹಲಿ (ಪಿಟಿಐ): ಜುಲೈ 28ರಂದು ಅಥೆನ್ಸ್‌ನಲ್ಲಿ ಆರಂಭವಾಗುವ ಪ್ರತಿಷ್ಠಿತ 17 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ಈಗ ಭಾರತದ ಪೈಲ್ವಾನರಿಗೆ ತಪ್ಪಿಹೋಗುವ ಆತಂಕ ಎದುರಾಗಿದೆ. ಕೂಟ ಆರಂಭಕ್ಕೆ ನಾಲ್ಕೇ ದಿನಗಳಿದ್ದು, 47 ಮಂದಿಯ ಕೆಡೆಟ್ ತಂಡಕ್ಕೆ ವೀಸಾ ಸಮಸ್ಯೆ ಎದುರಾಗಿದೆ.

ಜುಲೈ 10ರಂದೇ ವೀಸಾ ಕೋರಿ ಗ್ರೀಸ್ ರಾಯಭಾರ ಕಚೇರಿಗೆ ಭಾರತ ಕುಸ್ತಿ ಫೆಡರೇಷನ್ ಸಮಯ ಕೇಳಿತ್ತು. ಆದರೆ 12 ದಿನ ಕಳೆದರೂ ಮನವಿಗೆ ಸಕಾರಾತ್ಮಕ ಸ್ಪಂದನೆ ದೊರೆಯದಿರುವುದು ತಂಡಕ್ಕೆ ಕಳವಳ ಮೂಡಿಸಿದೆ.

ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡುವಂತೆ ಫೆಡರೇಷನ್ ಜುಲೈ 16ರಂದು ವಿದೇಶಾಂಗ ವ್ಯವಹಾರ ಸಚಿವಾಲಯದ ಮೊರೆಹೋಗಿದೆ.

47 ಮಂದಿಯ ತಂಡದಲ್ಲಿ 30 ಕುಸ್ತಿಪಟುಗಳಿದ್ದಾರೆ. ಜುಲೈ 7 ಮತ್ತು 8 ರಂದು ಕ್ರಮವಾಗಿ ದೆಹಲಿ ಮತ್ತು ಲಖನೌದಲ್ಲಿ ಆಯ್ಕೆ ಟ್ರಯಲ್ಸ್ ನಡೆಸಿ ಕುಸ್ತಿಪಟುಗಳ ಆಯ್ಕೆ ಮಾಡಲಾಗಿತ್ತು. ತಂಡ ನಿಗದಿಯಂತೆ ಶನಿವಾರ ನಿರ್ಗಮಿಸಬೇಕಾಗಿದೆ.

‘ಗ್ರೀಸ್ ರಾಯಭಾರ ಕಚೇರಿಗೆ ಪದೇ ಪದೇ ವಿನಂತಿ ಮಾಡಿದರೂ, ಅವರಿಂದ ಪೂರಕ ಪ್ರತಿಕ್ರಿಯೆ ಬರದ ಕಾರಣ ಮಧ್ಯಪ್ರವೇಶ ಮಾಡುವಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಗೃಹ ಸಚಿವಾಲಯಕ್ಕೆ ಮನವಿ ಮಾಡಲಾಯಿತು’ ಎಂದು ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ಪಿಟಿಐಗೆ ತಿಳಿಸಿದರು.

‘ಆಟಗಾರರ, ತರಬೇತುದಾರರ ಪ್ರಯಾಣದ ಟಿಕೆಟ್‌ಗಳು ಸಿದ್ಧ ಇವೆ. ಅನುಭವ ಪಡೆಯುವ ದೃಷ್ಟಿಯಿಂದ ಈ ಕೂಟವು ಯುವ ಕುಸ್ತಿಪಟುಗಳಿಗೆ ಮಹತ್ವದ್ದಾಗಿದೆ. ಅವರು ವಿಶ್ವ ಚಾಂಪಿಯನ್‌ಷಿಪ್ ತಪ್ಪಿಸಿಕೊಳ್ಳಬಾರದು ಎಂಬ ಉದ್ದೇಶ ನಮ್ಮದು’ ಎಂದರು.

ಈ ಹಿಂದೆ ಗ್ರೀಸ್ ರಾಯಭಾರ ಕಚೇರಿಯಿಂದ ನಾಲ್ಕೇ ದಿನಗಳಲ್ಲಿ ವೀಸಾ ನೀಡಲಾಗಿತ್ತು. ಈ ಬಾರಿ ವಿಳಂಬವಾಗಿದೆ. ಇತ್ತೀಚೆಗೆ ಕುಸ್ತಿ ಸ್ಪರ್ಧಿ ಹರ್ಷಿತಾ ಅವರಿಗೆ ಹಂಗೆರಿ ಎಂಬಸಿಯಿಂದ ಒಂದೇ ದಿನದಲ್ಲಿ ವೀಸಾ ದೊರಕಿತ್ತು. ಈ ಬಾರಿ ವಿಳಂಬಕ್ಕೆ ಕಾರಣ ತಿಳಿಯುತ್ತಿಲ್ಲ’ ಎಂದು ಇನ್ನೊಬ್ಬ ಅಧಿಕಾರಿ ತಿಳಿಸಿದರು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ರಚನಾ ಪರಮಾರ್ (43 ಕೆ.ಜಿ), ಮೋನಿ (57 ಕೆ.ಜಿ), ಅಶ್ವಿನಿ ವೈಷ್ಣೋ (65 ಕೆ.ಜಿ), ಮನಿಷಾ (69 ಕೆ.ಜಿ) ಮೊದಲಾದವರು ತಂಡದಲ್ಲಿದ್ದಾರೆ.

ಕರ್ನಾಟಕ ತಂಡಕ್ಕೆ ಮತ್ತೆ ಕರುಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದ್ಯ ಇಂಗ್ಲೆಂಡ್ ಪ್ರವಾಸದಲ್ಲಿರುವ ಭಾರತ ತಂಡದಲ್ಲಿ ಆಡುತ್ತಿರುವ ಬ್ಯಾಟರ್ ಕರುಣ್ ನಾಯರ್ ಅವರು ಮುಂಬರುವ ದೇಶಿ ಕ್ರಿಕೆಟ್ ಋತುವಿನಲ್ಲಿ ಕರ್ನಾಟಕ ತಂಡಕ್ಕೆ ಮರಳುವರು.

ಬೆಂಗಳೂರಿನ ಕರುಣ್ ಅವರು 2013ರಿಂದ ಸುಮಾರು ಒಂದು ದಶಕದ ಕಾಲ ಅವರು ಕರ್ನಾಟಕ ತಂಡದಲ್ಲಿ ಆಡಿದ್ದರು. ಕೆಲವು ವರ್ಷ ನಾಯಕತ್ವ ಕೂಡ ನಿಭಾಯಿಸಿದ್ದರು. ಆದರೆ ಬ್ಯಾಟಿಂಗ್ ಲಯ ಕ್ಷೀಣಿಸಿದ್ದ ಕಾರಣ ಒಂದು ಹಂತದಲ್ಲಿ ರಾಜ್ಯ ತಂಡದಲ್ಲಿ ಸ್ಥಾನ ಕಳೆದುಕೊಂಡಿದ್ದರು. ಅದರಿಂದಾಗಿ ಹೋದ ವರ್ಷ ಅವರು ವಿದರ್ಭ ತಂಡ ಸೇರ್ಪಡೆಯಾಗಿದ್ದರು.

ಅಲ್ಲಿ ಅವರು ರನ್‌ಗಳ ಹೊಳೆ ಹರಿಸಿದ್ದರು. ರಣಜಿ ಟ್ರೋಫಿ ಟೂರ್ನಿಯಲ್ಲಿ 53ರ ಸರಾಸರಿಯಲ್ಲಿ 863 ರನ್ ಗಳಿಸಿದ್ದರು. ಫೈನಲ್‌ನಲ್ಲಿ ಕೇರಳ ತಂಡದ ಎದುರು ಶತಕ ಕೂಡ ದಾಖಲಿಸಿದ್ದರು. ವಿದರ್ಭ ತಂಡವು ಚಾಂಪಿಯನ್ ಆಗಿತ್ತು. ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿಯೂ ಅವರು 779 ರನ್ ಗಳನ್ನು ಕಲೆಹಾಕಿದ್ದರು. ತಂಡವು ರನ್ನರ್ಸ್ ಅಪ್ ಆಗಿತ್ತು. ಈ ಸಾಧನೆಗಳಿಂದಾಗಿ ಅವರು ಭಾರತ ಎ ತಂಡದಲ್ಲಿ ಸ್ಥಾನ ಪಡೆದರು. ಇಂಗ್ಲೆಂಡ್ ಲಯನ್ಸ್ ಎದುರಿನ ಸರಣಿಯಲ್ಲಿಯೂ 542 ರನ್ ಗಳಿಸಿದರು. ಅದರಿಂದಾಗಿ ಭಾರತ ಟೆಸ್ಟ್ ತಂಡದಲ್ಲಿ ಎಂಟು ವರ್ಷಗಳ ನಂತರ ಸ್ಥಾನ ಪಡೆದಿದ್ದಾರೆ.

ಆದರೆ ಇಂಗ್ಲೆಂಡ್ ಎದುರಿನ ಸರಣಿಯ ಮೂರು ಪಂದ್ಯಗಳಲ್ಲಿ (0,20,31,26,40 ಮತ್ತು 14) ಅವರು ದೊಡ್ಡ ಇನಿಂಗ್ಸ್ ಆಡುವಲ್ಲಿ ಸಫಲರಾಗಿಲ್ಲ.

‘ಕರುಣ್ ತವರು ರಾಜ್ಯ ತಂಡಕ್ಕೆ ಮರಳುವ ನಿರ್ಧಾರ ಪ್ರಕಟಿಸಿದ್ದಾರೆ. ವಿದರ್ಭ ಕ್ರಿಕೆಟ್ ಸಂಸ್ಥೆಯೂ ಅವರಿಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಿದೆ’ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮೂಲಗಳು ಖಚಿತಪಡಿಸಿವೆ.

ಹೋದ ಋತುವಿನಲ್ಲಿ ಯುವ ಆಟಗಾರರಾದ ಆರ್. ಸ್ಮರಣ್, ಕೆ.ಎಲ್. ಶ್ರೀಜಿತ್ ಮತ್ತು ಕೆ.ವಿ. ಅನೀಶ್ ಅವರು ಮಿಂಚಿದ್ದರು. ಇದೀಗ 33 ವರ್ಷದ ಕರುಣ್ ಅವರು ಈ ನವಪ್ರತಿಭೆಗಳ ಪೈಪೋಟಿ ಎದುರಿಸಬೇಕಿದೆ.

ತಂಡದಲ್ಲಿ ಸದ್ಯ ಮಯಂಕ್ ಅಗರವಾಲ್ ಅವರನ್ನು ಬಿಟ್ಟರೆ ಹೆಚ್ಚು ಅನುಭವಿ ಬ್ಯಾಟರ್ ಆಗಿ ಕರುಣ್ ನಾಯರ್ ತಂಡಕ್ಕೆ ಬಲ ತುಂಬುವ ನಿರೀಕ್ಷೆ ಮೂಡಿದೆ.

ಆದರೆ ಇತ್ತೀಚೆಗಷ್ಟೇ ಮಧ್ಯಮವೇಗಿ ವಾಸುಕಿ ಕೌಶಿಕ್ ಅವರು ಕರ್ನಾಟಕ ಬಿಟ್ಟು ಗೋವಾ ತಂಡಕ್ಕೆ ತೆರಳುವುದಾಗಿ ಪ್ರಕಟಿಸಿದ್ದರು.

‘ಟೆಸ್ಟ್’: ಇಂಗ್ಲೆಂಡ್ ಯುವ ತಂಡಕ್ಕೆ ಇನಿಂಗ್ಸ್ ಮುನ್ನಡೆ

ಚೆಮ್ಸ್‌ಫೋರ್ಡ್ (ಬ್ರಿಟನ್) (ಪಿಟಿಐ): ವಿಹಾನ್ ಮಲ್ಹೋತ್ರಾ ಅವರ ಆಕರ್ಷಕ ಶತಕದ (120 ರನ್; 123 ಎ, 4x19, 3x6) ಹೊರತಾಗಿಯೂ ಭಾರತ ಯುವ ತಂಡವು (19 ವರ್ಷದೊಳಗಿವರ) ಇಂಗ್ಲೆಂಡ್ ಎದುರಿನ ಮೊದಲ ‘ಟೆಸ್ಟ್’ನ ಪ್ರಥಮ ಇನಿಂಗ್ಸ್‌ನಲ್ಲಿ 30 ರನ್ ಹಿನ್ನಡೆ ಅನುಭವಿಸಿತು.

ಪಂದ್ಯದ ಮೂರನೇ ದಿನವಾದ ಮಂಗಳವಾರ ಸ್ಪಿನ್ನರ್ ರಾಲ್ಫಿ ಆಲ್ಬರ್ಟ್ (53ಕ್ಕೆ6) ಅವರ ದಾಳಿಯೆದುರು ಭಾರತ ತಂಡ 58.1 ಓವರ್‌ಗಳಲ್ಲಿ 279 ರನ್‌ಗಳಿಗೆ ಆಲೌಟ್ ಆಯಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡವು, ಬೆನ್ ಡಾಕಿನ್ಸ್ (42 ರನ್) ಹಾಗೂ ಆ್ಯಡಂ ಥಾಮಸ್ (50 ರನ್) ಜೊತೆಯಾಟದ ನೆರವಿನಿಂದ 25 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 93 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್ ಯುವ ತಂಡ: 81.3 ಓವರ್‌ಗಳಲ್ಲಿ 309; ಭಾರತ ಯುವ ತಂಡ: 58.1 ಓವರ್‌ಗಳಲ್ಲಿ 279 (ವಿಹಾನ್ ಮಲ್ಹೋತ್ರಾ 120, ಆಯುಷ್ ಮ್ಹಾತ್ರೆ 80; ರಾಲ್ಫೀ ಆಲ್ಬರ್ಟ್ 53ಕ್ಕೆ6). ಎರಡನೇ ಇನಿಂಗ್ಸ್: ಇಂಗ್ಲೆಂಡ್ ಯುವ ತಂಡ: 25 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 93.

ಹರ್ಮನ್‌ಪ್ರೀತ್ ಶತಕ • 6 ವಿಕೆಟ್ ಕಿತ್ತ ಕ್ರಾಂತಿ ಗೌಡ್

ಕೌರ್ ಪಡೆಗೆ ಸರಣಿ ಗೆಲುವು



ಕ್ರಾಂತಿ ಗೌಡ್

ಚೆಸ್ಟರ್ ಲಿ ಸ್ಟ್ರೀಟ್ (ಬ್ರಿಟನ್) (ಪಿಟಿಐ): ನಾಯಕಿ ಹರ್ಮನ್ ಪ್ರೀತ್ ಕೌರ್ ಶತಕ ಮತ್ತು ಕ್ರಾಂತಿ ಗೌಡ್ ಅವರ ಅಮೋಘ ಬೌಲಿಂಗ್‌ನಿಂದಾಗಿ ಭಾರತ ಮಹಿಳಾ ತಂಡವು ಇಂಗ್ಲೆಂಡ್ ಎದುರು ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 13 ರನ್‌ಗಳಿಂದ ಜಯಿಸಿತು. ಅದರೊಂದಿಗೆ 2-1 ರಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ನಾಯಕಿ ಹರ್ಮನ್‌ಪ್ರೀತ್ ಕೌರ್, ನಾಯಕತ್ವಕ್ಕೆ ತಕ್ಕಂತೆ ಆಡಿ 84 ಎಸೆತಗಳಲ್ಲಿ 102 ರನ್ ಗಳಿಸಿದರು. ಅರ್ಧಶತಕ ದಾಖಲಿಸಿದ ಜೆಮಿಮಾ ರಾಡ್ರಿಗಸ್ (50; 45 ಎಸೆತ, 4X7) ಕೌರ್ ಅವರಿಗೆ ಉತ್ತಮ ಬೆಂಬಲ ನೀಡಿದರು. ಹೀಗಾಗಿ, ಭಾರತ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 318 ರನ್‌ಗಳನ್ನು ಗಳಿಸಿತು.

319 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಇಂಗ್ಲೆಂಡ್, ಕ್ರಾಂತಿ ಗೌಡ್ ಅವರ ದಾಳಿ ಎದುರು (52ಕ್ಕೆ6) 49.5 ಓವರ್‌ಗಳಲ್ಲಿ 305 ರನ್‌ಗಳಿಗೆ ಆಲೌಟ್ ಆಯಿತು.

8 ರನ್‌ಗೆ ಎರಡು ವಿಕೆಟ್ ಕಳೆದುಕೊಂಡಿದ್ದ ಇಂಗ್ಲೆಂಡ್‌ಗೆ, ಎಮ್ಮಾ ಲ್ಯಾಂಬ್ (68 ರನ್; 81 ಎ, 5x4) ಹಾಗೂ ನಾಯಕಿ ನ್ಯಾಟ್ ಸ್ಕಿವರ್ ಬ್ರಂಟ್ (98ರನ್; 11x4) ನಾಲ್ಕನೇ ವಿಕೆಟ್‌ಗೆ 187 ರನ್‌ಗಳ ಉತ್ತಮ ಜೊತೆಯಾಟ ನೀಡಿದರು.

ಶತಕದಂಚಿನಲ್ಲಿದ್ದ ಬ್ರಂಟ್ ಅವರ ವಿಕೆಟ್ ಕಿತ್ತ ಆಲ್‌ರೌಂಡರ್ ದೀಪ್ತಿ ಶರ್ಮಾ, ಇಂಗ್ಲೆಂಡ್‌ನ ಗೆಲುವನ್ನು ಕಸಿದರು.

ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಶತಕ ಸಂಭ್ರಮ

ಚಿತ್ರ: ಬಿಸಿಸಿಐ ‘ಎಕ್ಸ್’ ಖಾತೆ

ಭಾರತ ಬೃಹತ್ ಮೊತ್ತ: ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಸ್ಮೃತಿ ಮಂದಾನ (45; 54ಎ) ಮತ್ತು ಪ್ರತೀಕಾ ರಾವಲ್ (26; 33ಎ) 64 ರನ್ ಜೊತೆಯಾಟ ಆಡಿ ಉತ್ತಮ ಆರಂಭ ಒದಗಿಸಿದರು. ಆದರೆ ಐದು ಓವರ್‌ಗಳ ಅಂತರದಲ್ಲಿ ಕ್ರಮವಾಗಿ ಪ್ರತೀಕಾ ಮತ್ತು ಸ್ಮೃತಿ ಇಬ್ಬರೂ ಔಟಾದರು.

ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಹರ್ಲೀನ್ (45; 65ಎ, 4X4) ಅವರೊಂದಿಗೆ ಸೇರಿಕೊಂಡ ನಾಯಕಿ ಹರ್ಮನ್ 3ನೇ ವಿಕೆಟ್ ಜೊತೆಯಾಟದಲ್ಲಿ 81 ರನ್ ಸೇರಿಸಿದರು. ಇದರಿಂದಾಗಿ ತಂಡವು ದೊಡ್ಡ ಮೊತ್ತ ಗಳಿಸುವ ನಿರೀಕ್ಷೆ ಗರಿಗೆದರಿತು. ಆದರೆ ಲಾರೆನ್ ಬೆಲ್ ಅವರು ಹರ್ಲೀನ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ಹರ್ಮನ್ ತಮ್ಮ ಬೀಸಾಟ ಮುಂದುವರಿಸಿದರು. ಏಕದಿನ ಕ್ರಿಕೆಟ್‌ನಲ್ಲಿ ತಮ್ಮ ಏಳನೇ ಶತಕ ಗಳಿಸಿದರು.

ಹರ್ಮನ್ ಮತ್ತು ಜೆಮಿಮಾ ಅವರು 4ನೇ ವಿಕೆಟ್ ಜೊತೆಯಾಟದಲ್ಲಿ 110 ರನ್ ಸೇರಿಸಿದರು. ಇನಿಂಗ್ಸ್‌ನಲ್ಲಿ ನಾಲ್ಕು ಓವರ್‌ಗಳ ಬಾಕಿಯಿದ್ದಾಗ ಲಾರೆನ್ ಫೈಲರ್ ಎಸೆತದಲ್ಲಿ ಜೆಮಿಮಾ ನಿರ್ಗಮಿಸಿದರು. ಶತಕದ ಜೊತೆಯಾಟ ಮುರಿಯಿತು. ಕ್ರೀಸ್‌ಗೆ ಬಂದ ರಿಚಾ ಘೋಷ್ (ಅಜೇಯ 38; 18ಎ, 4X3, 6X2) ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ಅವರ ಭರ್ಜರಿ ಬ್ಯಾಟಿಂಗ್‌ನಿಂದಾಗಿ ತಂಡದ ಮೊತ್ತವು ತ್ರಿಶತಕ ದಾಟಿತು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 318 (ಪ್ರತಿಕಾ ರಾವಲ್ 26, ಸ್ಮೃತಿ ಮಂದಾನ 45, ಹರ್ಲೀನ್ ಡಿಯೊಲ್ 45, ಹರ್ಮನ್‌ಪ್ರೀತ್ ಕೌರ್ 102, ಜೆಮಿಮಾ ರಾಡ್ರಿಗಸ್ 50, ರಿಚಾ ಘೋಷ್ ಔಟಾಗದೇ 38, ಲಾರೆನ್ ಬೆಲ್ 82ಕ್ಕೆ1, ಲಾರೆನ್ ಫೈಲರ್ 64ಕ್ಕೆ1, ಚಾರ್ಲೀ ಡೀನ್ 69ಕ್ಕೆ1) **ಇಂಗ್ಲೆಂಡ್:** 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 318 (ಎಮ್ಮಾ ಲ್ಯಾಂಬ್ 68, ನ್ಯಾಟ್ ಸ್ಕಿವರ್ ಬ್ರಂಟ್ 98, ಅಲೈಸ್ ಡೇವಿಡ್‌ಸನ್ ರಿಚರ್ಡ್ಸ್ 44, ಕ್ರಾಂತಿ ಗೌಡ್ 52ಕ್ಕೆ6, ಶ್ರೀ ಚರಣಿ 68ಕ್ಕೆ2)

ಕ್ರೀಡಾ ಮಸೂದೆ ವ್ಯಾಪ್ತಿಗೆ ಬಿಸಿಸಿಐ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಬುಧವಾರ ಮಂಡಿಸಲು ಸಿದ್ಧವಾಗಿರುವ ರಾಷ್ಟ್ರೀಯ ಕ್ರೀಡಾ ಮಸೂದೆಯ ವ್ಯಾಪ್ತಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೂ ಬರಲಿದೆ.

ಬಿಸಿಸಿಐ ಕೇಂದ್ರ ಕ್ರೀಡಾ ಸಚಿವಾಲಯದಿಂದ ಯಾವುದೇ ಅನುದಾನವನ್ನು ತೆಗೆದುಕೊಳ್ಳುವುದಿಲ್ಲ. ಆದರೂ ಕ್ರೀಡಾ ಮಸೂದೆಯ ವ್ಯಾಪ್ತಿಗೆ ಸೇರಿಕೊಳ್ಳಲಿದೆ. ಉದ್ದೇಶಿತ ರಾಷ್ಟ್ರೀಯ ಕ್ರೀಡಾ ಮಂಡಳಿ (ಎನ್‌ಎಸ್‌ಬಿ)ಯ ಮಾನ್ಯತೆ ಪಡೆಯುವುದು ಕೂಡ ಬಿಸಿಸಿಐಗೆ ಅಗತ್ಯವಾಗಲಿದೆ.

‘ಉಳಿದೆಲ್ಲ ರಾಷ್ಟ್ರೀಯ ಕ್ರೀಡಾ ಫೆಡರೇಷನ್ (ಎನ್‌ಎಸ್‌ಎಫ್)ಗಳ ಮಾದರಿಯಲ್ಲಿಯೇ ನೆಲದ ಕಾನೂನು ಪಾಲನೆ ಮಾಡುವುದು ಬಿಸಿಸಿಐ ಕರ್ತವ್ಯ. ಒಂದೊಮ್ಮೆ ಮಸೂದೆಯು ಕಾಯ್ದೆಯಾಗಿ ಜಾರಿಯಾದರೆ ಬಿಸಿಸಿಐ ಕೂಡ ಎನ್‌ಎಸ್‌ಜಿ ವ್ಯಾಪ್ತಿಗೆ ಒಳಪಡಲಿದೆ. ಮಂಡಳಿಯು ಸರ್ಕಾರಿ ಅನುದಾನ ಪಡೆಯದಿದ್ದರೂ ಲೋಕಸಭೆಯ ಕಾನೂನು ಅನ್ವಯವಾಗಲಿದೆ’ ಎಂದು ಸಚಿವಾಲಯದ ಉನ್ನತ ಮೂಲಗಳು ತಿಳಿಸಿವೆ.

‘ಎಲ್ಲ ಎನ್‌ಎಸ್‌ಎಫ್‌ಗಳಂತೆ ಬಿಸಿಸಿಐ ಕೂಡ ಸ್ವಾಯತ್ತವಾಗಿ ಉಳಿಯಲಿದೆ. ಆದರೆ ಯಾವುದೇ ತಕರಾರುಗಳು ತಲೆದೋರಿದಾಗ ಮುಂಬರುವ ದಿನಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ ಯು (ಎನ್‌ಎಸ್‌ಟಿ) ವ್ಯಾಜ್ಯ ಪರಿಹಾರ ವೇದಿಕೆಯಾಗುವುದು’ ಎಂದು ಸ್ಪಷ್ಟಪಡಿಸಿದ್ದಾರೆ.

‘ಈ ಮಸೂದೆಯು ಫೆಡರೇಷನ್‌ಗಳ ಮೇಲೆ ನಿಯಂತ್ರಣ ಸಾಧಿಸುವ ಉದ್ದೇಶ ಹೊಂದಿಲ್ಲ. ಆದರೆ ಫೆಡರೇಷನ್‌ಗಳು ಸುಸೂತ್ರವಾಗಿ ಕಾರ್ಯನಿರ್ವಹಣೆ ಮತ್ತು ಪಾರದರ್ಶಕ ಆಡಳಿತ ನಡೆಸುವಂತೆ ನೋಡಿಕೊಳ್ಳುವ ಸಾಧನವಾಗಿದೆ’ ಎಂದೂ ಮೂಲಗಳು ತಿಳಿಸಿವೆ.

‘ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿಯು ಮುಕ್ತ, ತ್ವರಿತ, ಪರಿಣಾಮಕಾರಿ ಮತ್ತು ಕಡಿಮೆ ವೆಚ್ಚದಲ್ಲಿ ಕ್ರೀಡಾ ವ್ಯಾಜ್ಯಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುತ್ತದೆ. ನ್ಯಾಯಮಂಡಳಿ ನೀಡಿದ ತೀರ್ಪುಗಳನ್ನು ಕೇವಲ ಸುಪ್ರೀಂ ಕೋರ್ಟ್‌ನಲ್ಲಿ ಮಾತ್ರ ಪ್ರಶ್ನಿಸುವ ಅವಕಾಶ ಇದೆ’ ಎಂದು ಸಚಿವಾಲಯದ ಮೂಲಗಳು ಸ್ಪಷ್ಟಪಡಿಸಿವೆ.

ಒಲಿಂಪಿಕ್ಸ್ ದೃಷ್ಟಿಕೋನ: ಲಾಸ್ ಏಂಜಲೀಸ್‌ನಲ್ಲಿ 2028ರಲ್ಲಿ ನಡೆಯಲಿರುವ ಒಲಿಂಪಿಕ್ ಕೂಟದಲ್ಲಿ ಟಿ20 ಕ್ರಿಕೆಟ್ ಸೇರ್ಪಡೆಯಾಗಿದೆ. ಇದರಿಂದಾಗಿ ಬಿಸಿಸಿಐ ಕೂಡ ಈಗ ಒಲಿಂಪಿಕ್ ಆಂದೋಲನದ ಭಾಗವಾಗಿದೆ. ಆದ್ದರಿಂದ ನೂತನ ಮಸೂದೆಯ ವ್ಯಾಪ್ತಿಗೆ ಮಂಡಳಿಯನ್ನು ತರಲಾಗಿದೆ ಎಂದೂ ಹೇಳಲಾಗಿದೆ.

ಅಂತರರಾಷ್ಟ್ರೀಯ ಫೆಡರೇಷನ್‌ಗಳು ಮತ್ತು ಒಲಿಂಪಿಕ್ ಚಾರ್ಟರ್ ನಿಯಮಗಳ ಪಾಲನೆಗೂ ಇದು ಮುಖ್ಯವಾಗಿದೆ.

ಈ ಮಸೂದೆಯ ಅನ್ವಯ ಪದಾಧಿಕಾರಿಗಳ ನಿವೃತ್ತಿ ವಯೋಮಿತಿಯು 70 ರಿಂದ 75 ವರ್ಷಕ್ಕೆ ಹೆಚ್ಚಳವಾಗಲಿದೆ.

ಮುಂದುವರಿಯುವರೇ ಬಿನ್ನಿ?

ಬೆಂಗಳೂರು: ಬಿಸಿಸಿಐ ಅಧ್ಯಕ್ಷರಾಗಿರುವ ರೋಜರ್ ಬಿನ್ನಿ ಅವರು ಈಚೆಗಷ್ಟೇ 70 ವರ್ಷ ಪೂರೈಸಿದರು. ಪ್ರಸ್ತುತ ಜಾರಿಯಲ್ಲಿರುವ ನಿಯಮಾವಳಿಯ ಪ್ರಕಾರ ಅವರ ಕಾರ್ಯಾವಧಿಯು ಮುಗಿಯಿತು. ನಿಯಮದ ಪ್ರಕಾರ ಪದಾಧಿಕಾರಿಗಳಿಗೆ ಗರಿಷ್ಠ ವಯೋಮಿತಿಯು 70 ವರ್ಷವಾಗಿತ್ತು.

ಇದೀಗ ನೂತನ ಕ್ರೀಡಾ ಮಸೂದೆಯು ಕಾಯಿದೆಯಾಗಿ ರೂಪುಗೊಂಡರೆ ವಯೋಮಿತಿಯು 75 ವರ್ಷಕ್ಕೆ ಹೆಚ್ಚಳವಾಗುವ ಸಾಧ್ಯತೆ ಇದೆ. ಆಗ ರೋಜರ್ ಬಿನ್ನಿ ಅವರನ್ನು ಮುಂದುವರಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

1983ರ ವಿಶ್ವಕಪ್ ವಿಜೇತ ಭಾರತ ತಂಡದ ಆಲ್‌ರೌಂಡರ್ ಬಿನ್ನಿ ಅವರು 2022ರಲ್ಲಿ ಬಿಸಿಸಿಐ ಅಧ್ಯಕ್ಷರಾಗಿದ್ದರು.

ಕಣದಲ್ಲಿ 24 ತಂಡಗಳು • ಆಗಸ್ಟ್ 23ಕ್ಕೆ ಫೈನಲ್

ಡುರಾಂಡ್ ಕಪ್‌ಗೆ ಇಂದು ಚಾಲನೆ

ಕೋಲ್ಕತ್ತ (ಪಿಟಿಐ): ಭಾರತದ ಫುಟ್‌ಬಾಲ್‌ನಲ್ಲಿ ಅಗ್ರಸ್ತರದ ಲೀಗ್ ಐಎಸ್‌ಎಲ್ ಮೇಲೆ ಅನಿಶ್ಚಿತತೆಯ ಕಾರ್ಮೋಡ ಕವಿದಿರುವ ನಡುವೆಯೇ, ಏಷ್ಯಾದ ಅತಿ ಹಳೆಯ ಟೂರ್ನಿಯಾದ ಡುರಾಂಡ್ ಕಪ್ ಬುಧವಾರ ಆರಂಭವಾಗಲಿದೆ.

ಮಾಸ್ಟರ್ ರೈಟ್ಸ್ ಒಪ್ಪಂದಕ್ಕೆ (ಎಂಆರ್‌ಎ) ಸಂಬಂಧಿಸಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮತ್ತು ಐಎಸ್‌ಎಲ್ ಆಯೋಜಕರಾದ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ (ಎಫ್‌ಎಸ್‌ಡಿಎಲ್) ನಡುವೆ ಬಿಕ್ಕಟ್ಟು ಮುಂದುವರಿದಿದೆ. ಮಾಸ್ಟರ್ ರೈಟ್ಸ್ ಒಪ್ಪಂದವು ಇಂಡಿಯನ್ ಸೂಪರ್ ಲೀಗ್‌ನ (ಐಎಸ್‌ಎಲ್)ನ ಕಾರ್ಯನಿರ್ವಹಣೆ ಮತ್ತು ವಾಣಿಜ್ಯಿಕ ಚೌಕಟ್ಟಿಗೆ ಸಂಬಂಧಿಸಿದೆ.

ಈ ಒಪ್ಪಂದದ ಅವಧಿ ಡಿಸೆಂಬರ್ 8ಕ್ಕೆ ಕೊನೆಗೊಳ್ಳಲಿದೆ. ಆದರೆ ಇದುವರೆಗೆ ಯಾವುದೇ ಸಕಾರಾತ್ಮಕ ಬೆಳವಣಿಗೆ ಆಗಿಲ್ಲ. ಸಾಮಾನ್ಯವಾಗಿ ಸೆಪ್ಟೆಂಬರ್‌ನಲ್ಲಿ ಐಎಸ್‌ಎಲ್ ಆರಂಭವಾಗುತ್ತದೆ.

ಇದರ ಮಧ್ಯೆಯೇ ಫುಟ್‌ಬಾಲ್ ಋತುವಿಗೆ ಸಾಂಪ್ರದಾಯಿಕ ಆರಂಭ ನೀಡುವ ಡುರಾಂಡ್ ಕಪ್‌ಗೆ ಚಾಲನೆ ದೊರೆಯಲಿದೆ. ಈ ಬಾರಿ 24 ತಂಡಗಳು ಭಾಗ ವಹಿಸಲಿದ್ದು ಇವುಗಳನ್ನು ಆರು ಗುಂಪುಗಳಲ್ಲಿ ವಿಂಗಡಿಸಲಾಗಿದೆ.

ಬೆಂಗಳೂರಿನ ಸೌತ್ ಯುನೈಟೆಡ್ ಎಫ್‌ಸಿ ಇವುಗಳಲ್ಲಿ ಒಂದಾಗಿದೆ. ಈ ಕ್ಲಬ್, ಪ್ರಬಲ ಈಸ್ಟ್ ಬೆಂಗಾಲ್, ಇಂಡಿಯನ್ ಏರ್‌ಫೋರ್ಸ್ ಎಫ್‌ಟಿ ಮತ್ತು ನಾಮ ಧಾರಿ ಎಫ್‌ಸಿ ಜೊತೆ ‘ಎ’ ಗುಂಪಿನಲ್ಲಿವೆ.

ಕಳೆದ ಋತುವಿನಲ್ಲಿ ಈಸ್ಟ್ ಬೆಂಗಾಲ್ ಐಎಸ್‌ಎಲ್‌ನಲ್ಲಿ 9ನೇ ಸ್ಥಾನ ಪಡೆದು ನೀರಸ ನಿರ್ವಹಣೆ ತೋರಿತ್ತು. ತಂಡ ಇತ್ತೀಚೆಗೆ ಮೂವರು ವಿದೇಶಿ ಆಟಗಾರರನ್ನು ಸೇರ್ಪಡೆ ಮಾಡಿಕೊಂಡಿದ್ದು ಉತ್ತಮ ಪ್ರದರ್ಶನ ನೀಡುವ ಬಯಕೆಯಲ್ಲಿದೆ. ಬ್ರೆಜಿಲ್‌ನ ಮಿಡ್‌ಫೀಲ್ಡರ್ ಮಿಗೆಲ್ ಫಿಗುಯೆರಾ, ಅರ್ಜೆಂಟೀನಾದ ಡಿಫೆಂಡರ್ ಕೆವಿನ್ ಸಿಬಿಲ್ ಮತ್ತು ಪ್ಯಾಲೆಸ್ಟೀನ್‌ನ ಮೊಹಮ್ಮದ್ ರಶೀದ್ ತಂಡ ಸೇರಿಕೊಂಡಿದ್ದಾರೆ.

ಐದು ರಾಜ್ಯ ತಂಡಗಳು– ಪಶ್ಚಿಮ ಬಂಗಾಳ, ಜಾರ್ಖಂಡ್, ಅಸ್ಸಾಂ, ಮೇಘಾಲಯ ಮತ್ತು ಮಣಿಪುರ ಮೊದಲ ಬಾರಿ ಕಣಕ್ಕಿಳಿಯುತ್ತಿವೆ.

ಕೋಲ್ಕತ್ತವು 15 ಪಂದ್ಯಗಳಿಗೆ ಆತಿಥ್ಯ ವಹಿಸುತ್ತಿದೆ. ಒಂದು ಕ್ವಾರ್ಟರ್‌ಫೈನಲ್, ಸೆಮಿಫೈನಲ್ ಮತ್ತು ಗ್ರ್ಯಾಂಡ್ ಫಿನಾಲೆ ಕೂಡ ಈ ಮಹಾನಗರದಲ್ಲೇ ನಡೆಯಲಿದೆ. ಫೈನಲ್ ಆಗಸ್ಟ್ 23ರಂದು ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ನಿಗದಿಯಾಗಿದೆ.

ಸಂಪ್ರದಾಯದಂತೆ ವಿದೇಶಿ ತಂಡಗಳು ಈ ಬಾರಿಯೂ ಆಡುತ್ತಿವೆ. ಮಲೇಷಿಯನ್ ಆರ್ಮ್ಡ್ ಫೋರ್ಸಸ್ ತಂಡ ಮತ್ತು ನೇಪಾಳದ ತ್ರಿಭುವನ್ ಆರ್ಮಿ ಎಫ್‌ಸಿ ತಂಡಗಳು ಈ ಟೂರ್ನಿಗೆ ಅಂತರರಾಷ್ಟ್ರೀಯ ಸ್ಪರ್ಶ ನೀಡಿವೆ.

₹3 ಕೋಟಿ ಬಹುಮಾನ

ಡುರಾಂಡ್ ಕಪ್ ಟೂರ್ನಿಯು ಈ ಬಾರಿ ₹3 ಕೋಟಿ ಬಹುಮಾನ ಮೊತ್ತ ಹೊಂದಿದೆ. ಟೂರ್ನಿಯಲ್ಲಿ ಅಮೋಘ ಆಟವಾಡಿದ ಮೂವರು ಆಟಗಾರರಿಗೆ ಎಸ್‌ಯುವಿಗಳನ್ನು ನೀಡಲಾಗುತ್ತಿದೆ. ಕ್ವಾರ್ಟರ್ ಫೈನಲ್, ಸೆಮಿಫೈನಲ್ ತಲುಪುವ ತಂಡಗಳಿಗೂ ನಗದು ಬಹುಮಾನ ನೀಡಲಾಗುತ್ತಿದೆ.

ಚೀನಾ ಸ್ಪರ್ಧಿಗಳ ಎದುರು ಡ್ರಾ ಸಾಧಿಸಿದ ಹಂಪಿ, ದಿವ್ಯಾ

ಕೋನೇರು ಹಂಪಿ

ದಿವ್ಯಾ

ಬಟುಮಿ (ಜಾರ್ಜಿಯಾ), (ಪಿಟಿಐ): ಅನುಭವಿ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ಫಿಡೆ ಮಹಿಳಾ ವಿಶ್ವ ಕಪ್ ಸೆಮಿಫೈನಲ್ ಪಂದ್ಯದ ಮೊದಲ ಕ್ಲಾಸಿಕಲ್ ಆಟದಲ್ಲಿ ಚೀನಾದ ಟಿಂಗ್ಜಿ ಲೀ ಎದುರು ಮಂಗಳವಾರ ಹೆಚ್ಚು ಪ್ರಯಾಸವಿಲ್ಲದೇ ಡ್ರಾ ಮಾಡಿಕೊಂಡರು.

ಇನ್ನೊಂದು ಸೆಮಿಫೈನಲ್‌ನಲ್ಲಿ ದಿವ್ಯಾ ದೇಶಮುಖ್ ಅವರ ಪ್ರಬಲ ರಕ್ಷಣೆಯ ಆಟದೆದುರು ಮಾಜಿ ವಿಶ್ವ ಚಾಂಪಿಯನ್ ಝೊಂಗ್ಯಿ ತಾನ್ ಅವರಿಗೆ ಹೆಚ್ಚೇನೂ ಸಾಧಿಸಲಾಗಲಿಲ್ಲ.

ಸೆಮಿಫೈನಲ್ ಆಡುತ್ತಿರುವ ನಾಲ್ವರಲ್ಲಿ ಭಾರತದ ಮತ್ತು ಚೀನಾದ ತಲಾ ಇಬ್ಬರು ಆಟಗಾರ್ತಿಯರಿದ್ದು, ಮಹಿಳಾ ಚೆಸ್‌ನಲ್ಲಿ ಏಷ್ಯಾದ ಪ್ರಾಬಲ್ಯ ಸಾಬೀತುಪಡಿಸಿದೆ.

ಈ ವಿಶ್ವಕಪ್ ಸುಮಾರು ₹6 ಕೋಟಿ ಬಹುಮಾನ ಹೊಂದಿದೆ.

ಇದು ಭಾರತದ ಆಟಗಾರ್ತಿಯರಿಗೆ ಉತ್ತಮ ಆರಂಭ ಎನಿಸಿದೆ. ಇಬ್ಬರೂ ಕಪ್ಪು ಕಾಯಿಗಳಲ್ಲಿ ಆಡಿದ್ದರು. ಬುಧವಾರ ಮರು ಪಂದ್ಯದಲ್ಲಿ ಇಬ್ಬರೂ ಬಿಳಿ ಕಾಯಿಗಳಲ್ಲಿ ಆಡಲಿದ್ದಾರೆ. ಇದು ಡ್ರಾ ಆದ ಪಕ್ಷದಲ್ಲಿ ವಿಜೇತರನ್ನು ನಿರ್ಧರಿಸಲು ಗುರುವಾರ ಅಲ್ಪಾವಧಿಯ ಟೈಬ್ರೇಕ್ ಪಂದ್ಯಗಳನ್ನು ಆಡಲಾಗುವುದು.

ಮೊದಲ ಮೂರು ಸ್ಥಾನ ಪಡೆದವರು ಮುಂದಿನ ವರ್ಷದ ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡಲು ಅರ್ಹತೆ ಪಡೆಯುವರು. ಕಡೇಪಕ್ಷ ಭಾರತದ ಒಬ್ಬರು ಅರ್ಹತೆ ಪಡೆಯುವುದು ಖಚಿತವಾಗಿದೆ.

ಅನುಭವಿ ಝೊಂಗ್ಯಿ ಅವರಿಗೆ ದಿವ್ಯಾ ಅವರ ಓಪನಿಂಗ್‌ನಲ್ಲಿ ಹುಳುಕುಗಳು ಕಾಣಲಿಲ್ಲ. ಇಬ್ಬರೂ ಎಕ್ಸ್‌ಚೇಂಜ್‌ಗಳಿಗೆ ಹೋದರು. 30 ನಡೆಗಳ ನಂತರ ಆಟ ಡ್ರಾ ಆಯಿತು.

ಹಂಪಿ ಅವರು ವಿಭಿನ್ನ ಓಪನಿಂಗ್ ಮೂಲಕ ಚೀನಾ ಟಿಂಗ್ಜಿ ಅವರನ್ನು ಅಚ್ಚರಿಗೆ ಕೆಡವಿದರು. ಮಧ್ಯಮ ಹಂತದ ನಂತರ ಇಬ್ಬರೂ ಕ್ವೀನ್‌ಗಳನ್ನು ಕಳೆದುಕೊಂಡರು. ಕೊನೆಗೆ ಭಿನ್ನ ಬಣ್ಣದ ಬಿಷಪ್‌ಗಳು ಉಳಿದವು.

ಚೀನಾ ಓಪನ್: ಸೋಲಿನಿಂದ ಪ್ರಣಯ್ ಪಾರು

ಚಾಂಗ್‌ಝೌ (ಪಿಟಿಐ): ಭಾರತದ ಅನುಭವಿ ಆಟಗಾರ ಎಚ್.ಎಸ್. ಪ್ರಣಯ್ ಅವರು ಚೀನಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಜಪಾನ್‌ನ ಕೋಕಿ ವತಾನಬೆ ವಿರುದ್ಧ ಸೋಲಿನ ಅಂಚಿನಿಂದ ಪಾರಾಗಿ ಎರಡನೇ ಸುತ್ತಿಗೆ ಮುನ್ನಡೆದರು. ಆದರೆ ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಮಂಗಳವಾರ ಆರಂಭವಾದ ಈ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ, 35ನೇ ಕ್ರಮಾಂಕದ ಆಟಗಾರ ಪ್ರಣಯ್ 8-21, 21-16, 23-21ರಿಂದ 18ನೇ ಕ್ರಮಾಂಕದ ವತಾನಬೆ ಅವರನ್ನು ಮಣಿಸಿದರು.

2023ರಲ್ಲಿ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ಗೆದ್ದಿದ್ದ ಪ್ರಣಯ್, ಜಪಾನ್ ಆಟಗಾರನಿಗೆ ಹೆಚ್ಚು ಹೋರಾಟ ತೋರಲಿಲ್ಲ. ಆದರೆ ಎರಡನೇ ಗೇಮ್‌ನಲ್ಲಿ ಉತ್ತಮ ‘ಕೋರ್ಟ್ ಕವರೇಜ್’ ಮತ್ತು ಹೊಡೆತಗಳ ಮೇಲೆ ನಿಯಂತ್ರಣ ಸಾಧಿಸಿ ಮೇಲುಗೈ ಪಡೆದರು. ಹೀಗಾಗಿ ಪಂದ್ಯ ನಿರ್ಣಾಯಕ ಗೇಮ್‌ಗೆ ಹೋಯಿತು.

ಪ್ರಣಯ್ ಆಟದ ವೈಖರಿ

ಚಿತ್ರ: ಬಿಎಐ ‘ಎಕ್ಸ್’ ಖಾತೆ

ಅಂತಿಮ ಗೇಮ್‌ನಲ್ಲಿ ಪ್ರಣಯ್ 2-11ರಿಂದ ಹಿಂದೆಬಿದ್ದಿದ್ದರು. ನಂತರ ಚೇತರಿಸಿ ಸತತ ನಾಲ್ಕು ಪಾಯಿಂಟ್ ಪಡೆದರು. ನಂತರ ಮತ್ತೊಮ್ಮೆ 15-20ರಲ್ಲಿ ಹಿಂದೆಬಿದ್ದು ಸೋಲಿನ ಸುಳಿಯಲ್ಲಿದ್ದರು. ಈ ವೇಳೆ ಐದು ಬಾರಿ ಮ್ಯಾಚ್ ಪಾಯಿಂಟ್ ರಕ್ಷಿಸಿದರು. ನಂತರ 21-20ರಲ್ಲಿ ಮುನ್ನಡೆ ಪಡೆದು ಕೊನೆಗೂ ಸ್ಮರಣೀಯ ಗೆಲುವು ಸಾಧಿಸಿದರು.

‘ನನ್ನ ವೃತ್ತಿಜೀವನದ ಈ ಹಂತದಲ್ಲಿ ಪ್ರತಿ ಗೆಲುವು ಗಣನೆಗೆ ಬರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಆಟದ ಮಟ್ಟ ಬಹಳಷ್ಟು ಉತ್ತಮವಾಗುತ್ತಿದೆ. ಪ್ರತಿ ಸುತ್ತಿನ ಪಂದ್ಯ ಗೆಲ್ಲುವುದು ಕಠಿಣವಾಗುತ್ತಿದೆ’ ಎಂದು 33 ವರ್ಷ ವಯಸ್ಸಿನ ಪ್ರಣಯ್ ಪ್ರತಿಕ್ರಿಯಿಸಿದರು.

‘ಇದ್ದಕ್ಕಿದ್ದಂತೆ ಪುರುಷರ ಸಿಂಗಲ್ಸ್‌ನಲ್ಲಿ ಸರಾಸರಿ ವಯಸ್ಸು 22-23ಕ್ಕೆ ಇಳಿದಿದೆ. ಹೊಸಮುಖಗಳು ಸಾಕಷ್ಟು ಸಂಖ್ಯೆಯಲ್ಲಿದ್ದು, ಅವರ ಆಟ ಹೇಗಿರುತ್ತದೆಂದು ಹೇಳಲಸಾಧ್ಯ. ಹೀಗಾಗಿ ಅನುಭವಿಯಾದರೂ ಆಡುವುದು ಸುಲಭವಲ್ಲ’ ಎಂದರು.

ಲಕ್ಷ್ಯಗೆ ಸೋಲು: ಆದರೆ ಲಕ್ಷ್ಯ ಸೇನ್ ಅವರ ನಿರಾಶಾದಾಯಕ ಓಟ ಮುಂದುವರಿಯಿತು. ಅವರು 21-14, 22-24, 11-21 ರಲ್ಲಿ ಐದನೇ ಶ್ರೇಯಾಂಕದ ಚೀನಾ ಆಟಗಾರ ಲಿ ಶಿ ಫೆಂಗ್ ಅವರಿಗೆ ಮಣಿದರು.

ಮಹಿಳಾ ಸಿಂಗಲ್ಸ್‌ನಲ್ಲಿ ಅನುಪಮಾ ಉಪಾಧ್ಯಾಯ ಮೊದಲ ಸುತ್ತಿನಲ್ಲೇ ನಿರ್ಗಮಿಸಿದರು. 23-21, 11-21, 10-21ರಲ್ಲಿ ಚೀನಾ ತೈಪೆಯ ಲಿನ್ ಹ್ಸಿಯಾಂಗ್ ಟಿ ಎದುರು ಸೋಲನುಭವಿಸಿದರು. ಮಿಶ್ರ ಡಬಲ್ಸ್ ಜೋಡಿ ಅಶಿತ್ ಸೂರ್ಯ– ಎ.ಪ್ರಮುತೇಶ್ ಮೊದಲ ಸುತ್ತನ್ನು ದಾಟಲಿಲ್ಲ.